ಮಂಗಳವಾರ, ಜುಲೈ 30, 2024 | ಬೆಂಗಳೂರು | ₹ 7.00 | ಸಂಪುಟ 77| ಸಂಚಿಕೆ 211 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಕೋಚಿಂಗ್ ಕೇಂದ್ರ ಜೀವಕ್ಕೆ ಕಂಟಕ

'ಅಮೆರಿಕದ ಹೊಸ ಭರವಸೆ ಕಮಲಾ' 8

ಕರ್ನಾಟಕಕ್ಕೆ ಅತಿ ಹೆಚ್ಚು ಅನ್ಯಾಯ: ಸಿ.ಎಂ 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,355	24,836	₹71,540 (ಬೆಂಗಳೂರು)	₹84,700 (ಬೆಂಗಳೂರು)	83.73

ಕೋಚಿಂಗ್ ಸೆಂಟರ್ ನೆಲಮಾಳಿಗೆಗೆ ನೀರು ನುಗ್ಗಿ 3 ಐಎಎಸ್ ಆಕಾಂಕ್ಷಿಗಳು ಮೃತಪಟ್ಟ ಪ್ರಕರಣ

ಐವರ ಬಂಧನ; ತನಿಖೆಗೆ ಸಮಿತಿ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೋಚಿಂಗ್ ಸೆಂಟರ್‌ನ ನೆಲಮಾಳಿಗೆಗೆ ಮಳೆನೀರು ನುಗ್ಗಿ ಮೂವರು ಐಎಎಸ್ ಆಕಾಂಕ್ಷಿಗಳು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ದೆಹಲಿ ಪೊಲೀಸರು ಸೋಮವಾರ ಐವರನ್ನು ಬಂಧಿಸಿದ್ದಾರೆ. ಘಟನೆ ಬಗ್ಗೆ ಸಮಗ್ರ ತನಿಖೆಗೆ ಗೃಹ ಸಚಿವಾಲಯವು ಸಮಿತಿ ನೇಮಕ ಮಾಡಿದೆ.

ಇಲ್ಲಿನ ಹಳೆಯ ರಾಜಿಂದರ್ ನಗರದಲ್ಲಿರುವ 'ರಾವ್ಸ್ ಐಎಎಸ್ ಸ್ಟಡಿ ಸರ್ಕಲ್'ನ ತಳಮಹಡಿಗೆ ಶನಿವಾರ ಸಂಜೆ ನೀರು ನುಗ್ಗಿದ ಪರಿಣಾಮ ಅವಘಡ ಸಂಭವಿಸಿತ್ತು. ಕೋಚಿಂಗ್ ಸೆಂಟರ್‌ನ ಮಾಲೀಕ ಹಾಗೂ ನಿರ್ವಾಹಕನನ್ನು ಪೊಲೀಸರು ಈಗಾಗಲೇ ಬಂಧಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರ ಸಂಖ್ಯೆ ಏಳಕ್ಕೇರಿದೆ. ಬಂಧಿತರನ್ನು ಆಗಸ್ಟ್ 12ರವರೆಗೆ ನ್ಯಾಯಾಂಗ ವಶಕ್ಕೆ ನೀಡಲಾಗಿದೆ.

'ಅಕ್ರಮ'ವಾಗಿ ನಡೆಸುತ್ತಿದ್ದ ಕೋಚಿಂಗ್ ಸೆಂಟರ್‌ಗಳ ವಿರುದ್ಧ ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಕ್ರಮ ಕೈಗೊಂಡಿದ್ದು, ಇಂತಹ 13 ಸೆಂಟರ್‌ಗಳಿಗೆ ಅಧಿಕಾರಿಗಳು ಬೀಗ ಜಡಿದಿದ್ದಾರೆ.

ಸಮಿತಿ ರಚನೆ: ತನಿಖೆಗೆ ಗೃಹ ಸಚಿವಾಲಯದ ಜಂಟಿ ಕಾರ್ಯದರ್ಶಿಯೊಬ್ಬರ ನೇತೃತ್ವದ ಸಮಿತಿ ರಚಿಸಲಾಗಿದೆ. ವಸತಿ ಮತ್ತು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿ, ದೆಹಲಿ ಗೃಹ ಸಚಿವಾಲಯದ ಮುಖ್ಯ ಕಾರ್ಯದರ್ಶಿ, ದೆಹಲಿ ಪೊಲೀಸ್ ವಿಶೇಷ ಆಯುಕ್ತರು ಮತ್ತು ಇತರ ಐವರು ಸಲಹೆಗಾರರು ಸಮಿತಿಯಲ್ಲಿ ಇದ್ದಾರೆ.

'ಘಟನೆಗೆ ಏನು ಕಾರಣ ಎಂಬುದನ್ನು ಪತ್ತೆಹಚ್ಚುವುದು, ತಪ್ಪಿತಸ್ಥರನ್ನು ಗುರುತಿಸುವುದು, ನೀತಿಗಳಲ್ಲಿ ಬದಲಾವಣೆಗೆ ಶಿಫಾರಸು ಮಾಡುವ ಹೊಣೆಯನ್ನು ಸಮಿತಿಗೆ ವಹಿಸಲಾಗಿದೆ' ಎಂದು ಮೂಲಗಳು ಹೇಳಿವೆ.

ಎಎಪಿ ಮತ್ತು ಬಿಜೆಪಿ ನಾಯಕರ ನಡುವಣ ವಾಕ್ಸಮರ ಸೋಮವಾರವೂ ಮುಂದುವರಿದಿದೆ. ದುರಂತದ ಕುರಿತ ಮ್ಯಾಜಿಸ್ಟ್ರೇಟ್ ತನಿಖಾ ವರದಿಯನ್ನು ಮುಖ್ಯ ಕಾರ್ಯದರ್ಶಿಯವರು ಸಲ್ಲಿಸದೇ ಇರುವುದಕ್ಕೆ ದೆಹಲಿ ಕಂದಾಯ ಸಚಿವೆ ಆತಿಶಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೋಚಿಂಗ್ ಸೆಂಟರ್‌ನ ಸುತ್ತಮುತ್ತಲಿನ ಪ್ರದೇಶಗಳ ಚರಂಡಿಗಳಲ್ಲಿನ ಹೂಳು ತೆಗೆಯುವ ಕೆಲಸದ ವಸ್ತುಸ್ಥಿತಿಯ ಬಗ್ಗೆ ವರದಿ ನೀಡುವಂತೆ ದೆಹಲಿ ಪೊಲೀಸರು ಪಾಲಿಕೆಗೆ ಕೇಳಿದ್ದಾರೆ.

ಚರಂಡಿಗಳ ಹೂಳೆತ್ತುವ ಕೆಲಸ ಮತ್ತು ರಾವ್ಸ್ ಐಎಎಸ್ ಸ್ಟಡಿ ಸರ್ಕಲ್ ಸಂಸ್ಥೆಯ ಪರವಾನಗಿ, ಕಟ್ಟಡ ಪೂರ್ಣಗೊಂಡದ್ದಕ್ಕೆ ಕೊಡುವ ಪ್ರಮಾಣಪತ್ರ ಮತ್ತು ಸ್ವಾಧೀನ ಪ್ರಮಾಣ ಪತ್ರಕ್ಕೆ ಸಂಬಂಧಿಸಿದಂತೆ ಪೊಲೀಸರು ಎಂಸಿಡಿ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸುವ ಸಾಧ್ಯತೆಯಿದೆ.

ಇನ್ನಷ್ಟು ಸುದ್ದಿಗಳು 10

ಬುಲ್ಡೋಜರ್ ಸದ್ದು

ರಾಜಿಂದರ್‌ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪಾಲಿಕೆಯು ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿದೆ. ಕೋಚಿಂಗ್ ಸೆಂಟರ್‌ಗಳಿರುವ ರಸ್ತೆಗಳಲ್ಲಿ ಬುಲ್ಡೋಜರ್‌ಗಳು ಓಡಾಡುತ್ತಿವೆ. ರಾಜಕಾಲುವೆಗಳನ್ನು ಒತ್ತುವರಿ ಮಾಡಿ ನಿರ್ಮಿಸಿರುವ ಕೆಲವು ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ. ನವದೆಹಲಿಯಲ್ಲಿ ಕೋಚಿಂಗ್ ಸೆಂಟರ್‌ಗಳು ಹೆಚ್ಚಿನ ಸಂಖ್ಯೆಯಲ್ಲಿರುವ ಮುಖರ್ಜಿ ನಗರದಲ್ಲೂ ಒತ್ತುವರಿ ತೆರವು ಕಾರ್ಯ ಆರಂಭಿಸಲಾಗಿದೆ.

₹10 ಲಕ್ಷ ಪರಿಹಾರ

ದುರಂತದಲ್ಲಿ ಮೃತಪಟ್ಟ ಮೂವರ ಕುಟುಂಬಗಳಿಗೆ ತಲಾ ₹10 ಲಕ್ಷ ಪರಿಹಾರ ನೀಡುವುದಾಗಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಸೋಮವಾರ ಘೋಷಿಸಿದ್ದಾರೆ.

ದಿನದ ಬೆಳವಣಿಗೆ

- ಘಟನೆಯಿಂದಾಗಿ ಟೀಕೆಗೆ ಗುರಿಯಾಗಿರುವ ಎಂಸಿಡಿ, ಕರ್ತವ್ಯಲೋಪದ ಆರೋಪದಲ್ಲಿ ಕಿರಿಯ ಎಂಜಿನಿಯರ್ ಮತ್ತು ಸಹಾಯಕ ಎಂಜಿನಿಯರ್‌ವೊಬ್ಬರನ್ನು ಅಮಾನತು ಮಾಡಿದೆ
- 'ಅಗ್ನಿ ದುರಂತ ವ್ಯವಸ್ಥೆಗೆ ಸಂಬಂಧಿಸಿದಂತೆ ಕಟ್ಟಡದಲ್ಲಿ ಎಲ್ಲವೂ ನಿಯಮಾನುಸಾರವೇ ಇತ್ತು. ಅದಕ್ಕಾಗಿಯೇ ಎನ್‌ಒಸಿ ನೀಡಲಾಗಿತ್ತು. ಆದರೆ, ನೀರನ್ನು ಪಂಪ್ ಮಾಡಿ ಮೇಲೆತ್ತುವ ಯಾವುದೇ ವ್ಯವಸ್ಥೆಯನ್ನು ಕಟ್ಟಡದಲ್ಲಿ ಮಾಡಿರಲಿಲ್ಲ. ಈ ಕಾರಣದಿಂದ ಈಗ ಎನ್‌ಒಸಿಯನ್ನು ರದ್ದು ಮಾಡಲು ನಿರ್ಧರಿಸಿದ್ದೇವೆ' ಎಂದು ದೆಹಲಿ ಅಗ್ನಿಶಾಮಕ ಸೇವೆಗಳ ಇಲಾಖೆ ಹೇಳಿದೆ.
- ದೆಹಲಿಯ ಲೆಫ್ಟಿನೆಂಟ್ ಗವರ್ನರ್ ಕಾರ್ಯಾಲಯದ ಎದುರು ಆಮ್ ಆದ್ಮಿ ಪಕ್ಷದ ಪ್ರತಿಭಟನೆ ನಡೆಸಿದೆ
- ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ರಾಜೀನಾಮೆಗೆ ಬಿಜೆಪಿ ಆಗ್ರಹಿಸಿದೆ

ಚಿನಕುರುಳಿ

ಪ್ರಕಾಶ್ ಶೆಟ್ಟಿ

'ಅತ್ಯಾಚಾರ ಸಂತ್ರಸ್ತೆಯನ್ನು ಮಹಿಳಾ ವೈದ್ಯರೇ ಪರೀಕ್ಷಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ವಯಸ್ಕ ಸಂತ್ರಸ್ತೆಯರ ಖಾಸಗಿತನದ ಹಕ್ಕಿನ ರಕ್ಷಣೆಗಾಗಿ ಅಂಥವರ ವೈದ್ಯಕೀಯ ಪರೀಕ್ಷೆಯನ್ನು ಮಹಿಳಾ ವೈದ್ಯರೇ ನಡೆಸಲು ಅವಕಾಶ ಕಲ್ಪಿಸಬೇಕು ಹಾಗೂ ಇದಕ್ಕಾಗಿ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಗೆ (ಬಿಎನ್‌ಎಸ್) ಸೂಕ್ತ ತಿದ್ದುಪಡಿ ತರಲು ಕೂಡಲೇ ಕ್ರಮ ಕೈಗೊಳ್ಳಬೇಕು' ಎಂದು ಹೈಕೋರ್ಟ್, ಕೇಂದ್ರ ಸರ್ಕಾರಕ್ಕೆ ತಾಕೀತು ಮಾಡಿದೆ.

ನಗರದಲ್ಲಿ ನಡೆದಿದ್ದ 23 ವರ್ಷದ ಮಹಿಳೆಯೊಬ್ಬರ ಮೇಲಿನ ಅತ್ಯಾಚಾರ ಆರೋಪ ಪ್ರಕರಣದ ಆರೋಪಿಯಾಗಿರುವ ಒಡಿಶಾದ 19 ವರ್ಷದ ಯುವಕ ಸಲ್ಲಿಸಿದ್ದ ಜಾಮೀನು ಅರ್ಜಿ ತಿರಸ್ಕರಿಸಿರುವ ನ್ಯಾಯಮೂರ್ತಿ ಎಂ.ಜಿ.ಉಮಾ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ನೀಡಿದೆ.

9ನೇ ಪುಟ ನೋಡಿ

ಪಾದಯಾತ್ರೆಗೆ ಅನುಮತಿ ನೀಡಲ್ಲ: ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿ- ಜೆಡಿಎಸ್‌ನವರು ಹಮ್ಮಿಕೊಂಡಿರುವ ಪಾದಯಾತ್ರೆಗೆ ಪೊಲೀಸ್ ಇಲಾಖೆಯಿಂದ ಅಧಿಕೃತವಾಗಿ ಅನುಮತಿ ನೀಡುವುದಿಲ್ಲ. ಯಾರಿಗೂ ತೊಂದರೆ ಮಾಡದೆ ಪಾದಯಾತ್ರೆ ಮಾಡುವುದಾದರೆ ಮಾಡಲಿ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಬೆಂಗಳೂರಿನಿಂದ ಮೈಸೂರುವರೆಗೆ ಆಗಸ್ಟ್ 3ರಿಂದ ಪಾದಯಾತ್ರೆ ನಡೆಸಲು ವಿರೋಧ ಪಕ್ಷಗಳು ನಿರ್ಧರಿಸಿವೆ.

ಜಿ.ಪರಮೇಶ್ವರ

ಈ ಕುರಿತು ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಪರಮೇಶ್ವರ, 'ಬಿಜೆಪಿ ಅಧಿಕಾರದಲ್ಲಿದ್ದಾಗ ನಾವು ಹಮ್ಮಿಕೊಂಡಿದ್ದ ಪಾದಯಾತ್ರೆಗೂ ಅನುಮತಿ ಕೊಟ್ಟಿರಲಿಲ್ಲ. ಆದರೂ ನಾವೂ ಮಾಡಿದ್ದೇವೆ. ಅನುಮತಿ ನೀಡಿದರೆ ಕಾನೂನು ಸಮಸ್ಯೆಗಳು ಆಗಲಿವೆ. ಜನರಿಗೆ ತೊಂದರೆ ಕೊಡದೆ ಅವರು ಪಾದಯಾತ್ರೆ ನಡೆಸಲಿ' ಎಂದರು.

9ನೇ ಪುಟ ನೋಡಿ

ವಿಕ್ಟೋರಿಯಾ ಆಸ್ಪತ್ರೆ: ಲೋಕಾಯುಕ್ತ, ಉಪ ಲೋಕಾಯುಕ್ತರ ದಿಢೀರ್ ಪರಿಶೀಲನೆಯಲ್ಲಿ ಬಹಿರಂಗ

ಜೀವರಕ್ಷಕ ಔಷಧಿಗಳ ತೀವ್ರ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಜೀವರಕ್ಷಕ ಔಷಧಿಗಳ ತೀವ್ರ ಕೊರತೆ ಇರುವುದು ಲೋಕಾಯುಕ್ತರು ಮತ್ತು ಉಪ ಲೋಕಾಯುಕ್ತರು ಸೋಮವಾರ ನಡೆಸಿದ ದಿಢೀರ್ ತಪಾಸಣೆಯಲ್ಲಿ ಪತ್ತೆಯಾಗಿದೆ. ಔಷಧಿಗಳ ಅಲಭ್ಯತೆಗೆ ಅನುದಾನದ ಕೊರತೆ ಕಾರಣವೆಂಬುದು ಬಹಿರಂಗವಾಗಿದೆ.

ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿನ ದುರಾಡಳಿತ, ಸಮಸ್ಯೆಗಳ ಕುರಿತು ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ಲೋಕಾಯುಕ್ತರು, ವಿಚಾರಣೆ ನಡೆಸುತ್ತಿದ್ದಾರೆ. ಲೋಕಾಯುಕ್ತ, ನ್ಯಾಯಮೂರ್ತಿ ಬಿ.ಎಸ್. ಪಾಟೀಲ, ಉಪ ಲೋಕಾಯುಕ್ತರಾದ ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ ಮತ್ತು ನ್ಯಾಯಮೂರ್ತಿ ಬಿ. ವೀರಪ್ಪ ಅವರು ಸೋಮವಾರ ಮಧ್ಯಾಹ್ನ ವಿಕ್ಟೋರಿಯಾ ಆಸ್ಪತ್ರೆಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

‘ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅತ್ಯಂತ ಅಗತ್ಯವಿರುವ ಜೀವರಕ್ಷಕ ಔಷಧಿಗಳ ದಾಸ್ತಾನು ಇಲ್ಲ. ಜೀವರಕ್ಷಕ ಔಷಧಿಗಳ ದಾಸ್ತಾನಿನಲ್ಲಿ ತೀವ್ರ ಕೊರತೆ ಕಂಡುಬಂದಿದೆ. ಈ ಕುರಿತು ಸಂಸ್ಥೆಯ ಅಧಿಕಾರಿಗಳನ್ನು ಪ್ರಶ್ನಿಸಿದಾಗ, ಅನುದಾನದ ಕೊರತೆ ಕಾರಣ ಎಂಬ ಉತ್ತರ ನೀಡಿದರು. ಔಷಧಿ ಖರೀದಿಗೆ ವಾರ್ಷಿಕ ₹ 70 ಕೋಟಿ ಅನುದಾನ ನೀಡಲಾಗುತ್ತಿತ್ತು. ಈ ವರ್ಷ ಶೇಕಡಾ 40ರಷ್ಟು ಕಡಿತ ಮಾಡಲಾಗಿದೆ. ಇದರಿಂದಾಗಿ ಔಷಧಿ ಖರೀದಿಗೆ ಸಮಸ್ಯೆಯಾಗಿದೆ ಎಂಬ ಮಾಹಿತಿ ನೀಡಿದರು’ ಎಂದು ಬಿ.ಎಸ್. ಪಾಟೀಲ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ವಿಕ್ಟೋರಿಯಾ ಆಸ್ಪತ್ರೆಗೆ ಸೋಮವಾರ ದಿಢೀರ್ ಭೇಟಿ ನೀಡಿದ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ರೋಗಿಗಳಿಂದ ಮಾಹಿತಿ ಪಡೆದರು – ಪ್ರಜಾವಾಣಿ ಚಿತ್ರ

ಪೂರೈಕೆದಾರರಿಗೆ ಬಿಲ್ ಬಾಕಿ: ಆಸ್ಪತ್ರೆಗೆ ಔಷಧಿ ಪೂರೈಕೆ ಮಾಡುತ್ತಿರುವ ಗುತ್ತಿಗೆದಾರರಿಗೆ ದೊಡ್ಡ ಮೊತ್ತದ ಬಿಲ್ ಪಾವತಿ ಬಾಕಿ ಇದೆ. ಈ ಕಾರಣದಿಂದ ಗುತ್ತಿಗೆದಾರರು ದುಬಾರಿ ಬೆಲೆಯ ಔಷಧಿಗಳನ್ನು ಪೂರೈಸುತ್ತಿಲ್ಲ. ಇದು ಕೂಡ ಜೀವರಕ್ಷಕ ಔಷಧಿಗಳ ಕೊರತೆಗೆ ಕಾರಣ ಎಂಬ ಮಾಹಿತಿಯನ್ನು ಆಸ್ಪತ್ರೆಯ ಅಧಿಕಾರಿಗಳು ಲೋಕಾಯುಕ್ತರು ಹಾಗೂ ಉಪ ಲೋಕಾಯುಕ್ತರ ಬಳಿ ಹಂಚಿಕೊಂಡಿದ್ದಾರೆ.

‘ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಿ ವಿತರಣೆಯಲ್ಲೂ ಕೆಲವು ಸಮಸ್ಯೆಗಳಿರುವುದು ಕಂಡುಬಂದಿದೆ. ಫಾರ್ಮಸಿ ವಿಭಾಗದಲ್ಲಿ ಮೂವರು ಗುತ್ತಿಗೆ ನೌಕರರಿದ್ದಾರೆ. ಅವರ ಬಳಿ ಔಷಧಿ ವಿತರಣೆಗೆ ಸಂಬಂಧಿಸಿದ ಮಾಹಿತಿ ಸಮರ್ಪಕವಾಗಿರಲಿಲ್ಲ’ ಎಂದು ಲೋಕಾಯುಕ್ತರು ತಿಳಿಸಿದರು.

ವೈದ್ಯರ ಗೈರು: ಆಸ್ಪತ್ರೆಯಲ್ಲಿ ಭಾರಿ ಸಂಖ್ಯೆಯ ರೋಗಿಗಳು ಚಿಕಿತ್ಸೆಗಾಗಿ ಕಾಯುತ್ತಿದ್ದರು. ಆದರೆ, ಮಧ್ಯಾಹ್ನ 3 ಗಂಟೆಯಾದರೂ ವೈದ್ಯರು ಲಭ್ಯವಿರಲಿಲ್ಲ. ವೈದ್ಯರ ಗೈರು ಕುರಿತು ಲೋಕಾಯುಕ್ತರು ಪ್ರಶ್ನಿಸಿದಾಗ, ‘ಊಟಕ್ಕೆ ತೆರಳಿದ್ದಾರೆ’ ಎಂದು ಸಿಬ್ಬಂದಿ ಮಾಹಿತಿ ನೀಡಿದರು.

‘ಆಸ್ಪತ್ರೆಯಲ್ಲಿ ಜೀವರಕ್ಷಕ ಔಷಧಿಗಳ ಕೊರತೆ, ಸಮರ್ಪಕವಾಗಿ ಚಿಕಿತ್ಸೆ ನೀಡದಿರುವುದು, ವೈದ್ಯರ ಗೈರು ಸೇರಿದಂತೆ ಪರಿಶೀಲನೆ ವೇಳೆ ಕಂಡುಬಂದ ಸಮಸ್ಯೆಗಳು ಹಾಗೂ ಲೋಪಗಳ ಕುರಿತು ವರದಿಯೊಂದನ್ನು ಸಿದ್ಧಪಡಿಸಲಾಗುವುದು. ಆ ಬಳಿಕ ಸಂಬಂಧಿಸಿದ ಅಧಿಕಾರಿಗಳು ಮತ್ತು ವೈದ್ಯರಿಗೆ ನೋಟಿಸ್ ಜಾರಿಗೊಳಿಸಲಾಗುವುದು. ಆಸ್ಪತ್ರೆಯಲ್ಲಿ ಜನಸ್ನೇಹಿ ವಾತಾವರಣ ನಿರ್ಮಾಣ ಆಗುವವರೆಗೂ ವಿಚಾರಣೆ ಮುಂದುವರಿಯಲಿದೆ’ ಎಂದು ಬಿ.ಎಸ್. ಪಾಟೀಲ ತಿಳಿಸಿದರು.

ಬಿದ್ದು ಒದ್ದಾಡಿದ್ದ ರೋಗಿ

ಸೋಮವಾರ ಬೆಳಿಗ್ಗೆ ವಿಕ್ಟೋರಿಯಾ ಆಸ್ಪತ್ರೆಗೆ ಭೇಟಿ ನೀಡಿದ್ದ ಲೋಕಾಯುಕ್ತದ ಗುಪ್ತಚರ ವಿಭಾಗದ ಪೊಲೀಸರು, ಗೋಪ್ಯವಾಗಿ ಪರಿಶೀಲನೆ ನಡೆಸಿದ್ದರು. ರೋಗಿಯೊಬ್ಬರು ಬಿದ್ದು ಒದ್ದಾಡುತ್ತಿದ್ದರೂ ವೈದ್ಯರು, ಸಿಬ್ಬಂದಿಗೆ ನೆರವಿಗೆ ಬಂದಿರಲಿಲ್ಲ. ಇದಕ್ಕೆ ಸಂಬಂಧಿಸಿದ ವಿಡಿಯೊ, ಫೋಟೊ ಸೆರೆಹಿಡಿದಿದ್ದರು.

ಈ ಘಟನೆಯನ್ನು ಪ್ರಸ್ತಾಪಿಸಿದ ಲೋಕಾಯುಕ್ತರು, ವೈದ್ಯರು ಮತ್ತು ಸಿಬ್ಬಂದಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ರೋಗಿಗಳಿಗೆ ತುರ್ತು ನೆರವು ನೀಡಲು ಕ್ರಮ ಕೈಗೊಳ್ಳುವಂತೆ ತಾಕೀತು ಮಾಡಿದರು.

ಸುದ್ದಿ 2 ನಿಮಿಷ

ಸಿದ್ದರಾಮಯ್ಯ ವಿರುದ್ಧ ಸುಳ್ಳು ಸುದ್ದಿ ಹಂಚಿಕೆ: ವಿಚಾರಣೆಗೆ ತಡೆ

ಬೆಂಗಳೂರು: 'ಹಿಂದೂಗಳ ಅಗತ್ಯ ನಮಗೆ ಬೇಡ. ಮುಸ್ಲಿಮರ ಓಟು ಸಾಕು. ಮುಸ್ಲಿಮರ ಓಲೈಕೆ ಬಗ್ಗೆ, ಬಿಜೆಪಿಗರ ಟೀಕೆ ಬಗ್ಗೆ ತಲೆ ಕೆಡಿಸಿಕೊಳ್ಳಬೇಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ ಎಂಬ ಸುಳ್ಳು ಸುದ್ದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರೆ’ ಎಂಬ ಆರೋಪ ಎದುರಿಸುತ್ತಿರುವ ಮೂವರ ವಿರುದ್ಧದ ವಿಚಾರಣೆಗೆ ಹೈಕೋರ್ಟ್ ತಡೆ ನೀಡಿದೆ.

‘ನಮ್ಮ ವಿರುದ್ಧ ಬೆಂಗಳೂರು ಪಶ್ಚಿಮ ಸೆನ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್ಐಆರ್ ರದ್ದುಪಡಿಸಬೇಕು’ ಎಂದು ಕೋರಿ ಜರಗನಹಳ್ಳಿಯ ವಿ.ಪ್ರಭಾಕರ ರೆಡ್ಡಿ, ಬೆಂಗಳೂರಿನ ಉತ್ತರ ವಿದ್ಯಾರಣ್ಯಪುರದ ಎಚ್.ಎನ್.ವಿಜಯಕುಮಾರ್ ಮತ್ತು ದಾವಣಗೆರೆಯ ವಿರೂಪಾಕ್ಷ ಬಣಕಾರ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವಸಂತ ಕುಮಾರ್, ‘ಅರ್ಜಿದಾರ ಆರೋಪಿಗಳು ಮೂಲ ಸುದ್ದಿಯ ಜನಕರಲ್ಲ. ತಮಗೆ ಬಂದ ಸುದ್ದಿಯನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದ್ದಾರಷ್ಟೇ. ಇದು ತಪ್ಪಾದ ಸುಳ್ಳು ಸುದ್ದಿ. ಪೊಲೀಸರು ವಿಧಿಸಿರುವ ಅಪರಾಧ ಕಲಂಗಳು ಅರ್ಜಿದಾರರಿಗೆ ಅನ್ವಯ ಆಗುವುದಿಲ್ಲ. ಆದ್ದರಿಂದ, ಅರ್ಜಿದಾರರ ವಿರುದ್ಧದ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿದರು.

ಇದಕ್ಕೆ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ‘ಸದ್ಯ ಪ್ರಕರಣದ ತನಿಖೆ ನಡೆಯುತ್ತಿದೆ. ಈ ಪ್ರಕರಣದಲ್ಲಿ ಒಟ್ಟು ಏಳು ಜನ ಆರೋಪಿಗಳಿದ್ದಾರೆ. ಇದರಲ್ಲಿ ಮೂವರು ಆರೋಪಿಗಳು ಕೋರ್ಟ್ ಮೆಟ್ಟಿಲೇರಿದ್ದಾರೆ. ಉಳಿದವರ ಪಾತ್ರದ ಬಗ್ಗೆಯೂ ತನಿಖೆ ನಡೆಯಬೇಕಿದೆ. ಹಾಗಾಗಿ, ಇಡೀ ಪ್ರಕರಣಕ್ಕೆ ತಡೆ ನೀಡಬಾರದು. ಈಗ ಕೋರ್ಟ್ ಮೆಟ್ಟಿಲೇರಿರುವ ಆರೋಪಿಗಳ ವಿರುದ್ಧ ಯಾವುದೇ ಬಲವಂತದ ಕ್ರಮ ಜರುಗಿಸುವುದಿಲ್ಲ’ ಎಂದು ಹೇಳಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ವಿಚಾರಣೆಗೆ ತಡೆ ನೀಡಿ ಆದೇಶಿಸಿತು.

ಡೆಂಗಿ: 216 ಪ್ರಕರಣ ದೃಢ

ಬೆಂಗಳೂರು: ರಾಜ್ಯದಲ್ಲಿ 216 ಡೆಂಗಿ ಪ್ರಕರಣಗಳು ಹೊಸದಾಗಿ ಸೋಮವಾರ ದೃಢಪಟ್ಟಿವೆ. ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 17,443ಕ್ಕೆ ಏರಿಕೆಯಾಗಿದೆ.

24 ಗಂಟೆಗಳ ಅವಧಿಯಲ್ಲಿ 2,079 ಪರೀಕ್ಷೆಗಳನ್ನು ನಡೆಸಲಾಗಿದೆ. ಹೊಸದಾಗಿ ದೃಢಪಟ್ಟ ಪ್ರಕರಣಗಳಲ್ಲಿ ಒಂದು ವರ್ಷದೊಳಗಿನ 3 ಮಕ್ಕಳು ಸೇರಿದ್ದಾರೆ. ಒಟ್ಟು 2,811 ಡೆಂಗಿ ಸಕ್ರಿಯ ಪ್ರಕರಣಗಳಿವೆ. 2,379 ಮಂದಿ ಮನೆ ಆರೈಕೆಗೆ ಒಳಗಾಗಿದ್ದಾರೆ. ಐಸಿಯುನಲ್ಲಿ ದಾಖಲಾಗಿರುವ ಏಳು ಮಂದಿ ಸೇರಿ 432 ಮಂದಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದಾರೆ. ರಾಜ್ಯದಲ್ಲಿ ಬಿಬಿಎಂಪಿ ಮತ್ತು 20 ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಹೊಸದಾಗಿ ವರದಿಯಾಗಿವೆ. ಬಿಬಿಎಂಪಿ ವ್ಯಾಪ್ತಿಯಲ್ಲಿ 984 ಮಂದಿ ಡೆಂಗಿ ಶಂಕಿತರಿಗೆ ಪರೀಕ್ಷೆ ಮಾಡಲಾಗಿದ್ದು, 80 ಮಂದಿಯಲ್ಲಿ ಈ ಜ್ವರ ದೃಢಪಟ್ಟಿದೆ. ಮೈಸೂರು (22) ಹಾಗೂ ಧಾರವಾಡದಲ್ಲಿ (19) ಅಧಿಕ ಪ್ರಕರಣಗಳು ಹೊಸದಾಗಿ ಖಚಿತಪಟ್ಟಿವೆ.

‘ಪಂಕ್ಚರ್ ಮಾಫಿಯಾ’ ಸಕ್ರಿಯವಾಗಿರುವ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಕುವೆಂಪು ವೃತ್ತದ ಕೆಳ ಸೇತುವೆಯಲ್ಲಿ ಅಪಾರ ಪ್ರಮಾಣದ ಮೊಳೆಗಳು ಬಿದ್ದಿದ್ದು, ನಗರದಲ್ಲಿ ಮತ್ತೆ ‘ಪಂಕ್ಚರ್ ಮಾಫಿಯಾ’ ಸಕ್ರಿಯ ಆಗಿರುವ ಅನುಮಾನ ವ್ಯಕ್ತವಾಗಿದೆ.

ರಾತ್ರಿ ವೇಳೆ ಮೊಳೆ ಎಸೆದು ಕಿಡಿಗೇಡಿಗಳು ಪರಾರಿ ಆಗಿರುವ ಶಂಕೆ ಇದೆ. ಮೊಳೆಗಳು ರಸ್ತೆ ಮೇಲೆ ಬಿದ್ದಿರುವುದರ ಹಿಂದೆ ಸುತ್ತಮುತ್ತಲಿನ ಪಂಕ್ಚರ್ ಅಂಗಡಿಗಳ ಕೈವಾಡವಿರುವ ಅನುಮಾನ ವ್ಯಕ್ತವಾಗುತ್ತಿದೆ.

‘ರಸ್ತೆಯ ಮೇಲೆ ಮೊಳೆ ಎಸೆದು ವಾಹನ ಚಕ್ರಗಳು ಪಂಕ್ಚರ್ ಆಗುವಂತೆ ಮಾಡುತ್ತಿದ್ದಾರೆ’ ಎಂದು ವಾಹನ ಸವಾರರು ದೂರಿದ್ದಾರೆ.

ಕಿಡಿಗೇಡಿಗಳ ಪತ್ತೆಗೆ ಅಕ್ಕಪಕ್ಕದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಜಾಲಹಳ್ಳಿ ಸಂಚಾರ ಠಾಣೆ ಸಿಬ್ಬಂದಿಯೊಬ್ಬರು ರಸ್ತೆಯಲ್ಲಿ ಬಿದ್ದಿದ್ದ ಮೊಳೆ ಹೆಕ್ಕಿ ತೆಗೆಯುತ್ತಿರುವ ವಿಡಿಯೊ ಹಾಗೂ ಫೋಟೊಗಳನ್ನು ಪೊಲೀಸ್ ಇಲಾಖೆ ತನ್ನ ಅಧಿಕೃತ ಫೇಸ್‌ಬುಕ್ ಖಾತೆಯಲ್ಲಿ ಪ್ರಕಟಿಸಿದೆ. ಸಿಬ್ಬಂದಿ ಕಾರ್ಯಕ್ಕೆ ವಾಹನ ಸವಾರರು ಹಾಗೂ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರಸ್ತೆಯಲ್ಲಿ ಎಸೆಯಲಾಗಿದ್ದ ಮೊಳೆ

ಸಂಚಾರ ದಟ್ಟಣೆ ಹೆಚ್ಚುತ್ತಿರುವ ನಗರದಲ್ಲಿ ಕೆಲವು ರಸ್ತೆಗಳು ಇತ್ತೀಚೆಗೆ ‘ಪಂಕ್ಚರ್ ರಸ್ತೆ’ಗಳಾಗಿ ಮಾರ್ಪಡುತ್ತಿವೆ. ಹೊರವರ್ತುಲ ರಸ್ತೆ, ಮೇಲ್ಸೇತುವೆ ರಸ್ತೆಗಳು ಹಾಗೂ ಒಳ ರಸ್ತೆಗಳಲ್ಲಿ ಎಲ್ಲೆಂದರಲ್ಲಿ ಮೊಳೆಗಳನ್ನು ಎಸೆಯಲಾಗುತ್ತಿದೆ. ಇಂತಹ ರಸ್ತೆಗಳಲ್ಲಿ ಓಡಾಡುವ ವಾಹನಗಳ ಚಕ್ರಗಳು, ಮೊಳೆಗೆ ಸಿಲುಕಿ ಪಂಕ್ಚರ್ ಆಗುತ್ತಿವೆ. ಈ ಹಿಂದೆ ನಾಗಾವರ, ಕೆ.ಜಿ.ಹಳ್ಳಿ ಹಾಗೂ ಡಿ.ಜೆ.ಹಳ್ಳಿ ಒಳ ರಸ್ತೆಗಳಲ್ಲಿ ಈ ರೀತಿ ಮೊಳೆ ಎಸೆದು ವಾಹನಗಳ ಚಕ್ರಗಳು ಪಂಕ್ಚರ್ ಆಗುವಂತೆ ಕಿಡಿಗೇಡಿಗಳು ಮಾಡುತ್ತಿದ್ದರು. ಈಗ ಮತ್ತೆ ಅದೇ ರೀತಿಯ ಮಾಫಿಯಾ ಸಕ್ರಿಯವಾಗಿದೆ ಎಂದು ಸಾರ್ವಜನಿಕರು ದೂರಿದ್ದಾರೆ.

ಪಶ್ಚಿಮ ಬಂಗಾಳದ ವ್ಯಾಪಾರಿಗಳಿಂದ ಮೋಸ: ಎಫ್ಐಆರ್ ದಾಖಲು

ಹಣದ ಬದಲು ಬಿಳಿ ಹಾಳೆ ಕಳುಹಿಸಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಮೆಟೊ ವ್ಯಾಪಾರಿಯೊಬ್ಬರಿಗೆ ನೋಟಿನೊಂದಿಗೆ ಬಿಳಿ ಹಾಳೆಯಿಟ್ಟು ವಂಚಿಸಿರುವ ಆರೋಪದಡಿ ಪಶ್ಚಿಮ ಬಂಗಾಳದ ಇಬ್ಬರು ತರಕಾರಿ ವ್ಯಾಪಾರಿಗಳ ವಿರುದ್ಧ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ.

ಪಶ್ಚಿಮ ಬಂಗಾಳದ ಸಿಲಿಗುರಿ ಎಪಿಎಂಸಿ ಮಾರುಕಟ್ಟೆಯ ಜಿ.ಸಂಜಯ್ ಹಾಗೂ ಜಿ.ಮುಖೇಶ್ ವಿರುದ್ಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

‘ಇಬ್ಬರು ವ್ಯಾಪಾರಿಗಳು ಒಟ್ಟು ₹32 ಲಕ್ಷ ವಂಚಿಸಿದ್ದಾರೆ’ ಎಂದು ಕೋಲಾರದ ಆದಿತ್ಯ ಶಾ ಅವರು ದೂರು ನೀಡಿದ್ದಾರೆ. ಪ್ರಕರಣ ಸಂಬಂಧ ತಾಂತ್ರಿಕ ಸಾಕ್ಷ್ಯ ಸಂಗ್ರಹಿಸಲು ವಿಶೇಷ ತಂಡ ರಚಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ದೂರಿನಲ್ಲಿ ಏನಿದೆ?: ‘ದೂರುದಾರ ಹಾಗೂ ಅವರ ದೊಡ್ಡಪ್ಪ ವಿನೋದ್ ಶಾ ಅವರು ಕೋಲಾರದ ಎಪಿಎಂಸಿ ಮಾರುಕಟ್ಟೆಯಲ್ಲಿ ತರಕಾರಿ ವ್ಯಾಪಾರ ನಡೆಸುತ್ತಿದ್ದಾರೆ. ವಿನೋದ್ ಅವರ ಹೆಸರಿನಲ್ಲಿ ವ್ಯಾಪಾರ ಪರವಾನಗಿ ಇದ್ದು, ರೈತರಿಂದ ತರಕಾರಿ ಹಾಗೂ ಟೊಮೆಟೊ ಖರೀದಿಸಿ ಪಶ್ಚಿಮ ಬಂಗಾಳಕ್ಕೆ ರವಾನೆ ಮಾಡುತ್ತಿದ್ದಾರೆ. ತರಕಾರಿ ಖರೀದಿಸಿದ ಸಿಲಿಗುರಿ ಎಪಿಎಂಸಿ ಮಾರುಕಟ್ಟೆಯ ವ್ಯಾಪಾರಿಗಳು ಬ್ಯಾಂಕ್ ಖಾತೆಗೆ ಹಣ ಹಾಕುತ್ತಿದ್ದರು. ಕೆಲವೊಮ್ಮೆ ನಗದು ರೂಪದಲ್ಲಿ ಹಣ ನೀಡುತ್ತಿದ್ದರು’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಜುಲೈ 10ರಂದು ಮುಖೇಶ್ ಅವರು ಕರೆ ಮಾಡಿ ಮೂರು ಲೋಡ್ ಟೊಮೆಟೊ ಕಳುಹಿಸುವಂತೆ ಕೋರಿದ್ದರು. ಟೊಮೆಟೊ ತಲುಪಿದ ಮೇಲೆ ವಿನೋದ್‌ಗೆ ಕರೆ ಮಾಡಿ, ಬೆಂಗಳೂರಿನ ಜಿ.ಸಂಜಯ್ ಅವರ ಬಳಿ ಹಣ ಕಳುಹಿಸಿರುವುದಾಗಿ ಹೇಳಿದ್ದರು. ಅವರು ವೈಟ್‌ಫೀಲ್ಡ್‌ನ ಹಗಡೂರಿನ ಬೇಕರಿ ಬಳಿ ಹಣ ನೀಡುವುದಾಗಿ ಮಾಹಿತಿ ನೀಡಿದ್ದರು. ಆದಿತ್ಯ ಶಾ ಅವರು ಹಣ ಪಡೆದುಕೊಳ್ಳಲು ಅಲ್ಲಿಗೆ ತೆರಳಿದ್ದರು. ಬೇಕರಿ ಬಳಿ ಸಂಜಯ್ ಅವರು, ₹20 ಲಕ್ಷ ಹಣವಿದೆ ಎಂದು ಹೇಳಿ, ₹500 ಮುಖಬೆಲೆಯ ಕಟ್ಟುಗಳನ್ನು ನೀಡಿದ್ದರು. ಹೆಚ್ಚಿನ ಜನರಿದ್ದ ಕಾರಣಕ್ಕೆ ಹಣವನ್ನು ಪರಿಶೀಲಿಸದೇ ಕೋಲಾರಕ್ಕೆ ತೆರಳಿದ್ದರು’ ಎಂದು ದೂರಿನಲ್ಲಿ ವಿವರಿಸಲಾಗಿದೆ.

‘ಕೋಲಾರಕ್ಕೆ ತೆರಳಿದ ಬಳಿಕ ಬ್ಯಾಗ್ ತೆರೆದು ಹಣ ಎಣಿಕೆ ಮಾಡಲು ಮುಂದಾದ ವೇಳೆ ₹500 ಮುಖಬೆಲೆಯ ನೋಟುಗಳಂತೆ ಕಾಣುವ 10 ಕಟ್ಟುಗಳಿದ್ದವು. ಅದರಲ್ಲಿ ಕೆಲವು ಕಟ್ಟುಗಳ ಮೇಲೆ– ಕೆಳಗೆ ಮಾತ್ರ ಅಸಲಿ ನೋಟು ಇರಿಸಿ, ಮಧ್ಯದಲ್ಲಿ ಖಾಲಿ ಬಿಳಿ ಹಾಳೆ ಇರಿಸಿ ವಂಚನೆ ಎಸಗಿದ್ದಾರೆ’ ಎಂದು ದೂರು ನೀಡಲಾಗಿದೆ.

‘ಆರೋಪಿಗಳು ಮೊಬೈಲ್ ಸಹ ಸ್ವಿಚ್ಡ್ ಆಫ್ ಮಾಡಿಕೊಂಡಿದ್ದಾರೆ. ಟೊಮೆಟೊ ಖರೀದಿಸಿದ್ದ ₹20 ಲಕ್ಷ ಹಾಗೂ ಬಾಕಿಯಿರುವ ₹12 ಲಕ್ಷ ಪಾವತಿಸದೇ ವಂಚಿಸಿದ್ದಾರೆ’ ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಅಪರಾಧ ಸುದ್ದಿ

ನೇಣುಬಿಗಿದುಕೊಂಡು ಗೃಹಿಣಿ ಆತ್ಮಹತ್ಯೆ

ಬೆಂಗಳೂರು: ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಅಂದ್ರಹಳ್ಳಿಯಲ್ಲಿ ಗೃಹಿಣಿಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಾನಸಾ(25) ಆತ್ಮಹತ್ಯೆ ಮಾಡಿಕೊಂಡವರು. ‘ಮಾನಸಾ ಅವರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ತಮ್ಮ ಮೊಬೈಲ್‌ನಲ್ಲಿ ವಿಡಿಯೊ ಮಾಡಿದ್ದಾರೆ. ಆ ವಿಡಿಯೊ ಸಂಗ್ರಹಿಸಲಾಗಿದ್ದು, ಅದನ್ನು ಆಧರಿಸಿ ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

‘ಆರು ವರ್ಷದ ಹಿಂದೆ ದಿಲೀಪ್ ಅವರೊಂದಿಗೆ ಮಾನಸಾ ಅವರ ವಿವಾಹವಾಗಿತ್ತು. ದಂಪತಿಗೆ ಐದು ವರ್ಷದ ಹೆಣ್ಣು ಮಗುವಿದೆ. ಒಂದೂವರೆ ವರ್ಷದಿಂದ ದಿಲೀಪ್‌ಗೆ ಬೇರೊಂದು ಮಹಿಳೆಯೊಂದಿಗೆ ಸ್ನೇಹವಿತ್ತು ಎನ್ನಲಾಗಿದೆ. ಇದೇ ವಿಚಾರಕ್ಕೆ ದಂಪತಿ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಇದರಿಂದ ಬೇಸತ್ತು ಮಾನಸಾ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆಯಿದೆ. ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

₹40 ಕೋಟಿ ಮೌಲ್ಯದ ಜಮೀನು ಮರುವಶ

ಬೆಂಗಳೂರು: ಲೊಟ್ಟೆಗೊಲ್ಲಹಳ್ಳಿಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್‌ಗಳನ್ನು ತೆರವುಗೊಳಿಸಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ₹40 ಕೋಟಿ ಮೌಲ್ಯದ ತನ್ನ ಜಮೀನನ್ನು ಮರುವಶಕ್ಕೆ ತೆಗೆದುಕೊಂಡಿದೆ.

ಲೊಟ್ಟೆಗೊಲ್ಲಹಳ್ಳಿ ಗ್ರಾಮದ ಸರ್ವೆ ನಂ. 10/1, 10/11ಎಫ್1 ಮತ್ತು 10/11ಎಫ್2 ರಲ್ಲಿ ಒಂದು ಗೋಡೌನ್, 15 ಶೆಡ್‌ಗಳು ಮತ್ತು ಎರಡು ಕಾರು ಗ್ಯಾರೇಜ್‌ಗಳು ಅಕ್ರಮವಾಗಿ ನಿರ್ಮಾಣವಾಗಿದ್ದವು. ಇವುಗಳನ್ನು ಸೋಮವಾರ ತೆರವುಗೊಳಿಸಿದ ಬಿಡಿಎ, 32 ಗುಂಟೆ ಪ್ರದೇಶವನ್ನು ವಶಕ್ಕೆ ಪಡೆಯಿತು ಎಂದು ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ಮನೆ ಊಟ ಕೋರಿಕೆ: ಅರ್ಜಿ ವಾಪಸು ಪಡೆದ ದರ್ಶನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮನೆ ಊಟ ಪಡೆಯಲು ಅನುಮತಿಸುವಂತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧೀಕ್ಷಕರಿಗೆ ನಿರ್ದೇಶಿಸಬೇಕು’ ಎಂದು ಕೋರಿರುವ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ತೂಗುದೀಪ ಶ್ರೀನಿವಾಸ್ ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ತಮ್ಮ ರಿಟ್ ಅರ್ಜಿಯನ್ನು ವಾಪಸು ಪಡೆದರು.

ಈ ಕುರಿತ ಅರ್ಜಿಯು ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರಿದ್ದ ಏಕಸದಸ್ಯ ನ್ಯಾಯಪೀಠದಲ್ಲಿ ಸೋಮವಾರ ವಿಚಾರಣೆಗೆ ನಿಗದಿಯಾಗಿತ್ತು. ದರ್ಶನ್ ಪರ ಹಾಜರಾಗಿದ್ದ ಹಿರಿಯ ವಕೀಲ ಪ್ರಭುಲಿಂಗ ಕೆ.ನಾವದಗಿ, ‘ಅರ್ಜಿ ವಾಪಸು ಪಡೆದು ತಿದ್ದುಪಡಿ ಮಾಡಿದ ಹೊಸ ಅರ್ಜಿ ಸಲ್ಲಿಸಲಾಗುವುದು’ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಹೊಸ ಅರ್ಜಿ ಸಲ್ಲಿಸಲು ಅವಕಾಶ ನೀಡಿತು.

ದರ್ಶನ್

‘ಕರ್ನಾಟಕ ಬಂದಿಖಾನೆ ಕಾಯ್ದೆ–1963ರ ಕಲಂ 30ರ ಅಡಿ ವಿಚಾರಣಾಧೀನ ಕೈದಿ ಮನೆ ಊಟ, ಹಾಸಿಗೆ ಇತ್ಯಾದಿ ಪಡೆಯಲು ಅರ್ಹರಾಗಿರುತ್ತಾರೆ. ನನಗೆ ಜೈಲಿನ ಊಟದಿಂದ ಆರೋಗ್ಯದಲ್ಲಿ ವ್ಯತ್ಯಯವುಂಟಾಗಿದೆ. ಹಾಗಾಗಿ, ಮನೆ ಊಟ ಪಡೆಯಲು ನಿರ್ದೇಶಿಸಬೇಕು’ ಎಂಬುದು ದರ್ಶನ್ ಕೋರಿಕೆ. ಅರ್ಜಿಯ ಈ ಹಿಂದಿನ ವಿಚಾರಣೆ ವೇಳೆ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಈ ಅರ್ಜಿಯನ್ನು ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲೇ ಸಲ್ಲಿಸಿ ಪರಿಹಾರ ಪಡೆಯಿರಿ’ ಎಂದು ದರ್ಶನ್ ಪರ ವಕೀಲರಿಗೆ ನಿರ್ದೇಶಿಸಿತ್ತು. ಮ್ಯಾಜಿಸ್ಟ್ರೇಟ್ ಕೋರ್ಟ್ ಅರ್ಜಿ ಮಾನ್ಯ ಮಾಡಲು ನಿರಾಕರಿಸಿತ್ತು. ಪ್ರಾಸಿಕ್ಯೂಷನ್ ಪರ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಹಾಜರಿದ್ದರು.

ಮಹೋತ್ಸವ

ಹನುಮಂತ ನಗರದಲ್ಲಿರುವ ಶ್ರೀ ಕುಮಾರ ಸ್ವಾಮಿ ದೇವಸ್ಥಾನದಲ್ಲಿ ಸೋಮವಾರ ನಡೆದ ಆಡಿ ಕೃತಿಕಾ ಮಹೋತ್ಸವಕ್ಕೆ ಭಕ್ತಾದಿಗಳು ಕಾವಡಿಗಳನ್ನು ಹೊತ್ತು ತಂದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ಇಂದಿನಿಂದ ಸಿದ್ಧ ಉಡುಪು ಮೇಳ

ಬೆಂಗಳೂರು: ಸೌಥ್ ಇಂಡಿಯಾ ಗಾರ್ಮೆಂಟ್ಸ್ ಅಸೋಸಿಯೇಷನ್‌ನಿಂದ ಜುಲೈ 30ರಿಂದ ಆಗಸ್ಟ್ 1ರವರೆಗೆ ಬಳ್ಳಾರಿ ರಸ್ತೆಯ ಅರಮನೆ ಮೈದಾನದ ಪ್ರಿನ್ಸೆಸ್ ಶ್ರೈನ್ ಆವರಣದಲ್ಲಿ ಮೂರು ದಿನಗಳ ಸಿದ್ಧ ಉಡುಪುಗಳ ರಾಷ್ಟ್ರ ಮಟ್ಟದ ಮೇಳ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಅನುರಾಗ್ ಸಿಂಘಾ, ‘ಮೇಳದಲ್ಲಿ ಮಹಿಳೆಯರು, ಪುರುಷರು ಮತ್ತು ಮಕ್ಕಳ 150ಕ್ಕೂ ಹೆಚ್ಚು ಹೊಸ ಬ್ರ್ಯಾಂಡ್‌ಗಳ ಉಡುಪುಗಳನ್ನು ಪ್ರದರ್ಶಿಸಲಾಗುವುದು. ಹೊಸ ವಿನ್ಯಾಸಗಳು, ಮದುವೆ, ಸಾಂಪ್ರದಾಯಿಕ ಉಡುಗೆ–ತೊಡುಗೆ, ಔಪಚಾರಿಕ, ಅನೌಪಚಾರಿಕ ಬಟ್ಟೆಗಳು, ಚಳಿಗಾಲದ ಉಡುಪುಗಳ ಪ್ರದರ್ಶನವೂ ಇರಲಿದೆ’ ಎಂದರು.

‘ಸೂರತ್, ಜೈಪುರ, ದೆಹಲಿ, ಅಹಮದಾಬಾದ್, ನಾಗಪುರ ಸೇರಿದಂತೆ ಪ್ರಮುಖ ನಗರಗಳಿಂದ 100ಕ್ಕೂ ಹೆಚ್ಚು ಜವಳಿ ಉತ್ಪಾದಕರು ಮೇಳದಲ್ಲಿ ಭಾಗವಹಿಸಲಿದ್ದಾರೆ. ₹100 ಕೋಟಿಗೂ ಹೆಚ್ಚು ವಹಿವಾಟು ನಡೆಯಬಹುದು ಎಂಬುದಾಗಿ ಅಂದಾಜಿಸಲಾಗಿದೆ’ ಎಂದು ಹೇಳಿದರು.

ಸಾಹಿತಿ, ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಅನಾರೋಗ್ಯದಿಂದ ಬಳಲುತ್ತಿದ್ದ ಸಾಹಿತಿ ಹಾಗೂ ಪರಿಸರವಾದಿ ಭೂಹಳ್ಳಿ ಪುಟ್ಟಸ್ವಾಮಿ (68) ಭಾನುವಾರ ರಾತ್ರಿ ಚನ್ನಪಟ್ಟಣದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ನನ್ನ ಸಾವಿಗೆ ನಾನೇ ಕಾರಣ. ಅನಾರೋಗ್ಯದಿಂದ ಬೇಸರಗೊಂಡ ಜೀವನಯಾತ್ರೆ ಮುಗಿಸುತ್ತಿದ್ದೇನೆ’ ಎಂಬ ಸಂದೇಶವನ್ನು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿ ತಡರಾತ್ರಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

ಚನ್ನಪಟ್ಟಣ ಟೌನ್ ಪೊಲೀಸ್ ಠಾಣೆಯಲ್ಲಿ ಅಸಹಜ ಸಾವು ಪ್ರಕರಣ ದಾಖಲಾಗಿದೆ. ಸ್ವಗ್ರಾಮ ಭೂಹಳ್ಳಿಯಲ್ಲಿ ಸೋಮವಾರ ಅಂತ್ಯಕ್ರಿಯೆ ಜರುಗಿತು.

ಪುಟ್ಟಸ್ವಾಮಿ ಅವರು ಚನ್ನಪಟ್ಟಣದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಪತ್ನಿ ಗಾಯತ್ರಿ, ಪುತ್ರರಾದ ಸುಕೃತ್ ಸಾಗರ್, ಸಾತ್ವಿಕ್ ಸಾಗರ್ ಮೈಸೂರಿನಲ್ಲಿ ನೆಲೆಸಿದ್ದಾರೆ.

ಇತಿಹಾಸ ಉಪನ್ಯಾಸಕರಾಗಿದ್ದ ಅವರು 25ಕ್ಕೂ ಹೆಚ್ಚು ಕವನ ಸಂಕಲನ ಪ್ರಕಟಿಸಿದ್ದಾರೆ. ಹಳ್ಳಿ ಮನೆ, ಲುಂಬಿನಿ, ನೂರು ಸ್ವರ, ಎಲ್ಲರ ಹೆಜ್ಜೆ, ಭಾವ ಮಂಜರಿ, ನೆಲದ ಕಂಬನಿ,

ಸ್ವಾತಂತ್ರ್ಯಕ್ಕೆ ಜೀವವಿದೆ, ಗೋಜಲು, ಬೆಳದಿಂಗಳ ಕುಡಿ, ಲಾವಣಿ ಹಾಡು, ಅಕ್ಷರ ಗುಡಿ ನಾಟಕ, ಅಗ್ರಹಾರ ಬೀದಿಗಳಲ್ಲಿ... ಮುಂತಾದ ಅವರ ಪ್ರಮುಖ ಕೃತಿಗಳು ಸಾಹಿತ್ಯಾಸಕ್ತರ ಮೆಚ್ಚುಗೆ ಗಳಿಸಿದ್ದವು.

‘ಎಡಪಂಥೀಯ ಚಿಂತನೆಗಳಿಂದಲೂ ಪ್ರಭಾವಿತರಾಗಿದ್ದ ಅವರು ವ್ಯವಸ್ಥೆಯೊಳಗಿನ ಹುಳುಕುಗಳನ್ನು ಖಾರವಾಗಿ ಪ್ರಶ್ನಿಸುತ್ತಿದ್ದರು. ಕಡೆಯವರೆಗೂ ತಾವು ನಂಬಿದ ಸಿದ್ಧಾಂತಕ್ಕೆ ಬದ್ಧರಾಗಿ ಬದುಕಿದರು’ ಎಂದು ಅವರ ಶಿಷ್ಯ, ಶಿಕ್ಷಣ ಸಂಯೋಜಕ ಚಕ್ಕರೆ ಯೋಗೇಶ್ ತಿಳಿಸಿದರು.

‘ಪರಿಸರವಾದಿಯಾಗಿದ್ದ ಅವರು ಸ್ವಂತ ಹಣದಲ್ಲಿ ತಾಲ್ಲೂಕಿನ ವಿವಿಧೆಡೆ ಇರುವ ಖಾಲಿ ಸರ್ಕಾರಿ ಜಾಗಗಳಲ್ಲಿ ಸಸಿ ನೆಟ್ಟು, ಬೋಳು ಜಾಗವನ್ನು ವನವಾಗಿಸುತ್ತಾ ಬಂದಿದ್ದರು. ಇವರಿಂದಾಗಿ ಸುಮಾರು 40 ಎಕರೆ ಜಾಗ ಹಸಿರು ಹೊದ್ದು ನಿಂತಿದೆ. ಸಾವಿರಾರು ಗಿಡ, ಮರಗಳಾಗಿ ಪಕ್ಷಿಗಳಿಗೆ ನೆಲೆ ಒದಗಿಸಿ ಜನರಿಗೆ ನೆರಳಾಗಿವೆ’ ಎಂದು ಹೇಳಿದರು.

ಕಾವೇರಿ ನದಿ ಮಲಿನಗೊಳಿಸದಂತೆ ಮನವಿ: ರಾಜ್ಯ ಸರ್ಕಾರಕ್ಕೆ ನೋಟಿಸ್

ಅಸ್ಥಿ ವಿಸರ್ಜನೆ ನಿಷೇಧಕ್ಕೆ ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾವೇರಿ ನದಿ ದಂಡೆಯಲ್ಲಿರುವ ಶ್ರೀರಂಗಪಟ್ಟಣದ ಗೋಸಾಯಿ ಘಾಟ್‌ನ ನಿಮಿಷಾಂಭ ದೇಗುಲದ ಬಳಿ ನಡೆಯುವ ಅಸ್ಥಿ ವಿಸರ್ಜನೆ ಕ್ರಿಯೆಗಳನ್ನು ಸಂಪೂರ್ಣ ನಿಷೇಧಿಸಬೇಕು’ ಎಂಬ ಮಧ್ಯಂತರ ಮನವಿಯೊಂದನ್ನು ತಳ್ಳಿಹಾಕಿರುವ ಹೈಕೋರ್ಟ್, ‘ಕಾವೇರಿ ನದಿ ದಂಡೆಯಲ್ಲಿ ಅಸ್ಥಿ ವಿಸರ್ಜನೆ ಸೇರಿದಂತೆ ಯಾವುದೇ ಮಾಲಿನ್ಯಕಾರಕ ಚಟುವಟಿಕೆಗಳಿಗೆ ನಿರ್ಬಂಧ ಹೇರಬೇಕು’ ಎಂದು ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದೆ.

ಈ ಸಂಬಂಧ ವಕೀಲ ಕುಶಾಲ್ ಕುಮಾರ್ ಕೌಶಿಕ್ ಸೇರಿದಂತೆ ಆರು ಜನರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರು ಖುದ್ದು ವಾದ ಮಂಡಿಸಿ, ‘ಕಾವೇರಿ ನದಿ ತೀರದಲ್ಲಿ ಮಾಲಿನ್ಯ ಹೆಚ್ಚಳವಾಗಿದೆ. ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ವರದಿಯಲ್ಲಿ ಕಾವೇರಿ ನದಿ ತೀರದಲ್ಲಿನ ಮಾಲಿನ್ಯ ಹೆಚ್ಚಾಗಲು ಕಾರಣ ಏನು ಎಂಬುದನ್ನು ಪಟ್ಟಿ ಮಾಡಲಾಗಿದೆ. ಈ ಹಿಂದೆ ಸಾಮಾನ್ಯವಾಗಿ ಈ ಪ್ರದೇಶದಲ್ಲಿನ ಎರಡು ಸ್ಥಳಗಳಲ್ಲಿ ಮಾತ್ರವೇ ಅಸ್ಥಿ ವಿಸರ್ಜನೆ ನಡೆಯುತ್ತಿತ್ತು. ಈಗ ನದಿ ತೀರದ ಎಲ್ಲೆಡೆಯೂ ಅಸ್ಥಿ ವಿಸರ್ಜನೆ ಕ್ರಿಯೆಗಳನ್ನು ನಡೆಸಲಾಗುತ್ತಿದೆ. ನದಿಯ ನೀರನ್ನು ಕುಡಿಯುವುದಕ್ಕೂ ಬಳಕೆ ಮಾಡಲಾಗುತ್ತಿದೆ. ಜತೆಗೆ ಭಕ್ತಾದಿಗಳಿಗೆ ಇದೇ ನೀರನ್ನು ಅಭಿಷೇಕ ರೂಪದಲ್ಲೂ ನೀಡಲಾಗುತ್ತದೆ. ಕನಿಷ್ಠ ಶ್ರೀರಂಗಪಟ್ಟದ ನಿಮಿಷಾಂಭ ದೇವಸ್ಥಾನದ ತೀರದಲ್ಲಿಯಾದರೂ ಅಸ್ಥಿ ವಿಸರ್ಜನೆಯನ್ನು ಕಡ್ಡಾಯವಾಗಿ ನಿಷೇಧಿಸಬೇಕು’ ಎಂದು ಕೋರಿದರು.

ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ‘ಅರ್ಜಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಆಕ್ಷೇಪಣೆ ಸಲ್ಲಿಸಬೇಕು’ ಎಂದು ಆದೇಶಿಸಿ ವಿಚಾರಣೆಯನ್ನು ಸೆಪ್ಟೆಂಬರ್ 11ಕ್ಕೆ ಮುಂದೂಡಿತು.

ಮನವಿ ಏನು?: ‘ಕಾವೇರಿ ನದಿ ತೀರದಲ್ಲಿ ಅಸ್ಥಿ ವಿಸರ್ಜನೆಗೆ ನಿರ್ದಿಷ್ಟ ಸ್ಥಳಗಳಲ್ಲಿ ಮಾತ್ರವೇ ಅವಕಾಶ ನೀಡಿ ಸೂಕ್ತ ಮಾರ್ಗಸೂಚಿ ರೂಪಿಸಬೇಕು. ಉತ್ತರಾಖಂಡ ಹೈಕೋರ್ಟ್ ಹೇಗೆ; ಗಂಗಾ, ಯಮುನಾ ಮತ್ತು ಅವುಗಳ ಉಪನದಿಗಳನ್ನು ‘ಜ್ಯುರಿಸ್ಟಿಕ್ ಪರ್ಸನ್’ ಎಂದು ಘೋಷಿಸಿದೆಯೋ, ಅದೇ ರೀತಿ ಕಾವೇರಿ ನದಿಯನ್ನೂ ‘ಜ್ಯುರಿಸ್ಟಿಕ್ ಪರ್ಸನ್’ ಎಂದು ಪರಿಗಣಿಸಬೇಕು. ಈ ದಿಸೆಯಲ್ಲಿ ಸಮಿತಿಯೊಂದನ್ನು ರಚಿಸಬೇಕು. ಸಮಿತಿಯು, ನದಿಗೆ ಹಾನಿ ಮಾಡಿದವರ ವಿರುದ್ಧ ದಾವೆ ಹೂಡಲು ಅವಕಾಶ ಕಲ್ಪಿಸುವುದಕ್ಕೆ ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಅರ್ಜಿಯಲ್ಲಿ ಏನಿದೆ?: ‘ನದಿಗೆ ಹೂವು, ಪ್ಲಾಸ್ಟಿಕ್ ಬ್ಯಾಗ್ ಮತ್ತು ಬಟ್ಟೆ ಎಸೆಯುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು. ನದಿ ತೀರದಲ್ಲಿನ ಭೂ ಮಾಲೀಕರು ತಮ್ಮ ಜಮೀನನ್ನು ಅಸ್ಥಿ ವಿಸರ್ಜನೆ ಮತ್ತಿತರರ ಚಟುವಟಿಕೆಗಳಿಗೆ ನೀಡಿ ಹಣ ಮಾಡುವುದಕ್ಕೆ ನಿರ್ಬಂಧ ವಿಧಿಸಬೇಕು. ನದಿಯಲ್ಲಿ ಸ್ನಾನ ಮಾಡುವವರು ಶಾಂಪೂ, ಸೋಪು, ಬಾಡಿ ವಾಷ್, ಡಿಟರ್ಜಂಟ್ ಬಳಸುವುದಕ್ಕೆ ನಿಷೇಧ ಹೇರಬೇಕು. ಅಗತ್ಯ ಶೌಚಾಲಯ ನಿರ್ಮಿಸಬೇಕು’ ಎಂಬುದೂ ಸೇರಿದಂತೆ ಹಲವು ಕೋರಿಕೆಗಳನ್ನು ಅರ್ಜಿಯಲ್ಲಿ ಮಂಡಿಸಲಾಗಿದೆ.

ನಗರದಲ್ಲಿ ಇಂದು

‘ಕರ್ನಾಟಕ ರತ್ನ ಡಾ.ದೇ. ಜವರೇಗೌಡ’ ಕುರಿತು ಉಪನ್ಯಾಸ: ಬೈರಮಂಗಲ ರಾಮೇಗೌಡ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ನ್ಯಾಷನಲ್ ಹೈಸ್ಕೂಲ್ ವೃತ್ತ, ಬೆಳಿಗ್ಗೆ 11

ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ: ಸಾನ್ನಿಧ್ಯ: ಜ್ಞಾನಪ್ರಕಾಶ್ ಸ್ವಾಮೀಜಿ, ಉದ್ಘಾಟನೆ: ಸತೀಶ ಜಾರಕಿಹೊಳಿ, ಅಧ್ಯಕ್ಷತೆ: ಡಾ. ರಾಮಪ್ರಸಾತ್ ಮನೋಹರ್ ವಿ., ‘ಸಂವಿಧಾನ ಮತ್ತು ಮಹಿಳಾ ಹಕ್ಕುಗಳು’ ಉಪನ್ಯಾಸ: ಮಂಜುಳಾ ಚೆಲ್ಲೂರ್, ಅತಿಥಿಗಳು: ಡಿ. ಶಿವಶಂಕರ್, ಕೆ.ಎಂ. ಮಹೇಶ್, ಶಾಂತಾರಾಮ್ ತೇಜ, ಕವಿರಾಜ್, ಪ್ರಾಸ್ತಾವಿಕ ನುಡಿ: ಸದಾಶಿವ ಕಾಂಬಳೆ, ಆಯೋಜನೆ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಮಂಡಳಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಬೆಂಗಳೂರು ಜಲಮಂಡಳಿ ರಜತ ಭವನ, 8ನೇ ಮುಖ್ಯರಸ್ತೆ, ಮಲ್ಲೇಶ್ವರ, ಮಧ್ಯಾಹ್ನ 2.35

ಕಾಸಿಯಾ ಕಾರ್ಯಕ್ರಮ: ಅತಿಥಿ: ನಿತೀಶ್ ಪಾಟೀಲ, ಅಧ್ಯಕ್ಷತೆ: ಎಂ.ಜಿ. ರಾಜಗೋಪಾಲ್, ಆಯೋಜನೆ ಮತ್ತು ಸ್ಥಳ: ಕಾಸಿಯಾ, ವಿಜಯನಗರ, ಸಂಜೆ 4

ನಾಡಪ್ರಭು ಕೆಂಪೇಗೌಡ ಜಯಂತಿ, ಎಸ್ಸೆಸ್ಸೆಲ್ಸಿ–ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ: ಸಾನ್ನಿಧ್ಯ: ವಿನಯ್ ಗುರೂಜಿ, ಉದ್ಘಾಟನೆ: ಕೆ.ಎಚ್. ಮುನಿಯಪ್ಪ, ದಿನೇಶ್ ಗುಂಡೂರಾವ್, ‘ನಾಡಶಿಲ್ಪಿ ಕೆಂಪೇಗೌಡ’ ಪ್ರಶಸ್ತಿ ಪ್ರದಾನ: ವಿ. ಗೋಪಾಲಗೌಡ, ಅಧ್ಯಕ್ಷತೆ: ಎಂ. ಕೃಷ್ಣಪ್ಪ, ಪ್ರತಿಭಾ ಪುರಸ್ಕಾರ: ಮನು ಬಳಿಗಾರ್, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಕರ್ನಾಟಕ ಪ್ರತಿಭಾವರ್ಧಕ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

‘ಯಮನ ಸೋಲು’ ನಾಟಕ ಪ್ರದರ್ಶನ: ಅತಿಥಿಗಳು: ರಾಮಚಂದ್ರ, ಕುಮಾರ್, ನವೀನ್, ಕಲಾ, ಆಯೋಜನೆ: ಪಾಪು ಕಲಾವಿದರ ಸಂಘ, ಸ್ಥಳ: ಲಾಸ್ಯ ರಂಜಿನಿ ಕಲಾಕ್ಷೇತ್ರ, ಲಿಂಗರಾಜಪುರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.
nagaradalli_indu@prajavani.co.in

ತುಮಕೂರು ಮಾರ್ಗದ ಪ್ರಮುಖ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ಕಡಿಮೆಯಾಗುವ ಸಾಧ್ಯತೆ

ಮೇಲ್ಸೇತುವೆ: ಬಸ್, ಟ್ರಕ್ ಸಂಚಾರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತುಮಕೂರು ರಸ್ತೆಯ ಪೀಣ್ಯ ಮೇಲ್ಸೇತುವೆಯಲ್ಲಿ ಸೋಮವಾರ ಮುಂಜಾನೆಯಿಂದಲೇ ಬಸ್, ಲಾರಿ ಸೇರಿದಂತೆ ಭಾರಿ ವಾಹನಗಳ ಸಂಚಾರ ಆರಂಭವಾಯಿತು.

ಮೂರು ವರ್ಷಗಳ ಬಳಿಕ ಎಲ್ಲ ಮಾದರಿ ವಾಹನಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಹಾಗೂ ಬೆಂಗಳೂರು ಸಂಚಾರ ವಿಭಾಗ ಹಸಿರು ನಿಶಾನೆ ತೋರಿವೆ. ಮೊದಲ ದಿನ ಅಡ್ಡಿ–ಆತಂಕವಿಲ್ಲದೇ ಎಲ್ಲ ಮಾದರಿಯ ವಾಹನಗಳು ಸುಗಮವಾಗಿ ಸಂಚರಿಸಿದವು.

ತುಮಕೂರು, ಹುಬ್ಬಳ್ಳಿ–ಧಾರವಾಡ, ದಾವಣಗೆರೆ, ಚಿತ್ರದುರ್ಗ, ಮಂಗಳೂರು, ಹಾಸನ, ಚಿಕ್ಕಮಗಳೂರು ಕಡೆಯಿಂದ ಬಂದ ಬಸ್, ಲಾರಿ ಹಾಗೂ ಟ್ರಕ್‌ಗಳು ಕೆನ್ನಮೆಟಲ್ (ವಿಡಿಯಾ) ಮೂಲಕ ಪೀಣ್ಯಕ್ಕೆ ಬಂದವು. ಮೆಜೆಸ್ಟಿಕ್ ಹಾಗೂ ಪೀಣ್ಯ ಕೈಗಾರಿಕಾ ಪ್ರದೇಶದಿಂದ ಬಂದ ಭಾರಿ ವಾಹನಗಳು ಪೀಣ್ಯ ಮಾರ್ಗದಿಂದ ಕೆನ್ನಮೆಟಲ್ ಕಡೆಗೆ ಚಲಿಸಿದವು.

ಎರಡೂ ಬದಿಗಳಲ್ಲಿ ಪ್ರತಿ ಗಂಟೆಗೆ 40 ಕಿ.ಮೀ ವೇಗದಲ್ಲಿ ಮಾತ್ರ ಸಂಚರಿಸುವಂತೆ ಸೂಚನೆ ನೀಡಲಾಗಿದೆ. ನಿಗದಿಗಿಂತ ಹೆಚ್ಚಿನ ವೇಗದಲ್ಲಿ ಚಲಿಸುವ ವಾಹನಗಳ ಚಾಲಕರ ವಿರುದ್ಧ ಎಫ್‌ಐಆರ್ ದಾಖಲು ಮಾಡುವುದಾಗಿ ಸಂಚಾರ ಪೊಲೀಸರು ಎಚ್ಚರಿಸಿದ್ದಾರೆ.

ಹೊಸದಾಗಿ ಅಳವಡಿಕೆ ಮಾಡಿರುವ ಕೇಬಲ್‌ಗಳಿಗೆ ಸಿಮೆಂಟ್ ತುಂಬುವ ಕೆಲಸ ಪ್ರತಿ ಶುಕ್ರವಾರ ನಡೆಯಲಿದೆ. ಪ್ರತಿ ಶುಕ್ರವಾರ ಬೆಳಿಗ್ಗೆ 6ರಿಂದ ಶನಿವಾರ ಬೆಳಿಗ್ಗೆ 6ರ ತನಕ ಮೇಲ್ಸೇತುವೆಯಲ್ಲಿ ಭಾರಿ ವಾಹನ ಸಂಚಾರಕ್ಕೆ ನಿರ್ಬಂಧ ಮುಂದುವರೆಯಲಿದೆ ಎಂದು ಎನ್‌ಎಚ್‌ಎಐ ಅಧಿಕಾರಿಗಳು ತಿಳಿಸಿದ್ದಾರೆ.

ತುಸು ತಗ್ಗಿದ ದಟ್ಟಣೆ ಸಮಸ್ಯೆ

ಭಾರಿ ವಾಹನಗಳು ಮೇಲ್ಸೇತುವೆ ಕೆಳಗಿನ ಎರಡೂ ಬದಿಯಲ್ಲಿ ಸಂಚಾರ ನಡೆಸುತ್ತಿದ್ದುದರ ಪರಿಣಾಮ ನಾಗಸಂದ್ರ, ಎಂಟನೇ ಮೈಲಿ, ದಾಸರಹಳ್ಳಿ, ಜಾಲಹಳ್ಳಿ, ಪೀಣ್ಯ ಜಂಕ್ಷನ್‌ಗಳಲ್ಲಿ ವಾಹನ ದಟ್ಟಣೆ ಉಂಟಾಗುತ್ತಿತ್ತು. ನಿರ್ಬಂಧ ತೆರವು ಆಗಿರುವುದರಿಂದ ಪ್ರಮುಖ ಜಂಕ್ಷನ್‌ಗಳಲ್ಲಿ ಸಂಚಾರ ದಟ್ಟಣೆ ಕಡಿಮೆಯಾಗುವ ಸಾಧ್ಯತೆಯಿದೆ.

ಮೇಲ್ಸೇತುವೆಯ 8ನೇ ಮೈಲಿನ ಜಂಕ್ಷನ್ ಸಮೀಪದ 102 ಹಾಗೂ 103ನೇ ಪಿಲ್ಲರ್‌ನಲ್ಲಿ ಕೇಬಲ್‌ಗಳು ಬಾಗಿದ್ದರಿಂದ 2021ರ ಡಿಸೆಂಬರ್‌ನಿಂದ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು. ನಂತರ, ತಜ್ಞರ ಅನುಮತಿ ಪಡೆದು, ಭಾರಿ ವಾಹನಗಳ ಸಂಚಾರ ನಿಷೇಧಿಸಿ, ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಈಗ ಎಲ್ಲ ಮಾದರಿ ವಾಹನ ಸಂಚಾರ ಆರಂಭವಾಗಿದೆ.

ಪೀಣ್ಯ ಮೇಲ್ಸೇತುವೆಯಲ್ಲಿ ಸೋಮವಾರದಿಂದ ಭಾರಿ ವಾಹನ ಸಂಚಾರ ಆರಂಭವಾಯಿತು –ಪ್ರಜಾವಾಣಿ ಚಿತ್ರ

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತೀಯ ಶೂಟರ್ ಕಂಚಿನ ಪದಕ ಗೆದ್ದಿದ್ದಾರೆ!

ಬೆಂಗಳೂರಿಗೆ ಎರಡು ವಿಶೇಷ ರೈಲು

ಮಂಗಳೂರು: ಪ್ರಯಾಣಿಕರ ಅನುಕೂಲಕ್ಕಾಗಿ ಮಂಗಳೂರು ಜಂಕ್ಷನ್ ಮೂಲಕ ಹಾದು ಹೋಗುವ ಮಡಗಾಂವ್ – ಬೆಂಗಳೂರು (ನಂ.01696) ಏಕಮುಖ ವಿಶೇಷ ರೈಲು ಸೇವೆಯನ್ನು ಜು.30ರಂದು ದಕ್ಷಿಣ ರೈಲ್ವೆ ಒದಗಿಸಿದೆ.

ಮಡಗಾಂವ್ ಜಂಕ್ಷನ್‌ನಿಂದ ಹೊರಡುವ ಸಂಜೆ 4.30ಕ್ಕೆ ಹೊರಡುವ ಈ ರೈಲು ರೈಲು ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಮುರುಡೇಶ್ವರ, ಭಟ್ಕಳ, ಬೈಂದೂರು, ಕುಂದಾಪುರ, ಉಡುಪಿ, ಮೂಲ್ಕಿ, ಸುರತ್ಕಲ್, ಮಂಗಳೂರು ಜಂಕ್ಷನ್, ಕಾಸರಗೋಡು, ಕಣ್ಣೂರು, ಕೋಝಿಕ್ಕೋಡ್, ತ್ರಿಶೂರ್, ಪಾಲಕ್ಕಾಡ್ ಜಂಕ್ಷನ್, ಕೊಯಂಬತ್ತೂರು ಜಂಕ್ಷನ್, ಕೃಷ್ಣರಾಜಪುರಂ ಮಾರ್ಗವಾಗಿ ಮರುದಿನ ಮಧ್ಯಾಹ್ನ 3.30ಕ್ಕೆ ಬೆಂಗಳೂರು ಕೆಎಸ್‌ಆರ್ ನಿಲ್ದಾಣ ತಲುಪಲಿದೆ.

ಕಾರವಾರ–ಯಶವಂತಪುರ ಏಕಮುಖ ವಿಶೇಷ ರೈಲು (ನಂ.01656) ಜು.31ರಂದು ಹೊರಡಲಿದೆ. ಈ ರೈಲು ಕಾರವಾರದಿಂದ 5.30ಕ್ಕೆ ಹೊರಟು, ಕುಮಟಾ, ಹೊನ್ನಾವರ, ಮುರುಡೇಶ್ವರ, ಭಟ್ಕಳ, ಬೈಂದೂರು, ಕುಂದಾಪುರ, ಉಡುಪಿ, ಮಂಗಳೂರು ಜಂಕ್ಷನ್, ಕಾಸರಗೋಡು, ಕಣ್ಣೂರು, ಕೋಝಿಕ್ಕೋಡ್, ತ್ರಿಶೂರ್, ಪಾಲಕ್ಕಾಡ್ ಜಂಕ್ಷನ್, ಕೊಯಂಬತ್ತೂರು ಜಂಕ್ಷನ್, ಕೃಷ್ಣರಾಜಪುರಂ ಮಾರ್ಗವಾಗಿ ಸರ್ ಎಂ.ವಿ ಟರ್ಮಿನಲ್ ಅನ್ನು ಮರುದಿನ 2.15ಕ್ಕೆ ತಲುಪಲಿದೆ ಎಂದು ದಕ್ಷಿಣ ರೈಲ್ವೆ ಪಾಲಕ್ಕಾಡ್ ವಿಭಾಗ ತಿಳಿಸಿದೆ.

ಜಾಗೃತಿ

ಅಂತರರಾಷ್ಟ್ರೀಯ ಹುಲಿ ದಿನದ ಅಂಗವಾಗಿ ಜಯನಗರ ಏಳನೇ ಬ್ಲಾಕ್‌ನ ಬಿಬಿಎಂಪಿ ಮೈದಾನದಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಯ ಮಕ್ಕಳು ಹುಲಿ ಮುಖವಾಡ ಧರಿಸಿ ಜಾಗೃತಿ ಮೂಡಿಸಿದರು –ಪ್ರಜಾವಾಣಿ ಚಿತ್ರ/ಪುಷ್ಕರ್ ವಿ

ಗೋಪಾಲಪುರ ಗ್ರಾ.ಪಂ.ಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ಗೋಪಾಲಪುರ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ತ್ರಿವೇಣಿ ಕೃಷ್ಣಪ್ಪ ಅವರು ಸೋಮವಾರ ಅವಿರೋಧವಾಗಿ ಆಯ್ಕೆಯಾದರು.

12 ಸದಸ್ಯರನ್ನು ಹೊಂದಿರುವ ಗ್ರಾಮ ಪಂಚಾಯಿತಿಯಲ್ಲಿ ಭಾಗ್ಯಮ್ಮ ಗೋಪಾಲ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಡೆಯಿತು. ತ್ರಿವೇಣಿ ಕೃಷ್ಣಪ್ಪ ಮಾತ್ರ ನಾಮಪತ್ರ ಸಲ್ಲಿಸಿದ್ದರು. ಚುನಾವಣಾಧಿಕಾರಿಯಾಗಿದ್ದ ಕ್ಷೇತ್ರ ಶಿಕ್ಷಣಾಧಿಕಾರಿ ಆಂಜಿನಪ್ಪ, ತ್ರಿವೇಣಿ ಅವರ ಅವಿರೋಧ ಆಯ್ಕೆ ಘೋಷಿಸಿದರು.

ಪ್ರತಿವರ್ಷ ಜಲಾಶಯ ತುಂಬಲಿ: ಮುಖ್ಯಮಂತ್ರಿ ಹಾರೈಕೆ

ಕೆಆರ್‌ಎಸ್, ಕಬಿನಿಗೆ ಬಾಗಿನ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯ ಮತ್ತು ಶ್ರೀರಂಗಪಟ್ಟಣ ತಾಲ್ಲೂಕಿನ ಕೃಷ್ಣರಾಜ ಸಾಗರ ಜಲಾಶಯ ಭರ್ತಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಲಸಂಪನ್ಮೂಲ ಸಚಿವರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೋಮವಾರ ಬಾಗಿನ ಅರ್ಪಿಸಿದರು.

ಸಿದ್ದರಾಮಯ್ಯ ಅವರು 2013 ಮತ್ತು 2015ರಲ್ಲಿ ಕೆಆರ್‌ಎಸ್‌ಗೆ ಬಾಗಿನ ಅರ್ಪಿಸಿದ್ದರು. ಎರಡೂ ಜಲಾಶಯಗಳನ್ನು ತಳಿರು– ತೋರಣ, ಹೂವುಗಳಿಂದ ಸಿಂಗರಿಸಲಾಗಿತ್ತು.

ಅಣೆಕಟ್ಟೆಯ ಮಹಾದ್ವಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಸರ್ ಎಂ. ವಿಶ್ವೇಶ್ವರಯ್ಯ ಪ್ರತಿಮೆಗಳನ್ನು ಮುಖ್ಯಮಂತ್ರಿ ಅನಾವರಣಗೊಳಿಸಿದರು.

ನಂತರ ಮಾತನಾಡಿ, ‘ಕಾವೇರಿ ನಮ್ಮೆಲ್ಲರ ಜೀವನದಿ. ಈ ಬಾರಿ ವರುಣನ ಕೃಪೆಯಿಂದ ಭರ್ತಿಯಾಗಿದ್ದು, 1 ಲಕ್ಷ ಕ್ಯುಸೆಕ್ ನೀರು ನದಿಗೆ ಹರಿದಿದೆ. ಪ್ರತಿವರ್ಷ ಕನ್ನಂಬಾಡಿ ತುಂಬಲಿ ಎಂದು ದೇವರಲ್ಲಿ ಪ್ರಾರ್ಥಿಸಿದ್ದೇವೆ’ ಎಂದರು.

‘ಕಳೆದ ಸಾಲಿನಲ್ಲಿ ಅಣೆಕಟ್ಟೆ ತುಂಬಿರಲಿಲ್ಲ. ಈ ಬಾರಿ ಉತ್ತಮವಾಗಿ ಮಳೆಯಾಗಿದೆ. ಕಾವೇರಿ ಜಲಾನಯನ ಪ್ರದೇಶದಲ್ಲಿರುವ ಕಬಿನಿ, ಹಾರಂಗಿ, ಹೇಮಾವತಿ ಮತ್ತು ಕೆಆರ್‌ಎಸ್ ಜಲಾಶಯಗಳು ಭರ್ತಿಯಾಗಿವೆ. ಈಗ ಇರುವ ಒಟ್ಟು 114 ಟಿಎಂಸಿ ಅಡಿ ನೀರನ್ನು ಸಮರ್ಪಕವಾಗಿ ಬಳಸಬೇಕಿದೆ’ ಎಂದರು.

ಮೈಸೂರು ಜಿಲ್ಲೆಯ ಎಚ್‌.ಡಿ. ಕೋಟೆ ತಾಲ್ಲೂಕಿನ ಬೀಚನಹಳ್ಳಿಯಲ್ಲಿರುವ ಕಬಿನಿ ಜಲಾಶಯಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರ ಬಾಗಿನ ಅರ್ಪಿಸಿದರು. ಶಾಸಕರಾದ ಡಿ.ರವಿಶಂಕರ್, ಅನಿಲ್ ಚಿಕ್ಕಮಾದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ ಹಾಗೂ ಎ.ಆರ್. ಕೃಷ್ಣಮೂರ್ತಿ ಪಾಲ್ಗೊಂಡಿದ್ದರು

ಪ್ರತಿವರ್ಷ ಐವರಿಗೆ ಪ್ರಶಸ್ತಿ: ಡಿಸಿಎಂ

‘ಕಾವೇರಿ, ಕಬಿನಿ, ಹೇಮಾವತಿ ಜಲಾನಯನ ಪ್ರದೇಶದಲ್ಲಿ ರೈತರಿಗೆ ಉತ್ತಮವಾಗಿ ನೀರು ತಲುಪಿಸುವ ಮೂವರು ನೀರು ಗಂಟಿ, ಒಬ್ಬರು ಪ್ರಗತಿಪರ ರೈತ ಹಾಗೂ ಒಬ್ಬ ಜೂನಿಯರ್ ಎಂಜಿನಿಯರ್‌ಗೆ ಪ್ರತಿವರ್ಷ ಪ್ರಶಸ್ತಿ ಪ್ರದಾನ ಮಾಡಲಾಗುವುದು’ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಅಣೆಕಟ್ಟೆಯ ಭದ್ರತೆಯನ್ನು ದೃಷ್ಟಿಯಲ್ಲಿರಿಸಿಕೊಂಡು, ಬೃಂದಾವನ ಉದ್ಯಾನದ ಅಭಿವೃದ್ಧಿಗೆ ಬಜೆಟ್‌ನಲ್ಲಿ ಘೋಷಿಸಿದಂತೆ ಅನುಮೋದನೆ ಪಡೆಯಲಾಗಿದೆ. ರೈತರಿಂದ ಜಮೀನು ಪಡೆಯಲು ಒತ್ತಡ ಹಾಕುವುದಿಲ್ಲ. ಸರ್ಕಾರಿ ಜಮೀನು ಸಾಕಷ್ಟಿದೆ’ ಎಂದು ತಿಳಿಸಿದರು.

‘₹129 ಕೋಟಿ ಪಾವತಿಸಿ, ಜಾಗ ತೆರವು ಮಾಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಕಿ ಉಳಿಸಿಕೊಂಡಿರುವ ನೆಲ ಬಾಡಿಗೆ ₹129 ಕೋಟಿ ಪಾವತಿಸಿ, ಜಾಗ ತೆರವು ಮಾಡಬೇಕು ಎಂದು ನೃಪತುಂಗ ರಸ್ತೆಯಲ್ಲಿರುವ ಕೃಷಿ ಇಲಾಖೆಯ ಅಧೀನದ ‘ಕರ್ನಾಟಕ ಪ್ರದೇಶ ಕೃಷಿಕ ಸಮಾಜ’ಕ್ಕೆ (ಕೃಷಿ ಭವನ) ಲೋಕೋಪಯೋಗಿ ಇಲಾಖೆ ನೋಟಿಸ್ ನೀಡಿದೆ.

ಕೃಷಿಕ ಸಮಾಜವು 1966ರಲ್ಲಿ 99 ವರ್ಷಗಳ ಅವಧಿಗೆ ಈ ಜಾಗವನ್ನು ಗುತ್ತಿಗೆ ಪಡೆದುಕೊಂಡಿತ್ತು. ಬಾಕಿ ಉಳಿಸಿಕೊಂಡಿರುವ ಬಾಡಿಗೆ ಪಾವತಿಸಿ ಜಾಗ ತೆರವು ಮಾಡದಿದ್ದರೆ ಬಾಕಿ ವಸೂಲಿಗೆ ಕ್ರಮ ತೆಗೆದುಕೊಳ್ಳುವ ಜೊತೆಗೆ ‘ಕರ್ನಾಟಕ ಸಾರ್ವಜನಿಕ ಆವರಣ (ಅನಧಿಕೃತ ನಿವಾಸಿಗಳ ತೆರವು) ಕಾಯ್ದೆ– 1974’ ಅಡಿ ತೆರವುಗೊಳಿಸಲಾಗುವುದು ಎಂದು ನೋಟಿಸ್‌ನಲ್ಲಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ (ಕಟ್ಟಡಗಳ ವಿಭಾಗ ನಂ–2) ಎಚ್ಚರಿಕೆ ನೀಡಿದ್ದಾರೆ.

ಈ ನೋಟಿಸ್‌ಗೆ ಸಂಬಂಧಿಸಿದಂತೆ, ಕೃಷಿಕ ಸಮಾಜದ ಅಧ್ಯಕ್ಷರೂ ಆಗಿರುವ ಕೃಷಿ ಸಚಿವ ಎನ್. ಚಲುವರಾಯಸ್ವಾಮಿಗೆ ಪತ್ರ ಬರೆದಿರುವ ಕೃಷಿಕ ಸಮಾಜದ ಆಡಳಿತ ಅಧ್ಯಕ್ಷ ಸಿ. ಪಾಪಣ್ಣ, ‘ಕೃಷಿ ಭವನಕ್ಕೆ ವಿಧಿಸಿರುವ ಭೂ ಬಾಡಿಗೆ ₹129 ಕೋಟಿಯನ್ನು ಮನ್ನಾ ಮಾಡಬೇಕು. ಅಲ್ಲದೆ, ಈ ಜಾಗವನ್ನು ಕೃಷಿಕ ಸಮಾಜದ ಹೆಸರಿಗೆ ವರ್ಗಾಯಿಸಿಕೊಡಬೇಕು’ ಎಂದು ಮನವಿ ಮಾಡಿದ್ದಾರೆ.

ರಾಜ್ಯ ಸರ್ಕಾರದ 1966ರ ಏಪ್ರಿಲ್ 12ರ ಆದೇಶದಂತೆ ವರ್ಷಕ್ಕೆ ₹1,000ದಂತೆ 5 ವರ್ಷಕ್ಕೊಮ್ಮೆ ನಿರಂತರವಾಗಿ 2013ರವರೆಗೆ ‘ಕೃಷಿ ಸಮಾಜವು ಬಾಡಿಗೆ ಪಾವತಿಸುತ್ತಾ ಬಂದಿದೆ. ನಂತರದಿಂದ ಪಾವತಿಸಿದ ಹಣವನ್ನು ಲೋಕೋಪಯೋಗಿ ಇಲಾಖೆ ಸ್ವೀಕರಿಸಿಲ್ಲ. 2020ರ ಆಗಸ್ಟ್ 11ರಂದು ಪತ್ರ ಬರೆದಿದ್ದ ಇಲಾಖೆ, 1977 ಜನವರಿ 20ರಿಂದ 2019 ಜೂನ್ 30ರವರೆಗಿನ ಬಾಡಿಗೆ ₹119.13 ಕೋಟಿ ಪಾವತಿಸುವಂತೆ ತಿಳಿಸಿತ್ತು. ಈ ನೆಲ ಬಾಡಿಗೆಯನ್ನು ಮನ್ನಾ ಮಾಡಬೇಕು ಮತ್ತು ಜಾಗವನ್ನು ಕೃಷಿ ಸಮಾಜದ ಹೆಸರಿಗೆ ಮಂಜೂರು ಮಾಡುವಂತೆ 2020ರ ಆಗಸ್ಟ್ 16ರಂದು ಅಂದಿನ ಕೃಷಿ ಸಚಿವರು ಮತ್ತು ಕೃಷಿ ಸಮಾಜದ ಅಧ್ಯಕ್ಷರು ಲೋಕೋಪಯೋಗಿ ಇಲಾಖೆಗೆ ಮನವಿ ಸಲ್ಲಿಸಿದ್ದರು.

2021ರ ಮಾರ್ಚ್ 5ರಂದು ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದ್ದ ಮುಖ್ಯ ಎಂಜಿನಿಯರ್ (ಸಂಪರ್ಕ ಮತ್ತು ಕಟ್ಟಡ) ಕೃಷಿ ಸಮಾಜಕ್ಕೆ ವಿಧಿಸಿರುವ ಬಾಡಿಗೆ ಹಣವನ್ನು ಮನ್ನಾ ಮಾಡಲು ಮತ್ತು ಈ ಜಾಗವನ್ನು ಕೃಷಿಕ ಸಮಾಜಕ್ಕೆ ನೀಡಲು ಸರ್ಕಾರದ ಮಟ್ಟದಲ್ಲಿ ತೀರ್ಮಾನ ಕೈಗೊಳ್ಳಬೇಕು ಎಂದು ವರದಿ ಸಲ್ಲಿಸಿದ್ದರು.

ಸರ್ಕಾರಿ ಶಾಲೆ ಹೊಸ ಕಟ್ಟಡ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಎನ್‌ಟಿಟಿ ಡೇಟಾ ಸಂಸ್ಥೆ ಹಾಗೂ ಅಕ್ಷಯ ಪಾತ್ರೆ ಫೌಂಡೇಶನ್ ಸಹಯೋಗದಲ್ಲಿ ನಿರ್ಮಿಸಿರುವ ಲಕ್ಷ್ಮೀಪುರದ ಸರ್ಕಾರಿ ಪ್ರಾಥಮಿಕ ಶಾಲೆಯ ನೂತನ ಕಟ್ಟಡವನ್ನು ಸೋಮವಾರ ಉದ್ಘಾಟಿಸಲಾಯಿತು.

ಎನ್‌ಟಿಟಿ ಡೇಟಾ ಸಂಸ್ಥೆಯ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ನಿಧಿಯ ಮೂಲಕ ಒದಗಿಸಿದ್ದ ₹4.73 ಕೋಟಿ ಅನುದಾನದಲ್ಲಿ 902 ಚದರ ಮೀಟರ್ ವಿಸ್ತೀರ್ಣದಲ್ಲಿ ಶಾಲೆಯ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ. ಎಂಟು ತರಗತಿ ಕೊಠಡಿಗಳು, ಕಂಪ್ಯೂಟರ್‌ ಲ್ಯಾಬ್, ಗ್ರಂಥಾಲಯ, ಸಿಸಿಟಿವಿ, ಶೌಚಾಲಯ, ಧ್ವನಿವರ್ಧಕ ವ್ಯವಸ್ಥೆ, ಆ್ಯಂಪಿ ಥಿಯೇಟರ್ ಸೌಲಭ್ಯಗಳನ್ನು ಒದಗಿಸಲಾಗಿದೆ. ಡಿಜಿಟಲ್ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಲಾಗಿದೆ. ಸದ್ಯ ಈ ಶಾಲೆಯಲ್ಲಿ ಒಟ್ಟು 241 ವಿದ್ಯಾರ್ಥಿಗಳು ಇದ್ದಾರೆ.

ಎನ್‌ಟಿಟಿ ಡೇಟಾ ಸಂಸ್ಥೆಯ ಮುಖ್ಯ ಡಿಜಿಟಲ್ ಅಧಿಕಾರಿ ದಿಲೀಪ್ ಕುಮಾರ್ ಮಾತನಾಡಿ, ‘ಶಿಕ್ಷಣವು ಅವಕಾಶಗಳ ಬಾಗಿಲನ್ನು ತೆರೆಯುವ ಕೀಲಿಕೈ ಆಗಿದೆ. ಅಕ್ಷಯ ಪಾತ್ರೆ ಫೌಂಡೇಶನ್ ಸಹಯೋಗದಿಂದ ಪ್ರತಿ ಮಗುವಿಗೂ ಉತ್ತಮ ಶಿಕ್ಷಣ ನೀಡುವ, ಅವರ ಕನಸುಗಳನ್ನು ನನಸು ಮಾಡುವ ಅವಕಾಶ ಒದಗಿಸಲಾಗಿದೆ’ ಎಂದರು.

ಲಕ್ಷ್ಮೀಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ಹೊರನೋಟ.

ಅಕ್ಷಯ ಪಾತ್ರೆ ಫೌಂಡೇಶನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಧರ್ ವೆಂಕಟ್ ಮಾತನಾಡಿ, ‘ಸರ್ಕಾರಿ ಶಾಲೆಗಳ ಮಕ್ಕಳ ಕಲಿಕೆಯ ಸ್ಥಳವನ್ನು ಶ್ರೀಮಂತಗೊಳಿಸುವ ಮೂಲಕ ದೀರ್ಘ ಕಾಲದ ಸಾಮಾಜಿಕ ಪರಿಣಾಮ ಉಂಟು ಮಾಡುವುದೇ ನಮ್ಮ ಉದ್ದೇಶವಾಗಿದೆ’ ಎಂದು ಹೇಳಿದರು.

ಶಾಸಕ ಎಸ್.ಮುನಿರಾಜು ಮಾತನಾಡಿದರು. ಮಾಜಿ ಕ್ರಿಕೆಟಿಗ ವಿಜಯ್ ಭಾರದ್ವಾಜ್, ಟೆಕ್ನಾಲಜಿ ಇನ್ಫ್ರಾಸ್ಟ್ರಕ್ಚರ್ ಸರ್ವೀಸಸ್‌ನ ಹಿರಿಯ ಉಪಾಧ್ಯಕ್ಷ ಆದಿತ್ಯ ಎ. ಪುರ್ಕರ್, ಎನ್‌ಟಿಟಿ ಡೇಟಾ ಸಂಸ್ಥೆಯ ಉಪಾಧ್ಯಕ್ಷರಾದ ರವಿ ಕಲಘಟಗಿ, ಪ್ರಸಾದ್, ಬಿಇಒ ರಾಮಮೂರ್ತಿ ಬಿ.ಆರ್ ಭಾಗವಹಿಸಿದ್ದರು.

‘ರಾಜ್ಯದ ಆರ್ಥಿಕ ಬೆಳವಣಿಗೆ ಕುಗ್ಗಿಸುವ ಯತ್ನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಆರ್ಥಿಕ ಬೆಳವಣಿಗೆಯನ್ನು ಕುಗ್ಗಿಸುವ ಪ್ರಯತ್ನವನ್ನು ಕೇಂದ್ರ ಸರ್ಕಾರ ಹಿಂಬಾಗಿಲಿನ ಮೂಲಕ ಮಾಡುತ್ತಿದೆ’ ಎಂದು ಮಾಜಿ ಸಂಸದ ಡಿ.ಕೆ. ಸುರೇಶ್ ಆರೋಪಿಸಿದರು.

ಸೋಮವಾರ ಮಾತನಾಡಿ, ‘ಕೇಂದ್ರ ಬಜೆಟ್‌ನಲ್ಲಿ ಗುಜರಾತ್, ಉತ್ತರಪ್ರದೇಶ ಸೇರಿ ಉತ್ತರಭಾರತದ ರಾಜ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ದಕ್ಷಿಣ ಭಾರತದ ರಾಜ್ಯಗಳನ್ನು ಸಂಪೂರ್ಣ ಕಡೆಗಣಿಸಲಾಗಿದೆ’ ಎಂದು ದೂರಿದರು.

‘ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕ ಸರ್ಕಾರದ ಮೇಲೆ ಗೂಬೆ ಕೂರಿಸುವ ಯತ್ನ ನಡೆಸಿದ್ದಾರೆ’ ಎಂದೂ ಅಸಮಾಧಾನ ವ್ಯಕ್ತಪಡಿಸಿದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಕೇಂದ್ರ ಸರ್ಕಾರದ ತಾರತಮ್ಯವನ್ನು ವಿರೋಧಿಸಿ ದಕ್ಷಿಣ ಭಾರತದ ರಾಜ್ಯಗಳಲ್ಲಿ ವಿಭಜನೆಯ ಅಭಿಪ್ರಾಯಗಳು ಮಡುಗಟ್ಟಿವೆ’ ಎಂದರು.

3, 4ಕ್ಕೆ ಬೆಂಗಳೂರು ಕಾವ್ಯ ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಟ-ಗಲಾಟ ಸಂಸ್ಥೆಯು ಆಗಸ್ಟ್ 3 ಮತ್ತು 4ಕ್ಕೆ ‘ಬೆಂಗಳೂರು ಕಾವ್ಯ ಉತ್ಸವ’ದ ಎಂಟನೇ ಆವೃತ್ತಿಯನ್ನು ಹಳೆ ಮದ್ರಾಸ್ ರಸ್ತೆಯಲ್ಲಿರುವ ಗೋಪಾಲನ್ ಮಾಲ್‌ನಲ್ಲಿ ಹಮ್ಮಿಕೊಂಡಿದೆ.

‘ಉತ್ಸವದಲ್ಲಿ ಕಾವ್ಯ, ಸಂಗೀತದ ನಡುವಿನ ಸಂಪರ್ಕ ಪರಿಶೋಧನೆಗೆ ಸಹಾಯವಾಗಲಿದೆ. ಬಹುಭಾಷಾ ಕವಿಗಳು, ಗೀತ ರಚನೆಕಾರರು, ಹಾಡುಗಾರರು, ಸಂಗೀತಗಾರರು ಭಾಗವಹಿಸಲಿದ್ದಾರೆ. ಉತ್ಸವವು ಕವಿತೆ ವಾಚನ, ಸಂವಾದ, ಭಾಷಣಗಳು ಹಾಗೂ ಕಾರ್ಯಾಗಾರಗಳನ್ನು ಒಳಗೊಂಡಿದೆ. ಕಾವ್ಯವು ಗಡಿಗಳನ್ನು ಮೀರಿ ಎಲ್ಲರನ್ನೂ ಸಂಪರ್ಕಿಸುವ ಶಕ್ತಿಯನ್ನು ಹೊಂದಿದೆ’ ಎಂದು ಗ್ರ್ಯಾಂಡ್ ಮರ್ಕ್ಯೂರ್ ಗೋಪಾಲನ್ ಮಾಲ್‌ನ ಪ್ರಧಾನ ವ್ಯವಸ್ಥಾಪಕ ಶ್ರೀರಾಮ್ ಶೆಟ್ಟಿ ಹೇಳಿದ್ದಾರೆ.

‘ದಿ ಮ್ಯೂಸಿಕಲ್ ಮೇವರಿಕ್– ಶಂಕರ್ ಮಹಾದೇವನ್’ ಪುಸ್ತಕದ ಲೇಖಕ ಆಶಿಶ್ ಘಟಕ್ ಅವರೊಂದಿಗೆ ಸಂವಾದ ನಡೆಯಲಿದೆ. ತಮಿಳು ಸಾಹಿತ್ಯ ಮತ್ತು ಕಾವ್ಯದ ಬಗ್ಗೆ ಸಿನಿಮಾ ಕಲಾವಿದ ಎಂ. ನಾಸ್ಸೀರ್ ಅವರು ಚರ್ಚಿಸಲಿದ್ದಾರೆ. ಆನಂದ್ ಥಾಕೂರ್ ಮತ್ತು ರಂಜಿತ್ ಹೊಸಕೋಟೆ ಅವರು ತಮ್ಮ ಸಾಹಿತ್ಯ ಕೃತಿಗಳ ಬಗ್ಗೆ ಮಾತನಾಡಲಿದ್ದಾರೆ. ಹಾಸ್ಯ ಕಲಾವಿದ ವರುಣ್ ಗ್ರೋವರ್, ಸಾಹಿತಿ ಜಯಂತ್ ಕಾಯ್ಕಿಣಿ ಅವರು ಭಾಗವಹಿಸಲಿದ್ದಾರೆ’ ಎಂದು ತಿಳಿಸಿದ್ದಾರೆ.

‘ಬೇಂದ್ರೆ ಪ್ರಾಜೆಕ್ಟ್‌ನವರು ಬೇಂದ್ರೆ ಅವರ ಕಾವ್ಯವನ್ನು ನೃತ್ಯದ ಮೂಲಕ ಪ್ರಸ್ತುತಪಡಿಸಲಿದ್ದಾರೆ. ಮಧು ನಟರಾಜ ಮತ್ತು ತಂಡದವರು ಶರಣರ ವಚನಗಳನ್ನು ಆಧರಿಸಿದ ನೃತ್ಯ ಪ್ರದರ್ಶಿಸಲಿದ್ದಾರೆ. ಹಿಂದಿ ಸಿನೆಮಾದಲ್ಲಿ ಕಾವ್ಯ ಎಂಬ ವಿಷಯದ ಕುರಿತು ಸಂವಾದ ನಡೆಯಲಿದೆ’ ಎಂದರು.

‘ಲೇಖಕರು, ಚಿತ್ರ ಕಲಾವಿದರೊಂದಿಗೆ ಸಂವಾದ, ಸಂಗೀತ, ನಾಟಕ ಇರಲಿದ್ದು, ಪ್ರತ್ಯೇಕ ಕಾರ್ಯಾಗಾರವೂ ಇರಲಿದೆ. ‘ಇಂಟು ದಿ ವೈಲ್ಡ್’ ಕಾರ್ಯಕ್ರಮದಲ್ಲಿ ಲೇಖಕಿ ವೈಷ್ಣವಿ ಗಿರಿ ಅವರು ಸುಂದರಬನ ಮತ್ತು ನೀಲಗಿರಿಗಳ ಅರಣ್ಯಗಳ ಸೂಕ್ಷ್ಮ ಪರಿಸರ ವ್ಯವಸ್ಥೆಯ ಕುರಿತು ಸಂವಾದ ನಡೆಸಲಿದ್ದಾರೆ’ ಎಂದರು.

ಬೆಳಿಗ್ಗೆ 9.30ರಿಂದ ರಾತ್ರಿ 8 ಗಂಟೆವರೆಗೆ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಕನ್ನಡ, ತಮಿಳು, ಪಂಜಾಬಿ, ಹಿಂದಿ, ಉರ್ದು, ಬಂಗಾಳಿ ಸೇರಿ ವಿವಿಧ ಭಾಷೆಗಳಲ್ಲಿ ಕವಿತೆಗಳ ವಾಚನ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಮೇಕೆದಾಟು ಯೋಜನೆ: ತಮಿಳುನಾಡು ಜತೆ ಚರ್ಚೆಗೆ ಸಿದ್ಧ’

ಮೈಸೂರು: ‘ಮೇಕೆದಾಟು ಯೋಜನೆ ಬಗ್ಗೆ ತಮಿಳುನಾಡು ಸರ್ಕಾರದ ಜತೆ ಚರ್ಚೆಗೆ ಸಿದ್ಧವಿದ್ದೇವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಇಲ್ಲಿ ಪತ್ರಕರ್ತರೊಂದಿಗೆ ಸೋಮವಾರ ಮಾತನಾಡಿದ ಅವರು, ‘ಮೆಟ್ಟೂರು ಅಣೆಕಟ್ಟು ತುಂಬಿ ನೀರು ವ್ಯರ್ಥವಾಗುತ್ತಿದ್ದು, ಈ ಬಗ್ಗೆ ತಮಿಳುನಾಡು ಸರ್ಕಾರದೊಂದಿಗೆ ನಾವು ಮಾತನಾಡಲು ತಯಾರಿದ್ದೇವೆ. ಮೇಕೆದಾಟು ಯೋಜನೆಯಿಂದ ಅವರಿಗೆ ತೊಂದರೆ ಆಗದಿದ್ದರೂ ಮಾತನಾಡಲು ಅವರು ತಯಾರಿಲ್ಲ. ಕೇಂದ್ರ ಸರ್ಕಾರ ಅನುಮೋದನೆ ಕೊಟ್ಟರೆ ನಾವು ನಿರ್ಮಾಣ ಮಾಡಲು ಸಿದ್ಧವಿದ್ದೇವೆ’ ಎಂದು ಹೇಳಿದರು.

ಬಾಂಗ್ಲಾ ದೇಶದಿಂದ 20 ಸಾವಿರ ಜನ ಬೆಂಗಳೂರಿಗೆ ವಲಸೆ ಬಂದಿದ್ದಾರೆ ಎನ್ನಲಾಗುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ಆ ಬಗ್ಗೆ ತಿಳಿದಿಲ್ಲ, ವಿಚಾರಿಸಿ ಕ್ರಮ ಕೈಗೊಳ್ಳಲಾಗುವುದು’ ಎಂದರು.

‘ಸರ್ಕಾರ ಹಾಗೂ ಪಕ್ಷದ ಬಗ್ಗೆ ಚರ್ಚೆ ಮಾಡಲು ವರಿಷ್ಠರು ಕರೆದಿದ್ದಾರೆ. ಹೀಗಾಗಿ ನಾನು ಮತ್ತು ಉಪಮುಖ್ಯಮಂತ್ರಿ ಮಂಗಳವಾರ ನವದೆಹಲಿಗೆ ಭೇಟಿ ನೀಡುತ್ತಿದ್ದೇವೆ’ ಎಂದು ಮುಖ್ಯಮಂತ್ರಿ ತಿಳಿಸಿದರು.

‘ರಾಜ್ಯದಿಂದ ರಾಜ್ಯಸಭಾ ಸದಸ್ಯರಾಗಿರುವ ನಿರ್ಮಲಾ ಸೀತಾರಾಮನ್ ಅವರು ಕೈಗಾರಿಕೆಗಳೆಲ್ಲಾ ಬೇರೆ ರಾಜ್ಯಕ್ಕೆ ಹೋಗುತ್ತಿವೆ ಎಂದು ಹೇಳಿದ್ದಾರೆ. ಆದರೆ, ಕೇಂದ್ರದ ಹಣಕಾಸು ಸಚಿವರ ನೀತಿ– ಕಾರ್ಯಕ್ರಮಗಳಿಂದ ದೇಶಕ್ಕೆ ಬರುತ್ತಿದ್ದ ಶೇ 31ರಷ್ಟು ಎಫ್‌.ಡಿ.ಐ ಕಡಿಮೆಯಾಗಿದೆ’ ಎಂದು ದೂರಿದರು.

‘ಇವರ ತಪ್ಪುಗಳಿಗೆ ಇಂದು ದೇಶದಲ್ಲಿ ಹೂಡಿಕೆಯಾಗುತ್ತಿಲ್ಲ. ನಾವು ಸಾಲ ಹೆಚ್ಚು ಮಾಡಿದ್ದೇವೆ ಎನ್ನುತ್ತಾರೆ. ನಾವು ವಿತ್ತೀಯ ಹೊಣೆಗಾರಿಕೆ ಕಾಯ್ದೆಯಡಿ ಜಿಡಿಪಿಯ ಶೇ 25ರೊಳಗಡೆಯೇ ಇದ್ದೇವೆ. ಅವರು ₹ 15 ಲಕ್ಷ ಕೋಟಿ ಸಾಲ ಮಾಡಿದ್ದಾರೆ’ ಎಂದು ಆರೋಪಿಸಿದರು.

ನವದೆಹಲಿಯ ದಿ ಲಲಿತ್ ಹೋಟೆಲ್‌ನಲ್ಲಿ ನ್ಯಾಷನಲ್ ಮೆಡಿಕಲ್ ಫೋರಂ ಭಾನುವಾರ ಆಯೋಜಿಸಿದ್ದ ‘ಮೆಡಿಕಲ್ ರಿಸರ್ಚ್ ಸಮ್ಮಿಟ್’ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಸಂಶೋಧನಾ ಸಂಸ್ಥೆಯ ಸಹ ಪ್ರಾಧ್ಯಾಪಕ ಡಾ.ಎಚ್‌.ಎಸ್. ನಟರಾಜ್ ಸೆಟ್ಟಿ (ಎಡದಿಂದ ಐದನೇಯವರು) ಅವರಿಗೆ ‘ಬ್ಲ್ಯಾಕ್‌ಬಕ್ ಪ್ರಶಸ್ತಿ’ ಪ್ರದಾನ ಮಾಡಲಾಯಿತು. (ಎಡದಿಂದ) ಫೋರಂನ ರಾಷ್ಟ್ರೀಯ ಅಧ್ಯಕ್ಷ ಡಾ. ಪ್ರೇಮ್ ಅಗರ್‌ವಾಲ್, ರಾಷ್ಟ್ರೀಯ ವೈದ್ಯಕೀಯ ಮಂಡಳಿ ಕಾರ್ಯದರ್ಶಿ ಡಾ.ಬಿ. ಶ್ರೀನಿವಾಸ್, ಕೇಂದ್ರ ಜಲಶಕ್ತಿ ಖಾತೆ ರಾಜ್ಯ ಸಚಿವ ರಾಜ್‌ಭೂಷಣ್ ಚೌಧರಿ, ರಾಷ್ಟ್ರೀಯ ಪರೀಕ್ಷಾ ಮಂಡಳಿಯ ಅಧ್ಯಕ್ಷ ಡಾ. ಅಭಿಜಿತ್ ಶೇಟ್ ಭಾಗವಹಿಸಿದ್ದರು.

ಹಳೆಯ ಪಿಂಚಣಿ ಜಾರಿಗೊಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಪಿಂಚಣಿ ಯೋಜನೆಯನ್ನು ರದ್ದುಗೊಳಿಸಿ ಹಳೆಯ ಪಿಂಚಣಿ ಯೋಜನೆಯನ್ನು ಅನುಷ್ಠಾನಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ 515 ಭೂಸೇನಾ ಕಾರ್ಯಾಗಾರದ ಕಾರ್ಮಿಕರ ಸಂಘ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಸಮೀವುಲ್ಲಾ ಖಾನ್, ‘ಕೇಂದ್ರ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳನ್ನು ಪರಿಷ್ಕರಿಸಲು ಎಂಟನೇ ವೇತನ ಆಯೋಗವನ್ನು ರಚಿಸಬೇಕು. ಕೇಂದ್ರ ಸರ್ಕಾರದ ವಿವಿಧ ಇಲಾಖೆ ಹಾಗೂ ಸಂಸ್ಥೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲ್ಲದಿದ್ದರೆ, ಇಲಾಖೆಗಳ ದಕ್ಷತೆಯ ಮೇಲೆ ಪರಿಣಾಮ ಬೀರುತ್ತದೆ’ ಎಂದು ಹೇಳಿದರು.

‘ಏಳನೇ ವೇತನ ಆಯೋಗದ ಶಿಫಾರಸುಗಳ ಪ್ರಕಾರ ಕೇಂದ್ರ ನೌಕರರ ಗುಂಪು ವಿಮಾ ಯೋಜನೆ 1980 ಅನ್ನು ಪರಿಷ್ಕರಿಸಬೇಕು. ವಿಮಾ ಮೊತ್ತವನ್ನು ಕನಿಷ್ಠ ₹15 ಲಕ್ಷಕ್ಕೆ ನಿಗದಿಪಡಿಸಬೇಕು. ಪಿಂಚಣಿ ಕಮ್ಯುಟೇಶನ್ ಅನ್ನು 15 ವರ್ಷಗಳ ಬದಲಿಗೆ 12 ವರ್ಷಕ್ಕೆ ನಿಗದಿಪಡಿಸಬೇಕು. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯ (ಡಿಆರ್‌ಡಿಒ) ಪುನರುಜ್ಜೀವನದ ಕುರಿತು ಪ್ರೊ.ಕೆ. ವಿಜಯ ರಾಘವನ್ ಸಮಿತಿಯು ನೌಕರರ ಹಾಗೂ ಸಂಸ್ಥೆಗಳ ವಿರುದ್ಧ ಮಾಡಿರುವ ಶಿಫಾರಸುಗಳನ್ನು ರದ್ದುಗೊಳಿಸಬೇಕು’ ಎಂದು ಒತ್ತಾಯಿಸಿದರು.

ಸಂಘದ ರಾಷ್ಟ್ರೀಯ ಸದಸ್ಯ ತಿರುಕುಮಾರ್, ಪ್ರಧಾನ ಕಾರ್ಯದರ್ಶಿ ಭಗತ್‌ಸಿಂಗ್ ಭಿಷ್ಟ, ಉಪಾಧ್ಯಕ್ಷರಾದ ವರಲಕ್ಷ್ಮಿ, ಗಿರೀಶ ಡಿ.ಸಿ., ಸುರೇಶ್ ಕೆ.ಎಸ್., ಆದಿತ್ಯ ಭಾಗವಹಿಸಿದ್ದರು.

ಪ್ರಾಯೋಗಿಕವಾಗಿ ಇನ್ನೊಂದು ವಾರದಲ್ಲಿ 150 ಬಸ್‌ಗಳಲ್ಲಿ ಪ್ರಯೋಗ

ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ವ್ಯವಸ್ಥೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಮಾಡಿ ಟಿಕೆಟ್ ನೀಡುವ ‘ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್’ ಬಳಕೆಯು ಪ್ರಾಯೋಗಿಕವಾಗಿ 150 ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಆರಂಭಗೊಳ್ಳಲಿದೆ. ಸಾಧಕ–ಬಾಧಕಗಳನ್ನು ಪರಿಶೀಲಿಸಿದ ಬಳಿಕ ಎಲ್ಲ ಬಸ್‌ಗಳ ನಿರ್ವಾಹಕರ ಕೈಗೆ ‘ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್’ ಬರಲಿದೆ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ (ಎನ್‌ಡಬ್ಲ್ಯುಆರ್‌ಟಿಸಿ) ಮತ್ತು ಬಿಎಂಟಿಸಿಯ ಕೆಲವು ಮಾರ್ಗಗಳಲ್ಲಿ ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್ (ಯುಪಿಐ) ತಂತ್ರಜ್ಞಾನದ ಮೂಲಕ ಟಿಕೆಟ್ ದರ ಪಾವತಿ ಮಾಡುವ ಪದ್ಧತಿ ಜಾರಿಯಲ್ಲಿದ್ದರೂ ಅದು ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ವ್ಯವಸ್ಥೆಯಲ್ಲ. ಕ್ಯೂಆರ್ ಕೋಡ್ ಮುದ್ರಣವನ್ನು ನಿರ್ವಾಹಕರು ಕುತ್ತಿಗೆಗೆ ನೇತು ಹಾಕಿಕೊಂಡಿರುತ್ತಾರೆ. ಸ್ಕ್ಯಾನ್ ಮಾಡಿ ಟಿಕೆಟ್ ದರ ಪಾವತಿಸಿದವರಿಗೆ ಟಿಕೆಟ್ ನೀಡುತ್ತಾರೆ. ಕೆಎಸ್‌ಆರ್‌ಟಿಸಿಯಲ್ಲಿ ಈ ಪದ್ಧತಿಯ ಬದಲು ಟಿಕೆಟ್ ಮಷೀನ್‌ನಲ್ಲೇ ಕ್ಯೂಆರ್ ಕೋಡ್ ಒದಗಿಸುವ ತಂತ್ರಜ್ಞಾನ ಇರಲಿದೆ.

‘ಕೆಎಸ್‌ಆರ್‌ಟಿಸಿಯಲ್ಲಿ 83 ಘಟಕಗಳಿವೆ. ಸದ್ಯ ಎಲೆಕ್ಟ್ರಿಕ್ ಟಿಕೆಟ್ ಮಷೀನ್‌ಗಳನ್ನು (ಇಟಿಎಂ) ಬಳಸಲಾಗುತ್ತಿದೆ. ಇನ್ನು ಮುಂದೆ ಡಿಜಿಟಲ್ ಪೇಮೆಂಟ್ ಎನೇಬಲ್ (ಡಿಪಿಇ) ಇರುವ ಸ್ಮಾರ್ಟ್ ಇಟಿಎಂಗಳು ಬಳಕೆಯಾಗಲಿವೆ. ಫೋನ್ ಪೇ, ಗೂಗಲ್ ಪೇ ಸಹಿತ ಯುಪಿಐ ಆಧಾರಿತ ಪಾವತಿ ಸ್ವೀಕರಿಸಿದಾಗ ಆ ಮೊತ್ತವು ಸಂಬಂಧಪಟ್ಟ ಡಿಪೊ ಖಾತೆಗೆ ಜಮೆ ಆಗಲಿದೆ’ ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಅಂಕಿ ಅಂಶ

8,360 ಕೆಎಸ್‌ಆರ್‌ಟಿಸಿ ಬಸ್‌ಗಳು

10,245 ಬಳಕೆಯಾಗಲಿರುವ ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್‌ಗಳು

ವಾರದೊಳಗೆ ಪರೀಕ್ಷೆ: ‘ಪ್ರೀಮಿಯಂ ಬಸ್, ಸಾಮಾನ್ಯ ಬಸ್, ಎಕ್ಸ್‌ಪ್ರೆಸ್ ಬಸ್, ನಗರ ಸಾರಿಗೆ ಬಸ್ ಸೇರಿ ಕೆಎಸ್‌ಆರ್‌ಟಿಸಿಯ ಒಟ್ಟು 150 ಬಸ್‌ಗಳಲ್ಲಿ ಮುಂದಿನವಾರ ‘ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್’ ಪ್ರಾಯೋಗಿಕವಾಗಿ ಬಳಸಲಾಗುವುದು. ‘ಶಕ್ತಿ’ ಯೋಜನೆಯ ಪ್ರಯಾಣಿಕರು ಇರುವ ಬಸ್‌ಗಳಲ್ಲಿ ಈ ಮಷೀನ್ ಬಳಕೆಯಿಂದ ಸಮಸ್ಯೆ ಆಗುತ್ತದೆಯೇ? ಇತರ ಬಸ್‌ಗಳಲ್ಲಿ ಯಾವ ಸಮಸ್ಯೆಯಾಗಲಿದೆ ಎಂದು ಪರೀಕ್ಷೆ ನಡೆಸಲಾಗುತ್ತದೆ. ನಗದು ನೀಡಿದಾಗಲೂ ಇದೇ ಮಷೀನ್ ಮೂಲಕ ಟಿಕೆಟ್ ನೀಡುವುದರಿಂದ ತಾಂತ್ರಿಕ ಸಮಸ್ಯೆಗಳು ಉಂಟಾಗುತ್ತದೆಯೇ ಎಂಬುದು ಸೇರಿ ಎಲ್ಲ ರೀತಿಯ ಪರೀಕ್ಷೆಗಳು ನಡೆಯಲಿವೆ. ಸಮಸ್ಯೆಗಳು ಕಂಡು ಬಂದರೆ ಅದನ್ನು ನಿವಾರಿಸಿದ ಬಳಿಕ ಎಲ್ಲ ಬಸ್‌ಗಳಲ್ಲಿ ‘ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್’ ವ್ಯವಸ್ಥೆ ಜಾರಿಗೆ ಬರಲಿದೆ’ ಎಂದು ಮಾಹಿತಿ ನೀಡಿದ್ದಾರೆ.

ಚಿಲ್ಲರೆಯೇ ತಲೆನೋವು: ‘ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಚಿಲ್ಲರೆ ಮೊತ್ತ ನೀಡಿ ಟಿಕೆಟ್ ಪಡೆಯುವುದು ದೊಡ್ಡ ಸಮಸ್ಯೆಯಾಗಿದೆ. ಈ ಸಮಸ್ಯೆ ಪರಿಹಾರಕ್ಕೆ ಫೋನ್ ಪೇ, ಗೂಗಲ್ ಪೇ ಮಾಡಿ ಟಿಕೆಟ್ ಪಡೆಯುವ ವ್ಯವಸ್ಥೆ ಬೇಗ ಬರಬೇಕು’ ಎನ್ನುತ್ತಾರೆ ಬಸ್ ಪ್ರಯಾಣಿಕ ಯೋಗೀಶ್ ಕಾಂಚನ.

ಬಸ್ ನಿರ್ವಾಹಕರು ವಾಪಸ್ ನೀಡಬೇಕಿರುವ ಚಿಲ್ಲರೆ ಹಣವನ್ನು, ಕೆಲವೊಮ್ಮೆ ಜಾಸ್ತಿ ಇದ್ದರೂ ಟಿಕೆಟ್ ಹಿಂಬದಿ ಬರೆದು ಬಿಡುತ್ತಾರೆ. ಎಷ್ಟೋ ಬಾರಿ ಇಳಿಯುವ ಗಡಿಬಿಡಿಯಲ್ಲಿ ಟಿಕೆಟ್ ಹಿಂಬದಿ ಬರೆದಿರುವುದು ಮರೆತು ಹೋಗಿರುತ್ತದೆ. ನೆನಪಾಗುವ ಹೊತ್ತಿಗೆ ಬಸ್ ಮುಂದಕ್ಕೆ ಚಲಿಸಿರುತ್ತದೆ. ಚಿಲ್ಲರೆಗಾಗಿ ನಿರ್ವಾಹಕರು ಮತ್ತು ಪ್ರಯಾಣಿಕರ ಮಧ್ಯೆ ಜಗಳಗಳೂ ಆಗಿವೆ. ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್ ಬಂದರೆ ಮರೆವು, ಜಗಳಗಳಿಗೆ ಮುಕ್ತಿ ಸಿಗಲಿದೆ ಎಂದು ಅವರು ಹೇಳಿದ್ದಾರೆ.

ನಗದುರಹಿತ ವ್ಯವಸ್ಥೆ

‘ಸ್ಮಾರ್ಟ್ ಎಲೆಕ್ಟ್ರಾನಿಕ್ ಟಿಕೆಟಿಂಗ್ ಮಷೀನ್ ವ್ಯವಸ್ಥೆ ಅನುಷ್ಠಾನಗೊಳಿಸುವುದರಿಂದ ನಗದು ರಹಿತ ವ್ಯವಸ್ಥೆಗೆ ಒತ್ತು ನೀಡಲಾಗುತ್ತಿದೆ. ಯುಪಿಐ ಬಳಸುವುದು ಈಗ ಎಲ್ಲ ಕಡೆ ಸಾಮಾನ್ಯವಾಗಿರುವುದರಿಂದ ಜನರಿಗೆ ಈ ಪಾವತಿ ವ್ಯವಸ್ಥೆ ಹೊಸತಲ್ಲ. ಕೆಎಸ್‌ಆರ್‌ಟಿಸಿಯಲ್ಲಿಯೂ ಈ ವ್ಯವಸ್ಥೆ ಜಾರಿಯಾದರೆ ಹೆಚ್ಚಿನ ಪ್ರಯಾಣಿಕರು ಯುಪಿಐ ಮೂಲಕವೇ ಪಾವತಿ ಮಾಡಲಿದ್ದಾರೆ’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ವಿಶ್ವಾಸ ವ್ಯಕ್ತಪಡಿಸಿದರು.

ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ಹಾಸ್ಟೆಲ್ ಹಾಗೂ ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು(ಎಡಚಿತ್ರ), ಅಂಬೇಡ್ಕರ್ ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆಯ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರಗಳು

ಬೇಡಿಕೆ ಈಡೇರಿಸಲು ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ • ಕನಿಷ್ಠ ವೇತನ ಹೆಚ್ಚಳಕ್ಕೆ ಆಗ್ರಹ

ಹೊರಗುತ್ತಿಗೆ ಸಿಬ್ಬಂದಿ ಮುಷ್ಕರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇರವಾಗಿ ಇಲಾಖೆಯಿಂದಲೇ ವೇತನ ಪಾವತಿ, ನಿವೃತ್ತರಿಗೆ ಸೇವಾ ಭದ್ರತೆ ಕಲ್ಪಿಸುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ, ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಹಾಸ್ಟೆಲ್ ಹಾಗೂ ವಸತಿ ಶಾಲೆ–ಕಾಲೇಜುಗಳ ಹೊರಗುತ್ತಿಗೆ ಸಿಬ್ಬಂದಿ ಸೋಮವಾರದಿಂದ ಅನಿರ್ದಿಷ್ಟಾವಧಿ ಮುಷ್ಕರ ಆರಂಭಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದ ಸಿಬ್ಬಂದಿ, ಲಿಖಿತದ ಆದೇಶ ಹೊರಡಿಸುವ ತನಕ ಪ್ರತಿಭಟನಾ ಸ್ಥಳದಿಂದ ಕದಲುವುದಿಲ್ಲ ಎಂದು ಪಟ್ಟು ಹಿಡಿದರು.

10 ವರ್ಷ ಸೇವೆ ಸಲ್ಲಿಸಿರುವ ಹೊರಗುತ್ತಿಗೆ ಸಿಬ್ಬಂದಿಯನ್ನು ದಿನಗೂಲಿ ನೌಕರರ ಕ್ಷೇಮಾಭಿವೃದ್ಧಿ ಕಾಯ್ದೆ ಅಡಿಯಲ್ಲಿ ಸೇರ್ಪಡೆ ಮಾಡಬೇಕು. ಕನಿಷ್ಠ ವೇತನ ತಿಂಗಳಿಗೆ ₹31 ಸಾವಿರ ಪಾವತಿಸಬೇಕು. ಕಾರ್ಮಿಕರ ಕಾನೂನು ಪ್ರಕಾರ ವಾರದ ರಜೆ ಕಡ್ಡಾಯವಾಗಿ ನೀಡಬೇಕು. ಕೆಲಸದ ಸಮಯ ನಿಗದಿಪಡಿಸಬೇಕು ಎಂದು ಆಗ್ರಹಿಸಿದರು.

ಪ್ರತಿ ತಿಂಗಳ 5ರಂದು ಸಂಬಳ ಪಾವತಿಸಬೇಕು. ಬಾಕಿಯಿರುವ ಸಂಬಳವನ್ನು ಪಾವತಿಸಲು ಕ್ರಮ ಕೈಗೊಳ್ಳಬೇಕು. ಸುಪ್ರೀಂ ಕೋರ್ಟ್ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ನಿವೃತ್ತಿ ನಂತರ ಜೀವನ ನಿರ್ವಹಣೆಗೆ ₹10 ಲಕ್ಷ ಪರಿಹಾರ ನೀಡಬೇಕು ಎಂದು ಸಿಬ್ಬಂದಿ ಒತ್ತಾಯಿಸಿದರು.

ಬಿಸಿಎಂ ಇಲಾಖೆಯಲ್ಲಿ ಕೆಲಸ ಕಳೆದುಕೊಂಡಿರುವ ಹೊರಗುತ್ತಿಗೆ ಸಿಬ್ಬಂದಿಯನ್ನು ಮತ್ತೆ ಮರು ನೇಮಕ ಮಾಡಿಕೊಳ್ಳಬೇಕು ಎಂದು ಬೇಡಿಕೆ ಇರಿಸಿದರು.

ಅಡುಗೆ ಕೊಠಡಿಯಲ್ಲಿ ಸುರಕ್ಷತಾ ಕ್ರಮ ಕೈಗೊಳ್ಳಲು ಅಗತ್ಯ ಸಲಕರಣೆ ಕೊಡಬೇಕು. ಬಿಸಿಎಂ ಬಾಲಕರ ಹಾಸ್ಟೆಲ್‌ಗಳಿಗೆ ಹಿಂದಿನಂತೆ ರಾತ್ರಿ ಕಾವಲುಗಾರರ ನೇಮಕ ಮಾಡಬೇಕು. ಅಡುಗೆಯವರು, ಅಡುಗೆ ಸಹಾಯಕರು, ಸ್ವಚ್ಛತಾಗಾರರಿಂದ ಶೌಚಾಲಯ ಸ್ವಚ್ಛ ಮಾಡಿಸಬಾರದು. ಹೊಸದಾಗಿ ಪ್ರಾರಂಭ ಮಾಡುವ ವಸತಿ ನಿಲಯಗಳ ಸಿಬ್ಬಂದಿ ಆಯ್ಕೆಗೆ ಮೀಸಲಾತಿ ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಂಘದ ಗೌರವಾಧ್ಯಕ್ಷ ನಿತ್ಯಾನಂದಸ್ವಾಮಿ, ಅಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ, ಪ್ರಧಾನ ಕಾರ್ಯದರ್ಶಿ ಕೆ.ಹನುಮೇಗೌಡ, ಖಜಾಂಚಿ ಚಂದ್ರಪ್ಪ ಹೊಸ್ಕೇರಾ ಹಾಜರಿದ್ದರು.

ವಸತಿ ಸೌಲಭ್ಯಕ್ಕಾಗಿ ತಮಟೆ ಚಳವಳಿ

ವಸತಿ ಸೌಲಭ್ಯ ಹಾಗೂ ಹಕ್ಕುಪತ್ರ ವಿತರಣೆ ಒಳಗೊಂಡಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ, ಅಂಬೇಡ್ಕರ್ ಸುವರ್ಣ ಕರ್ನಾಟಕ ಕಾರ್ಮಿಕರ ವೇದಿಕೆಯಿಂದ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ತಮಟೆ ಚಳವಳಿ ನಡೆಯಿತು.

ಸರ್ಕಾರದ ವಿರುದ್ಧ ಘೋಷಣೆ ಕೂಗಿದ ಪ್ರತಿಭಟನಕಾರರು, ಶೀಘ್ರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿದರು.

ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಕೊಡಿಗೆಹಳ್ಳಿ ಕೆರೆ ಅಂಗಳದಲ್ಲಿ 188 ಕುಟುಂಬಗಳು ನೆಲೆಸಿವೆ. ಆ ಕುಟುಂಬಗಳನ್ನು ಯಲಹಂಕ ತಾಲ್ಲೂಕಿನ ಚಿಕ್ಕಬೆಟ್ಟಹಳ್ಳಿ ಗ್ರಾಮದ ಸರ್ವೆ ನಂಬರ್ 49ಕ್ಕೆ ಸ್ಥಳಾಂತರಿಸಿ ವಸತಿ ಕಲ್ಪಿಸಬೇಕು. ಥಣಿಸಂದ್ರ ರಾಚೇನಹಳ್ಳಿಯಲ್ಲಿ 250ಕ್ಕೂ ಹೆಚ್ಚು ಮಂದಿ ನೆಲೆಸಿದ್ದಾರೆ. ಅವರನ್ನು ಯಲಹಂಕ ತಾಲ್ಲೂಕಿನ ಉತ್ತನಹಳ್ಳಿಗೆ ಸ್ಥಳಾಂತರಿಸಿ ವಸತಿ ಸೌಲಭ್ಯ ಕಲ್ಪಿಸಬೇಕು ಎಂದು ಪ್ರತಿಭಟನಕಾರರು ಕೋರಿದರು.

ಸರ್ವಜ್ಞನಗರ ಕ್ಷೇತ್ರದ ನಾಗವಾರದ ವೀರಣ್ಣಪಾಳ್ಯ ಇಂದಿರಾ ಕ್ಯಾಂಟೀನ್ ಎದುರು ಸಣ್ಣ ಶೆಡ್ ನಿರ್ಮಿಸಿಕೊಂಡು ಹಲವು ಕುಟುಂಬಗಳು ನೆಲೆಸಿವೆ. ಆ ಜಾಗವು ವಾಸಕ್ಕೆ ಸೂಕ್ತವಾಗಿಲ್ಲ. ಎಲ್ಲ ಕುಟುಂಬಗಳನ್ನು ದಾಸನಪುರ ಹೋಬಳಿ ಕುಕ್ಕೇನಹಳ್ಳಿ ಗ್ರಾಮದ ಸರ್ವೆ ನಂಬರ್ 75ಕ್ಕೆ ಸ್ಥಳಾಂತರಿಸಿ, ವಸತಿ ಕಲ್ಪಿಸಬೇಕು ಎಂದು ಕೋರಿದರು.

ಯಶವಂತಪುರ ಹೋಬಳಿಯ ಕೆರೆಗುಡ್ಡದಹಳ್ಳಿ ಗ್ರಾಮದ ಸರ್ವೆ ನಂಬರ್ 3ರ 4 ಎಕರೆ 25 ಗುಂಟೆ ಜಾಗದಲ್ಲಿ ಸುಮಾರು 200 ಕುಟುಂಬಗಳು ನೆಲೆಸಿವೆ. ಅವರಿಗೆ ಅಕ್ರಮ–ಸಕ್ರಮ ಯೋಜನೆ ಅಡಿ ಹಕ್ಕುಪತ್ರ ವಿತರಣೆ ಮಾಡಬೇಕು ಎಂದು ಕೋರಿದರು.

ವೇದಿಕೆ ಗೌರವಾಧ್ಯಕ್ಷ ಮಾಯಣ್ಣ, ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಎಂ.ಪ್ರಿಯಾ, ಉಪಾಧ್ಯಕ್ಷೆ ಕೆ.ಎನ್. ಮಂಜುಳಾ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ವೆಂಕಟೇಶ್, ಉಪಾಧ್ಯಕ್ಷ ಡಿ.ವೆಂಕಟೇಶ್ ಪಾಲ್ಗೊಂಡಿದ್ದರು.

‘ಹೈಕಮಾಂಡ್ ರಾಜೀನಾಮೆ ಕೇಳಬೇಕಿತ್ತು’

ಪ್ರಜಾವಾಣಿ ವಾರ್ತೆ

ನವದೆಹಲಿ: ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ, ಪರಿಶಿಷ್ಟ ಪಂಗಡಗಳ ಕಲ್ಯಾಣ ನಿಧಿ ಲೂಟಿ ಮತ್ತು ಮುಡಾ ಹಗರಣದಲ್ಲಿ ಭಾಗಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂದು ರಾಜ್ಯಸಭೆಯ ಬಿಜೆಪಿ ಸದಸ್ಯ ಲಹರ್ ಸಿಂಗ್ ಸಿರೊಯಾ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆ ಸಂದರ್ಭದಲ್ಲಿ ಸೋಮವಾರ ಕಾಂಗ್ರೆಸ್ ವಿರುದ್ಧ ಟೀಕಾಪ್ರಕಾರ ನಡೆಸಿದ ಅವರು, ‘ಆರ್‌ಟಿಐ ಕಾಯ್ದೆ ತರಲು ಸೋನಿಯಾ ಗಾಂಧಿ ಕಾರಣಕರ್ತರು. ಆದರೆ, ಮುಡಾ ಹಗರಣ ಬೆಳಕಿಗೆ ತಂದ ಆರ್‌ಟಿಐ ಕಾರ್ಯಕರ್ತರನ್ನೇ ಕಾಂಗ್ರೆಸ್ ಸರ್ಕಾರ ಬಂಧಿಸಿದೆ’ ಎಂದರು.

ರಾಜ್ಯದ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ತಮ್ಮ ತವರು ರಾಜ್ಯ ಕರ್ನಾಟಕದಲ್ಲಿ ದಲಿತರಿಗೆ ಅನ್ಯಾಯವಾಗುತ್ತಿದ್ದರೂ ಮೌನವಾಗಿದ್ದಾರೆ. ಇದನ್ನು ನೋಡಿದರೆ ಬೇಸರವಾಗುತ್ತದೆ. ಖರ್ಗೆ ಅವರು ಸಿದ್ದರಾಮಯ್ಯರಿಂದ ರಾಜೀನಾಮೆ ಪಡೆಯ ಬೇಕಿತ್ತು’ ಎಂದು ಅಭಿಪ್ರಾಯಪಟ್ಟರು.

‘ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ದಲಿತರ ಕಲ್ಯಾಣಕ್ಕಾಗಿ ಉದ್ದೇಶಿಸಲಾದ ₹187 ಕೋಟಿಯನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಕಾಂಗ್ರೆಸ್ ಹೈಕಮಾಂಡ್ ಸೂಚನೆ ಮೇರೆಗೆ ತೆಲಂಗಾಣ, ಆಂಧ್ರಪ್ರದೇಶದಲ್ಲಿ ಚುನಾವಣೆಗೆ ಈ ಹಣ ಬಳಸಿಕೊಳ್ಳಲಾಗಿದೆ. ನಿಷ್ಪಕ್ಷಪಾತ ತನಿಖೆ ನಡೆಸಿದರೆ ಈ ಅಕ್ರಮ ವರ್ಗಾವಣೆಗಳ ನಿಜವಾದ ವ್ಯಾಪ್ತಿ ಬಹಿರಂಗವಾಗಲಿದೆ. ಒಂದು ವೇಳೆ ಸದನದಲ್ಲಿ ತಾವು ಹೇಳಿದ ವಿಷಯಗಳು ಸುಳ್ಳು ಎನ್ನುವುದು ಸಾಬೀತಾದರೆ ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ’ ಎಂದು ಅವರು ಸವಾಲು ಹಾಕಿದರು.

‘ಬಾಂಗ್ಲಾ ಪ್ರಜೆಗಳ ಅಕ್ರಮ ವಾಸ’

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನಲ್ಲಿ ಬಾಂಗ್ಲಾ ದೇಶದ ಪ್ರಜೆಗಳು ಅಕ್ರಮವಾಗಿ ವಾಸವಾಗಿರುವುದು ರಾಜ್ಯಕ್ಕೆ ಮತ್ತು ದೇಶಕ್ಕೆ ಅಪಾಯಕಾರಿ ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸೋಮವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಬಾಂಗ್ಲಾ ದೇಶದವರು ಬೆಂಗಳೂರಿಗೆ ಕೆಲಸಕ್ಕೆ ಬಂದು ಇಲ್ಲಿಯೇ ಪ್ರತ್ಯೇಕ ಕಾಲೊನಿ ಮಾಡಿಕೊಳ್ಳುವಷ್ಟು ಬೆಳೆದಿದ್ದಾರೆ. ನಾನು ಗೃಹ ಸಚಿವನಾಗಿದ್ದಾಗ 64 ಜನ ಬಾಂಗ್ಲಾ ಅಕ್ರಮ ವಲಸಿಗರನ್ನು ಪತ್ತೆ ಹಚ್ಚಿ ಅವರ ದೇಶಕ್ಕೆ ಕಳುಹಿಸುವ ಪ್ರಯತ್ನ ಮಾಡಿದ್ದೆವು. ಆದರೆ, ಪಶ್ಚಿಮ ಬಂಗಾಳ ಸರ್ಕಾರ ಸಹಕಾರ ನೀಡಲಿಲ್ಲ’ ಎಂದರು.

‘ಬಾಂಗ್ಲಾ ವಲಸಿಗರು ಚಿಕ್ಕಮಗಳೂರು ಕಾಫಿ ಎಸ್ಟೇಟ್, ಮೀನುಗಾರಿಕೆ ಬಂದರಿನಲ್ಲಿ ಹಲವರು ಸೇರಿಕೊಂಡಿದ್ದಾರೆ. ಸಮಾಜ ಘಾತುಕ ಶಕ್ತಿಗಳು ಅಕ್ರಮವಾಗಿ ವಲಸೆ ಬಂದಿದ್ದಾರೆ. ಅವರು ಇಲ್ಲೂ ಸಮಾಜ ಘಾತುಕ ಚಟುವಟಿಕೆಗಳನ್ನು ಮಾಡುತ್ತಾರೆ’ ಎಂದರು.

ಸುದ್ದಿ 2 ನಿಮಿಷ

ರಾಷ್ಟ್ರೀಯ ಯೋಜನೆಯಾಗಿ ಭದ್ರಾ ಮೇಲ್ದಂಡೆ: ದೇವೇಗೌಡ ಆಗ್ರಹ

ನವದೆಹಲಿ: ಹನಿ ನೀರಾವರಿ ಮೂಲಕ ಮಧ್ಯ ಕರ್ನಾಟಕದ ಜಿಲ್ಲೆಗಳಿಗೆ ನೀರುಣಿಸುವ ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಬೇಕು ಹಾಗೂ ಅಗತ್ಯ ಅನುದಾನ ನೀಡಬೇಕು ಎಂದು ರಾಜ್ಯಸಭೆಯ ಜೆಡಿಎಸ್ ಸದಸ್ಯ ಎಚ್.ಡಿ. ದೇವೇಗೌಡ ಆಗ್ರಹಿಸಿದರು.

ರಾಜ್ಯಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಸೋಮವಾರ ಪಾಲ್ಗೊಂಡು ಸುಮಾರು 40 ನಿಮಿಷ ಮಾತನಾಡಿದ ಅವರು, ಕರ್ನಾಟಕದ ಕುಡಿಯುವ ನೀರಿನ ಸಂಕಷ್ಟದ ಸ್ಥಿತಿಯನ್ನು ಬಿಚ್ಚಿಟ್ಟರು.

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಬೇಕು ಎಂದು ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಕೇಂದ್ರ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು.

‘ಬೆಂಗಳೂರಿನ ನೀರಿನ ಸಮಸ್ಯೆಗೆ ಪರಿಹಾರ ಕಂಡುಹಿಡಿಯಬೇಕಿದೆ. ನಾನು ಈಗ ನ್ಯಾಯಾಂಗ, ಪ್ರಾಧಿಕಾರ ಅಥವಾ ಇತರ ಯಾವುದೇ ಸಂಸ್ಥೆಯನ್ನು ಟೀಕಿಸಲು ಹೋಗುವುದಿಲ್ಲ. 1991ರಲ್ಲಿ ಕಾವೇರಿ ಪ್ರಾಧಿಕಾರ ಆದೇಶ ನೀಡುವಾಗ ಬೆಂಗಳೂರಿನ ಜನಸಂಖ್ಯೆ 84 ಲಕ್ಷ ಆಗಿತ್ತು. ಈಗ ಜನಸಂಖ್ಯೆ 1.34 ಕೋಟಿಗೆ ಏರಿದೆ. ಕುಡಿಯುವ ನೀರು ಜನರ ಮೂಲಭೂತ ಹಕ್ಕು. ನೀರಿನ ಸಮಸ್ಯೆಯಿಂದ ಬೆಂಗಳೂರಿನ ಜನರು ತತ್ತರಿಸಿದ್ದಾರೆ’ ಎಂದರು.

ತಮಿಳುನಾಡಿಗೆ ಪ್ರತಿದಿನ 1 ಟಿಎಂಸಿ ಅಡಿ ನೀರು ಹರಿಸಬೇಕು ಎಂದು ಕಾವೇರಿ ನೀರು ನಿಯಂತ್ರಣ ಸಮಿತಿ ಜುಲೈ 10ರಂದು ಶಿಫಾರಸು ಮಾಡಿತ್ತು. 20 ದಿನಗಳಲ್ಲಿ 19 ಟಿಎಂಸಿ ನೀರು ಬಿಡಬೇಕಾದ ಪರಿಸ್ಥಿತಿ ಇತ್ತು. ದೇವರು ಕರುಣೆ ತೋರಿದ್ದರಿಂದ ರಾಜ್ಯ ಸಂಕಷ್ಟದಿಂದ ಪಾರಾಯಿತು. ಒಂದು ವೇಳೆ, ಮಳೆ ಕೈ ಕೊಟ್ಟಿದ್ದರೆ ನಾವು ತಮಿಳುನಾಡಿಗೆ ನೀರು ಬಿಡುತ್ತಿರಲಿಲ್ಲ’ ಎಂದು ಹೇಳಿದರು. ಕಾವೇರಿ ಜಲವಿವಾದ 200 ವರ್ಷಗಳಿಂದ ಇದೆ’ ಎಂದರು.

ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ಪೈಪೋಟಿ

ಬೆಂಗಳೂರು: ಕೆಪಿಸಿಸಿಯ ಮಹಿಳಾ ಘಟಕದ ಅಧ್ಯಕ್ಷ ಸ್ಥಾನಕ್ಕೆ ತೀವ್ರ ಪೈಪೋಟಿ ಏರ್ಪಟ್ಟಿದೆ. ವಾರದೊಳಗೆ ಹೊಸ ಅಧ್ಯಕ್ಷರ ನೇಮಕವಾಗುವ ಸಾಧ್ಯತೆಯಿದೆ.

ಅಧ್ಯಕ್ಷ ಸ್ಥಾನಕ್ಕೆ ಮಾಜಿ ಶಾಸಕಿ ಸೌಮ್ಯಾರೆಡ್ಡಿ, ಕಮಲಾಕ್ಷಿ ರಾಜಣ್ಣ, ನೆಟಲ್ಡಾ ಡಿಸೋಜಾ, ಕೃಪಾ ಆಳ್ವ ಮತ್ತು ಐಶ್ವರ್ಯಾ ಮಹದೇವ್ ಅವರ ಹೆಸರು ಮುಂಚೂಣಿಯಲ್ಲಿದೆ.

ಐಶ್ವರ್ಯಾ ಮಹದೇವ್ ಅವರನ್ನು ನೇಮಿಸುವ ಕುರಿತು ಎರಡು ತಿಂಗಳ ಹಿಂದೆಯೇ ಚರ್ಚೆಯಾಗಿತ್ತು. ಆದರೆ, ಅವರು ಅಧ್ಯಕ್ಷ ಸ್ಥಾನ ವಹಿಸಿಕೊಳ್ಳಲು ಹಿಂಜರಿಯುತ್ತಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಹಾಲಿ ಅಧ್ಯಕ್ಷೆ ಪುಷ್ಪಾ ಅಮರನಾಥ್ ಅವರ ಅವಧಿ ಲೋಕಸಭೆ ಚುನಾವಣೆಗೆ ಮೊದಲೇ ಮುಗಿದಿದೆ. ಅಲ್ಲದೆ, ಸದ್ಯ ಅವರು ‘ಗ್ಯಾರಂಟಿ’ ಯೋಜನೆಗಳ ಅನುಷ್ಠಾನದ ರಾಜ್ಯಮಟ್ಟದ ಸಮಿತಿಯ ಉಪಾಧ್ಯಕ್ಷೆ. ಹೀಗಾಗಿ, ಒಬ್ಬರಿಗೆ ಒಂದೇ ಹುದ್ದೆ ಎಂಬ ನೀತಿಯಡಿ ಅವರು ಈ ಸ್ಥಾನವನ್ನು ತೆರವುಗೊಳಿಸಬೇಕಿದೆ.

ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳು ತೆರೆಮರೆಯಲ್ಲಿ ಈಗಾಗಲೇ ಲಾಬಿ ಆರಂಭಿಸಿದ್ದಾರೆ. ಎಐಸಿಸಿ ಮಹಿಳಾ ಘಟಕದ ಅಧ್ಯಕ್ಷರಾಗಿರುವ ಅಲ್ಕಾ ಲಂಬಾ ಅವರು ಆಕಾಂಕ್ಷಿಗಳನ್ನು ಇತ್ತೀಚೆಗೆ ದೆಹಲಿಗೆ ಕರೆಸಿಕೊಂಡು ಪ್ರತ್ಯೇಕವಾಗಿ ಚರ್ಚೆ ನಡೆಸಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

ಖಾಜಿಸೊಣ್ಣೆನ್ನಹಳ್ಳಿ: ನಕಲಿ ದಾಖಲೆ ಸೃಷ್ಟಿಸಿ ಭೂಮಿ ಕಬಳಿಸಲು ಯತ್ನಿಸಿದ್ದ ಭೂಗಳ್ಳರು

ಸರ್ಕಾರಿ ಜಮೀನಿನ ಹದ್ದುಬಸ್ತು ಗುರುತು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಭೂಕಬಳಿಕೆ ಪ್ರಕರಣಗಳ ವಿಶೇಷ ನ್ಯಾಯಾಲಯದ ಆದೇಶದ ಮೇರೆಗೆ ಸಾರ್ವಜನಿಕರ ಉಪಯೋಗಕ್ಕೆ ಮೀಸಲಿಟ್ಟ ಜಮೀನಿನ ಗಡಿ (ಹದ್ದು ಬಸ್ತು) ಗುರುತಿಸಲಾಗಿದೆ ಎಂದು ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾ ಅಧಿಕಾರಿ ವಸಂತ್ ಕುಮಾರ್ ತಿಳಿಸಿದರು.

ಕೆ.ಆರ್.ಪುರ ತಾಲ್ಲೂಕಿನ ಕನ್ನಮಂಗಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಖಾಜಿಸೊಣ್ಣೆನ್ನಹಳ್ಳಿ ಗ್ರಾಮದ ಗ್ರಾಮಠಾಣಾದ ಸರ್ವೆ ನಂಬರ್ 174ರಲ್ಲಿ 3 ಎಕರೆ 24 ಗುಂಟೆ ಜಮೀನನ್ನು ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ಕಬಳಿಸಲು ಯತ್ನಿಸಿದ್ದರೆಂದು ಗ್ರಾಮಸ್ಥರು ಭೂಕಬಳಿಕೆ ವಿಶೇಷ ನ್ಯಾಯಾಲಯದ ಮೊರೆ ಹೋಗಿದ್ದರು.

ನ್ಯಾಯಾಲಯದ ಆದೇಶದ ಮೇರೆಗೆ ಭೂ ಮಾಪಕರ ಮೂಲಕ ಸರ್ವೆ ಮಾಡಿಸಿ ಗ್ರಾಮ ಠಾಣಾ ಜಮೀನಿನ ಗಡಿ ಗುರುತಿಸಲಾಗಿದೆ. ಮೂಲ ಖಾತೆದಾರರು ಯಾರು, ಯಾರು ಒತ್ತುವರಿ ಮಾಡಿಕೊಂಡಿದ್ದಾರೆಂದು ಪರಿಶೀಲಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು ಎಂದು ವಸಂತ ಕುಮಾರ್ ತಿಳಿಸಿದರು.

ಸಾರ್ವಜನಿಕರ ಹಿತಾಸಕ್ತಿಯಿಂದ ಈ ಜಮೀನನ್ನು ಅಂಬೇಡ್ಕರ್ ಭವನ, ಕನಕಭವನ, ಬಸವಭವನ ನಿರ್ಮಾಣ, ದೇವಸ್ಥಾನ, ಮಸೀದಿ ಹಾಗೂ ರೈತ ಸಂಘಕ್ಕೆ ಮೀಸಲಿಡಲಾಗಿತ್ತು. ಈ ಜಮೀನನ್ನು ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ಕಬಳಿಸಿದ್ದರು. ಈ ಬಗ್ಗೆ ಕೆ.ಆರ್. ಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಬೆಂಗಳೂರು ಪೂರ್ವ ತಾಲ್ಲೂಕು ಕಾರ್ಯನಿರ್ವಹಣಾ ಅಧಿಕಾರಿ ವಸಂತ್ ಕುಮಾರ್ ಅವರು ಖಾಜಿಸೊಣ್ಣೆನ್ನಹಳ್ಳಿ ಗ್ರಾಮಸ್ಥರ ಸಮ್ಮುಖದಲ್ಲಿ ಹದ್ದುಬಸ್ತು ಗುರುತಿಸಿದರು

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PERSONAL

Lost

DOCUMENT LOST
I, AUGUSTINE S. R/at No.54/1, 6th Block, Rajajinagar, Bangalore-10. have lost my Original Sale Deed of Plat No.12, Southern Portion and 13 Northern Portion as extent of 600 sq.ft situated at Onnalavadi Village, Hosuru Taluk, Krishnagiri District, Identification No. 1059/2019 while shifting residence. If Found please Contact: 9632711154

Change of Name

CHANGE OF NAME
I, SADHANA W/o H K PARAMESHWARA, R/at #AP-207, 2nd Floor, Atreum Pride, Belmar Layout, Opp to Kanva Mart, Nagasandra, Bangalore North, Karnataka-560073, have changed my name to SADHANA PARAMESHWARA vide affidavit dated 29-07-2024, sworn to before notary H.K. Gopalagowda, Bangalore. Henceforth I shall be known as SADHANA PARAMESHWARA only

I, KUMARA SRIRAMANAHALLI NAGARAJU R/a B Sriramanahalli Grama Bogadi Post, Honakere Hobali, Nagamangala Taluk Mandya-571432 have changed name KUMAR SRIRAMANAHALLI NAGARAJU vide`affidavit 29.7.2024 before`Notary Hemalatha, Bengaluru.

I, SHAH Quadri Peer Syed Khader Ali S/o Syed Rahaman Sha Khadri, Aged about 47 Years, resident of Uppakunte Village, Sugatur Hobli, Kolar Taluk. Have changed my name to Peer Syed Khadar Ali Sha Khadri, and my correct date of Birth is 12.10.1977 instead of 01.10.1977, vide affidavit dated 29.07.2024 Before Notary Venkataswamy Kolar. Henceforth I shall be called as Peer Syed Khadar Ali Sha Khadri my date of birth is 12.10.1977 only

CONNECT ಕ್ಲಾಸಿಫೈಡ್ಸ್



ಮೀನಾ ಬಜಾರ್
Meena BAZAR
Arts, Crafts, Handlooms and Lifestyle Exhibition
26th July to 4th August 2024
11 AM - 7 PM
10 Days Exhibition
Karnataka Chitrakala Parishath Bengaluru
100+ Stalls | Live Performance
Entry Free



LED Show Live
3rd Aug 2024 | 5.30 PM - 7 PM
Shadow Show Live
4th Aug 2024 | 5.30 PM - 7 PM
For Details Contact : 6364685716 / 9036658774
HANDLOOMS | HOME DECOR | HANDICRAFTS | CLOTHING | JEWELLERY

REAL ESTATE SELLING
Flat
Kaggadasapura
3 BHK flat, made into 3 bedroom, 3 bathroom, hall kitchen 1, dinning room and 2 balcony.Flat No C, Sai Teja Green Valley Building ,4th A Cross , Abbaiah Reddy Layout Kaggadasapura, Bengaluru Floor 1490sq flat 1 covered Garage space. Ph 91 99012 17980

BUSINESS
Business to Business
Business
WANTED BUSINESS PARTNER HOTEL BUSINESS CONTACT: 8892501007/ 9606701007

RETIRED/ HOUSEWIVES and others Open DMAT & Earn 5000/ per day in your bank. 8792645301

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY @ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact:
9901641752
9845114560

ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ
ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿಗಳ ಕಚೇರಿ, # ಜಿ.ಬಿ.–7, ಜಿಲ್ಲಾಡಳಿತ ಭವನ, ಪಟ್ರೇನಹಳ್ಳಿ, ಚಿಕ್ಕಬಳ್ಳಾಪುರ ಜಿಲ್ಲೆ. Email ID: rchochikballapur@gmail.com, Phone & Fax: 9449843191
ಸಂಖ್ಯೆ: ಆರ್.ಸಿ.ಹೆಚ್.ಓ/ಎನ್.ಹೆಚ್.ಎಂ/ಸಿಬಿಪಿ/ಇಒಐ/ಎಂ.ಹೆಚ್/94/2024–25 ದಿನಾಂಕ:23.07.2024
ಸಂಕ್ಷಿಪ್ತ ಜಾಹೀರಾತು
ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 2024–25ನೇ ಸಾಲಿಗೆ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ದಾಖಲಾಗುವ ಪ್ರತಿ ಗರ್ಭಿಣಿಯರಿಗೆ (ಪ್ರತಿ ಗರ್ಭಿಣಿಗೆ 20–26 ವಾರದಲ್ಲಿ Anomaly Scan ಕೈಗೊಳ್ಳುವ ಕಾರ್ಯ) 6 ತಿಂಗಳ ಒಳಗಾಗಿ ಒಂದು ಬಾರಿ ಗರ್ಭಾವಸ್ಥೆಯ ಭ್ರೂಣದ ನ್ಯೂನತೆಗಳನ್ನು ಪತ್ತೆ ಹಚ್ಚಲು Anomaly Scanning ನ್ನು ಮಾಡಲು ಸಮುದಾಯ ಆರೋಗ್ಯ ಕೇಂದ್ರ, ಸಾರ್ವಜನಿಕ ಆಸ್ಪತ್ರೆ, ತಾಯಿ ಮಕ್ಕಳ ಆಸ್ಪತ್ರೆ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಗಂಡಾಂತರ ಗರ್ಭಿಣಿಯರನ್ನು ಪತ್ತೆ ಹಚ್ಚಲು ಸರ್ಕಾರಿ ಆಸ್ಪತ್ರೆಯ ಸ್ಕ್ಯಾನಿಂಗ್ ಯಂತ್ರಗಳಲ್ಲಿ ಆಸಕ್ತಿ ಖಾಸಗಿ ತಜ್ಞ ವೈದ್ಯರಾದ ರೆಡಿಯಾಲಜಿಸ್ಟ್/ಸೋನಾಲಜಿಸ್ಟ್ ಅಥವಾ ಖಾಸಗಿ ಸ್ಕ್ಯಾನಿಂಗ್ ಸೆಂಟರ್‌ನಲ್ಲಿ ಇರುವ ಆಸಕ್ತಿಯುಳ್ಳ ರೆಡಿಯಾಲಜಿಸ್ಟ್/ಸೋನಾಲಜಿಸ್ಟ್ ರವರು ಅನಾಮಲಿ ಸ್ಕ್ಯಾನಿಂಗ್ ಮಾಡಲು EOI (Expression of Interest) ನ್ನು ಕರೆದಿದ್ದು, ಸಂಬಂಧ ಪಟ್ಟ ಮಾಹಿತಿಯನ್ನು https://chikkaballapur.nic.in ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿರುತ್ತದೆ. ಆದರಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (KTPP) 1999 ನಿಯಮಗಳು 2000ರ ಅನ್ವಯ ಆಸಕ್ತಿಯುಳ್ಳ ರೆಡಿಯಾಲಜಿಸ್ಟ್/ಸೋನಾಲಜಿಸ್ಟ್ ರವರು ಸಂಪೂರ್ಣ ಮಾಹಿತಿಯ ದರಪಟ್ಟಿಗಳನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಛೇರಿಗೆ ಸಲ್ಲಿಸಲು **ಅಂತಿಮ ದಿನಾಂಕ: 31.07.2024 ಬೆಳಗ್ಗೆ: 11:00 ಗಂಟೆಗೆ, ಒಳಗೆ ಸಲ್ಲಿಸುವುದು.**
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:114/ಕೆಎಸ್‌ಎಂಸಿಎ/2024–25

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಕಾಮಗಾರಿ ಇಲಾಖೆ, ಕೇಂದ್ರ ಕಚೇರಿ, ಶಾಂತಿನಗರ, ಬೆಂಗಳೂರು – 560 027.
ಸಂಖ್ಯೆ. ಬೆಮಸಾ/ಕೇಕ/ಕಾಇ/ಕಾನಿಅ/628/2024–25 ದಿನಾಂಕ: 27.07.2024
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 07/2024–25
ಅರ್ಹ ಗುತ್ತಿಗೆದಾರರಿಂದ 1) **“ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿದ್ಯುತ್ ಬಸ್ ಚಾರ್ಜಿಂಗ್‌ಗಾಗಿ 2200 ಕೆ.ವಿ.ಎ. ಸಾಮರ್ಥ್ಯದ ಹೆಚ್.ಟಿ. ವಿದ್ಯುತ್ ಸಂಪರ್ಕ ಒದಗಿಸುವುದು”**. ಟೆಂಡರ್‌ಗಿಟ್ಟ ಅಂದಾಜು ಮೊತ್ತ ರೂ. **52.30 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 1,05,000/–** ಮತ್ತು 2) **“ಬೆಂಗಳೂರು ಶಾಂತಿನಗರ ಟಿ.ಟಿ.ಎಂ.ಸಿ. ಯಲ್ಲಿ ಅಳವಡಿಸಲಾಗಿರುವ ಅಗ್ನಿಶಾಮಕ ವ್ಯವಸ್ಥೆಯನ್ನು ದುರಸ್ಥಿಪಡಿಸುವುದು”**. ಟೆಂಡರ್‌ಗಿಟ್ಟ ಅಂದಾಜು ಮೊತ್ತ **ರೂ. 160.00 ಲಕ್ಷಗಳು** ಹಾಗೂ ಇ.ಎಂ.ಡಿ ಮೊತ್ತ **ರೂ. 2,40,000/–** ಕೆಲಸಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. ಭಾಗವಹಿಸುವ ಗುತ್ತಿಗೆದಾರರು **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಪಡೆಯಬಹುದು.
(1) ಕ್ರ.ಸಂ. 1 ರಲ್ಲಿನ ಕೆಲಸ: ಟೆಂಡರ್ ಸಲ್ಲಿಸಲು ಕಡೆ ದಿನಾಂಕ: **07.08.2024** ಮತ್ತು ಟೆಂಡರ್ ತೆರೆಯುವ ದಿನಾಂಕ: **09.08.2024**. (2) ಕ್ರ.ಸಂ. 2ರಲ್ಲಿನ ಕೆಲಸ: ಟೆಂಡರ್ ಸಲ್ಲಿಸಲು ಕಡೆ ದಿನಾಂಕ: **30.08.2024** ಮತ್ತು ಟೆಂಡರ್ ತೆರೆಯುವ ದಿನಾಂಕ: **02.09.2024**.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು, ಬೆ.ಮ.ಸಾ.ಸಂಸ್ಥೆ

ಶಿಶು ಅಭಿವೃದ್ಧಿ ಯೋಜನೆ, ಮಾಲೂರು
ಕೃಷಿಕ ಸಮಾಜ ಕಟ್ಟಡ, ರೆಡ್ಡಿ ಕಲ್ಯಾಣ ಮಂಟಪ ರಸ್ತೆ, ಮಾಲೂರು, ಕೋಲಾರ ಜಿಲ್ಲೆ. ದೂ:08151–232215,
Email-cdpooffice4malur@gmail.com
ಸಂಖ್ಯೆ:ಶಿಅಯೋ:ಮಾ.ಕೌ.ಹಿಂ.ಟೆಂ.ಪ್ರಕಟಣೆ.2024–25 ದಿನಾಂಕ:25.07.2024
ಪತ್ರಿಕಾ ಪ್ರಕಟಣೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ಮಾಲೂರು ಕಛೇರಿಗೆ ಬಾಹ್ಯಮೂಲ ಸೇವೆಯ ಕೌಟುಂಬಿಕ ಹಿಂಸೆಯಿಂದ ಮಹಿಳೆಯರ ಸಂರಕ್ಷಣಾ ಕಾಯ್ದೆಯಡಿ ಕಂಪ್ಯೂಟರ್ ಆಪರೇಟರ್, (ಒಂದು ಹುದ್ದೆ), ಮೆಸೆಂಜರ್ (ಒಂದು ಹುದ್ದೆ) ಗೆ 2024–25ನೇ ಸಾಲಿಗೆ ಮಾನವ ಸಂಪನ್ಮೂಲ ಸರಬರಾಜು ಸಂಸ್ಥೆಗಳಿಂದ ಬಾಹ್ಯಮೂಲದಲ್ಲಿ ಒದಗಿಸಲು ಇಚ್ಛೆ ಉಳ್ಳವರು **ದಿನಾಂಕ: 01.08.2024 ಸಂಜೆ: 5:00 ರೊಳಗೆ ಸಲ್ಲಿಸಲು ಕೋರಿದೆ.** ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಕೃಷಿಕ ಸಮಾಜ ಕಟ್ಟಡ, ರೆಡ್ಡಿ ಕಲ್ಯಾಣ ಮಂಟಪ ರಸ್ತೆ, **ದೂರವಾಣಿ ಸಂಖ್ಯೆ: 08151–2322155** ರವರನ್ನು ಸಂಪರ್ಕಿಸಬಹುದಾಗಿದೆ.
ಸಹಿ/– ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು, ಮಾಲೂರು
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:135/ಕೆಎಸ್‌ಎಂಸಿಎ/2024–25

'ಕಾರ್ಗಿಲ್ ವಿಜಯ ದಿನ'ದ ಅಂಗವಾಗಿ ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದ ಭಾಗವಾಗಿ ಮಾಣೆಕ್ ಷಾ ಪರೇಡ್ ಮೈದಾನದಿಂದ ವಿಜಯನಗರದ ಬಿಜಿಎಸ್ ಆಟದ ಮೈದಾನವರೆಗೆ ಬೈಕ್ ಜಾಥಾ ನಡೆಯಿತು —ಪ್ರಜಾವಾಣಿ ಚಿತ್ರ/ ರಂಜು ಪಿ

ಅನಧಿಕೃತ ಫ್ಲೆಕ್ಸ್, ಬ್ಯಾನರ್ ಅಳವಡಿಕೆ ನಿಯಂತ್ರಿಸಲು ಬಿಬಿಎಂಪಿ ಕ್ರಮ

ರಾತ್ರಿ ವೇಳೆ ಪ್ರಹರಿ ವಾಹನ ಗಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನಧಿಕೃತ ಫ್ಲೆಕ್ಸ್, ಬ್ಯಾನರ್ ಅಳವಡಿಕೆಯನ್ನು ನಿಯಂತ್ರಿಸಲು ಪಾಲಿಕೆಯ ಎಲ್ಲ ವಲಯಗಳಲ್ಲೂ ತಲಾ ಒಂದು ಪ್ರಹರಿ ವಾಹನವನ್ನು ರಾತ್ರಿ ವೇಳೆ ಗಸ್ತು ತಿರುಗಲು ನಿಯೋಜಿಸಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಸೋಮವಾರ ನಡೆದ ಪಾಲಿಕೆ ಅಧಿಕಾರಿಗಳ ಸಭೆಯಲ್ಲಿ ಈ ಆದೇಶ ನೀಡಿದ ಅವರು, 'ಅನಧಿಕೃತ ಜಾಹೀರಾತುಗಳನ್ನು ರಾತ್ರಿ ವೇಳೆ ಹೆಚ್ಚಾಗಿ ಅಳವಡಿಸುತ್ತಾರೆ. ನಿಯಂತ್ರಣಕ್ಕೆ ಬಿಗಿ ಕ್ರಮ ಕೈಗೊಳ್ಳಬೇಕು' ಎಂದು ತಾಕೀತು ಮಾಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಫ್ಲೆಕ್ಸ್/ ಬ್ಯಾನರ್‌ಗಳನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕಿದೆ. ಈ ನಿಟ್ಟಿನಲ್ಲಿ ಆಯಾ ವಲಯ ವ್ಯಾಪ್ತಿಯಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಎಲ್ಲಿಯೂ ಅನಧಿಕೃತ ಜಾಹೀರಾತುಗಳನ್ನು ಅಳವಡಿಸದಂತೆ ನಿಗಾ ವಹಿಸಬೇಕು ಎಂದು ಹೇಳಿದರು.

ಫ್ಲೆಕ್ಸ್/ ಬ್ಯಾನರ್‌ಗಳನ್ನು ಪಾಲಿಕೆಯಿಂದ ತೆರವುಗೊಳಿಸಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ಎಫ್‌ಐಆರ್ ದಾಖಲಿಸಲಾಗುತ್ತಿದೆ. ಆದರೂ, ಸಾರ್ವಜನಿಕ ಸ್ಥಳ, ರಸ್ತೆ ಬದಿ ಫ್ಲೆಕ್ಸ್ ಅಳವಡಿಸುವುದು ನಿಯಂತ್ರಣವಾಗುತ್ತಿಲ್ಲ. ಆದ್ದರಿಂದ ಪಾಲಿಕೆ ಹಾಗೂ ಪೊಲೀಸ್ ಇಲಾಖೆ ಜಂಟಿ ಕಾರ್ಯಾಚರಣೆ ನಡೆಸಿ ಅನಧಿಕೃತ ಜಾಹೀರಾತು ಅಳವಡಿಕೆಯನ್ನು ನಿಯಂತ್ರಣಕ್ಕೆ ತರಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಮುದ್ರಣ ಮಳಿಗೆ, ಘಟಕಗಳಿಗೆ ಅಧಿಕಾರಿಗಳು ಭೇಟಿ ನೀಡಿ, ಅನಧಿಕೃತ ಫ್ಲೆಕ್ಸ್‌ಗಳ ಮುದ್ರಣವಾಗದಂತೆ ಕ್ರಮ ಕೈಗೊಳ್ಳಬೇಕು ಎಂದರು.

ಡೆಂಗಿ ನಿಯಂತ್ರಣ: ನಗರದಲ್ಲಿ ದಿನವೊಂದಕ್ಕೆ ಸರಾಸರಿ 200 ಡೆಂಗಿ ಪ್ರಕರಣಗಳು ಕಂಡುಬರುತ್ತಿವೆ. ಪ್ರತಿ ವಾರ್ಡ್‌ನಲ್ಲಿ ಔಷಧಿ ಸಿಂಪಡಣೆಗಾಗಿ ಸ್ಪ್ರೇಯರ್ ಹಾಗೂ ಅಗತ್ಯ ಸಿಬ್ಬಂದಿ ನಿಯೋಜನೆ ಮಾಡಿಕೊಳ್ಳಬೇಕು ಎಂದು ವಲಯ ಅಧಿಕಾರಿಗಳಿಗೆ ತುಷಾರ್ ಗಿರಿನಾಥ್ ಆದೇಶಿಸಿದರು.

ಎರಡಕ್ಕಿಂತ ಹೆಚ್ಚಿನ ಡೆಂಗಿ ಪ್ರಕರಣಗಳು ದಾಖಲಾದರೆ ಅಂತಹ ಪ್ರದೇಶಗಳನ್ನು 'ಹಾಟ್ ಸ್ಪಾಟ್' ಎಂದು ಗುರುತಿಸಬೇಕೆಂದು ಸೂಚಿಸಲಾಗಿತ್ತು. ಇದರಂತೆ ನಗರದ ಕೊಳೆಗೇರಿ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ 30 ಸಕ್ರಿಯ 'ಹಾಟ್ ಸ್ಪಾಟ್'ಗಳಿದ್ದು, ಅಲ್ಲಿನ ನಾಗರಿಕರಿಗೆ ನೀಮ್ ಆಯಿಲ್ ಮತ್ತು ಡೀಟ್ ಕ್ರೀಮ್‌ಗಳನ್ನು ವಿತರಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ಶಿವಾನಂದ್ ಕಲ್ಕೆರೆ, ವಲಯ ಆಯುಕ್ತರಾದ ಡಾ. ಆರ್.ಎಲ್. ದೀಪಕ್, ಶಿವಾನಂದ್, ರಮೇಶ್, ಕರೀಗೌಡ, ಪ್ರೀತಿ ಗೆಹ್ಲೋಟ್, ಸ್ನೇಹಲ್, ವಿನೋತ್ ಪ್ರಿಯಾ, ರಮ್ಯಾ ಉಪಸ್ಥಿತರಿದ್ದರು.

ದೂರುಗಳಿಗೆ ಸ್ಪಂದಿಸಿ

ಕಾಲಮಿತಿ ಹಾಗೂ ತ್ವರಿತವಾಗಿ ರಸ್ತೆ ಗುಂಡಿಗಳನ್ನು ಮುಚ್ಚುವ ಸಲುವಾಗಿ 'ರಸ್ತೆ ಗುಂಡಿ ಗಮನ' ಮೊಬೈಲ್ ಆ್ಯಪ್ ಬಿಡುಗಡೆಯಾಗಿದೆ. ಅದರಲ್ಲಿನ ದೂರುಗಳಿಗೆ ಕೂಡಲೇ ಸ್ಪಂದಿಸಬೇಕು. ಜೊತೆಗೆ ಪ್ರಮುಖ ರಸ್ತೆಗಳಲ್ಲಿರುವ ಗುಂಡಿಗಳನ್ನು ಆದ್ಯತೆ ಮೇರೆಗೆ ಮುಚ್ಚಲು ಕ್ರಮ ಕೈಗೊಳ್ಳಬೇಕು ಅಧಿಕಾರಿಗಳಿಗೆ ಸೂಚಿಸಿದರು.

ಮಂತ್ರಾಲಯ: ₹3.69 ಕೋಟಿ ಕಾಣಿಕೆ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ಹುಂಡಿಯನ್ನು ಸೋಮವಾರ ತೆರೆದು ನಗದು ಎಣಿಕೆ ಮಾಡಲಾಗಿದ್ದು, 32 ದಿನಗಳ ಅವಧಿಯಲ್ಲಿ ₹3.69 ಕೋಟಿ ನಗದು ಕಾಣಿಕೆಯಾಗಿ ಬಂದಿದೆ.

₹8,13,540 ನಾಣ್ಯಗಳು ಸೇರಿ ಒಟ್ಟು ₹3,69,35,189 ನಗದು, ಚಿನ್ನದ ಹಾಗೂ ಬೆಳ್ಳಿಯ ವಸ್ತುಗಳ ಭಕ್ತರಿಂದ ಕಾಣಿಕೆ ರೂಪದಲ್ಲಿ ಬಂದಿದ್ದು, ಮಠದ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು ಎಂದು ಮಠದ ವ್ಯವಸ್ಥಾಪಕ ತಿಳಿಸಿದ್ದಾರೆ.

ಬಿಹಾರ ಮೀಸಲಾತಿ: ಪಟ್ನಾ ಹೈಕೋರ್ಟ್ ಆದೇಶಕ್ಕೆ ತಡೆ ಇಲ್ಲ

ನವದೆಹಲಿ (ಪಿಟಿಐ): ಬಿಹಾರದಲ್ಲಿ ದಲಿತ ಸಮುದಾಯಗಳು, ಬುಡಕಟ್ಟು ಸಮುದಾಯಗಳು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದವರಿಗೆ ನೀಡಿರುವ ಮೀಸಲಾತಿಯನ್ನು ಶೇ 50ರಿಂದ ಶೇ 65ಕ್ಕೆ ಹೆಚ್ಚಿಸಲು ಅವಕಾಶ ಕಲ್ಪಿಸುವ ತಿದ್ದುಪಡಿ ಕಾನೂನುಗಳನ್ನು ಅಸಿಂಧುಗೊಳಿಸಿದ ಪಟ್ನಾ ಹೈಕೋರ್ಟ್ ಆದೇಶಕ್ಕೆ ತಡೆ ನೀಡಲು ಸುಪ್ರೀಂ ಕೋರ್ಟ್ ಸೋಮವಾರ ನಿರಾಕರಿಸಿದೆ.

ಆದರೆ, ಪಟ್ನಾ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಬಿಹಾರ ಸರ್ಕಾರ ಸಲ್ಲಿಸಿರುವ ಅರ್ಜಿಗಳನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠವು ಒಪ್ಪಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳನ್ನು ಸೆಪ್ಟೆಂಬರ್‌ನಲ್ಲಿ ವಿಚಾರಣೆಗೆ ಕೈಗೆತ್ತಿಕೊಳ್ಳಲಾಗುತ್ತದೆ ಎಂದು ಪೀಠವು ತಿಳಿಸಿದೆ. ಅರ್ಜಿಗಳಿಗೆ ಸಂಬಂಧಿಸಿದಂತೆ ನೋಟಿಸ್ ಜಾರಿಗೆ ಪೀಠ ಆದೇಶ ನೀಡಿಲ್ಲ.

ಬಿಹಾರದ ಪರವಾಗಿ ಹಾಜರಾಗಿದ್ದ ಹಿರಿಯ ವಕೀಲ ಶ್ಯಾಮ್ ದಿವಾನ್, ಹೈಕೋರ್ಟ್ ಆದೇಶಕ್ಕೆ ತಡೆ ನೀಡುವಂತೆ ಕೋರಿದರು. ಛತ್ತೀಸಗಢದ ಇದೇ ಬಗೆಯ ಪ್ರಕರಣದಲ್ಲಿ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು ಎಂದು ಪೀಠಕ್ಕೆ ತಿಳಿಸಿದರು.

ಕೋಲ್ಕತ ರೇಸ್

ಇಟೋಷ ಗೆಲ್ಲುವ ನಿರೀಕ್ಷೆ

ಕ್ಯಾವಲೊ ವೆಲ್ಲೋಸ್ ಕಪ್ ಮಂಗಳವಾರದ ಕೋಲ್ಕತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಇಟೋಷ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ: 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಚಿಲಿಲೇಡಿ 4, ಸಿರೆನಾಯ್ಕ 5, ಇಲೈಟ್ 6
2ನೇ ರೇಸ್: ಕಿಂಡ್ರೆಡ್ ಸ್ಪಿರಿಟ್ 1, ಹಿಸ್ಟಾರಿಕ್ 6, ಕಿಕಾಟ 4
3ನೇ ರೇಸ್: ಡೊನಾ ಸಿಯೆನಾ 3, ಹರ್ಮೆಸ್ 4, ಸಾಟವರ್ 5
4ನೇ ರೇಸ್: ಇನ್ ಟು ದಿ ಸ್ಟಾರ್ಮ್ 8, ಬೈ ದಿ ಬುಕ್ 2, ಟ್ರಾಕಿಲ 3
5ನೇ ರೇಸ್: ಇಟೋಷ 1, ಕ್ಲಿಫೋರ್ಡ್ 7, ಗೆಜಿನೊ 4
6ನೇ ರೇಸ್: ಲೆದರ್ ಬ್ಯಾಕ್ 3, ಕೇ ಸ್ಟಾರ್ 9, ಆಲ್‌ಟೈಮ್ ಲೆಜೆಂಡ್ 2
7ನೇ ರೇಸ್: ಸ್ನೋ ಲೆಪಾರ್ಡ್ 1, ಡ್ಯಾನ್ಸ್ ಅಲಾಂಗ್ 4, ಇಂಡಿಯನ್ ಟೈಗರ್ 2

ಉತ್ತಮ ಬೆಟ್: ಡೊನಾ ಸಿಯೆನಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಅಪಘಾತ: ಲಾರಿ ಚಾಲಕನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಾರಿ ಹಾಗೂ ದ್ವಿಚಕ್ರ ವಾಹನದ ನಡುವೆ ಭಾನುವಾರ ರಾತ್ರಿ ಸಂಭವಿಸಿದ ಅಪಘಾತ ಪ್ರಕರಣ ಸಂಬಂಧ ಬಿಬಿಎಂಪಿಗೆ ಸೇರಿದ ಕಸ ತುಂಬಿಸುವ ಲಾರಿ ಚಾಲಕನನ್ನು ಹಲಸೂರು ಗೇಟ್ ಸಂಚಾರ ಠಾಣೆ ಪೊಲೀಸರು ಸೋಮವಾರ ತಡರಾತ್ರಿ ಬಂಧಿಸಿದ್ದಾರೆ.

ಶಿವಶಂಕರ್ (38) ಬಂಧಿತ ಚಾಲಕ. ಅಪಘಾತದಲ್ಲಿ ಬಾಣಸವಾಡಿಯಲ್ಲಿ ನೆಲೆಸಿದ್ದ ಟೆಕ್ಕಿಗಳಾದ ಪ್ರಶಾಂತ್ ಹಾಗೂ ಶಿಲ್ಪಾ ಮೃತಪಟ್ಟಿದ್ದರು. ಕೆಆರ್ ವೃತ್ತದಲ್ಲಿ ಅಪಘಾತ ಸಂಭವಿಸಿತ್ತು. ಅಪಘಾತದ ಬಳಿಕ ಶಿವಶಂಕರ್ ಪರಾರಿಯಾಗಿದ್ದರು. ಚಾಲಕ ಶಿವಶಂಕರನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

'ದೇವದಾಸಿ ಪದ್ಧತಿ ಅಪರಾಧವೆಂದು ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇವದಾಸಿ ಪದ್ಧತಿಯನ್ನು ಅಪರಾಧವೆಂದು ಸಮಾಜ ಪರಿಗಣಿಸಬೇಕು' ಎಂದು ದಲಿತ ಸಂಘರ್ಷ ಸಮಿತಿಯ ಮುಖಂಡ ಇಂದೂಧರ ಹೊನ್ನಾಪುರ ಹೇಳಿದರು.

ವಿಮುಕ್ತ ದೇವದಾಸಿ ಮಹಿಳಾ ವೇದಿಕೆ ಸೋಮವಾರ ಆಯೋಜಿಸಿದ್ದ 'ವಿಮುಕ್ತ ದನಿ' ಪತ್ರಿಕೆ ಹಾಗೂ ದೇವದಾಸಿಯರ ಜೀವನ ಕುರಿತ ಸಾಕ್ಷ್ಯಚಿತ್ರ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಪೌರ ಕಾರ್ಮಿಕರ ಸಮಸ್ಯೆಗಳ ಪರಿಹಾರ ಮತ್ತು ದೇವದಾಸಿ ಪದ್ಧತಿಯನ್ನು ನಿರ್ಮೂಲನೆಗೆ ದಲಿತ ಚಳವಳಿ ಆದ್ಯತೆ ನೀಡಬೇಕಿತ್ತು. ರಾಜ್ಯದಲ್ಲಿ ದೇವದಾಸಿ ಪದ್ಧತಿ ಇಂದಿಗೂ ಚಾಲ್ತಿಯಲ್ಲಿದೆ. ದೇವದಾಸಿ ಎಂಬ ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಲು ಕಠಿಣ ಕಾನೂನು ಜಾರಿಗೊಳಿಸಬೇಕು. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಗುವುದು' ಎಂದರು.

'ರಾಜ್ಯದಲ್ಲಿ ದಲಿತರ ಪರವಾಗಿರುವ ಎಲ್ಲ ಕಾಯ್ದೆ–ಕಾನೂನುಗಳು ದಲಿತ ಚಳವಳಿಗಳ ಫಲದಿಂದ ಬಂದಿವೆ. ದಲಿತ ರಾಜಕಾರಣಿಗಳು ಚುನಾವಣೆ ಪೂರ್ವದಲ್ಲಿ ಸಮುದಾಯ ಅಭಿವೃದ್ಧಿಗೆ ಕೆಲಸ ಮಾಡುವ ಭರವಸೆ ನೀಡುತ್ತಾರೆ. ಆದರೆ, ಚುನಾವಣೆಯಲ್ಲಿ ಆಯ್ಕೆಯಾದ ನಂತರ ಸರ್ಕಾರ ಮತ್ತು ಪಕ್ಷದ ಪರವಾಗಿ ಕೆಲಸ ಮಾಡುತ್ತಿದ್ದಾರೆ' ಎಂದು ದೂರಿದರು.

ರಾಜ್ಯ ಸರ್ಕಾರದ ನಿವೃತ್ತ ಮುಖ್ಯ ಕಾರ್ಯದರ್ಶಿ ಕೆ. ರತ್ನಪ್ರಭಾ ಮಾತನಾಡಿ, 'ನಾನು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ದೇವದಾಸಿ ಹೆಣ್ಣುಮಕ್ಕಳಿಗೆ ಅಂಗನವಾಡಿ ಕಾರ್ಯಕರ್ತೆಯರು, ಸರ್ಕಾರಿ ಕಚೇರಿಗಳಲ್ಲಿ ಸಹಾಯಕರು ಮತ್ತು ಪೊಲೀಸ್ ಇಲಾಖೆಯಲ್ಲಿನ ಹುದ್ದೆಗಳಲ್ಲಿ ಅವಕಾಶ ನೀಡಲಾಗಿತ್ತು. ಅಂತರ್ಜಾತಿ ವಿವಾಹವಾಗುವ ಜೋಡಿಗಳಿಗೆ ಸರ್ಕಾರದಿಂದ ಸಹಾಯಧನ ನೀಡಲಾಗುತ್ತದೆ. ಅದರಂತೆ ದೇವದಾಸಿಯರು ಮದುವೆಯಾದರೆ ಅವರಿಗೂ ಈ ಸಹಾಯಧನ ನೀಡಬೇಕು' ಎಂದರು.

ಸಿ. ದಾನಪ್ಪ ನಿಲೋಗಲ್, ಲೇಖಕಿ ದು. ಸರಸ್ವತಿ, ವೈ.ಜೆ. ರಾಜೇಂದ್ರ, ಅಲ್ಲಾಗಿರಿರಾಜ್, ಎಂ.ಆರ್. ಭೇರಿ ಭಾಗವಹಿಸಿದ್ದರು.

ನೀಟ್–ಯುಜಿ: ಆಗಸ್ಟ್ 14ರಿಂದ ಕೌನ್ಸೆಲಿಂಗ್

ನವದೆಹಲಿ (ಪಿಟಿಐ): ಪ್ರಸಕ್ತ ಸಾಲಿನ 'ನೀಟ್–ಯುಜಿ' ಕೌನ್ಸೆಲಿಂಗ್ ಆಗಸ್ಟ್ 14ರಿಂದ ಆರಂಭವಾಗಲಿದೆ ಎಂದು ವೈದ್ಯಕೀಯ ಕೌನ್ಸೆಲಿಂಗ್ ಸಮಿತಿ (ಎಂಸಿಸಿ) ಸೋಮವಾರ ತಿಳಿಸಿದೆ.

ಕೌನ್ಸೆಲಿಂಗ್‌ಗೆ ನೋಂದಣಿ ಪ್ರಕ್ರಿಯೆ ಆಗಸ್ಟ್ ಮೊದಲ ವಾರದಿಂದಲೇ ಆರಂಭವಾಗಲಿದೆ ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಕಾರ್ಯದರ್ಶಿ ಡಾ. ಬಿ. ಶ್ರೀನಿವಾಸ ತಿಳಿಸಿದ್ದಾರೆ.

'ದೇಶದ 710 ವೈದ್ಯಕೀಯ ಕಾಲೇಜುಗಳಲ್ಲಿನ 1.10 ಲಕ್ಷ ಎಂಬಿಬಿಎಸ್ ಮತ್ತು ಆಯುಷ್, ನರ್ಸಿಂಗ್ ಅಲ್ಲದೆ 21,000 ಬಿಡಿಎಸ್ ಸೀಟುಗಳಿಗೆ ಕೌನ್ಸೆಲಿಂಗ್ ನಡೆಯಲಿದೆ ಎಂದು' ತಿಳಿಸಿದ್ದಾರೆ.

ಅಖಿಲ ಭಾರತ ಕೋಟಾದಡಿಯ ಶೇ 15ರಷ್ಟು ಸೀಟುಗಳಿಗೆ, ಎಲ್ಲ ಏಮ್ಸ್, ಪಾಂಡಿಚೇರಿಯ ಜೆಐಪಿಎಂಇಆರ್, ಕೇಂದ್ರೀಯ ವಿಶ್ವವಿದ್ಯಾಲಯಗಳು ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳ ಶೇ 100ರಷ್ಟು ಸೀಟುಗಳಿಗೆ ಎಂಸಿಸಿ ಕೌನ್ಸೆಲಿಂಗ್ ನಡೆಸಲಿದೆ. ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು 'ನೀಟ್–ಯುಜಿ'ಯ ಅಂತಿಮ ಫಲಿತಾಂಶವನ್ನು ಪ್ರಕಟಿಸಿದೆ.

ಕೌನ್ಸೆಲಿಂಗ್‌ಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ಎಂಸಿಸಿ ವೆಬ್‌ಸೈಟ್ ಅನ್ನು ಗಮನಿಸುವಂತೆ ತಿಳಿಸಲಾಗಿದೆ.

Wonderla Holidays Limited
WONDERLA PARKS AND RESORTS
Registered Office : 28th K.M., Mysore Road, Bengaluru 562 109; Ph: 080-22010311/322/333
Fax 080-22010324 Website: www.wonderla.com; E-mail: mail.blr@wonderla.com
CIN:L55101KA2002PLC031224

STATEMENT OF UNAUDITED FINANCIAL RESULTS FOR THE QUARTER ENDED 30th JUNE 2024 (₹in lakhs except EPS data)

SL. No.	Particulars	Quarter ended			Year ended
		30th June 2024 (Unaudited)	31st March 2024 Refer Note 3	30th June 2023 (Unaudited)	31st March 2024 (Audited)
1	Total Income from Operations (net)	17,746.89	10,483.14	19,026.76	50,602.52
2	Net Profit for the period (before Tax, Exceptional and/or Extraordinary items)	8,347.96	3,028.96	11,221.66	21,132.20
3	Net Profit for the period before tax (after Exceptional and/or Extraordinary items)	8,347.96	3,028.96	11,221.66	21,132.20
4	Net Profit for the period after tax (after Exceptional and/or Extraordinary items)	6,324.18	2,260.88	8,447.36	15,796.13
5	Total Comprehensive Income for the period [Comprising Profit for the period (after tax) and Other Comprehensive Income / (Loss) (after tax)]	6,281.02	2,265.18	8,376.11	15,750.27
6	Equity Share Capital (Paid Up)	5,657.34	5,657.34	5,657.34	5,657.34
7	Earnings per share (face value of Rs.10/- each) (not annualised for the quarters)				
	Basic:	11.18	4.00	14.93	27.93
	Diluted:	11.14	3.98	14.93	27.84

Notes:
1. The above financial results for the quarter ended 30 June, 2024 have been reviewed by the Audit Committee and approved by the Board of Directors at their meeting held on 29 July 2024. The results for the quarter ended 30 June 2024 have been reviewed by the statutory auditors of the Company and the statutory auditors have issued an unmodified conclusion in respect of the same.
2. The Statement has been prepared in accordance with Indian Accounting Standards ('Ind AS') prescribed under section 133 of the Companies Act, 2013 read with the relevant rules thereunder and in terms of SEBI (Listing Obligations and Disclosure Requirements) Regulations, 2015, as amended.
3. The figures for the quarter ended 31 March 2024 as reported in these financial results are the balancing figures between the audited figures in respect of the full previous financial year and the published year to date figures up to the end of the third quarter of the previous financial year.
4. The fourth amusement park at Bhubaneswar has started commercial operations w.e.f 24 May, 2024. Accordingly, the figures for the previous periods are not comparable.

Place: Bengaluru
Date: 29.07.2024

For Wonderla Holidays Limited
Sd/-
Managing Director

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ಎಲೆಕ್ಟ್ರೋ–ಆಪ್ಟಿಕ್ಸ್ ಸಿಸ್ಟಮ್‌ಗಳಿಗಾಗಿ ಪ್ರಯೋಗಾಲಯ (ಎಲ್‌ಇಓಎಸ್)
ಪೀಣ್ಯ, ಬೆಂಗಳೂರು–560058, ಎಲ್‌ಇಓಎಸ್ ನಿರ್ಮಾಣ ಮತ್ತು ನಿರ್ವಹಣಾ ಸಮೂಹ (ಎಲ್‌ಸಿಎಂಜಿ)
(ದೂರವಾಣಿ: (080)–22685088, 5193, 5093, 5086, ಫ್ಯಾಕ್ಸ್: (080)–28392310]

ಸಂಕ್ಷಿಪ್ತ ಇ–ಟೆಂಡರ್ (ಎನ್‌ಐಇಟಿ) ಆಹ್ವಾನಿಸುವ ಪ್ರಕಟಣೆ

ಭಾರತದ ರಾಷ್ಟ್ರಪತಿಗಳ ಪರವಾಗಿ, ಈ ಕೆಳಗಿನ ಕೆಲಸಕ್ಕಾಗಿ ಐಟಂ ದರದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಓಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರಲ್ಲಿ ಅಸ್ತಿತ್ವದಲ್ಲಿರುವ ನಿವೃತ್ತಿ ಕೊಠಡಿಗಳ ಎರಡನೇ ಮಹಡಿಯಲ್ಲಿ ಪ್ರಸ್ತಾವಿತ ಲಂಬವಿಸ್ತರಣೆ (ನಾಗರೀಕ ಮತ್ತು ಪಿಎಚ್ ಕೆಲಸಗಳು). ಎನ್‌ಐಇಟಿ: LEOS/CMG/CW-02/2024-25. ದಿನಾಂಕ : 23.07.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ** : ರೂ. 159.00 ಲಕ್ಷಗಳು, ಇಎಂಡಿ ರೂ.3,17,969/– **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 08 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ** : 25.07.2024, **ಮುಕ್ತಾಯವಾಗುವ ದಿನಾಂಕ** : 12.08.2024

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಓಎಸ್ ಮತ್ತು ಕ್ಯಾಂಪಸ್ ಆರ್ಯಭಟ ಕ್ಯಾಂಪಸ್, ಪೀಣ್ಯ, ಬೆಂಗಳೂರು–58ನಲ್ಲಿ ಸ್ಟೋರೇಜ್ ಯಾರ್ಡ್ ನಿರ್ಮಾಣ, ಪಿಇಬಿ ಪ್ರದೇಶದಲ್ಲಿ ಮಾರ್ಗ ಮತ್ತು ಸಂಗ್ರಹ ಬಾವಿ ಬಳಿ ಮಳೆನೀರು ಚರಂಡಿ, ಎನ್‌ಐಇಟಿ: CMG/LEOS/2024-25/LMN-04. ದಿನಾಂಕ : 25.07.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ** : ರೂ. 14.94 ಲಕ್ಷಗಳು, ಇಎಂಡಿ ರೂ.29,874/– **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 05 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ** : 29.07.2024, **ಮುಕ್ತಾಯವಾಗುವ ದಿನಾಂಕ** : 14.08.2024

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಓಎಸ್, ಆರ್ಯಭಟ, ಅತಿಥಿ ಗೃಹ ಮತ್ತು ಐಎಸ್‌ಆರ್‌ಎಡಿ ಕ್ಯಾಂಪಸ್, ಪೀಣ್ಯ, ಬೆಂಗಳೂರು–58ರಲ್ಲಿ ಕಟ್ಟಡದ ಅವಶೇಷಗಳನ್ನು/ಸಸ್ಯಗಳಿಂದ ಒಣಗಿರುವ/ಹೆಚ್ಚುವರಿ ಉತ್ಖನನ ಮಾಡಿದ ಭೂಮಿ ಇತ್ಯಾದಿಗಳನ್ನು ತೆಗೆದುಹಾಕಲು ಒಪ್ಪಂದ. ಎನ್‌ಐಇಟಿ: CMG/LEOS/2024-25/LMN-05, ದಿನಾಂಕ : 25.07.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ** : ರೂ. 9.39 ಲಕ್ಷಗಳು, ಇಎಂಡಿ ರೂ.18,777/–, **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 12 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ** : 29.07.2024, **ಮುಕ್ತಾಯವಾಗುವ ದಿನಾಂಕ** : 14.08.2024

ಕೆಲಸದ ಹೆಸರು; ಎನ್‌ಐಟಿ ನಂ. & ದಿನಾಂಕ : ಎಲ್‌ಇಓಎಸ್ ಕ್ಯಾಂಪಸ್, ಪೀಣ್ಯ, ಬೆಂಗಳೂರು–58 ರಲ್ಲಿ ಅಲ್ಯೂಮಿನಿಯಂ ವಿಭಜನೆಯನ್ನು ಒದಗಿಸುವ ಒಪ್ಪಂದ. ಎನ್‌ಐಇಟಿ: CMG/LEOS/2024-25/LMN-06 ದಿನಾಂಕ : 25.07.2024, **ಟೆಂಡರ್ ಮತ್ತು ಇಎಂಡಿಗೆ ಇಡಲಾದ ಅಂದಾಜು ವೆಚ್ಚ** : ರೂ. 10.72 ಲಕ್ಷಗಳು ಇಎಂಡಿ ರೂ.21,433/–, **ತಿಂಗಳುಗಳಲ್ಲಿ ಪೂರ್ಣಗೊಳಿಸುವ ಅವದಿ:** 12 ತಿಂಗಳು, ಟೆಂಡರ್ ಡಾಕ್ಯುಮೆಂಟ್ ಅನ್ನು ಡೌನ್‌ಲೋಡ್ ಮಾಡಬಹುದಾದ ಅವಧಿ : **ತೆರೆಯುವ ದಿನಾಂಕ** : 29.07.2024, **ಮುಕ್ತಾಯವಾಗುವ ದಿನಾಂಕ** : 14.08.2024

ಆಸಕ್ತ ಟೆಂಡರುದಾರರು ಇ–ಟೆಂಡರ್ (ಎನ್‌ಐಇಟಿ) ಆಹ್ವಾನದ ಪ್ರಕಟಣೆಯ ಅರ್ಹತಾ ಮಾನದಂಡ ಮತ್ತು ಇತರೆ ವಿವರವನ್ನು **www.isro.gov.in** ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದು ಮತ್ತು ಟೆಂಡರ್ ದಾಖಲೆಗಳನ್ನು **www.tenderwizard.com/ISRO** ನಿಂದ ಡೌನ್‌ಲೋಡ್ ಮಾಡಬಹುದು.

ಸಹಿ/– ಸಮೂಹ ನಿರ್ದೇಶಕ
(ನಿರ್ಮಾಣ ಮತ್ತು ನಿರ್ವಹಣಾ ಸಮೂಹ) (ಸಿ&ಎಂಜಿ) ಯುಆರ್‌ಎಸ್‌ಸಿ, ಬೆಂಗಳೂರು.

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ
ಬೆಂಗಳೂರು ನಗರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ(ರಿ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ನಗರ ಯೋಜನಾ ನಿರ್ವಹಣಾಧಿಕಾರಿಗಳ ಕಛೇರಿ, ಅನೆಕ್ಸ್ ಕಟ್ಟಡ–3, 3ನೇ ಮಹಡಿ,
ಬಿಬಿಎಂಪಿ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–02

ಸಂಖ್ಯೆ: ಸಿ.ಪಿ.ಎಂ.ಓ/ಎನ್.ಯು.ಹೆಚ್.ಎಂ/ಪಿ.ಆರ್/ಪಿ–52/2024–25 ದಿನಾಂಕ: 29.07.2024

ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ರೆಫರಲ್ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯಾಧಿಕಾರಿಗಳ ಹುದ್ದೆಗಳಿಗೆ 01 ವರ್ಷದ ಅವಧಿಗೆ ಸಂಪೂರ್ಣವಾಗಿ ಗುತ್ತಿಗೆ ಆಧಾರದ ಮೇಲೆ ಈ ಪ್ರಕಟಣೆ ಹೊರಡಿಸಿದ ದಿನಾಂಕಕ್ಕೆ ಖಾಲಿ ಇರುವಂತಹ ಸಂಖ್ಯೆಗಳಿಗೆ ಹಾಗೂ ಮುಂದಿನ ದಿನಗಳಲ್ಲಿ ಖಾಲಿಯಾಗುವ ಹುದ್ದೆಗಳು ಭರ್ತಿಯಾಗುವವರೆಗೂ ನೇಮಕಾತಿ ಮಾಡಿಕೊಳ್ಳಲು ಆಸಕ್ತಿವುಳ್ಳ ಅಭ್ಯರ್ಥಿಗಳಿಂದ ಈ ಕೆಳಕಂಡ ಹುದ್ದೆಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆಯ ಹೆಸರು	ಗರಿಷ್ಠ ವಯೋಮಿತಿ (ಎನ್.ಹೆಚ್.ಎಂ. ಮಾರ್ಗಸೂಚಿ)	ಪ್ರಸ್ತುತ ಖಾಲಿ ಇರುವ ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ	ಸಂಚಿತ ವೇತನ ಪ್ರತಿ ಮಾಹೆಯಾನ
1	ವೈದ್ಯಾಧಿಕಾರಿಗಳು	65	23	ಎಂಬಿಬಿಎಸ್ ಪದವಿಯೊಂದಿಗೆ ಕೆ.ಎಂ.ಸಿ. ರಿಜಿಸ್ಟ್ರೇಷನ್	47,250/–

ಆಸಕ್ತ ಅಭ್ಯರ್ಥಿಗಳು ಸಂಬಂಧಿಸಿದ ವಿದ್ಯಾರ್ಹತೆಯ ಮೂಲ ದಾಖಲೆಗಳು ಮತ್ತು ಒಂದು ಜೆರಾಕ್ಸ್ ಪ್ರತಿ, ಭಾವಚಿತ್ರದೊಂದಿಗೆ ನಗರ ಯೋಜನಾ ನಿರ್ವಹಣಾಧಿಕಾರಿರವರ ಕಛೇರಿ, #304, ಅನೆಕ್ಸ್–3 ಕಟ್ಟಡ, 3ನೇ ಮಹಡಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕೇಂದ್ರ ಕಛೇರಿ, ಎನ್.ಆರ್. ಚೌಕ, ಬೆಂಗಳೂರು–560 002 ವಿಳಾಸಕ್ಕೆ ಖುದ್ದಾಗಿ ಅರ್ಜಿ ಸಲ್ಲಿಸುವುದು.

ಸೂಚನೆ: ಮೊದಲು ಬಂದವರಿಗೆ ಮೊದಲ ಆದ್ಯತೆ.

ಸಹಿ/–
ಮುಖ್ಯ ಆರೋಗ್ಯಾಧಿಕಾರಿ (ಸಾ.ಆ.)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಭಾರತ್ ಎಲೆಕ್ಟ್ರಾನಿಕ್ಸ್ / भारत इलेक्ट्रॉनिक्स / BHARAT ELECTRONICS
QUALITY, TECHNOLOGY, INNOVATION
ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದಡಿಯ ಭಾರತ ಸರ್ಕಾರದ ಒಂದು ಉದ್ಯಮ)
(CIN: L32309KA1954GOI000787)
ನೋಂದಾಯಿತ ಮತ್ತು ಪ್ರಧಾನ ಕಛೇರಿ: ಹೊರವರ್ತುಲ ರಸ್ತೆ, ನಾಗವಾರ, ಬೆಂಗಳೂರು – 560 045. ಇ-ಮೇಲ್: secretary@bel.co.in
ವೆಬ್‌ಸೈಟ್: www.bel-india.in ಫೋನ್: 080-25039300, ಫ್ಯಾಕ್ಸ್: 080-25039266

30ನೇ ಜೂನ್ 2024ಕ್ಕೆ ಅಂತ್ಯಗೊಂಡ ತ್ರೈಮಾಸಿಕ ಸ್ಟ್ಯಾಂಡ್‌ಅಲೋನ್ ಹಾಗೂ ಕ್ರೋಢೀಕರಿಸಿದ ಲೆಕ್ಕ ಪರಿಶೋಧಿತವಲ್ಲದ ಹಣಕಾಸು ಫಲಿತಾಂಶಗಳ ಸಾರಾಂಶ
(₹ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ವಿವರಗಳು	ಸ್ಟ್ಯಾಂಡ್‌ಅಲೋನ್				ಕ್ರೋಢೀಕೃತ			
		ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ	ತ್ರೈಮಾಸಿಕ ಅಂತ್ಯಗೊಂಡ			ವರ್ಷಾಂತ್ಯಕ್ಕೆ
		30.06.2024 (ಲೆಕ್ಕ ಪರಿಶೋಧಿತ ವಲ್ಲದ)	31.03.2024 (ಲೆಕ್ಕ ಪರಿಶೋಧಿತ)	30.06.2023 (ಲೆಕ್ಕ ಪರಿಶೋಧಿತ ವಲ್ಲದ)	31.03.2024 (ಲೆಕ್ಕ ಪರಿಶೋಧಿತ)	30.06.2024 (ಲೆಕ್ಕ ಪರಿಶೋಧಿತ ವಲ್ಲದ)	31.03.2024 (ಲೆಕ್ಕ ಪರಿಶೋಧಿತ)	30.06.2023 (ಲೆಕ್ಕ ಪರಿಶೋಧಿತ ವಲ್ಲದ)	31.03.2024 (ಲೆಕ್ಕ ಪರಿಶೋಧಿತ)
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	4,19,877	8,52,854	3,51,084	20,16,939	4,24,357	8,56,408	3,53,294	20,26,824
2.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ಮುಂಚಿನ ಅವಧಿಯ ನಿವ್ವಳ ಲಾಭ	1,03,734	2,38,561	70,375	5,33,456	1,04,292	2,39,007	70,273	5,26,621
3.	ತೆರಿಗೆ ಮುಂಚಿನ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	1,03,734	2,38,561	70,375	5,33,456	1,04,292	2,39,007	70,273	5,26,621
4.	ತೆರಿಗೆ ಮತ್ತು ಅಸಾಧಾರಣ ವಸ್ತುಗಳ ನಂತರದ ಅವಧಿಯ ನಿವ್ವಳ ಲಾಭ	77,614	1,78,352	53,084	4,02,000	79,128	1,79,667	53,860	3,98,524
5.	ಒಟ್ಟು ಸಮಗ್ರ ಅವಧಿಯ ಆದಾಯ [ಅವಧಿಯ ಲಾಭ ಸಹಿತ (ತೆರಿಗೆ ನಂತರ) ಮತ್ತು ಇತರ ಸಮಗ್ರ ಆದಾಯ (ತೆರಿಗೆ ನಂತರ)]	82,839	1,69,698	59,047	3,96,236	84,354	1,71,005	59,823	3,92,752
6.	ಪಾವತಿಸಿದ ಇಕ್ವಿಟಿ ಷೇರು ಬಂಡವಾಳ	73,098	73,098	73,098	73,098	73,098	73,098	73,098	73,098
7.	ಮರುಮೌಲ್ಯಗೊಳಿಸಿದ ಮೀಸಲು ನಿಧಿಯ ಹೊರತಾದ ಇತರೆ ಇಕ್ವಿಟಿಗಳು	–	–	–	15,35,141	–	–	–	15,59,549
8.	ಪ್ರತಿ ಷೇರಿನ ಗಳಿಕೆ (₹1/- ರಂತೆ ವಾರ್ಷಿಕರಣಗೊಳ್ಳದ್ದು) (ಮುಂದುವರಿಸಿದ ಮತ್ತು ಸ್ಥಗಿತ ಕಾರ್ಯಾಚರಣೆಗಳಿಗೆ) ಮೂಲ ಮತ್ತು ಪರಿವರ್ತಿತ(₹ನಲ್ಲಿ)	1.06	2.44	0.73	5.50	1.08	2.46	0.74	5.45

ಟಿಪ್ಪಣಿಗಳು:
1. ಈ ಮೇಲಿನವುಗಳು ಸೆಬಿಯ ನಿಯಂತ್ರಣ ಅಧಿನಿಯಮ 33 (ಪಟ್ಟಿ ನಿರ್ಬಂಧ ಮತ್ತು ಪ್ರಕಟಗೊಳಿಸಿದ ಅಗತ್ಯಗಳು), 2015 ರ ಅಡಿಯಲ್ಲಿ, ತಿದ್ದುಪಡಿಯಾದಂತೆ, ಷೇರು ವಿನಿಮಯ ಕೇಂದ್ರದಲ್ಲಿ ಸಲ್ಲಿಸಲ್ಪಟ್ಟ ತ್ರೈಮಾಸಿಕ / ವಾರ್ಷಿಕ ಹಣಕಾಸಿನ ವಿಸ್ತೃತ ರೂಪವಾಗಿದೆ. ತ್ರೈಮಾಸಿಕ / ವಾರ್ಷಿಕ ಹಣಕಾಸು ಫಲಿತಾಂಶಗಳ ಪೂರ್ಣ ರೂಪವು ಷೇರು ವಿನಿಮಯ ಕೇಂದ್ರದ ವೆಬ್‌ಸೈಟ್‌ನಲ್ಲಿ ಲಭ್ಯವಿದೆ (www.bseindia.com ಮತ್ತು www.nseindia.com) ಮತ್ತು ಕಂಪೆನಿಯ ವೆಬ್‌ಸೈಟ್ (www.bel-india.in) ನಲ್ಲಿಯೂ ಲಭ್ಯವಿದೆ.
2. ಹಣಕಾಸು ಫಲಿತಾಂಶಗಳ ಈ ಮೇಲಿನ ವಿವರಣೆಯನ್ನು ಲೆಕ್ಕ ಪರಿಶೋಧನಾ ಸಮಿತಿಯು ಪರಿಶೀಲಿಸಿದೆ ಮತ್ತು ದಿನಾಂಕ 29 ಜುಲೈ, 2024 ರಂದು ನಡೆದ ಸಭೆಯಲ್ಲಿ ನಿರ್ದೇಶಕರ ಮಂಡಳಿಯಿಂದ ಅನುಮೋದಿಸಲಾಗಿದೆ.

ನಿರ್ದೇಶಕರ ಮಂಡಳಿಯ ಪರವಾಗಿ
ಸಹಿ/-
ಮನೋಜ್ ಜೈನ್
ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರು

ಸ್ಥಳ: ಬೆಂಗಳೂರು
ದಿನಾಂಕ: 29 ಜುಲೈ, 2024

ಕನಕಪುರ ಯೋಜನಾ ಪ್ರಾಧಿಕಾರ
ಖಾತಾ ನಂ. 469/ಸಿ.ಎ./ ಸಹಕಾರಿ ವಸತಿ ಬಡಾವಣೆ, ಅಗ್ರಹಾರ ನ್ಯೂ ಕಾಲೋನಿ, ತುಂಗಣಿ ಅಂಚೆ,
ಕನಕಪುರ ತಾ॥, ರಾಮನಗರ ಜಿಲ್ಲೆ. ದೂ. : 080–2976 2005, 2976 2006, ಇ–ಮೇಲ್ : kkpaplan@gmail.com

ಸಂಖ್ಯೆ : ಕ.ಯೋ.ಪ್ರಾ./69(2)ಭೂಉ/16/2023–24/780 ದಿನಾಂಕ : 20–07–2024

ಸಾರ್ವಜನಿಕ ಪ್ರಕಟಣೆ

ಕನಕಪುರ ಯೋಜನಾ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆಗೆ ಸರ್ಕಾರದ ಆದೇಶ ದಿನಾಂಕ : 07–08–2015 ರಂದು ಅನುಮೋದನೆ ನೀಡಲಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿರುತ್ತದೆ. ಈ ಕೆಳಕಂಡ ಅರ್ಜಿದಾರರು ಮಹಾಯೋಜನೆಯಲ್ಲಿ ನಿಗಧಿಪಡಿಸಿರುವ ಭೂ ಉಪಯೋಗಗಳನ್ನು ಮರುನಿಗಧಿಪಡಿಸಲು ಕೆಟಿಸಿಪಿ ಕಾಯ್ದೆ 1961ರ ಕಲಂ 69 ರಡಿಯಲ್ಲಿ ಕೋರಿರುತ್ತಾರೆ. ಪರಿಶೀಲಿಸಲಾಗಿ, ಸದರಿ ಸರ್ವೆ ನಂಬರ್‌ಗಳನ್ನು ಕೋಷ್ಟಕದಲ್ಲಿ ವಿವರಿಸಿರುವಂತೆ ಭೂ ಉಪಯೋಗಗಳನ್ನು ಮಹಾಯೋಜನೆಯಲ್ಲಿ ನಿಗಧಿಪಡಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರಂತೆ ಭೂ ಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (3) ರನ್ವಯ ಭೂ ಉಪಯೋಗ ಮರುನಿಗಧಿಪಡಿಸಲು ಅರ್ಜಿದಾರರು ಕೋರಿರುವಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಮರುನಿಗಧಿಪಡಿಸಲು ಯಾರಿಂದಲಾದರೂ ಆಕ್ಷೇಪಣೆ/ಸಲಹೆಗಳಿದ್ದರೆ, **ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.**

–: ಕೋಷ್ಟಕ :–

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಬಿ. ಮುನಿರಾಮಸ್ವಾಮಿ & ಶ್ರೀಮತಿ. ಮಂಜುಳಾ ಮುನಿರಾಮಸ್ವಾಮಿ	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಕಗ್ಗಲೀಪುರ	420	1–30	ಸಾರ್ವಜನಿಕ ಮತ್ತು ಅರೆಸಾರ್ವಜನಿಕ	ವಸತಿ
					ಒಟ್ಟು	1–30		

ಸಹಿ/– ಜಂಟಿ ನಿರ್ದೇಶಕರು,
ನಗರ ಮತ್ತು ಗ್ರಾಮಾಂತರ ಯೋಜನೆ ಹಾಗೂ ಸದಸ್ಯ–ಕಾರ್ಯದರ್ಶಿ,
ಕನಕಪುರ ಯೋಜನಾ ಪ್ರಾಧಿಕಾರ, ಕನಕಪುರ.

ಡಿಐಪಿಆರ್/ರಾಮನಗರ/194/ಮಣಿಪಾಲ್/2024–25

ಕ್ಷೇಮ ಕುಶಲ

ಆಹಾರದಲ್ಲಿರಲಿ ಪ್ರೊಟೀನ್

ಚೈತ್ರ ಕೆ. ಆಚಾರ್ಯ

ನಮ್ಮ ದೇಹದ ಆರೋಗ್ಯಕರ ಕಾರ್ಯನಿರ್ವಹಣೆಗೆ ಅಗತ್ಯವಾದ ಪೋಷಕಾಂಶಗಳಲ್ಲಿ ಪ್ರೊಟೀನ್ ಕೂಡ ಒಂದು. ನಾವು ಸೇವಿಸುವ ಆಹಾರದ ಒಟ್ಟು ಕ್ಯಾಲೋರಿಯಲ್ಲಿ ಕನಿಷ್ಠ ಶೇ 15ರಷ್ಟು ಮತ್ತು ಗರಿಷ್ಠ ಶೇ 35ರಷ್ಟು ಪ್ರೊಟೀನ್ ಇರಬೇಕು. ಪ್ರೊಟೀನ್‌ನ ಪ್ರತಿ ಗ್ರಾಂನಿಂದ ನಾಲ್ಕು ಕ್ಯಾಲೋರಿಗಳು ಒದಗಿಸುತ್ತವೆ. ಅಮೈನೋ ಆಮ್ಲಗಳ ಮೂಲವೇ ಪ್ರೊಟೀನ್.

ಹುಟ್ಟಿದ ಮಗುವಿನಿಂದ ಹಿಡಿದು ವಯಸ್ಸಾದ ವೃದ್ಧರವರೆಗೂ, ದೇಹದ ಪ್ರತಿಯೊಂದು ಭಾಗಕ್ಕೂ ಪ್ರೊಟೀನ್‌ನ ಅವಶ್ಯಕತೆಯಿದೆ. ದೇಹದ ಮಾಂಸಖಂಡಗಳ ಬೆಳವಣಿಗೆ, ಮೂಳೆಗಳ ಸದೃಢತೆ, ಹಾರ್ಮೋನ್‌ಗಳ ಸಮತೋಲನ ಹಾಗೂ ರೋಗನಿರೋಧಕ ಶಕ್ತಿ ಹೆಚ್ಚಿಸುವಲ್ಲಿ ಪ್ರೊಟೀನ್‌ನ ಪಾತ್ರ ಮಹತ್ವದ್ದು. ದೇಹದಲ್ಲಿನ ಅಂಗಾಂಶ (ಆರೋಗ್ಯಕರ ಚರ್ಮ, ಕೂದಲು, ಉಗುರು) ಇತ್ಯಾದಿಗಳ ರಚನೆ, ಬೆಳವಣಿಗೆ, ಅವುಗಳ ದುರಸ್ತಿಗೆ ಮತ್ತು ಕಿಣ್ವ, ರಾಸಾಯನಿಕಗಳ ಉತ್ಪಾದನೆಗೂ ಪ್ರೊಟೀನ್‌ನ ಅಗತ್ಯವಿದೆ. ಹಸಿವನ್ನು ಕಡಿಮೆ ಮಾಡಿ, ಅತಿಯಾಗಿ ತಿನ್ನುವ ಸಾಧ್ಯತೆಯನ್ನು ಕಡಿಮೆ ಮಾಡುವುದರಿಂದ ಇದು ದೇಹದ ತೂಕವನ್ನು ಕಡಿಮೆ ಮಾಡುವಲ್ಲಿಯೂ ಪ್ರಯೋಜನಕಾರಿ. ಚಯಾಪಚಯ ಕ್ರಿಯೆಯ ಸಮರ್ಥ ನಿರ್ವಹಣೆಗೆ ಹಾಗೂ ಕೊಬ್ಬಿನ ಶೇಖರಣೆಯನ್ನು ಕಡಿಮೆ ಮಾಡಲೂ ಸಹಕಾರಿಯಾಗಿದೆ. ಅಧಿಕ ರಕ್ತದೊತ್ತಡ ಮತ್ತು ಮಧುಮೇಹಗಳನ್ನು ನಿಯಂತ್ರಿಸುವಲ್ಲಿಯೂ ಪ್ರೊಟೀನ್‌ನ ಪಾತ್ರವಿದೆ.

ದಿನಕ್ಕೆ ಎಷ್ಟು ಬೇಕು?

ದೇಹದ ತೂಕ, ವಯಸ್ಸು, ಲಿಂಗ ಮತ್ತು ಚಟುವಟಿಕೆಯ ಮಟ್ಟವನ್ನು ಅವಲಂಬಿಸಿ ಪ್ರೊಟೀನ್‌ನ ಪ್ರಮಾಣ ನಿರ್ಧಾರವಾಗುತ್ತದೆ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಕ್ರೀಡಾಪಟುಗಳು, ಬಾಡಿ ಬಿಲ್ಡರ್ಸ್, ಏಡ್ಸ್-ಕ್ಯಾನ್ಸರ್ ರೋಗಿಗಳಿಗೆ, ಗರ್ಭಿಣಿಯರಿಗೆ, ಹಾಲುಣಿಸುವವರಿಗೆ, ಗಾಯ-ಶಸ್ತ್ರಚಿಕಿತ್ಸೆಯಿಂದ ಚೇತರಿಸಿಕೊಳ್ಳುವವರಿಗೆ ಹೆಚ್ಚಿನ ಪ್ರೊಟೀನ್‌ನ ಅಗತ್ಯವಿದೆ.

ಆಹಾರಗಳು ಯಾವುವು?

ದೇಹದ ಈ ಎಲ್ಲ ಅಗತ್ಯಗಳನ್ನೂ ಪೂರೈಸಲು ನಾವು ಪ್ರಾಣಿ ಹಾಗೂ ಸಸ್ಯಮೂಲಗಳಿಂದ ಪ್ರೊಟೀನನ್ನು ಪಡೆಯಬಹುದು. ಮಾಂಸ, ಸಮುದ್ರಾಹಾರ, ಮೊಟ್ಟೆ, ಹಾಲು ಹಾಗೂ ಅದರ ಉಪಉತ್ಪನ್ನಗಳಾದ ಚೀಸ್, ಯೋಗರ್ಟ್, ಪನೀರ್ – ಇವು ಸಂಪೂರ್ಣ ಪ್ರೊಟೀನ್‌ಗಳು. ಇವುಗಳಲ್ಲಿ ದೇಹಕ್ಕೆ ಬೇಕಾದ ಎಲ್ಲ ಅಮೈನೋ ಆಮ್ಲಗಳೂ ಇರುತ್ತವೆ. ದ್ವಿದಳ ಧಾನ್ಯಗಳು (ಒಣ ಬೀನ್ಸ್, ಬಟಾಣಿ, ಅವರೆಕಾಳು, ಕಡಲೆ), ಧಾನ್ಯಗಳು (ನವಣೆ, ಓಟ್ಸ್), ಬೇಳೆಕಾಳುಗಳು, (ಹೆಸರುಕಾಳು, ಹುರುಳಿಕಾಳು), ಮೊಳಕೆಕಾಳುಗಳು, ಒಣಹಣ್ಣುಗಳು (ಬಾದಾಮಿ, ವಾಲ್ನಟ್ಸ್, ಗೋಡಂಬಿ, ಕಡಲೆಕಾಯಿ), ಬೀಜಗಳು, (ಅಗಸೆಬೀಜ, ಸೂರ್ಯಕಾಂತಿ ಬೀಜ, ಚಿಯಾಬೀಜ, ಕುಂಬಳಕಾಯಿಬೀಜ), ಸೊಪ್ಪುಗಳು, ತರಕಾರಿ, ಹಣ್ಣುಗಳಲ್ಲಿ ಪ್ರೊಟೀನ್‌ಗಳು ಇರುತ್ತವೆ. ಸಸ್ಯಾಹಾರಿಗಳಲ್ಲಿ ಪ್ರೊಟೀನ್‌ನ ಅವಶ್ಯಕತೆಯನ್ನು ಪೂರೈಸುವುದು ಅಸಾಧ್ಯವೇನಲ್ಲ. ದಿನನಿತ್ಯದ ಆಹಾರಪದ್ಧತಿಯ ಸಂಯೋಜನೆಯಿಂದ ದೇಹಕ್ಕೆ ದೈನಂದಿನ ಪ್ರೊಟೀನ್‌ನ ಅಗತ್ಯವನ್ನು ಪೂರೈಸಬಹುದು.

ಕಾರ್ಬೋಹೈಡ್ರೇಟ್‌ಗಳಿಗಿಂತ ಸಸ್ಯ ಆಧಾರಿತ ಪ್ರೊಟೀನ್‌ಗಳು ತೂಕವನ್ನು ಕಳೆದುಕೊಳ್ಳಲು ಸಹಾಯ ಮಾಡುತ್ತವೆ. ಇವು ಫೈಬರ್, ಉತ್ಕರ್ಷಣ ನಿರೋಧಕಗಳು, ಫೈಟೋಕೆಮಿಕಲ್, ವಿಟಮಿನ್‌ಗಳು, ಖನಿಜ-ಲವಣಗಳನ್ನು ಒದಗಿಸುತ್ತವೆ. ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ಮತ್ತು ದೀರ್ಘಕಾಲದ ಕಾಯಿಲೆಗಳನ್ನು ತಡೆಗಟ್ಟುವಲ್ಲಿ ಇವು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಪ್ರಾಣಿಮೂಲ ಪ್ರೊಟೀನ್‌ಗಳು ಅಗತ್ಯವಾದ ಕೊಬ್ಬಿನಾಮ್ಲಗಳು, ಕಬ್ಬಿಣ, ವಿಟಮಿನ್ ಬಿ12ನಂತಹ ಸೂಕ್ಷ್ಮ ಪೋಷಕಾಂಶಗಳನ್ನು ಹೊಂದಿರುತ್ತವೆ. ಪ್ರೊಟೀನ್‌ನ ಪ್ರಮಾಣದ ಜೊತೆಗೆ ಗುಣಮಟ್ಟವೂ ಮುಖ್ಯ. ದಿನನಿತ್ಯದ ಪಥ್ಯದಿಂದಲೇ ನೈಸರ್ಗಿಕವಾಗಿ ಪ್ರೊಟೀನನ್ನು ಪಡೆದುಕೊಳ್ಳುವುದು ಒಳ್ಳೆಯದು.

ಕಡಿಮೆಯಾದಲ್ಲಿ...

ನಿರಂತರ ಆಯಾಸ, ಅತಿಯಾದ ತೂಕ ಇಳಿಕೆ, ಚರ್ಮದ ಹಾನಿ, ‘ಎಡೆಮಾ’, ದುರ್ಬಲ ಸ್ನಾಯುಗಳು, ಕೂದಲು ಉದುರುವಿಕೆ, ಚಯಾಪಚಯ ಕ್ರಿಯೆ ಮಂದಗೊಳ್ಳುವಿಕೆ, ಮಂದಗತಿಯಲ್ಲಿ ಗಾಯ ಗುಣವಾಗುವುದು, ರೋಗನಿರೋಧಕ ಶಕ್ತಿ ಕುಗ್ಗುವುದು – ಇವೆಲ್ಲವೂ ಪ್ರೊಟೀನ್ ಕೊರತೆಯ ಲಕ್ಷಣಗಳು. ಮಕ್ಕಳಲ್ಲಿ ‘ಕ್ವಾಶಿಯೋರ್ಕರ್’, ‘ಮಾರಸ್ಮಸ್’ನಂತಹ ತೊಂದರೆಗಳೂ ಕಾಣಿಸಿಕೊಳ್ಳಬಹುದು. ಅವಶ್ಯಕತೆಯನ್ನು ಮೀರಿದ ಪ್ರೊಟೀನ್‌ನ ಸೇವನೆಯಿಂದ ಮಲಬದ್ಧತೆ, ನಿರ್ಜಲೀಕರಣ, ಬಾಯಿಯ ಕೆಟ್ಟ ವಾಸನೆ, ಜೀರ್ಣಕ್ರಿಯೆ, ಸಮಸ್ಯೆ, ಮೂಳೆಯ ಕ್ಯಾಲ್ಸಿಯಂ ನಷ್ಟ, ತೂಕ ಹೆಚ್ಚಳ, ಮೂತ್ರಪಿಂಡ ಕಾಯಿಲೆ ಇನ್ನಿತರ ಸಮಸ್ಯೆಗಳು ಕಾಣಿಸಿಕೊಳ್ಳಬಹುದು.

ಕಿಡ್ನಿ, ಲಿವರ್, ಫಿನೈಲ್ಕೆಟೋನೂರಿಯಾ ಮುಂತಾದ ಕಾಯಿಲೆಗಳಿಗೆ ತುತ್ತಾಗಿರುವವರಲ್ಲಿ ಪ್ರೊಟೀನನ್ನು ನಿರ್ಬಂಧಿಸಬೇಕಾಗುತ್ತದೆ. ಪ್ರೊಟೀನ್‌ಯುಕ್ತ ಆಹಾರಗಳಲ್ಲಿ ಕೊಬ್ಬಿನಾಂಶ ಅಧಿಕವಾಗಿದ್ದರೆ ಹೃದಯಸಂಬಂಧಿತ ಸಮಸ್ಯೆಯೂ ತಪ್ಪಿದಲ್ಲ. ಪ್ರೊಟೀನ್‌ಯುಕ್ತ ಆಹಾರಗಳನ್ನು ಸೇವಿಸುವಾಗ ಸಂಸ್ಕರಿಸಿದ ಕಾರ್ಬೋಹೈಡ್ರೇಟ್, ಸ್ಯಾಚುರೇಟೆಡ್ ಕೊಬ್ಬುಗಳ ಬಳಕೆಯನ್ನು ಮಿತಗೊಳಿಸಬೇಕು. ಪ್ರೊಟೀನ್‌ಗಳ ಸೇವನೆಯನ್ನು ಕಾರ್ಬೋಹೈಡ್ರೇಟ್, ವಿಟಮಿನ್‌ಗಳು, ಖನಿಜಗಳು, ಮತ್ತು ಫೈಬರ್‌ನಂತಹ ಅಗತ್ಯ ಪೋಷಕಾಂಶಗಳೊಂದಿಗೆ ಸಮತೋಲನಗೊಳಿಸಲು ವಿಫಲವಾದರೆ ಹಲವಾರು ತೊಡಕುಗಳು ಎದುರಾಗಬಹುದು. ಸಮತೋಲನ ಆಹಾರವನ್ನು ಸೇವಿಸಿದರೆ ಎಲ್ಲ ರೀತಿಯ ಅಮೈನೋ ಆಮ್ಲಗಳ ಅವಶ್ಯಕತೆಗಳನ್ನೂ ಪೂರೈಸಬಹುದು.

ನಿಮ್ಮ ಮಗುವನ್ನು ಸಂತೈಸಿರಿ...

ರಮ್ಯಾ ಶ್ರೀಹರಿ

ಮಕ್ಕಳಿಗೆ ಪೋಷಕರು ತನ್ನನ್ನು ಗಮನಿಸುತ್ತಿದ್ದಾರೆ ಎನ್ನುವ ನಂಬಿಕೆಯು ಸುರಕ್ಷೆಯ ಭಾವನೆಯನ್ನು ಕೊಡುತ್ತದೆ; ಅಷ್ಟೆ ಅಲ್ಲದೆ, ಆ ನಂಬಿಕೆಯೇ ಅವರ ಬಾಳಿಗೆ ದೊಡ್ಡ ಬಲವೂ, ಭದ್ರ ಬುನಾದಿಯೂ ಹೌದು.

ಅನಾರೋಗ್ಯ, ದೈಹಿಕ-ಮಾನಸಿಕ ಅಸೌಖ್ಯಗಳಿದ್ದಾಗಲಂತೂ ತಂದೆ-ತಾಯಿಯ ಸಾಮೀಪ್ಯಕ್ಕಿಂತ ಹೆಚ್ಚಿನದೇನೂ ಮಕ್ಕಳಿಗೆ ಬೇಡವಾಗಿರುತ್ತದೆ. ಅನಾರೋಗ್ಯವಾದೊಡನೆ ಎಲ್ಲ ತಂದೆ-ತಾಯಿಯೂ ಸಹಜವಾಗೇ ತಮ್ಮ ಮಗುವಿಗೆ ತಡಮಾಡದೆ ತಜ್ಞವೈದ್ಯರ ಬಳಿಗೆ ಕರೆದೊಯ್ದು ವೈದ್ಯರ ಸಲಹೆಯಂತೆ ಔಷಧೋಪಚಾರಗಳನ್ನು ಒದಗಿಸುವುದು ಸಾಮಾನ್ಯ. ಆದರೆ ಮಕ್ಕಳ ಅಸೌಖ್ಯಕ್ಕೆ ತಂದೆ-ತಾಯಿ ಹೇಗೆ ಸ್ಪಂದಿಸುತ್ತಾರೆ, ಮಗುವಿಗಾಗುತ್ತಿರುವ ಸಂಕಟವನ್ನು ಅವರು ಎಷ್ಟರ ಮಟ್ಟಿಗೆ ಮತ್ತು ಹೇಗೆ ಗ್ರಹಿಸುತ್ತಾರೆ, ಹೇಗೆ ಸಂತೈಸುತ್ತಾರೆ ಎನ್ನುವುದು ಪೋಷಕರು ಮತ್ತು ಮಕ್ಕಳ ನಡುವಿನ ಬಾಂಧವ್ಯ ಈಗ ಹೇಗಿದೆ ಮುಂದೆ ಅದು ಹೇಗೆ ರೂಪುಗೊಳ್ಳುತ್ತದೆ ಎನ್ನುವುದನ್ನು ತಿಳಿಸಿಕೊಡುವ ಒಂದು ಮಹತ್ವಪೂರ್ಣ ಸಂದರ್ಭವೂ ಹೌದು.

ಮಕ್ಕಳೇ ಇರಲಿ, ವಯಸ್ಕರೇ ಇರಲಿ ಯಾರಿಗಾದರೂ ಅಷ್ಟೇ, ಅನಾರೋಗ್ಯವಾದಾಗ ಸಂತೈಸುವ ಮಾತುಗಳು, ತಾಳ್ಮೆಯ ನಡೆನುಡಿ, ಆತ್ಮೀಯತೆಯ ಬೆಚ್ಚನೆಯ ಭಾವನೆಗಳೇ ಔಷಧಕ್ಕಿಂತಲೂ ಪರಿಣಾಮಕಾರಿ ಎನಿಸುವುದಿದೆ. ಅದರಲ್ಲೂ ಎಳೆಯ ಮಕ್ಕಳಿಗಂತೂ ಮನಸ್ಸು ಬುದ್ಧಿ ರೂಪುಗೊಳ್ಳುವ ಹಂತದಲ್ಲಿ, ಪೋಷಕರು ‘ತನ್ನ ರಕ್ಷಣೆಯನ್ನು ಹೇಗೆ ಮಾಡುತ್ತಾರೆ’, ‘ತಾನು ಅವರಿಗೆಷ್ಟು ಮುಖ್ಯ’, ‘ತನಗೆ ನೋವಾದಾಗ ಅವರಿಗೆ ಹೇಗಾಗುತ್ತದೆ’ – ಎನ್ನುವುದೆಲ್ಲ ಪೋಷಕರ ವರ್ತನೆಯ ಮೂಲಕ ಮಗುವಿಗೆ ನಿಚ್ಚಳವಾಗಿ ಅರಿವಾಗುತ್ತಿರುತ್ತದೆ. ಅನಾರೋಗ್ಯಕ್ಕೊಳಗಾದಾಗ ನಿರ್ಲಕ್ಷ್ಯಕ್ಕೊಳಗಾದ ಭಾವವು ಮಕ್ಕಳ ಮನಸ್ಸನ್ನು ಕಂಗೆಡಿಸಿ ಕಡು ದುಃಖವನ್ನುಂಟುಮಾಡಿ ಮುಂದೆಯೂ ಅದರ ಕಹಿಯನ್ನು ಅವರು ಮರೆಯುವುದು ಕಷ್ಟವೂ ಆಗುತ್ತದೆ.

ಎಳೆಯ ಮಕ್ಕಳಿಗೆ ತಮಗೇನಾಗುತ್ತಿದೆ ಎಂದು ಹೇಳಿಕೊಳ್ಳಲು ಬಾರದ ವಯಸ್ಸಿನಲ್ಲಿ ಅವರಿಗಾಗುತ್ತಿರುವ ಸಂಕಟವನ್ನು ಊಹಿಸಿ ತಕ್ಕ ಉಪಚಾರ ಮಾಡಿದಾಗಲೂ ಆ ಔಷಧವು ಸರಿಯಾದ ಪರಿಣಾಮ ಬೀರಿ ದೇಹ ಮತ್ತೆ ಸಹಜಸ್ಥಿತಿಗೆ ಮರಳುವುದಕ್ಕೆ ಸಾಕಷ್ಟು ಸಮಯ ಬೇಕು. ಆಗ ಅಳುತ್ತಾ ರಗಳೆ ಮಾಡುವ ಮಗುವಿಗೆ ತಾಯಿ ಏನು ಮಾಡುತ್ತಾಳೆ? ಮಗುವನ್ನು ಮುದ್ದಿಸಿ ಸಮಾಧಾನಿಸುತ್ತಾ, ಅದರ ಕಿರಿಕಿರಿಯನ್ನು ಕಡಿಮೆ ಮಾಡಲು ಹಾಡುತ್ತಲೋ, ಗಮನವನ್ನು ಬೇರೆಡೆ ತಿರುಗಿಸಲು ಆಟವಾಡಿಸುತ್ತಲೋ, ತಟ್ಟಿ ಮಲಗಿಸುತ್ತಲೋ, ತೊಟ್ಟಿಲು ತೂಗುತ್ತಲೋ ಒಟ್ಟಿನಲ್ಲಿ ನೋವಿನಿಂದ ಪ್ರಕ್ಷುಬ್ಧಗೊಂಡ ಮಗುವನ್ನು ಶಾಂತಗೊಳಿಸಲು ‘ನಾನಿಲ್ಲೇ ಇದ್ದೇನೆ, ನಿನ್ನ ಕಷ್ಟ ಅರ್ಥವಾಗುತ್ತಿದೆ’ ಎನ್ನುವುದನ್ನು ಮಗುವಿಗೆ ಅದಕ್ಕೆ ತಿಳಿಯುವ ರೀತಿಯಲ್ಲಿ ಸಂವಹಿಸುತ್ತಾಳೆ. ತಾಯಿಯ ಈ ನಡೆ ಮಕ್ಕಳಷ್ಟೇ ಅಲ್ಲದೆ ಸಂಕಟದಲ್ಲಿರುವ ಯಾರನ್ನೇ ಆದರೂ ಹೇಗೆ ಸಂತೈಸಿ ಅವರಲ್ಲಿ ಸ್ಥೈರ್ಯ-ಸಂತೋಷಗಳನ್ನು ತುಂಬಿಕೊಡಬಹುದು ಎನ್ನುವುದಕ್ಕೆ ಮಾದರಿಯೂ ಹೌದು.

ಅನಾರೋಗ್ಯದಲ್ಲಿರುವ ಮಕ್ಕಳನ್ನು ಸಂತೈಸಬೇಕಾದಾಗ ಪೋಷಕರಿಗೆ ಸಹಾಯಕವಾಗಬಹುದಾದ ಕೆಲವು ಮಾತುಗಳು ಇಲ್ಲಿವೆ:

- ಮಕ್ಕಳಿಗೆ ಅನಾರೋಗ್ಯವಾದಾಗ ಪೋಷಕರಾದ ನಾವು ನಮ್ಮೆಲ್ಲಾ ಕೆಲಸಗಳನ್ನು ಬಿಟ್ಟು ಮಕ್ಕಳ ಮುಂದೆ ಕುಳಿತಿರುವುದಕ್ಕಾಗುತ್ತದೆಯೇ – ಎನ್ನುವ ಪ್ರಶ್ನೆ ಸಹಜ. ಹೌದು, ಅನಾರೋಗ್ಯದಲ್ಲಿರುವ ಮಗುವಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಬೇಕಾಗುತ್ತದೆ. ಆಗ ನಮ್ಮ ದಿನಚರಿ, ಊಟ, ನಿದ್ರೆ, ಕೆಲಸ ಎಲ್ಲವೂ ಅಸ್ತವ್ಯಸ್ತಗೊಳ್ಳುತ್ತದೆ. ನಮಗೇ ಒಂದು ಬಗೆಯ ಬೇಸರವೂ ಆಗುತ್ತದೆ. ಅಂತಹ ದಿನಗಳನ್ನು ತಾಳ್ಮೆಯಿಂದ, ಎಲ್ಲ ಕೆಲಸವನ್ನೂ ಸ್ವಲ್ಪ ನಿಧಾನವಾಗಿ, ಆದಾಗ ಮಾಡಿ ಆಗದ್ದನ್ನು ಮುಂದೂಡಿ ನಮಗೂ ನಾವೇ ಸ್ವಲ್ಪ ಸಹಾನುಭೂತಿಯನ್ನು ತೋರಿಸಿಕೊಂಡಾಗ ಮಾತ್ರ ಮಕ್ಕಳ ಬಗೆಗೂ ಸಹಾನುಭೂತಿಯುಂಟಾಗುವುದು ಸಾಧ್ಯ. ಅಷ್ಟೇ ಅಲ್ಲದೆ ಮಕ್ಕಳಿಗೆ ಒಮ್ಮೆ ನಾವು ಅವರ ಬಗೆಗೆ ಎಷ್ಟೆಲ್ಲಾ ಕಾಳಜಿ ಹೊಂದಿದ್ದೇವೆ ಎನ್ನುವುದನ್ನು ಮನದಟ್ಟು ಮಾಡಿಸಿದಾಗ ಅವರೂ ನಮ್ಮ ಗಮನವನ್ನು ಸೆಳೆಯುವುದನ್ನು ಕಡಿಮೆ ಮಾಡುತ್ತಾರೆ.
- ಮಕ್ಕಳು ಔಷಧ ಮತ್ತು ಪಥ್ಯದ ಆಹಾರವನ್ನು ಸೇವಿಸಲು ಹಠ ಮಾಡುವುದು ಸಾಮಾನ್ಯ. ಬಾಯಿಗೆ ಹಾಕಿದ ಔಷಧವನ್ನು ಉಗಿಯುವುದು, ವಾಕರಿಸಿಕೊಳ್ಳುವುದು, ವಾಂತಿಮಾಡಿ ಹಾಸಿಗೆ ಬಟ್ಟೆಗಳನ್ನು ಮಲಿನಗೊಳಿಸುವುದೇ ಮುಂತಾದ್ದು ಮಾಡಿದಾಗಂತೂ ತಾಳ್ಮೆ ತಪ್ಪದಿರುವುದು ಹೇಗೆ? ಆಗ ಮಗುವಿನ ಮೇಲೆ ಸಿಟ್ಟಾಗದೆ, ಮಗುವಿನ ಮನವೊಲಿಸಿ ಔಷಧವನ್ನು ಕುಡಿಸುವುದು ಕಡಿಮೆ ಸಾಧನೆಯೇನಲ್ಲ!
- ಮಗುವಿನ ಆರೋಗ್ಯ ಕೈಕೊಟ್ಟಾಗ ಅದಕ್ಕೆ ಮಗುವನ್ನೇ ದೂಷಿಸದಿರುವುದು, ಮಗುವಿನ ಯಾವುದೋ ತಪ್ಪಿನಿಂದಲೇ ಆರೋಗ್ಯ ಹಾಳಾಯಿತು – ಎನ್ನುವಂತೆ ಮಾತನಾಡದಿರುವುದು ಪ್ರಜ್ಞಾವಂತ ಪೋಷಕರ ಲಕ್ಷಣ. ‘ಏನೋ ತಿಂದೆ, ಮಳೆಯಲ್ಲಿ ನೆನೆದೆ, ಯಾರದೋ ಮನೆಗೆ ಹೋಗಿದ್ದೆ, ಬೇಡವೆಂದರೂ ಬಿಸಿಲಲ್ಲಿ ಆಟವಾಡಿದೆ, ಹಾಗಾಗಿ ಅನಾರೋಗ್ಯವಾಯಿತು’ ಎಂದೆಲ್ಲಾ ಮಗುವನ್ನು ದೂಷಿಸದೆ ಯಾವ ಕಾರಣಕ್ಕಾದರೂ ಅನಾರೋಗ್ಯವಾಗಿರಲಿ, ಅದರ ಕುರಿತು ಹೆಚ್ಚಿನ ಚರ್ಚೆ ಮಾಡದೇ ಪರಿಹಾರದ ಕಡೆಗೆ ಗಮನ ಕೊಡುವುದೊಳಿತು.
- ಮಗುವಿಗೆ ಪದೇ ಪದೇ ಒಂದೇ ರೀತಿಯ ಅಲರ್ಜಿ, ಸೋಂಕು ಅಥವಾ ಯಾವುದೇ ರೀತಿಯ ನೋವುಗಳು ಉಂಟಾದಾಗ ತಜ್ಞವೈದ್ಯರೊಂದಿಗೆ ಸಮಾಲೋಚಿಸಿ ಅಸ್ವಸ್ಥತೆ ಮರುಕಳಿಸುವುದಕ್ಕಿರುವ ಕಾರಣಗಳನ್ನು ಅರ್ಥಮಾಡಿಕೊಂಡು, ಅದನ್ನು ನಿರ್ವಹಿಸಲು ಬೇಕಾದ ಮಾನಸಿಕ ಸಿದ್ಧತೆಯನ್ನು ಪೋಷಕರು ಮಾಡಿಕೊಳ್ಳಬೇಕಾಗುತ್ತದೆ. ಮಗು ಪದೇ ಪದೇ ಅಸ್ವಸ್ಥತೆಗೆ ಒಳಗಾಗುವುದರಿಂದ ಆಗುವ ಆತಂಕ, ಚಡಪಡಿಕೆ, ಸಿಟ್ಟು, ಹತಾಶೆಗಳಿಂದ ಮನಸ್ಸಿನ ಸ್ತಿಮಿತವನ್ನು ಕಳೆದುಕೊಂಡು ಮೂಢನಂಬಿಕೆಗಳಿಗೆ ಮೊರೆಹೋಗುವುದು, ವೈದ್ಯರ ಅನುಮತಿ ಇಲ್ಲದ ಅಥವಾ ವೈದ್ಯರ ಸಲಹೆ ಪಡೆಯದೆ ಮನೆಮದ್ದುಗಳನ್ನು ಮಾಡುವುದು, ರೋಗದ ಬಗೆಗೆ ವೈಜ್ಞಾನಿಕವಾಗಿ ಸಾಬೀತಾಗದ ವಿಚಾರಗಳನ್ನು ಒಪ್ಪುವಂತೆ, ಅದನ್ನು ಪಾಲಿಸುವಂತೆ ಮಗುವಿಗೆ ಒತ್ತಾಯಿಸುವುದು ಮಕ್ಕಳಲ್ಲಿ ಗೊಂದಲ ಮತ್ತು ಪೋಷಕರ ಬಗೆಗೆ ಭಯ, ಅಪನಂಬಿಕೆಗಳನ್ನು ಹುಟ್ಟಿಸುತ್ತವೆ.
- ಮಗು ಸ್ವಲ್ಪ ಬೆಳೆದಂತೆ ತನಗಾಗುತ್ತಿರುವ ದೈಹಿಕ ಸಂಕಟದ ಬಗೆಗೆ, ಅಸೌಖ್ಯದ ಭಾವದ ಬಗೆಗೆ ಹೇಳಿಕೊಂಡಾಗ ಅದನ್ನು ಪ್ರಶ್ನೆಮಾಡದೆ, ಅಪಹಾಸ್ಯ ಮಾಡದೆ, ನಿರ್ಲಕ್ಷಿಸದೆ ಕೇಳಿಸಿಕೊಳ್ಳುವುದೂ ಮಕ್ಕಳನ್ನು ಸಂತೈಸುವ ಬಗೆಯೇ ಹೌದು. ಮಗುವಿನ ದೈಹಿಕ ಸ್ಥಿತಿಯನ್ನು ಅಲಕ್ಷಿಸುವುದು, ಅವಮಾನಗೊಳಿಸುವುದು, ಮಗು ತನ್ನ ನೋವನ್ನು ತೋಡಿಕೊಂಡಾಗ ಅದರ ಬಗೆಗೆ ಅಪನಂಬಿಕೆಯನ್ನು ವ್ಯಕ್ತಪಡಿಸುತ್ತಾ ‘ನೋವಿಲ್ಲ, ಏನಿಲ್ಲ ಸುಮ್ಮನೆ ಶಾಲೆಗೆ ಹೋಗುವುದರಿಂದ ತಪ್ಪಿಸಿಕೊಳ್ಳಲು ಹೀಗೆಲ್ಲಾ ನಾಟಕವಾಡುತ್ತಿದ್ದೀಯ’ ಎಂದೆಲ್ಲಾ ಹೇಳುವುದು ಮಗು ತನ್ನ ದೇಹದ ಸಂವೇದನೆಗಳನ್ನು ತಾನೇ ಸರಿಯಾಗಿ ಗ್ರಹಿಸದಿರುವ, ಅದಕ್ಕೆ ಪ್ರಾಮುಖ್ಯ ಕೊಡದಿರುವ, ತನ್ನ ದೇಹದ ಬಗೆಗೆ ನಕಾರಾತ್ಮಕ ಭಾವಗಳನ್ನು, ಆಲೋಚನೆಗಳನ್ನು ಹೊಂದುವ ಸಾಧ್ಯತೆಯಿದೆ. ಆದ್ದರಿಂದ ಅನಾರೋಗ್ಯದಲ್ಲಿರುವ ಮಗುವಿನ ಉಪಚಾರದಲ್ಲಿ ಸಹಾನುಭೂತಿ, ಪ್ರೀತಿಗಳು ಧಾರಾಳವಾಗಿರಲಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ – 5.3

3(v) $d = 5$, $S_9 = 75$ ಆದರೆ a ಮತ್ತು a_9 ಕಂಡುಹಿಡಿಯಿರಿ

ಪರಿಹಾರ: $S_9 = 75$ $d = 5$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$S_9 = \frac{9}{2}[2a+(9-1)d]$$
$$S_9 = \frac{9}{2}[2a+8d]$$
$$S_9 = 9(a+4d)$$
$$S_9 = 9(a+4x5)$$
$$S_9 = 9(a+20)$$
$$75 = 9a+180$$
$$9a = 75-180$$
$$9a = -105$$
$$a = -105/9$$
$$a = 35/3$$

ನಮಗೆ ಗೊತ್ತಿರುವಂತೆ

$$a_n = a + (n-1)d$$
$$a_9 = a + (9-1)(d)$$
$$a_9 = a + 8(d)$$
$$a_9 = -\frac{35}{3} + 40$$
$$a_9 = \frac{-35+120}{3}$$
$$a_9 = \frac{85}{3}$$

vi) $a = 2$, $d = 8$, $S_n = 90$ ಆದಾಗ n ಮತ್ತು a_n ಕಂಡುಹಿಡಿಯಿರಿ

ಪರಿಹಾರ: ಇಲ್ಲಿ $a = 2$, $d = 8$, $S_n = 90$,

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$90 = \frac{n}{2}[2(2)+(n-1)8]$$
$$90 = n(2+(n-1)4)$$
$$90 = n[2+4n-4]$$
$$90 = n(4n-2)$$
$$90 = 2n(2n-1)$$
$$45 = n(2n-1)$$
$$45 = 2n^2 - n$$
$$2n^2 - n - 45 = 0$$
$$2n^2 - 10n + 9n - 45 = 0$$
$$2n(n-5) + 9(n-5) = 0$$
$$(n-5)(2n+9) = 0$$
$$n - 5 = 0$$
$$n = 5$$

ನಮಗೆ ಗೊತ್ತಿರುವಂತೆ

$$a_n = a + (n-1)d$$
$$a_n = 2 + (5-1)(8)$$
$$a_n = 2 + 4(8)$$
$$a_n = 2 + 32 = 34$$

vii) $a = 8$, $a_n = 62$, $S_n = 210$ ಆದಾಗ n ಮತ್ತು d ಕಂಡುಹಿಡಿಯಿರಿ

ಪರಿಹಾರ: $a = 8$, $a_n = 62$, $S_n = 210$

ನಮಗೆ ಗೊತ್ತಿರುವಂತೆ $a_n = a + (n-1)d$

$$62 = 8 + (n-1)d$$
$$62 - 8 = (n-1)d$$
$$54 = (n-1)d$$
$$(n-1)d = 54 \ldots\ldots\ldots\ldots (1)$$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$
$$210 = \frac{n}{2}[2(8)+(n-1)d]$$
$$210 = \frac{n}{2}[16+54] \quad using (1)$$
$$210 = \frac{n}{2}[70]$$
$$210 = 35n$$
$$n = \frac{210}{35}$$
$$n = 6$$

1ನೇ ಸಮೀಕರಣದಲ್ಲಿ n= 6 ಹಾಕಿದಾಗ

$$(6-1)d = 54$$
$$5d = 54 \Rightarrow d = 54/5$$

3(viii) $a_n = 4$, $d = 2$, $S_n = -14$ ಆದರೆ n ಮತ್ತು a ಕಂಡುಹಿಡಿಯಿರಿ

ಪರಿಹಾರ: $a_n = 4$, $d = 2$, $S_n = -14$

ನಮಗೆ ಗೊತ್ತಿರುವಂತೆ

$$a_n = a + (n-1)d$$
$$4 = a + (n-1)2$$
$$4 = a + 2n - 2$$
$$4 + 2 = a + 2n$$
$$6 = a + 2n$$
$$a + 2n = 6 \ldots\ldots\ldots (1)$$
$$a = 6 - 2n$$

ನಮಗೆ ಗೊತ್ತಿರುವಂತೆ $S_n = -14$

$$\frac{n}{2}[a+l] = -14$$
$$\frac{n}{2}[a+4] = -14$$
$$na + 4n = -28$$
$$n(a+4) = -28$$
$$n(6 - 2n + 4) = -28$$
$$n(10 - 2n) = -28$$
$$10n - 2n^2 + 28 = 0$$
$$2n^2 - 10n - 28 = 0$$
$$n^2 - 5n - 14 = 0$$
$$n^2 - 7n + 2n - 14 = 0$$
$$n(n-7) + 2(n-7) = 0$$
$$(n-7)(n+2) = 0$$
$$n = 7 \qquad n = -2$$
$$\therefore n = 7$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

CURRENT ELECTRICITY

21. Write a brief note on resistor and its colour codes.

Ans:- (........Contd)

First three colour bands -

Colour	Number	Multipler
1. Black	0	1
2. Brown	1	10^1
3. Red	2	10^2
4. Orange	3	10^3
5. Yellow	4	10^4
6. Green	5	10^5
7. Blue	6	10^6
8. Violet	7	10^7
9. Gray	8	10^8
10. White	9	10^9
11. Silver	0.01	10^{-2}
12. Gold	0.1	10^{-1}

The value of the resistor is found by noting the order of the band of colours and the values assigned to each other.

The first three colours give the value of resistance and the fourth band gives the tolerance. Tolerance is the percentage of deviation from the rated value.

Fourth colour bands –

Colour	Tolerance
1. Gold	± 5%
2. Silver	± 10%
3. None	± 20%

The code followed is -

(1) We go starting from the extreme left end towards the centre of the resistor.

The colour of the first ring on the extreme left gives the first digit (from the left).

(2) The colour of the second ring gives the second digit.

(3) The third ring gives the multiples of ten by which the first two digits are to be multiplied with or it gives the number of zeros that should follow the first two digits.

If silver or gold ring forms the third ring then silver stands for the multiple of 10^{-2} and gold stands for the multiple of 10^{-1}.

The fourth ring determines the tolerance of the resistor. The tolerance is the possible variation of the value of resistance of the given resistor expressed in percent.

22. Write a brief note on the grouping of cells in series.

Ans: - Grouping of cells in series - When cells are connected in series such that their emfs are in the same direction, they are said to be in conjunction with each other. Their net emf is then the arithmetic sum of the individual emfs. **As the cells are in series, their effective internal resistance is the arithmetic sum of the individual internal resistances.** (If two cells are connected in series such that their emfs are oppositely directed, the cells are said to be in opposition).



If m similar cells, each of emf E and internal resistance r are connected in series in conjunction with each other, than net emf = mE and effective internal resistance = mr.

If the combination is connected to an external resistance R, current I, set up in the circuit, is given by -

I = effective emf / eff. resistance of the circuit.

$$I = \frac{mE}{(R + mr)}$$

23. Write a brief note on the grouping of cells in parallel.

Ans: - Grouping of cells in parallel

The figure shows the cells connected in parallel. If the emfs of all the individual cells are in the same direction, the combination behaves like one cell. If all the cells are similar, the net emf is E, the emf of one cell. As the cells are in parallel, effective internal resistance is given by



$$\frac{1}{r_e} = \left(\frac{1}{r}\right) + \left(\frac{1}{r}\right) + \left(\frac{1}{r}\right) + \left(\frac{1}{r}\right) + \ldots\ldots$$

If there are 'n' cells,

$$\frac{1}{r_e} = \left(\frac{n}{r}\right) \Rightarrow r_e = \frac{r}{n}$$

(Contd......)

ಘಟಪ್ರಭಾ ಪ್ರವಾಹ 42 ಗ್ರಾಮಗಳು ಬಾಧಿತ

ಬೈಲಹೊಂಗಲ ತಾಲ್ಲೂಕಿನ ನಯಾನಗರ ಗ್ರಾಮದ ವ್ಯಾಪ್ತಿಯಲ್ಲಿ ಮಲಪ್ರಭಾ ನದಿಯ ಹರಿವು ಡ್ರೋನ್ ಕ್ಯಾಮೆರಾದಲ್ಲಿ ಸೆರೆಯಾಗಿದ್ದು ಹೀಗೆ – ಚಿತ್ರ: ಬಸವರಾಜ ನರಟ್ಟಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯಲ್ಲಿ ಸೋಮವಾರ ಮಳೆ ಅಬ್ಬರ ತಗ್ಗಿದ್ದರೂ ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಇದೆ. ಕೃಷ್ಣಾ, ಅದರ ಉಪ ನದಿಗಳಲ್ಲಿ ನೀರಿನ ಹರಿವು ಯಥಾಸ್ಥಿತಿಯಿದೆ.

ಜಿಲ್ಲೆಯಲ್ಲಿ ಒಟ್ಟಾರೆ 44 ಸೇತುವೆಗಳು ಮುಳುಗಿದ್ದು, 42 ಗ್ರಾಮಗಳು ಪ್ರವಾಹ ಪೀಡಿತವಾಗಿವೆ. ಅಥಣಿ ತಾಲ್ಲೂಕಿನ 5, ಕಾಗವಾಡ– 2, ಚಿಕ್ಕೋಡಿ –3, ನಿಪ್ಪಾಣಿ –6, ಗೋಕಾಕ– 13, ಮೂಡಲಗಿ– 10, ಹುಕ್ಕೇರಿ–3 ಗ್ರಾಮಗಳಲ್ಲಿ ನೆರೆ ಉಂಟಾಗಿದೆ. 2450 ಕುಟುಂಬಗಳನ್ನು ರಕ್ಷಿಸಿ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. 48 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 2.45 ಲಕ್ಷ ಕ್ಯುಸೆಕ್ ನೀರು ಹರಿಸಲಾಗುತ್ತಿದೆ. ನವಿಲುತೀರ್ಥ ಅಣೆಕಟ್ಟೆಯಿಂದ 5 ಸಾವಿರ ಕ್ಯುಸೆಕ್ ನೀರು ನಿರಂತರವಾಗಿ ಮಲಪ್ರಭಾ ನದಿಗೆ ಹರಿಯುತ್ತಿದೆ. ಮೂಡಲಗಿ ತಾಲ್ಲೂಕಿನಲ್ಲಿ ಸಾವಿರಾರು ಎಕರೆ ಜಮೀನು ಜಲಾವೃತವಾಗಿದೆ. ಸುಣಧೋಳಿಯ ಜಡಿಸಿದ್ಧೇಶ್ವರ ಮಠದ ಚಾವಣಿಯವರೆಗೆ ಇದ್ದ ನೀರು ತುಸು ಕಡಿಮೆಯಾಗಿದೆ. ಮಠಾಧೀಶರು ಹಾಗೂ ಅವರ ಶಿಷ್ಯರು ಮೇಲಂತಸ್ತಿನ ಕೊಠಡಿಯಲ್ಲಿ ಆಶ್ರಯ ಪಡೆದಿದ್ದಾರೆ.

ಮುಧೋಳ ವರದಿ (ಬಾಗಲಕೋಟೆ ಜಿಲ್ಲೆ) : ತಾಲ್ಲೂಕಿನಲ್ಲಿ ಘಟಪ್ರಭಾ ನದಿ ಪ್ರವಾಹ ಗ್ರಾಮಗಳಿಗೆ ವ್ಯಾಪಿಸಿದೆ. ವಿಜಯಪುರ ಬೆಳಗಾವಿ ರಾಜ್ಯ ಹೆದ್ದಾರಿ–34ರ ಚಿಂಚಖಂಡಿ ಸಮೀಪದ ಸೇತುವೆ ಮುಳುಗಡೆಯಾಗಿದೆ. ಮಿರ್ಜಿ ಗ್ರಾಮ ಜಲಾವೃತವಾಗಿದ್ದು, 138 ಜನರನ್ನು ಸ್ಥಳಾಂತರಿಸಲಾಗಿದೆ. ಕಾಳಜಿ ಕೇಂದ್ರಕ್ಕೂ ನೀರು ಬಂದ ಕಾರಣ ಅದನ್ನು ಸಾಲಿಮಡ್ಡಿ ಸಮೀಪದ ಸರ್ಕಾರಿ ಪ್ರಾಥಮಿಕ ಶಾಲೆಗೆ ಸ್ಥಳಾಂತರಿಸಲಾಗಿದೆ. ಒಂಟಗೋಡಿ ಗ್ರಾಮದ ಸುತ್ತ ನೀರು ಆವರಿಸಿದ್ದು, ಜನರನ್ನು ಆಶ್ರಯ ಮನೆಗಳಿಗೆ ಸ್ಥಳಾಂತರಿಸಲಾಗಿದೆ.

ಸಂಚಾರ ನಿಷೇಧ (ಮಡಿಕೇರಿ ವರದಿ): ಮಡಿಕೇರಿ– ಕುಟ್ಟ ರಾಜ್ಯ ಹೆದ್ದಾರಿಯ ಮಂಚಳ್ಳಿ ಗ್ರಾಮದ ಬಳಿ ಸೋಮವಾರ ರಸ್ತೆ ಕುಸಿದಿದೆ. ಅದರಿಂದ ಸಂಚಾರವನ್ನು ಒಂದು ತಿಂಗಳ ಕಾಲ (ಆಗಸ್ಟ್ 27ರವರೆಗೆ)ನಿಷೇಧಿಸಲಾಗಿದೆ. ಈ ರಸ್ತೆ ಬದಲಾಗಿ ಕುಟ್ಟ– ಕಾನೂರು ಭಾಗದಲ್ಲಿ ಸಂಚರಿಸುವಂತೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಆದೇಶಿಸಿದ್ದಾರೆ.

ಪೊನ್ನಂಪೇಟೆಯ ತೆರಾಲು ಗ್ರಾಮದಲ್ಲಿ ವಿದ್ಯುತ್ ತಂತಿ ತುಳಿದು 6 ಹಸುಗಳು ಮೃತಪಟ್ಟಿವೆ.

ಕೊಚ್ಚಿ ಹೋಗಿದ್ದ ರೈತನ ಶವ ಪತ್ತೆ

ಸಿದ್ದಪ್ಪ ಅಡಹಳ್ಳಿ

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಕೃಷ್ಣಾ ನದಿಯಲ್ಲಿ ಎರಡು ದಿನಗಳ ಹಿಂದೆ ಕೊಚ್ಚಿ ಹೋಗಿದ್ದ ರೈತ ಸಿದ್ದಪ್ಪ ಅಡಹಳ್ಳಿ (54) ಅವರ ಮೃತದೇಹ ವಿಜಯಪುರ ಜಿಲ್ಲೆಯ ಬಬಲೇಶ್ವರ ತಾಲ್ಲೂಕಿನ ಶಿರಬೂರ ನದಿ ಪಕ್ಕದಲ್ಲಿ ಸೋಮವಾರ ಪತ್ತೆ ಆಗಿದೆ. ಅವರಿಗಾಗಿ ಅಗ್ನಿಶಾಮಕ ಸಿಬ್ಬಂದಿ, ಪೊಲೀಸರು ಮತ್ತು ಮೀನುಗಾರರು ಶೋಧ ಕಾರ್ಯಾಚರಣೆ ನಡೆಸಿದ್ದರು.

ನವಿಲುತೀರ್ಥ ಅಣೆಕಟ್ಟೆಯಿಂದ ಮಲಪ್ರಭಾ ನದಿಗೆ ನೀರು ಹರಿಸಿದ್ದರಿಂದ ಬೆಳಗಾವಿ ಜಿಲ್ಲೆಯ ರಾಮದುರ್ಗದ ಸಮೀಪದ ಹಳೆ ಸೇತುವೆ ಮೇಲೆ ಹರಿಯುತ್ತಿದ್ದ ನೀರಿನಲ್ಲೇ ಜನರು ಓಡಾಡಿದರು –ಪ್ರಜಾವಾಣಿ ಚಿತ್ರ: ಚನ್ನಪ್ಪ ಮಾದರ(ಎಡಚಿತ್ರ). ಕೊಳ್ಳೇಗಾಲ ತಾಲ್ಲೂಕಿನ ಭರಚುಕ್ಕಿ ಜಲಪಾತದ ತುದಿಗೆ ತೆರಳಿ ಸೆಲ್ಫಿ ಕ್ಲಿಕ್ಕಿಸಿಕೊಳ್ಳಲು ಹೋಗಿದ್ದವರಿಗೆ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಗಣೇಶ್ ಬಸ್ಕಿ ಹೊಡೆಸಿದರು

ಶಿರೂರು ಗುಡ್ಡ : ದುರ್ಘಟನೆ ಸ್ಥಳದಲ್ಲಿ ನೀರವ ಮೌನ

ಕಾರವಾರ: ಶಿರೂರಿನಲ್ಲಿ ಗುಡ್ಡ ಕುಸಿತ ಸ್ಥಳದಲ್ಲಿ ಸತತ 13 ದಿನಗಳಿಂದ ಕೇಳಿಬರುತ್ತಿದ್ದ ಜೆಸಿಬಿ ಸದ್ದು, ರಕ್ಷಣಾ ಪಡೆಗಳ ಕಾರ್ಯಾಚರಣೆಯ ಗದ್ದಲ ಸೋಮವಾರ ದೂರವಾಗಿದ್ದವು. ಸ್ಥಳದಲ್ಲಿ ಬೆರಳೆಣಿಕೆ ಪೊಲೀಸ್ ಸಿಬ್ಬಂದಿ ಮಾತ್ರ ಇದ್ದರು.

ಗಂಗಾವಳಿ ನದಿಯಲ್ಲಿ ಸಿಲುಕಿದ ಲಾರಿ, ಕಾಣೆಯಾದ ಮೂವರ ಶೋಧ ಕಾರ್ಯ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದು, ರಾಷ್ಟ್ರೀಯ ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ ಸಿಬ್ಬಂದಿ, ನೌಕಾದಳ ಮತ್ತು ಈಶ್ವರ ಮಲ್ಪೆ ನೇತೃತ್ವದ ತಂಡದ ಮುಳುಗು ತಜ್ಞರು ಸ್ಥಳದಿಂದ ಈಗಾಗಲೇ ತೆರಳಿದ್ದಾರೆ. ನದಿಯಲ್ಲಿ ದೋಣಿಗಳ ಮೂಲಕ ಕಣ್ಮರೆ ಯಾದವರ ಶೋಧ ಕಾರ್ಯ ಮುಂದುವರಿಯಲಿದೆ ಎಂದು ಜಿಲ್ಲಾಡಳಿತ ತಿಳಿಸಿತ್ತು. ಆದರೆ, ಯಾವ ಕಾರ್ಯಾಚರಣೆಯೂ ನಡೆಯಲಿಲ್ಲ.

‘ನದಿಯಲ್ಲಿ ಲಾರಿ ಬಿದ್ದಿದೆ ಎನ್ನಲಾದ ಸ್ಥಳದಲ್ಲಿ ಇರುವ ಮಣ್ಣಿನ ರಾಶಿ ತೆರವಿಗೆ ಕೇರಳದ ತ್ರಿಶ್ಶೂರಿನಿಂದ ತಂತ್ರಜ್ಞರ ತಂಡ ಮಂಗಳವಾರ ಭೇಟಿ ನೀಡಲಿದೆ. ತಂಡವು ಬ್ರಿಡ್ಜ್ ಮೌಂಟೆಡ್ ಡ್ರೆಡ್ಜಿಂಗ್ (ನದಿಯಲ್ಲಿ ಹೂಳೆತ್ತುವ ಬಾರ್ಜ್) ತರುವ ಬಗ್ಗೆ ಪರಿಶೀಲಿಸುವುದು. ನಂತರ ಮುಂದಿನ ಕ್ರಮದ ಬಗ್ಗೆ ನಿರ್ಧರಿಸುತ್ತೇವೆ’ ಎಂದು ಜಿಲ್ಲಾಧಿಕಾರಿ ಕೆ.ಲಕ್ಷ್ಮಿಪ್ರಿಯಾ ತಿಳಿಸಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	124.60	52,277	68,,202
ಹಾರಂಗಿ	2,859	2,856.37	11,520	4,000
ಕಬಿನಿ	2,284.00	2,283.20	20,346	11,833
ಹೇಮಾವತಿ	2,922	2,920.12	32,622	31,795
ಲಿಂಗನಮಕ್ಕಿ	1,819	1,809.2	40,382	3,815.4
ಸೂಪಾ (ಮೀ)	564	551.60	25,997	-
ಮಾಣಿ	595	585.32	5,035	-
ತುಂಗಭದ್ರಾ	1,633	1,630.88	1,47,122	1,56,248
ಮಲಪ್ರಭಾ	2,079.5	2,073.85	14,277	5,594
ಘಟಪ್ರಭಾ	2175	2,169.83	47,420	44,353
ಭದ್ರಾ	186	181.1	18,381	962
ಆಲಮಟ್ಟಿ (ಮೀ)	519.6	515.50	2,71,385	3,15,933
ನಾರಾಯಣಪುರ (ಮೀ)	492.25	490.00	3,00000	2,99,620

* ನೆಲಮಟ್ಟದಿಂದ

ಇಂದಿನಿಂದ ಬಿಜೆಪಿ ನಾಯಕರ ಪ್ರವಾಸ

ಬೆಂಗಳೂರು: ರಾಜ್ಯದ ನೆರೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಹಾನಿಯ ಬಗ್ಗೆ ಅಧ್ಯಯನ ನಡೆಸಲು ಬಿಜೆಪಿ ಮುಂದಾಗಿದೆ.ಇದಕ್ಕಾಗಿ ಆರು ತಂಡಗಳನ್ನು ರಚಿಸಲಾಗಿದೆ. ಮಂಗಳವಾರದಿಂದ ಗುರುವಾರದವರೆಗೆ ನೆರೆಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ, ಅಲ್ಲಿ ಸಂಗ್ರಹಿಸಲಿರುವ ಮಾಹಿತಿಯನ್ನು ವರದಿ ರೂಪದಲ್ಲಿ ಅಧ್ಯಕ್ಷರಿಗೆ ಸಲ್ಲಿಸಲಿದ್ದಾರೆ. ಸರ್ಕಾರ ಕೈಗೊಂಡಿರುವ ಪರಿಹಾರ ಕಾರ್ಯದ ಬಗ್ಗೆ ಅವಲೋಕನ ನಡೆಸಲಿದ್ದಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ವಿರೋಧಪಕ್ಷದ ನಾಯಕ ಆರ್.ಅಶೋಕ ನೇತೃತ್ವದ ತಂಡ ಮಂಗಳೂರು ಮತ್ತು ಬೆಳಗಾವಿ ಜಿಲ್ಲೆಗಳಲ್ಲಿ, ಶಾಸಕ ಆರಗ ಜ್ಞಾನೇಂದ್ರ ನೇತೃತ್ವದ ತಂಡವು ಶಿವಮೊಗ್ಗ ಜಿಲ್ಲೆ, ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ನೇತೃತ್ವದ ತಂಡವು ಕೊಡಗು ಮತ್ತು ಉಡುಪಿ ಜಿಲ್ಲೆಗಳಿಗೆ ಭೇಟಿ ನೀಡಲಿದೆ. ವಿಧಾನಪರಿಷತ್ ವಿರೋಧಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ನೇತೃತ್ವದ ತಂಡವು ರಾಯಚೂರು, ಯಾದಗಿರಿ ಜಿಲ್ಲೆಗಳು, ವಿಧಾನಸಭೆಯ ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ ನೇತೃತ್ವದ ತಂಡವು ಬಾಗಲಕೋಟೆ, ವಿಜಯಪುರ ಜಿಲ್ಲೆಗಳಲ್ಲಿ, ಮಾಜಿ ಸಚಿವ ಬಿ.ಶ್ರೀರಾಮುಲು ನೇತೃತ್ವದ ತಂಡವು ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದೆ.

ನಿರ್ಮಲಾ ಸೀತಾರಾಮನ್, ಎಚ್‌ಡಿಕೆ ಹೇಳಿಕೆಗೆ ಮುಖ್ಯಮಂತ್ರಿ ತಿರುಗೇಟು

ಕರ್ನಾಟಕಕ್ಕೆ ಅತಿ ಹೆಚ್ಚು ಅನ್ಯಾಯ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಡ್ಯ: ‘ಕೇಂದ್ರ ಬಜೆಟ್‌ನಲ್ಲಿ ಅತಿ ಹೆಚ್ಚು ಅನ್ಯಾಯವಾಗಿದ್ದರೆ ಅದು ಕರ್ನಾಟಕ ರಾಜ್ಯಕ್ಕೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಮಂಡ್ಯದ ಕೆಆರ್‌ಎಸ್ ಮತ್ತು ಮೈಸೂರಿನ ಕಬಿನಿ ಜಲಾಶಯಕ್ಕೆ ಸೋಮವಾರ ಬಾಗಿನ ಸಲ್ಲಿಸುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕರ್ನಾಟಕಕ್ಕೆ ಅನ್ಯಾಯವಾಗಿಲ್ಲ’ ಎಂಬ ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರ ಸಮರ್ಥನೆಗೆ ತಿರುಗೇಟು ನೀಡಿದರು.

‘ನೀತಿ ಆಯೋಗದ ಸಭೆಯನ್ನು ನಾನು ಬಹಿಷ್ಕರಿಸಿದ್ದರಿಂದಲೇ ಹಾಜರಾಗಲಿಲ್ಲ. ನಮ್ಮೊಂದಿಗೆ, ಬಿಜೆಪಿಯೇತರ ಸರ್ಕಾರಗಳೂ ಬಹಿಷ್ಕರಿಸಿವೆ. ರಾಜ್ಯಕ್ಕೆ ನ್ಯಾಯವೇ ಸಿಗದಿದ್ದ ಮೇಲೆ ಹೋಗಿ ಏನು ಪ್ರಯೋಜನ?’ ಎಂದರು.

‘ನಿರ್ಮಲಾ ಸೀತಾರಾಮನ್ ಸುಳ್ಳು ಹೇಳಿ ಹೋಗುತ್ತಾರೆ. ಈ ಬಾರಿಯೂ ಅದನ್ನೇ ಮಾಡಿದ್ದಾರೆ. ಇಲ್ಲಿಂದ ರಾಜ್ಯಸಭಾ ಸದಸ್ಯರಾಗಿರುವ ಅವರು, ರಾಜ್ಯದ ಋಣ ತೀರಿಸಬಾರದಾ? ನಮ್ಮ ಮನವಿಯಲ್ಲಿ ಹಲವು ಬೇಡಿಕೆಗಳ ಬಗ್ಗೆ ಪ್ರಸ್ತಾಪಿಸಿದ್ದೆವು. ಯಾವುದಕ್ಕೂ ಅನುದಾನವನ್ನೇ ಕೊಟ್ಟಿಲ್ಲ. ರಾಜ್ಯದ ಹೆಸರನ್ನೇ ಪ್ರಸ್ತಾಪಿಸಿಲ್ಲ. ಇದು ಅನ್ಯಾಯವಲ್ಲದೇ ಮತ್ತೇನು?’ ಎಂದು ಕೇಳಿದರು.

ನನ್ನ ಅವಧಿಯಲ್ಲಿ ಭ್ರಷ್ಟಾಚಾರ ಸಂಪೂರ್ಣ ಹೋಗಿದೆ ಎನ್ನುವುದಿಲ್ಲ. ಆದರೆ, ಪ್ರಮಾಣ ಕಡಿಮೆಯಾಗುತ್ತಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಎಷ್ಟು ಕೊಟ್ಟಿದ್ದಾರೆ ಹೇಳಲಿ: ‘ಮಂಡ್ಯದಿಂದ ಆಯ್ಕೆಯಾಗಿರುವ ಕುಮಾರಸ್ವಾಮಿ, ಜಿಲ್ಲೆಗೆ ಕಾರ್ಖಾನೆ ತಂದಿದ್ದಾರಾ, ಕೈಗಾರಿಕಾ ಕಾರಿಡಾರನ್ನಾದರೂ ಕೊಟ್ಟಿದ್ದಾರಾ’ ಎಂದು ಪ್ರಶ್ನಿಸಿದರು.

‘15ನೇ ಹಣಕಾಸು ಆಯೋಗದಲ್ಲಿ ರಾಜ್ಯಕ್ಕಾಗಿರುವ ಅನ್ಯಾಯ ಬೇರಾವ ರಾಜ್ಯಕ್ಕೂ ಆಗಿಲ್ಲ. ಅತಿ ಹೆಚ್ಚು ತೆರಿಗೆ ಕೊಡುವ 2ನೇ ರಾಜ್ಯ ನಮ್ಮದು. ಆದರೂ ಅನ್ಯಾಯವಾಗುತ್ತಿದೆ. ಆಂಧ್ರ, ಬಿಹಾರಕ್ಕೆ ಕೊಟ್ಟಿರುವುದೆಷ್ಟು, ನಮಗೆ ಕೊಟ್ಟಿರುವುದೆಷ್ಟು ಎಂಬುದನ್ನು ಸಚಿವರು ಹೇಳಲಿ’ ಎಂದು ಸವಾಲು ಹಾಕಿದರು. ‘ಇಂಥವರು ನಮಗೆ ಪಾಠ ಮಾಡಲು ಬರುತ್ತಾರೆಯೇ?’ ಎಂದು ಆಕ್ರೋಶದಿಂದ ಕೇಳಿದರು.

‘ಬಿಜೆಪಿಯವರು ಅಧಿಕಾರದಲ್ಲಿದ್ದಾಗ ಒಂದು ಹಗರಣವನ್ನಾದರೂ ಸಿಬಿಐಗೆ ಕೊಟ್ಟಿದ್ದರೆ ತೋರಿಸಲಿ. ಈಗ ಸಿಬಿಐಗೆ ಕೊಡಿ ಎಂದು ಒತ್ತಾಯಿಸುತ್ತಿದ್ದಾರೆ’ ಎಂದು ವ್ಯಂಗ್ಯವಾಡಿದರು.

‘ಬಿಜೆಪಿಯವರು ಪಾದಯಾತ್ರೆ ಮಾಡಲಿ, ರಾಜಕೀಯವಾಗಿ ಎದುರಿಸಲು ನಾವೂ ಸಿದ್ಧವಿದ್ದೇವೆ’ ಎಂದರು.

‘ಪುಟ್ಟಯ್ಯ ಸಿಐಟಿಬಿ ಅಧ್ಯಕ್ಷರಾಗಿದ್ದಾಗ ಎಚ್.ಡಿ.ದೇವೇಗೌಡರ ಕುಟುಂಬಕ್ಕೆ ಎಷ್ಟು ನಿವೇಶನ ಬರೆಸಿಕೊಂಡಿದ್ದಾರೆ ಎಂಬ ಪಟ್ಟಿ ಕೊಡಲೇ? ಕುಮಾರಸ್ವಾಮಿ 40 ವರ್ಷದ ಹಿಂದೆ ಮುಡಾದಿಂದ ನಿವೇಶನ, ಸ್ವಾಧೀನ ಪತ್ರ ಪಡೆದಿದ್ದಾರೆ. ಈಗ ಇಲ್ಲವೆಂದು ಸುಳ್ಳು ಹೇಳಿದರೆ ಹೇಗೆ’ ಎಂದರು.

ತಪ್ಪೇ ಮಾಡಿಲ್ಲದಿರುವಾಗ ಬೇಸರವೇಕೆ?

‘ಮುಡಾ ನಿವೇಶನ ಪಡೆದ ವಿಚಾರದಲ್ಲಿ ನನ್ನದೇನೂ ತಪ್ಪಿಲ್ಲ. ಆದರೂ ಜನರ ಮನಸ್ಸಿನಲ್ಲಿ ಅನುಮಾನ ಉಳಿಯದಿರಲೆಂದು ನಿವೃತ್ತ ನ್ಯಾಯಮೂರ್ತಿ ನೇತೃತ್ವದ ಆಯೋಗದಿಂದ ತನಿಖೆ ಮಾಡಿಸುತ್ತಿದ್ದೇನೆ. ತಪ್ಪೇ ಮಾಡದಿರುವುದರಿಂದ ನನಗೇಕೆ ಬೇಸರವಾಗುತ್ತದೆ? ಬಿಜೆಪಿಯವರು ಬ್ಲಾಕ್‌ಮೇಲ್ ಮಾಡುವುದರಲ್ಲಿ, ಸುಳ್ಳು ಹೇಳುವುದರಲ್ಲಿ ಹಾಗೂ ಸುಳ್ಳನ್ನು ಸತ್ಯ ಮಾಡುವುದರಲ್ಲಿ ನಿಸ್ಸೀಮರು’ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

‘ಬಿಜೆಪಿಯು ಇಲ್ಲದ ಹಗರಣವನ್ನು ಸೃಷ್ಟಿಸುತ್ತಿದೆ. ಕೇಂದ್ರ ಸಚಿವರಾದವರು ನ್ಯಾಯಾಂಗ ತನಿಖೆಯನ್ನು ಅನುಮಾನದಿಂದ ನೋಡಿದರೆ ಹೇಗೆ?’ ಎಂದು ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿದರು.

‘ಬಿಜೆಪಿ ಅವಧಿಯಲ್ಲಿ ಭ್ರಷ್ಟಾಚಾರ ಎಷ್ಟಿತ್ತೆಂಬುದನ್ನು ಇಡೀ ದೇಶವೇ ನೋಡಿದೆ. ರಾಜ್ಯಕ್ಕೆ ಭ್ರಷ್ಟಚಾರದ ಹಣೆಪಟ್ಟಿ ಕಟ್ಟುವ ಯತ್ನ ಸಂಸತ್‌ನಲ್ಲಿ ನಡೆಯುತ್ತಿದೆ. ಅವರಿಗೆ ಮಾನ– ಮರ್ಯಾದೆ ಇದೆಯಾ?’ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಕಾಲ್ಗುಣ ಸರಿ ಇಲ್ಲ ಎನ್ನುತ್ತಿದ್ದರು...’

ಮೈಸೂರು/ಮಂಡ್ಯ: ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಲ್ಗುಣ ಸರಿ ಇಲ್ಲ ಎಂದು ಪ್ರತಿ ಪಕ್ಷದವರು ಹೇಳುತ್ತಿದ್ದರು. ಅವರು ಅಧಿಕಾರಕ್ಕೆ ಬಂದರೆ ಮಳೆ ಬರುವುದಿಲ್ಲ ಎನ್ನುತ್ತಿದ್ದರು. ಈಗ ಏನಾಗಿದೆ ನೋಡಿ?’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೇಳಿದರು.

ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿ, ‘ಕನ್ನಂಬಾಡಿ ಕಟ್ಟೆ ನಮ್ಮೆಲ್ಲರ ಅನ್ನದ ತಟ್ಟೆ. 92 ವರ್ಷ ತುಂಬಿರುವ ಅಣೆಕಟ್ಟೆಗೆ ಬಾಗಿನ ಅರ್ಪಿಸಿ ರಾಜ್ಯದ ಜನರ ಒಳಿತಿಗಾಗಿ ಪ್ರಾರ್ಥನೆ ಸಲ್ಲಿಸಿದ್ದೇವೆ. ಕಾಂಗ್ರೆಸ್ ಸರ್ಕಾರ ಬಂದ್ರೆ ಬರಗಾಲ ಅಂತ ಕೆಲವರು ಟೀಕಿಸುತ್ತಿದ್ದರು. ಮಳೆಗೆ ಯಾವ ಪಕ್ಷ ಅಧಿಕಾರದಲ್ಲಿದೆ ಎಂದು ತಿಳಿಯುವುದಿಲ್ಲ’ ಎಂದರು.

‘ಮೇಕೆದಾಟು ಅಣೆಕಟ್ಟು ನಿರ್ಮಾಣಕ್ಕೆ ಕೇಂದ್ರದವರು ಮಧ್ಯಸ್ಥಿಕೆ ವಹಿಸಲಿ’ ಎಂದರು.

‘ಸುರಕ್ಷತೆ ಪರಿಶೀಲನೆ ಬಳಿಕವೇ ಮಂಗಳೂರು ರೈಲು ಸಂಚಾರ’

ಪ್ರಜಾವಾಣಿ ವಾರ್ತೆ

ಹಾಸನ: ‘ಯಡಕುಮೇರಿ–ಕಡಗರವಳ್ಳಿ ನಡುವಿನ ಭೂಕುಸಿತದ ಸ್ಥಳದಲ್ಲಿ ಮೂರು ಏಜೆನ್ಸಿಗಳ ಪ್ರತಿನಿಧಿಗಳು ತಾಂತ್ರಿಕ ಪರಿಹಾರ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಪ್ರಯಾಣಿಕರ ಸುರಕ್ಷತೆ ಹಾಗೂ ರೈಲುಗಳ ಸಂಚಾರಕ್ಕೆ ಅನುಕೂಲವಾಗುವಂತೆ ದುರಸ್ತಿ ಮಾಡುವುದೇ ಪ್ರಥಮ ಆದ್ಯತೆ’ ಎಂದು ನೈರುತ್ಯ ರೈಲ್ವೆ ಮಹಾಪ್ರಬಂಧಕ ಅರವಿಂದ ಶ್ರೀವಾತ್ಸವ ತಿಳಿಸಿದರು.

ಭೂಕುಸಿತದ ಸ್ಥಳಕ್ಕೆ ಸೋಮವಾರ ಭೇಟಿ ನೀಡಿ, ದುರಸ್ತಿ ಕಾರ್ಯವನ್ನು ಪರಿಶೀಲಿಸಿ ಮಾತನಾಡಿದ ಅವರು, ‘ಪ್ರಯಾಣಿಕರಿಗೆ ಸುರಕ್ಷಿತ ಮತ್ತು ವಿಶ್ವಾಸಾರ್ಹ ಸೇವೆ ಒದಗಿಸಲು ಮೂಲಸೌಕರ್ಯಗಳ ಅಭಿವೃದ್ಧಿಗೆ ಹೆಚ್ಚು ಗಮನ ನೀಡಲಾಗುತ್ತಿದೆ. ಭೂಕುಸಿತದ ಸ್ಥಳ ಸುರಕ್ಷಿತ ಎಂದು ಖಚಿತವಾದ ಬಳಿಕ ರೈಲುಗಳ ಸಂಚಾರ ಆರಂಭಿಸಲಾಗುವುದು. ದುರಸ್ತಿಯನ್ನು ಶೀಘ್ರ ಪೂರ್ಣಗೊಳಿಸಲು ಸೂಚಿಸಲಾಗಿದೆ’ ಎಂದರು.

ವಿಶೇಷ ರೈಲಿನಲ್ಲಿ ಭಾನುವಾರ ರಾತ್ರಿ ಹುಬ್ಬಳ್ಳಿಯಿಂದ ಹೊರಟು ಸೋಮವಾರ ಬೆಳಿಗ್ಗೆ 9 ಗಂಟೆಗೆ ಅವರು ಭೂಕುಸಿತ ಸ್ಥಳಕ್ಕೆ ತಲುಪಿದರು. ಹಿರಿಯ ರೈಲ್ವೆ ಅಧಿಕಾರಿಗಳು ಹಾಜರಿದ್ದರು.

ನಿರಂತರ ಭೂಕುಸಿತ: ಸಕಲೇಶಪುರ ತಾಲ್ಲೂಕಿನ ದೊಡ್ಡತಪ್ಪಲೆ ಬಳಿ ರಾಷ್ಟ್ರೀಯ ಹೆದ್ದಾರಿ –75 ರಲ್ಲಿ ಮಣ್ಣು ಕುಸಿಯುತ್ತಲೇ ಇದೆ. ಸ್ಥಳದಲ್ಲಿ ಎರಡು ಜೆಸಿಬಿಗಳನ್ನು ನಿಯೋಜಿಸಿದ್ದು, ಮಣ್ಣನ್ನು ತೆರವುಗೊಳಿಸಿ, ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ.

‘ಸರಳವಾಕ್ಯದಲ್ಲೇ ರೂಪಕ ನೀಡಿದ್ದ ತೇಜಸ್ವಿ’



ಬೆಂಗಳೂರಿನಲ್ಲಿ ಮೂನಿಸ್ವಾಮಿ ಆ್ಯಂಡ್ ಸನ್ಸ್, ಎಂ. ಚಂದ್ರಶೇಖರ್ ಪ್ರತಿಷ್ಠಾನ, ಪೂರ್ಣಚಂದ್ರ ಸಾಂಸ್ಕೃತಿಕ ಅಧ್ಯಯನ ಕೇಂದ್ರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸೋಮವಾರ ‘ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಸಮಗ್ರ ಕೃತಿಜಗತ್ತು’ 14 ಸಂಪುಟಗಳನ್ನು ಪ್ರೊ. ರಾಜೇಂದ್ರ ಚೆನ್ನಿ, ಸಿ. ನಾರಾಯಣಸ್ವಾಮಿ, ಸಾಹಿತಿ ಹಂಪನಾಗರಾಜಯ್ಯ, ಕರ್ನಾಟಕ ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ. ಎಲ್. ಶಂಕರ್, ಪ್ರೊ. ಚಿದಾನಂದ ಗೌಡ ಮತ್ತು ತಾರಿಣಿ ಚಿದಾನಂದ ಅವರು ಬಿಡುಗಡೆಗೊಳಿಸಿದರು. –ಪ್ರಜಾವಾಣಿ ಚಿತ್ರ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತೇಜಸ್ವಿ ಸರಳವಾಗಿ ಬರೆಯುತ್ತಲೇ ಜೀವವಿಕಾಸದ ಕಥೆಗಳನ್ನು ಅದರೊಳಗೆ ಹುದುಗಿಸಿಟ್ಟಿದ್ದಾರೆ. ಅಂಥ ವಾಕ್ಯಗಳು ಎಲ್ಲ ಕಥೆ ಕಾದಂಬರಿಗಳಲ್ಲಿ ಬರುತ್ತವೆ’ ಎಂದು ವನ್ಯಜೀವಿ ಛಾಯಾಗ್ರಾಹಕ ಸೇನಾನಿ ತಿಳಿಸಿದರು.

‘ತೇಜಸ್ವಿ ಸಾಹಿತ್ಯ: ಸಾಂಸ್ಕೃತಿಕ ಹಬ್ಬ’ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಸೋಮವಾರ ತೇಜಸ್ವಿ ಒಡನಾಡಿಗಳ ಸಂವಾದದಲ್ಲಿ ಅವರು ಮಾತನಾಡಿದರು.

‘ಮಾಸ್ತಿ ಮತ್ತು ಬೈರ ಕಥೆಯಲ್ಲಿ ಚರ್ಮ ಸುತ್ತಿಕೊಂಡಂತೆ ಕಾಣುವ ಮನುಷ್ಯನನ್ನು ಬಂದಿರುವುದು ಎಲ್ಲಿಂದ ಕೇಳಿದಾಗ ಒಮ್ಮೆ ಆಫ್ರಿಕಾ ಖಂಡಕ್ಕೆ ಮತ್ತೊಮ್ಮೆ ಆಸ್ಟ್ರೇಲಿಯಾ ಖಂಡದ ಕಡೆಗೆ ಕೈ ತೋರಿಸಿದ ಎಂದು ಕಥೆಯಲ್ಲಿದೆ. ಪಶ್ಚಿಮಕ್ಕೆ, ದಕ್ಷಿಣಕ್ಕೆ ಕೈ ತೋರಿಸಿದ ಎಂದು ಬರೆಯುವುದನ್ನು ಬಿಟ್ಟು ಆಫ್ರಿಕಾ, ಆಸ್ಟ್ರೇಲಿಯಾ ಎಂದು ಬರೆದಿರುವುದು ಮಾನವನ ಉಗಮ ಮತ್ತು ವಲಸೆಯ ಸಂಕೇತ’ ಎಂದು ವಿಶ್ಲೇಷಿಸಿದರು.

ಕರ್ವಾಲೊದಲ್ಲಿನ ಹಾರುವ ಓತಿ ಒಂದು ಮರದಿಂದ ಇನ್ನೊಂದು ಮರಕ್ಕೆ ಹಾರುತ್ತದೆ. ಈ ಮರದಿಂದ ಆ ಮರಕ್ಕೆ ಹಾರಲು ಎಷ್ಟು ಮಿಲಿಯನ್ ವರ್ಷ ಬೇಕಾಯಿತೋ ಎಂದು ತೇಜಸ್ವಿ ಬರೆಯುತ್ತಾರೆ. ಕೆಲವೇ ಸೆಕೆಂಡ್‌ಗಳಲ್ಲಿ ಹಾರಿರುವುದನ್ನು ಮಿಲಿಯನ್ ವರ್ಷ ಎಂದು ಯಾಕೆ ಬರೆದರು ಎಂದು ನೋಡಿದರೆ ಅದೂ ಜೀವ ವಿಕಾಸದ ರೂಪಕ ಎಂದು ಬಣ್ಣಿಸಿದರು.

ಒಡನಾಡಿಗಳಾದ ಪ್ರದೀಪ್ ಕೆಂಜಿಗೆ, ಪದ್ಮ ಶ್ರೀರಾಮ್, ಕೃಪಾಕರ, ಹಿ.ಚಿ. ಬೋರಲಿಂಗಯ್ಯ, ಜಯಂತ ಕಾಯ್ಕಿಣಿ, ವಿ.ವಿ. ಬೆಳವಾಡಿ, ಕಡಿದಾಳ್ ದಯಾನಂದ್, ಕಡಿದಾಳ್ ಪ್ರಕಾಶ್, ದೇವಂಗಿ ಮನುದೇವ್, ಆರ್. ರಾಘವೇಂದ್ರ, ಬಾಪು ದಿನೇಶ್ ಗೌಡ, ಬಿ.ಜಿ. ಗುಜ್ಜಾರಪ್ಪ, ಜಿ.ಕೆ. ವೆಂಕಟೇಶ್, ಮಲ್ಲಿಕ್ ಒಡನಾಟ ಹಂಚಿಕೊಂಡರು.

ಸಂಕ್ಷಿಪ್ತ ಸುದ್ದಿ

ಮಾಲತಿ

ಎಸ್ ದಿವಾಕರ್

ಎಸ್.ದಿವಾಕರ, ಮಾಲತಿ ಪಟ್ಟಣಶೆಟ್ಟಿಗೆ ಸಾಹಿತ್ಯ ಪ್ರಶಸ್ತಿ

ಶಿವಮೊಗ್ಗ: ಇಲ್ಲಿನ ಕರ್ನಾಟಕ ಸಂಘವು ಜೀವಮಾನ ಸಾಧನೆಗಾಗಿ ‘ದ.ರಾ.ಬೇಂದ್ರೆ ಕಾವ್ಯ’ ಪ್ರಶಸ್ತಿಯನ್ನು ಲೇಖಕಿ ಧಾರವಾಡದ ಮಾಲತಿ ಪಟ್ಟಣಶೆಟ್ಟಿ, ‘ಪ್ರೊ.ತೀ.ನಂಶ್ರೀ ಸಾಹಿತ್ಯ ವಿಮರ್ಶೆ’ ಪ್ರಶಸ್ತಿಯನ್ನು ವಿಮರ್ಶಕ ಬೆಂಗಳೂರಿನ ಎಸ್. ದಿವಾಕರ ಅವರಿಗೆ ನೀಡಿ ಗೌರವಿಸಿದೆ. ಪ್ರಶಸ್ತಿಯು ₹ 25,000 ನಗದು ಹಾಗೂ ಫಲಕ ಒಳಗೊಂಡಿದೆ. ಆಗಸ್ಟ್‌ನಲ್ಲಿ ನಗರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಂ.ಎನ್. ಸುಂದರರಾಜ್ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

‘ಗಣಿಗಾರಿಕೆಗೆ ಅರಣ್ಯಭೂಮಿ ಬೇಡ’

ಬಳ್ಳಾರಿ: ‘ಜಿಲ್ಲೆಯ ಸಂಡೂರು ತಾಲ್ಲೂಕಿನ ದಟ್ಟಾರಣ್ಯದಲ್ಲಿ ಕುದುರೆಮುಖ ಐರನ್ ಓರ್ ಕಂಪನಿ ಲಿಮಿಟೆಡ್ (ಕೆಐಒಸಿಎಲ್) ಮತ್ತು ವಿಐಎಸ್‌ಎಲ್ (ವಿಶ್ವೇಶ್ವರಾಯ ಐರನ್ ಅ್ಯಂಡ್ ಸ್ಟೀಲ್ ಲಿಮಿಟೆಡ್) ಗಣಿಗಾರಿಕೆಗೆ ಅರಣ್ಯ ಭೂಮಿ ನೀಡುವುದು ಅನ್ಯಾಯ ಎಂದು ಸಮಾಜ ಪರಿವರ್ತನಾ ಸಮುದಾಯದ ಮುಖ್ಯಸ್ಥ ಎಸ್.ಆರ್ ಹಿರೇಮಠ ಹೇಳಿದರು.

ರಾಮನಮಲೈ ಶ್ರೇಣಿಯಲ್ಲಿನ ಉದ್ದೇಶಿತ ವಿಐಎಸ್‌ಎಲ್‌ನ ಗಣಿಗಾರಿಕೆಗೆ ಅನುಮತಿ ಪಡೆಯಲು ಆಗಸ್ಟ್ 2ರಂದು ಸಂಡೂರಿನಲ್ಲಿ ಪರಿಸರ–ಸಾರ್ವಜನಿಕ ಆಲಿಕೆ ಸಭೆ ನಡೆಯಲಿದ್ದು, ಇದನ್ನು ವಿರೋಧಿಸಿ ಬಳ್ಳಾರಿಯಲ್ಲಿ ಸೋಮವಾರ ಜನಸಂಗ್ರಾಮ ಪರಿಷತ್ ಮತ್ತು ರೈತ ಸಂಘಟನೆಗಳ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ಪಶು ವೈದ್ಯಾಧಿಕಾರಿ 400 ಹುದ್ದೆಗಳ ನೇಮಕಾತಿ’

ಬೆಂಗಳೂರು: ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯಲ್ಲಿ ಖಾಲಿ ಇರುವ ಒಟ್ಟು 400 (58 ಹೈ.ಕ) ಪಶುವೈದ್ಯಾಧಿಕಾರಿ ಹುದ್ದೆಗಳ ನೇಮಕಾತಿಗೆ ಕೆಪಿಎಸ್‌ಸಿ ಅಧಿಸೂಚನೆ ಹೊರಡಿಸಿದೆ.

ಆಗಸ್ಟ್ 12ರಿಂದ ಸೆ. 12ರ ವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಸಾಮಾನ್ಯ ಅಭ್ಯರ್ಥಿಗಳು ₹600, ಪ್ರವರ್ಗ 2ಎ, 2ಬಿ, 3ಎ, 3ಬಿಗೆ ಸೇರಿದ ಅಭ್ಯರ್ಥಿಗಳು ₹300, ಮಾಜಿ ಸೈನಿಕ ಅಭ್ಯರ್ಥಿಗಳು ₹50 ಶುಲ್ಕ ಪಾವತಿಸಬೇಕು. ಅಭ್ಯರ್ಥಿಗಳು ಕನ್ನಡ ಭಾಷಾ ಪರೀಕ್ಷೆಯಲ್ಲಿ ಅರ್ಹತೆ ಪಡೆಯುವುದು ಕಡ್ಡಾಯ. ತಲಾ 300 ಅಂಕಗಳಿಗೆ ನಡೆಯಲಿರುವ ಸ್ಪರ್ಧಾತ್ಮಕ ಮತ್ತು ನಿರ್ದಿಷ್ಟ ಪತ್ರಿಕೆಯಲ್ಲಿ ಗಳಿಸುವ ಅಂಕಗಳ ಶೇಕಡಾವಾರು ಆಧಾರದಲ್ಲಿ ಮತ್ತು ಮೀಸಲಾತಿ ನಿಯಮದ ಪ್ರಕಾರ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಯಲಿದೆ ಎಂದು ಕೆಪಿಎಸ್‌ಸಿ ತಿಳಿಸಿದೆ.

ಗೋಕರ್ಣ ದೇವಳ ಮೇಲ್ವಿಚಾರಣೆ ಸಮಿತಿ ಪುನರ್ ರಚನೆ

ರಾಜ್ಯ ಸರ್ಕಾರದ ಅರ್ಜಿ: ‘ಸುಪ್ರೀಂ’ ಮಾನ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಗೋಕರ್ಣ ಮಹಾಬಲೇಶ್ವರ ದೇವಸ್ಥಾನದ ನಿರ್ವಹಣೆಗೆ ಮೇಲ್ವಿಚಾರಣಾ ಸಮಿತಿಯನ್ನು ಪುನರ್‌ರಚಿಸುವಂತೆ ಕರ್ನಾಟಕ ಸರ್ಕಾರ ಮಾಡಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ಪುರಸ್ಕರಿಸಿದೆ.

ದೇವಸ್ಥಾನದ ಆಡಳಿತ ನಿರ್ವಹಣೆಗಾಗಿ ಸುಪ್ರೀಂ ಕೋರ್ಟ್ ಆದೇಶದ ಅನುಸಾರ ರಚನೆಯಾಗಿದ್ದ ಮೇಲ್ವಿಚಾರಣಾ ಸಮಿತಿಯಲ್ಲಿನ ಇಬ್ಬರು ಉಪಾಧಿವಂತರು ಮತ್ತು ಇಬ್ಬರು ವಿದ್ವಾಂಸರನ್ನು ಬದಲಾಯಿಸಿದ್ದ ರಾಜ್ಯ ಸರ್ಕಾರದ ಆದೇಶವನ್ನು ಹೈಕೋರ್ಟ್ ರದ್ದುಪಡಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಅರ್ಜಿ ಸಲ್ಲಿಸಿತ್ತು.

ದೇವಸ್ಥಾನದ ನಿರ್ವಹಣೆ ನೋಡಿಕೊಳ್ಳಲು ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ನೇತೃತ್ವದ ಮೇಲುಸ್ತುವಾರಿ ಸಮಿತಿಯನ್ನು ಸುಪ್ರೀಂ ಕೋರ್ಟ್ 2021ರಲ್ಲಿ ನೇಮಿಸಿತ್ತು. ಭಾರತದ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲಾ ಹಾಗೂ ಮನೋಜ್ ಮಿಧ್ರಾ ಅವರ ಪೀಠವು ಶ್ರೀಕೃಷ್ಣ ಸಮಿತಿಯ ವರದಿಯನ್ನು ದಾಖಲಿಸಿಕೊಂಡಿತು.

ನ್ಯಾಯಮೂರ್ತಿ ಶ್ರೀಕೃಷ್ಣ ಅವರು ತಮ್ಮ ವರದಿಯಲ್ಲಿ ದೇವಾಲಯದ ವ್ಯವಹಾರಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಎದುರಾದ ಅಡೆತಡೆಗಳನ್ನು ಉಲ್ಲೇಖಿಸಿದ್ದಾರೆ. ಸಮಿತಿಯ ಕಾರ್ಯಚಟುವಟಿಕೆಯಲ್ಲಿ ಹಸ್ತಕ್ಷೇಪ, ಬೆಂಬಲದ ಕೊರತೆ ಮತ್ತು ಪ್ರತಿ ಹಂತದಲ್ಲೂ ಅಡ್ಡಿಯಿಂದಾಗಿ ಅಧ್ಯಕ್ಷರಾಗಿ ಪರಿಣಾಮಕಾರಿಯಾಗಿ ಮುಂದುವರಿಯಲು ಸಾಧ್ಯವಾಗುತ್ತಿಲ್ಲ ಎಂದು ಅವರು ವರದಿಯಲ್ಲಿ ಹೇಳಿದ್ದಾರೆ.

‘ಸಮಿತಿಯ ವ್ಯವಹಾರಗಳನ್ನು ನಡೆಸಲು ನ್ಯಾಯಾಲಯವು ಯಾವುದೇ ಕಾರ್ಯವಿಧಾನದ ನಿಯಮಗಳನ್ನು ರೂಪಿಸಿಲ್ಲವಾದ್ದರಿಂದ, ನಿರ್ಧಾರಗಳನ್ನು ಬಹುಮತದಿಂದ ತೆಗೆದುಕೊಳ್ಳಬೇಕಾಗುತ್ತದೆ’ ಎಂದು ಅವರು ತಿಳಿಸಿದ್ದಾರೆ.

ಪ್ರಕರಣವೇನು?: ಗೋಕರ್ಣದ ‘ಶ್ರೀ ಮಹಾಬಲೇಶ್ವರ ದೇವಸ್ಥಾನ’ದ ಡಿ–ನೋಟಿಫೈ ಪ್ರಕರಣದ ಸಿವಿಲ್ ದಾವೆಯಲ್ಲಿ ಸುಪ್ರೀಂ ಕೋರ್ಟ್ 2021ರ ಏಪ್ರಿಲ್ 19ರಂದು ಮಧ್ಯಂತರ ಆದೇಶ ನೀಡಿತ್ತು. ಈ ಆದೇಶದ ಅನುಸಾರ ದೇವಸ್ಥಾನದ ಆಡಳಿತ ನಿರ್ವಹಣೆಗಾಗಿ ಬಿ.ಎನ್.ಶ್ರೀಕೃಷ್ಣ ನೇತೃತ್ವದಲ್ಲಿ ಅಧ್ಯಕ್ಷರನ್ನೂ ಒಳಗೊಂಡಂತೆ 8 ಸದಸ್ಯರ ಮೇಲ್ವಿಚಾರಣಾ ಸಮಿತಿ ರಚಿಸಲಾಗಿತ್ತು.

ಏತನ್ಮಧ್ಯೆ, 2023ರ ರಾಜ್ಯ ವಿಧಾನಸಭೆ ಚುನಾವಣೆ ನಂತರ ನೂತನ ರಾಜ್ಯ ಸರ್ಕಾರ ಎಲ್ಲ ನಾಮ ನಿರ್ದೇಶನಗಳನ್ನು 2023ರ ಮೇ 22ರಂದು ರದ್ದುಪಡಿಸಿ ಆದೇಶಿಸಿತ್ತು. ಈ ಆದೇಶದನ್ವಯ ಗೋಕರ್ಣ ದೇವಾಲಯದ ಸಮಿತಿಯಲ್ಲಿದ್ದ ಉಪಾಧಿವಂತರಾದ ಮಹಾಬಲ ಉಪಾಧ್ಯೆ, ದತ್ತಾತ್ರೇಯ ಹಿರೇಗಂಗೆ ಮತ್ತು ವಿದ್ವಾಂಸರಾದ ಪರಮೇಶ್ವರ ಮಾರ್ಕಾಂಡೆ ಹಾಗೂ ಮುರಳೀಧರ ಪ್ರಭು ಅವರನ್ನು ಕೈಬಿಡಲಾಗಿತ್ತು.

ಉಪಾಧಿವಂತರ ಸ್ಥಾನಕ್ಕೆ ಗಣಪತಿ ಶಿವರಾಮ ಹಿರೇಭಟ್ಟ, ಸುಬ್ರಹ್ಮಣ್ಯ ಚಂದ್ರಶೇಖರ ಅಡಿ ಹಾಗೂ ವಿದ್ವಾಂಸರ ಸ್ಥಾನಕ್ಕೆ ಪರಮೇಶ್ವರ ಸುಬ್ರಹ್ಮಣ್ಯ ಪ್ರಸಾದ ರಮಣಿ ಹಾಗೂ ಮಹೇಶ್ ಗಣೇಶ್ ಹಿರೇಗಂಗೆ ಅವರನ್ನು ನಾಮ ನಿರ್ದೇಶನ ಮಾಡಿತ್ತು. ಈ ಕುರಿತಂತೆ ಕಂದಾಯ ಇಲಾಖೆ ಹೊರಡಿಸಿದ್ದ ಆದೇಶವನ್ನು ರಾಮಚಂದ್ರಾಪುರ ಮಠವು ಹೈಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
ಸಂಖ್ಯೆ: **A8/KTBS/ADM/OTEN/2/2023 E-15960** ದಿನಾಂಕ: 29.07.2024
(ಟೆಂಡರ್ ಸಂಖ್ಯೆ: **KTBS/2024-25/SE0003**)

ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು ಕಛೇರಿ ಕೆಲಸಗಳಿಗೆ ಎರಡು ವರ್ಷಗಳ ಅವಧಿಗೆ ಹೊರಗುತ್ತಿಗೆ ಆಧಾರದಲ್ಲಿ ಕಂಪ್ಯೂಟರ್ ಪ್ರೋಗ್ರಾಮರ್, ಅಕೌಂಟ್ಸ್ ಅಂಡ್ ಆಡಿಟ್ ಕೊ–ಆರ್ಡಿನೇಟರ್, ಅಕೌಂಟ್ಸ್ ಅಸಿಸ್ಟೆಂಟ್, ಡಾಟಾ ಎಂಟ್ರಿ ಆಪರೇಟರ್ಸ್, 'ಡಿ' ದರ್ಜೆ ಕೆಲಸಗಾರರು, ವಾಹನ ಚಾಲಕರು, ಪರಿಚಾರಕರು ಮತ್ತು ಕಾವಲುಗಾರರ ಸೇವೆ ಪಡೆಯಲು ಇ–ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ವಿವರಗಳನ್ನು ಇ–ಪೋರ್ಟಲ್‌ನಲ್ಲಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವಿವರವಾಗಿ ಒದಗಿಸಿದೆ. ಅರ್ಹ ಸಂಸ್ಥೆಗಳು **ದಿನಾಂಕ: 05.08.2024 ರಂದು ಸಂಜೆ 5.30 ವರೆಗೆ** ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು **https://textbooks.karnataka.gov.in & www.kppp.karnataka.gov.in** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಇ–ಪೋರ್ಟಲ್ ಸಹಾಯವಾಣಿ::080-46010000 & 080-68948777

ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಸಮಾಜ ಕಲ್ಯಾಣ ಇಲಾಖೆ
ಜಂಟಿ ನಿರ್ದೇಶಕರ ಕಾರ್ಯಾಲಯ, ಧಾರವಾಡ
ಕಚೇರಿ ದೂರವಾಣಿ ಸಂಖ್ಯೆ: 0836–2447201, ಇ–ಮೇಲ್: dswo.dharwad@gmail.com
ಸಂ: JDSWDDWD/FOOD TENDER-DWD&NPK/CR-13/2024-25 ದಿನಾಂಕ: 29–07–2024

ಇ–ಟೆಂಡರ್ ಅಧಿಸೂಚನೆ

ವಿಷಯ : 2024–25ನೇ ಸಾಲಿನಿಂದ ಎರಡು ವರ್ಷಗಳ ಅವಧಿಗೆ ಧಾರವಾಡ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರ ವಿದ್ಯಾರ್ಥಿ ನಿಲಯಗಳು ಮತ್ತು ಸರ್ಕಾರಿ ವಸತಿ ಶಾಲೆ ಹಾಗೂ ನಿರಾಶ್ರಿತರ ಪರಿಹಾರ ಕೇಂದ್ರ ಇಲ್ಲಿಗೆ ಆಹಾರ ಸಾಮಗ್ರಿಗಳನ್ನು ಪೂರೈಸಲು ಟೆಂಡರ್ ಆಹ್ವಾನಿಸಲಾಗಿದೆ.

ಇ–ಟೆಂಡರ್ ಸಂಖ್ಯೆ ಮತ್ತು ದಿನಾಂಕ JDSWDDWD/FOOD TENDER-DWD&NPK/CR-13/2024-25 ದಿನಾಂಕ: 26–07–2024, ಟೆಂಡರ್‌ಗಿಟ್ಟ ಮೊತ್ತ **ರೂ. 36,34,32,323/–** ಇ–ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ: **26–07–2024,** ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **26–09–2024 ರಂದು ಸಂಜೆ 17.30 ಗಂಟೆಯವರೆಗೆ.** ಬಿಡ್ ಪೂರ್ವಭಾವಿ ಸಭೆ ದಿನಾಂಕ: **09–08–2024, ಬೆಳಿಗ್ಗೆ 11.30 ಗಂಟೆಗೆ, ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಧಾರವಾಡ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **30–09–2024 ರಂದು ಬೆಳಿಗ್ಗೆ 11.00 ಗಂಟೆಗೆ. ಜಂಟಿ ನಿರ್ದೇಶಕರ ಕಛೇರಿ, ಸಮಾಜ ಕಲ್ಯಾಣ ಇಲಾಖೆ, ಧಾರವಾಡ.** (ಬದಲಾವಣೆಗೆ ಒಳಪಟ್ಟಿರುತ್ತದೆ) ಹಣಕಾಸು ಬಿಡ್ ತೆರೆಯುವ ದಿನಾಂಕ: **03–10–2024 ರಂದು ಬೆಳಿಗ್ಗೆ 11.00 ಗಂಟೆಗೆ.**
ಇಎಂಡಿ ಮೊತ್ತ: **ರೂ. 36,34,323/–**
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: **ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಡಿಸಿ ಕಚೇರಿ ಆವರಣ, ಧಾರವಾಡ, ದೂರವಾಣಿ ಸಂಖ್ಯೆ: 0836–2447201.**
ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟಿರುವ ಆಸಕ್ತ ಮತ್ತು ಅರ್ಹ ಬಿಡ್‌ದಾರರು ವೆಬ್‌ಸೈಟ್ **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಬಹುದು.

ಸಹಿ/– ಜಂಟಿ ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ, ಧಾರವಾಡ.
ವಾಸಾಸಂಇ/ಧಾರವಾಡ/210/ಅಡ್ವರ್ಟೋ/2024–25

ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಡೀನ್ ಮತ್ತು ನಿರ್ದೇಶಕರ ಕಛೇರಿ, ವಿಕ್ಟೋರಿಯಾ ಆಸ್ಪತ್ರೆ ಆವರಣ,
ಕೋಟೆ, ಬೆಂಗಳೂರು – 560002. ಫೋನ್/ಫ್ಯಾಕ್ಸ್: 080–26705053/26703176
ಇ–ಮೇಲ್: gdcribangalore@gmail.com ವೆಬ್‌ಸೈಟ್: www.karnataka.gov.in/gdcrib
ಸಂಖ್ಯೆ: ಸದಂಕಾಸಂಸಂ/ಸರಬ/06 & 16/2024–25 ದಿನಾಂಕ: 26–07–2024

ಟೆಂಡರ್ ಪ್ರಕಟಣೆ
(ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮುಖಾಂತರ ಮಾತ್ರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ನಿಯಮ 2000 ಹಾಗೂ ಕಾಲಕಾಲಕ್ಕೆ ತಿದ್ದುಪಡಿ ನಿಯಮಾನುಸಾರದಂತೆ ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಗೆ ದಂತ ಸಾಮಗ್ರಿಗಳು, ಕ್ಷ–ಕಿರಣ, ಔಷಧ ಹಾಗೂ ರಾಸಾಯನಿಕ ಸಾಮಗ್ರಿಗಳನ್ನು ಖರೀದಿಸಿ ವಿತರಿಸುವ ಸಂಬಂಧ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯ ಮೂಲಕ ಇ–ಟೆಂಡರ್ ಆಮಂತ್ರಿಸಲಾಗಿದೆ. ಸರಬರಾಜುದಾರರಿಗೆ ಬೇಕಾದ ಟೆಂಡರ್ ನಮೂನೆ / ದಾಖಲೆಗಳು, ಪ್ರಕಟಣೆಗಳು, ವಿವರಗಳು, ಷರತ್ತುಗಳು ಹಾಗೂ ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ಪಡೆದುಕೊಂಡು ಭರ್ತಿ ಮಾಡಿದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವುದು. (ಇ–ಟೆಂಡರ್ ಪರಿಷ್ಕರಣಾ ಶುಲ್ಕ ಇ–ಪ್ರೊಕ್ಯೂರ್‌ಮೆಂಟ್ ನಿಯಮಗಳನುಸಾರ ಅನ್ವಯಿಸುವುದು).

ಇ–ಪ್ರೊಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ

ಕ್ರ. ಸಂ.	ಟೆಂಡರ್ ಸಂಖ್ಯೆ	ಟೆಂಡರ್ ಹೆಸರು
1	DME/2024-25/IND0740	Dental Materials
2	DME/2024-25/IND0741	Dental Disposables
3	DME/2024-25/IND0742	Dental Consumables
4	DME/2024-25/IND0743	Dental Restorative Materials
5	DME/2024-25/IND0744	Dental Surgical and Implants
6	DME/2024-25/IND0745	Disposables & Surgicals for Dental College
7	DME/2024-25/IND0746	X-Ray Consumables for Dental College
8	DME/2024-25/IND0747	Drugs and Other Items
9	DME/2024-25/IND0748	Lab Consumables

ಟೆಂಡರ್ ವೇಳಾಪಟ್ಟಿ: 1) ಟೆಂಡರ್‌ನ ಬಿಡ್ ಪೂರ್ವಭಾವಿ ಸಭೆ ದಿನಾಂಕ: ಕ್ರಮ ಸಂಖ್ಯೆ. 1 ರಿಂದ 9 ಕ್ಕೆ 05–08–2024. 2) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಕೊನೆಯ ದಿನಾಂಕ: ಕ್ರಮ ಸಂಖ್ಯೆ. 1 ರಿಂದ 9 ಕ್ಕೆ 25–08–2024 ರವರೆಗೆ. 3) ಮಾದರಿಗಳನ್ನು ಸಲ್ಲಿಸುವ ಕೊನೆಯ ದಿನಾಂಕ: ಕ್ರಮ ಸಂಖ್ಯೆ. 1 ರಿಂದ 9 ಕ್ಕೆ 26–08–2024 ರವರೆಗೆ.

ಸಹಿ/– ಡೀನ್ ಮತ್ತು ನಿರ್ದೇಶಕರು
ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/1125/ಅಡ್ವರ್ಟೋ/2024–25

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ನಿನ್ನೆ ನಾನು ಬುದ್ಧಿವಂತನಾಗಿದ್ದೆ, ಹೀಗಾಗಿ, ಪ್ರಪಂಚವನ್ನು ಬದಲಿಸಲು ಬಯಸುತ್ತಿದ್ದೆ. ಇಂದು ನಾನು ವಿವೇಕಿಯಾಗಿದ್ದೇನೆ, ಹೀಗಾಗಿ, ನಾನು ಬದಲಾಗುತ್ತಿದ್ದೇನೆ.
-ರೂಮಿ

ಬೆಂಗಳೂರಿನ ಪಿ.ಜಿ.ಗಳಲ್ಲಿ ಸುರಕ್ಷತೆ ಬಿಗಿ ನಿಯಮದ ತುರ್ತು ಅಗತ್ಯ

ಬೆಂಗಳೂರಿನ ಕೋರಮಂಗಲ ಪ್ರದೇಶದಲ್ಲಿ ಇರುವ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರಲ್ಲಿ ವಾಸವಾಗಿದ್ದ ಯುವತಿಯೊಬ್ಬಳನ್ನು ಅದೇ ಕಟ್ಟಡದಲ್ಲಿ ಹತ್ಯೆ ಮಾಡಿರುವ ಪ್ರಕರಣವು ಪಿ.ಜಿ. ಕಟ್ಟಡಗಳಲ್ಲಿನ ಸುರಕ್ಷತೆಯ ವಿಚಾರವಾಗಿ ಹಲವು ಪ್ರಶ್ನೆಗಳನ್ನು ಮೂಡಿಸಿದೆ. ಅಲ್ಲದೆ, ಪಿ.ಜಿ.ಗಳ ಮೇಲೆ ನಿಗಾ ಇರಿಸಲು ಸೂಕ್ತವಾದ ಕಾನೂನಿನ ಅಗತ್ಯ ಇದೆ ಎಂಬುದನ್ನೂ ಈ ಹತ್ಯೆಯು ತೋರಿಸಿಕೊಟ್ಟಿದೆ. ಮಹಿಳೆಯರ ಈ ಪಿ.ಜಿ.ಯನ್ನು ಹಂತಕನು ಯಾವ ಅಡ್ಡಿಯೂ ಇಲ್ಲದೆ ಪ್ರವೇಶಿಸಿದ್ದು ಹಾಗೂ ಮೂರನೆಯ ಮಹಡಿಯಲ್ಲಿ ಇರುವ ಕೊಠಡಿಗೆ ತೆರಳಿದ್ದು, ಇಂತಹ ಕಟ್ಟಡಗಳು ಮಹಿಳೆಯರ ಪಾಲಿಗೆ ಎಷ್ಟು ಅಸುರಕ್ಷಿತವಾಗಿವೆ ಎಂಬುದನ್ನು ಹೇಳುತ್ತಿವೆ. ಬೆಂಗಳೂರಿನಲ್ಲಿ ಸರಿಸುಮಾರು 20 ಸಾವಿರ ಪಿ.ಜಿ.ಗಳು ಇವೆ ಎಂದು ಅಂದಾಜಿಸಲಾಗಿದೆ. ಆದರೆ ಈ ಪೈಕಿ ನಾಲ್ಕರಲ್ಲಿ ಒಂದರಷ್ಟು ಪಿ.ಜಿ.ಗಳು ಕೂಡ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ (ಬಿಬಿಎಂಪಿ) ಕಡ್ಡಾಯವಾಗಿ ಪಡೆಯಬೇಕಿದ್ದ ವಹಿವಾಟು ಪರವಾನಗಿಯನ್ನು ಪಡೆದಿಲ್ಲ.

ಬೆಂಗಳೂರು ಪೊಲೀಸರು ಈಚೆಗೆ ಪಿ.ಜಿ.ಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳನ್ನು ಹೊರಡಿಸಿದ್ದರು. ಪರವಾನಗಿ ಪಡೆಯದೆ ಪಿ.ಜಿ. ನಡೆಸುವಂತೆ ಇಲ್ಲ ಎಂದು ಅದರಲ್ಲಿ ಹೇಳಲಾಗಿತ್ತು. ಪಿ.ಜಿ. ನಡೆಸುವವರು ಅಲ್ಲಿ ವಾಸಿಸುವವರ ಭಾವಚಿತ್ರ ಹಾಗೂ ಗುರುತಿನ ಚೀಟಿ ಪಡೆದುಕೊಳ್ಳಬೇಕು, ಅವರ ರಕ್ತಸಂಬಂಧಿಗಳ ವಿವರ ಮತ್ತು ಮೊಬೈಲ್ ಸಂಖ್ಯೆ ಪಡೆದುಕೊಳ್ಳಬೇಕು ಎಂದು ಕೂಡ ನಿಯಮಾವಳಿಗಳು ಹೇಳುತ್ತವೆ. ಕಟ್ಟಡದಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಸಬೇಕು, ಅಗ್ನಿ ಅವಘಡ ಸಂಭವಿಸಿದರೆ ಅದನ್ನು ನಿಯಂತ್ರಿಸಲು ಅಗತ್ಯ ಸಲಕರಣೆಗಳು ಇರಬೇಕು, 'ಕರ್ನಾಟಕ ಸಾರ್ವಜನಿಕ ಸುರಕ್ಷತಾ ಕಾಯ್ದೆ–2017' ಅನ್ನು ಪಾಲಿಸಬೇಕು ಎಂದು ಸೂಚಿಸಲಾಗಿದೆ. ಪೊಲೀಸ್ ಪರಿಶೀಲನೆಯ ನಂತರವೇ ಅಡುಗೆಯವರನ್ನು, ಪಿ.ಜಿ.ಗೆ ಇತರ ಸಿಬ್ಬಂದಿಯನ್ನು ಹಾಗೂ ಭದ್ರತಾ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು ಎಂದು ನಿಯಮ ಹೇಳುತ್ತದೆ. ಪಿ.ಜಿ. ನಡೆಸುವವರು ತಮ್ಮ ಕಟ್ಟಡದಲ್ಲಿ ಮಾದಕ ವಸ್ತುಗಳ ಸಂಗ್ರಹ ಹಾಗೂ ಅವುಗಳ ಸೇವನೆಯಂತಹ ಅಕ್ರಮ ಚಟುವಟಿಕೆಗಳು ನಡೆಯದಂತೆ ನೋಡಿಕೊಳ್ಳಬೇಕು, ತುರ್ತು ಸಂದರ್ಭಗಳಲ್ಲಿ ಅಗತ್ಯವಿರುವ ಸೇವೆಗಳ ದೂರವಾಣಿ ಸಂಖ್ಯೆಗಳನ್ನು ದೊಡ್ಡದಾಗಿ ಪ್ರದರ್ಶಿಸಬೇಕು, ಪ್ರಥಮ ಚಿಕಿತ್ಸೆಗೆ ಅಗತ್ಯವಿರುವ ಪರಿಕರಗಳು ಸದಾ ಲಭ್ಯವಿರುವಂತೆ ನೋಡಿಕೊಳ್ಳಬೇಕು. ಆದರೆ ಈ ಎಲ್ಲ ನಿಯಮಗಳು ಸಾಮಾನ್ಯವಾಗಿ ಕಾಗದದ ಮೇಲೆ ಮಾತ್ರವೇ ಉಳಿದುಕೊಂಡಿರುತ್ತವೆ. ಸೂಕ್ತವಾದ ಮಾರ್ಗಸೂಚಿಗಳು ಇಲ್ಲದ ಕಾರಣ ಪಿ.ಜಿ.ಗಳು ನಗರದ ಮೂಲಸೌಕರ್ಯದ ಪಾಲಿಗೆ ಒಂದು ಹೊರೆಯಂತೆ ಆಗಿವೆ. ಪಿ.ಜಿ.ಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಇರಿಸಿಕೊಳ್ಳುವುದು ಸಾಮಾನ್ಯವಾಗಿದೆ. ಇದರಿಂದಾಗಿ ಕುಡಿಯುವ ನೀರಿನ ಪೂರೈಕೆ ಹಾಗೂ ಕಸ ಸಂಗ್ರಹ ಸಹಜವಾಗಿಯೇ ಕಷ್ಟವಾಗುತ್ತದೆ. ಬಹುತೇಕ ಪಿ.ಜಿ.ಗಳು ವ್ಯಾಪಾರ ವಹಿವಾಟು ಪರವಾನಗಿಯನ್ನು ಪಡೆದಿಲ್ಲವಾದ ಕಾರಣ, ಅವು ಕುಡಿಯುವ ನೀರಿನ ಸಂಪರ್ಕಕ್ಕೆ ಮನೆ ಬಳಕೆಗೆ ವಿಧಿಸುವ ಪ್ರಮಾಣದಲ್ಲಷ್ಟೇ ಶುಲ್ಕ ಪಾವತಿಸುತ್ತವೆ, ವಾಣಿಜ್ಯ ಚಟುವಟಿಕೆಗಳಿಗೆ ವಿಧಿಸುವ ಪ್ರಮಾಣಕ್ಕೆ ಅನುಗುಣವಾಗಿ ಅವು ಶುಲ್ಕ ಪಾವತಿಸುತ್ತಿಲ್ಲ. ಅಲ್ಲದೆ, ಹಲವು ಪಿ.ಜಿ.ಗಳು ಅಕ್ರಮವಾಗಿ ನಿರ್ಮಿಸಿದ ಕಟ್ಟಡಗಳಲ್ಲಿ ನಡೆಯುತ್ತಿವೆ.

ಕಾನೂನಿಗಿಂತ ಮಿಗಿಲಾಗಿ ವರ್ತಿಸುತ್ತಿರುವ ಪಿ.ಜಿ. ಮಾಲೀಕರಿಗೆ ಲಗಾಮು ಹಾಕುವ ಕೆಲಸ ಆಗಬೇಕು

ಪಿ.ಜಿ. ಕಟ್ಟಡಗಳು ವಿದ್ಯಾರ್ಥಿಗಳ, ಯುವ ಉದ್ಯೋಗಿಗಳ ಪಾಲಿಗೆ ವರದಾನ ಎಂಬುದರಲ್ಲಿ ಅನುಮಾನ ಇಲ್ಲ. ಇವರಿಗೆ ಬೆಂಗಳೂರಿನ ದುಬಾರಿ ಬಾಡಿಗೆಯ ಕೊಠಡಿಗಳನ್ನು ಅಥವಾ ಮನೆಗಳನ್ನು ಪಡೆಯುವುದು ಆಗದ ಕೆಲಸ. ಆದರೆ, ವಿಸ್ತೃತ ಮಾರ್ಗಸೂಚಿಗಳನ್ನು ರೂಪಿಸಿ ಈ ಪಿ.ಜಿ.ಗಳನ್ನು ಕಾನೂನಿನ ನಿಯಂತ್ರಣಕ್ಕೆ ಒಳಪಡಿಸುವ ಅಗತ್ಯವೂ ಇದೆ. ಸ್ಥಳೀಯ ಆಡಳಿತ ಸಂಸ್ಥೆಗಳು ಒದಗಿಸುವ ಸೇವೆಗಳಿಗೆ ಪಿ.ಜಿ.ಗಳು ವಾಣಿಜ್ಯ ದರದಲ್ಲಿ ಶುಲ್ಕ ಪಾವತಿಸುವಂತೆ ಮಾಡುವುದರ ಜೊತೆಗೆ, ಅವು ತಮ್ಮಲ್ಲಿ ನೆಲೆ ಕಂಡುಕೊಳ್ಳುವವರಿಗೆ ಅಗತ್ಯ ಭದ್ರತೆ ಕಲ್ಪಿಸುವಂತೆಯೂ ಆಗಬೇಕು. ಪರವಾನಗಿ ಇಲ್ಲದೆ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಪರವಾನಗಿ ಪಡೆದಿದ್ದರೂ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡುತ್ತಿಲ್ಲದ ಪಿ.ಜಿ.ಗಳನ್ನು ಗುರುತಿಸಿ ಅವುಗಳ ವಿರುದ್ಧ ಕ್ರಮ ಜರುಗಿಸುವ ಕೆಲಸವು ಬಿಬಿಎಂಪಿ ಕಡೆಯಿಂದ ಆಗಬೇಕು. ಹಲವು ಕಡೆ ಪಿ.ಜಿ. ಮಾಲೀಕರು ಕಾನೂನಿಗಿಂತ ಮಿಗಿಲಾಗಿ ವರ್ತಿಸುತ್ತಿದ್ದಾರೆ, ಇಂಥವರಿಗೆ ಲಗಾಮು ಹಾಕುವ ಕೆಲಸ ಆಗಬೇಕು.

ದಿನದ ಟ್ವೀಟ್

ಅಧಿಕ ಹೊರೆ ತಗ್ಗಿಸಿ

ಹಿರಿಯ ನಾಗರಿಕರು ಬೃಹತ್ ಮೊತ್ತದ ವೈದ್ಯಕೀಯ ಪ್ರೀಮಿಯಂ ಕಟ್ಟಲು ಎಷ್ಟು ಕಷ್ಟಪಡುತ್ತಾರೆ ಎಂಬುದನ್ನು ಖುದ್ದಾಗಿ ಕಂಡಿದ್ದೇನೆ. ಅಂಥದ್ದರಲ್ಲಿ ಅದರ ಮೇಲೆ ಶೇಕಡ 18ರಷ್ಟು ಜಿಎಸ್‌ಟಿ ವಿಧಿಸಲು ವಿಶೇಷವಾದ ಹೃದಯವೇ ಬೇಕಾಗುತ್ತದೆ!

ಡಿ.ಮುತ್ತುಕೃಷ್ಣನ್, ಹೂಡಿಕೆದಾರ

ಕಿಡಿನುಡಿ



ಆಘಾತಕಾರಿ, ಕರುಣಾಜನಕ ಸ್ಥಿತಿ. ದೆಹಲಿಯಲ್ಲಿ ಕೋಚಿಂಗ್ ಕೇಂದ್ರವೊಂದರ ನೆಲಮಾಳಿಗೆಗೆ ನುಗ್ಗಿದ ನೀರಿನಲ್ಲಿ ವಿದ್ಯಾರ್ಥಿಗಳು ಮುಳುಗಿ ಮೃತಪಟ್ಟ ಪ್ರಕರಣದಲ್ಲಿ, ಜೀಪ್ ಚಾಲಕನನ್ನು ಬಂಧಿಸಿ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ. ಆತ ಏನು ಮಾಡಿದ? ಕೋಚಿಂಗ್ ಕೇಂದ್ರದ ಹೊರಭಾಗದಲ್ಲಿ ನಿಂತಿದ್ದ ಪ್ರವಾಹದ ನೀರಿನಲ್ಲಿ ಕಾರನ್ನು ಜೋರಾಗಿ ಓಡಿಸಿಕೊಂಡು ಹೋಗುವ ಮೂಲಕ, ಆ ಕೇಂದ್ರದಲ್ಲಿ ಅಕ್ರಮವಾಗಿ ಕಟ್ಟಿದ್ದ ನೆಲಮಾಳಿಗೆಗೆ ನೀರು ನುಗ್ಗುವಂತೆ ಮಾಡಿದ.

ಶಿವ್ ಅರೂರ್, ಪತ್ರಕರ್ತ, ಲೇಖಕ

25 ವರ್ಷಗಳ ಹಿಂದೆ

ಶುಕ್ರವಾರ, 30-7-1999

● **ಸರ್ಕಾರಕ್ಕೆ ಕೋಟ್ಯಂತರ ರೂ. ನಷ್ಟ**

ಬೆಂಗಳೂರು, ಜುಲೈ 29– ವಿಜಾಪುರ ಜಿಲ್ಲೆಯ ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳ ಶಿಕ್ಷಕರ ನೇಮಕಾತಿ ಹಾಗೂ ಅನುದಾನ ಬಿಡುಗಡೆಯಲ್ಲಿ ನಡೆದಿರುವ ಅಕ್ರಮ ಹಾಗೂ ಹಣಕಾಸಿನ ಅವ್ಯವಹಾರಗಳಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವಾಗಿದೆ ಎಂದು ಅಂದಾಜು ಮಾಡಲಾಗಿದೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸಿದ ಶಿಕ್ಷಣಾಧಿಕಾರಿಗಳು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸ್ವಾಭಾವಿಕ ಬೆಳವಣಿಗೆಯಿಲ್ಲದ ತರಗತಿಗಳಿಗೆ ತಮ್ಮ ಅಧಿಕಾರ ವ್ಯಾಪ್ತಿ ಮೀರಿ 40 ಶಾಲೆಗಳಿಗೆ ಒಟ್ಟು 114 ತರಗತಿಗಳನ್ನು ತೆರೆಯಲು ಅನುಮತಿ ನೀಡಿದ್ದಾರೆ ಎಂದು ಆರೋಪಿಸಲಾಗಿದೆ.

● **ದೇವೇಗೌಡರ ಬೆಂಬಲಿಗರ ಉಚ್ಚಾಟನೆ ಕ್ರಮಕ್ಕೆ ಶರದ್ ಬಣದ ಸಮ್ಮತಿ**

ನವದೆಹಲಿ, ಜುಲೈ 29 (ಯುಎನ್‌ಐ)– ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಹಾಗೂ ಅವರ ಬೆಂಬಲಿಗರನ್ನು ಉಚ್ಚಾಟನೆ ಮಾಡಿರುವ ಅಧ್ಯಕ್ಷ ಶರದ್ ಯಾದವ್ ಅವರ ನಿರ್ಧಾರಕ್ಕೆ ಜನತಾದಳ ರಾಷ್ಟ್ರೀಯ ಕಾರ್ಯ-ನಿರ್ವಾಹಕ ಮತ್ತು ರಾಷ್ಟ್ರೀಯ ಮಂಡಳಿ ಸಭೆ ಇಂದು ಅನುಮೋದನೆ ನೀಡಿತು.

ಎಚ್.ಡಿ. ದೇವೇಗೌಡ ಅವರು ನಾಳೆ ಕರೆದಿರುವ ರಾಷ್ಟ್ರೀಯ ಮಂಡಳಿ ಸಭೆಯಲ್ಲಿ ಪಾಲ್ಗೊಳ್ಳದಂತೆ ಎಲ್ಲ ಸದಸ್ಯರಿಗೆ ಶರದ್ ಬಣದ ರಾಷ್ಟ್ರೀಯ ಮಂಡಳಿ ಸಭೆ ಎಚ್ಚರಿಕೆ ನೀಡಿದೆ.

50 ವರ್ಷಗಳ ಹಿಂದೆ

ಮಂಗಳವಾರ, 30-7-1974

● **ಅಸ್ಪೃಶ್ಯತಾ ಪ್ರಕರಣಗಳ ತನಿಖೆಗೆ ಐಜಿಪಿ ಕಚೇರಿಯಲ್ಲಿ ವಿಶೇಷ ವಿಭಾಗದ ರಚನೆ**

ಬೆಂಗಳೂರು, ಜುಲೈ 29– ಹರಿಜನರಿಗೆ ಕಿರುಕುಳ ಕೊಡುವುದು, ಅವರ ಮೇಲೆ ಹೀನಕೃತ್ಯ ನಡೆಸುವುದು ಹಾಗೂ ಅಸ್ಪೃಶ್ಯತಾ ಪ್ರಕರಣಗಳನ್ನು ವ್ಯವಹರಿಸಲು ಐ.ಜಿ.ಪಿ. ಕಚೇರಿಯಲ್ಲಿ ವಿಶೇಷ ವಿಭಾಗವನ್ನು ರಚಿಸಲಾಗುವುದು. ಈ ಸಂಬಂಧ ಸರ್ಕಾರಕ್ಕೆ ಐ.ಜಿ.ಪಿ. ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ.

ವಿಶೇಷ ವಿಭಾಗವು ಪೊಲೀಸ್ ಸೂಪರಿಂಟೆಂಡೆಂಟ್ ಅವರ ನೇತೃತ್ವದಲ್ಲಿರು-ವುದೆಂದು ಐ.ಜಿ.ಪಿ. ಶ್ರೀ ಸಿ.ವಿ. ರಾವ್ ಅವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿ, ಈ ವಿಭಾಗದಲ್ಲಿ ಎಸ್.ಪಿ. ಅವರ ಕೈಕೆಳಗೆ ಡೆಪ್ಯುಟಿ ಪೊಲೀಸ್ ಸೂಪರಿಂಟೆಂಡೆಂಟ್ ಒಬ್ಬರು, ಇಬ್ಬರು ಇನ್‌ಸ್ಪೆಕ್ಟರ್‌ಗಳು, 4 ಸಬ್ ಇನ್‌ಸ್ಪೆಕ್ಟರ್‌ಗಳು, 4 ಮಂದಿ ಹೆಡ್‌ಕಾನ್‌ಸ್ಟೆಬಲ್‌ಗಳು, 8 ಮಂದಿ ಕಾನ್‌ಸ್ಟೆಬಲ್‌ಗಳು ಕೆಲಸ ಮಾಡುವರೆಂದರು.

● **ಕರ್ನಾಟಕ 'ತಡೆಹಿಡಿದ' ಕಾವೇರಿ ನೀರನ್ನು ಬಿಡಲು ಒತ್ತಾಯ**

ಮದರಾಸು, ಜುಲೈ 29– ಕರ್ನಾಟಕವು 'ಕಾನೂನು ವಿರುದ್ಧ ತಡೆಹಿಡಿದಿರುವ' 10 ಟಿ.ಎಂ.ಸಿ. (ಅಂದರೆ ಸಹಸ್ರ ಕೋಟಿ ಘನ ಅಡಿ) ನೀರನ್ನು ಕೃಷ್ಣರಾಜ ಸಾಗರದಿಂದ ಬಿಡುಗಡೆ ಮಾಡಲು ಒತ್ತಾಯ ತರಬೇಕೆಂದು ತಮಿಳುನಾಡು ಮುಖ್ಯಮಂತ್ರಿ ಕರುಣಾನಿಧಿ ಅವರು ಕೇಂದ್ರವನ್ನು ಕೋರಿದ್ದಾರೆ.

ಬೆಂಗಳೂರು ವರದಿ: 'ಕಾವೇರಿ ಜಲವಿವಾದ ಸಂಬಂಧದಲ್ಲಿ ತಮಿಳುನಾಡಿಗೆ ಇನ್ನೂ ಒಪ್ಪಿಗೆ ಇಲ್ಲದಿರುವುದು ವಿಷಾದಕರ' ಎಂದು ಲೋಕೋಪಯೋಗಿ ಇಲಾಖೆ ಮಂತ್ರಿ ಶ್ರೀ ಚನ್ನಬಸಪ್ಪ ಅವರು ಹೇಳಿದ್ದಾರೆ.

ಗ್ಯಾರಂಟಿ ಕೊಟ್ಟರೆ ಸಾಲದು, ಆಡಳಿತವೂ ಪಾರದರ್ಶಕವಾಗಿರಬೇಕು

ರಾಜ್ಯ ರಾಜಕೀಯದಲ್ಲಿ ಅಕಾಲಿಕ ಮಳೆ!



ಅನುಸಂಧಾನ

ರವೀಂದ್ರ ಭಟ್ಟ

ಮಹಾಭಾರತದ ಅರಣ್ಯ ಪರ್ವದಲ್ಲಿ ಒಂದು ಘಟನೆ ಬರುತ್ತದೆ. ಒಂದು ದಿನ ಎತ್ತರದ ಮರದ ತುದಿಯಲ್ಲಿ ಒಂದೇ ಒಂದು ಹಣ್ಣು ಇರುವುದು ದ್ರೌಪದಿಗೆ ಕಾಣುತ್ತದೆ. 'ಅದು ನನಗೆ ಬೇಕು, ತಂದುಕೊಡು' ಎಂದು ಭೀಮನಿಗೆ ಹೇಳುತ್ತಾಳೆ. 'ಅಷ್ಟೇ ತಾನೆ' ಎಂದು ಭೀಮ ಆ ಹಣ್ಣನ್ನು ತಂದುಕೊಡುತ್ತಾನೆ. ಹಣ್ಣು ದ್ರೌಪದಿಯ ಕೈಗೆ ಬಂದ ತಕ್ಷಣವೇ ಬಹಳಷ್ಟು ಅಪಶಕುನಗಳಾಗುತ್ತವೆ. ಮುಂದೆ ಯಾವುದೋ ಕೆಟ್ಟ ಘಟನೆ ನಡೆಯುವ ಮುನ್ಸೂಚನೆಗಳು ಸಿಗುತ್ತವೆ. ಇದರಿಂದ ಪಾಂಡವರು ಭೀತಿಗೆ ಒಳಗಾಗುತ್ತಾರೆ. ಆಗ ಧರ್ಮರಾಯನು ಕೃಷ್ಣನನ್ನು ಕರೆಯುತ್ತಾನೆ.

ಕೃಷ್ಣ ಬಂದವನೇ ಭೀಮ ಕಿತ್ತ ಹಣ್ಣಿನ ಮರದ ವೈಶಿಷ್ಟ್ಯಗಳನ್ನು ವಿವರಿಸುತ್ತಾನೆ. 'ಅಯ್ಯಾ ಭೀಮ, ನೀನು ದುಡುಕಿ ಹಣ್ಣು ಕಿತ್ತೆಯಲ್ಲ ಆ ಮರದ ಹೆಸರು ಜಂಬೂಫಲ ವೃಕ್ಷ. ಆ ಮರದ ಕೆಳಗೆ ಒಬ್ಬ ಮಹಾನ್ ತಪಸ್ವಿ ತಪಸ್ಸು ಮಾಡುತ್ತಿದ್ದಾನೆ. ವರ್ಷದಲ್ಲಿ ಒಂದು ಬಾರಿ ಮಾತ್ರ ತಪಸ್ಸಿನಿಂದ ಏಳುತ್ತಾನೆ. ಅವನು ಕಣ್ಣು ಬಿಟ್ಟು ಮರದ ತುದಿ ನೋಡುತ್ತಾನೆ. ಜಂಬೂಫಲ ಅವನ ಕೈಗೆ ಬೀಳುತ್ತದೆ. ಅದನ್ನು ಆಹಾರವಾಗಿ ಸೇವಿಸಿ ಮತ್ತೆ ಒಂದು ವರ್ಷ ತಪಸ್ಸಿನಲ್ಲಿ ತೊಡಗುತ್ತಾನೆ. ಒಂದೊಮ್ಮೆ ತಪಸ್ವಿ ಕಣ್ಣು ಬಿಟ್ಟಾಗ ಮರದ ತುದಿಯಲ್ಲಿ ಹಣ್ಣು ಕಾಣದೇ ಇದ್ದರೆ ಆ ಹಣ್ಣಿಗಾಗಿ ಆಸೆಪಟ್ಟವರು ಮತ್ತು ಕಿತ್ತವರ ತಲೆ ಹೋಳಾಗುತ್ತದೆ. ತಪಸ್ವಿ ಕಣ್ಣು ಬಿಡುವುದರೊಳಗಾಗಿ ಹಣ್ಣನ್ನು ಅದು ಮೊದಲಿದ್ದ ಸ್ಥಾನಕ್ಕೆ ಸೇರಿಸಬೇಕು' ಎನ್ನುತ್ತಾನೆ.

'ಇದಕ್ಕೆ ಪರಿಹಾರ ಏನು?' ಎಂದು ಧರ್ಮರಾಯ ಕೇಳಿದಾಗ 'ದ್ರೌಪದಿ ಕೈಯಲ್ಲಿರುವ ಹಣ್ಣನ್ನು ನೆಲಕ್ಕೆ ಇಡಬೇಕು. ದ್ರೌಪದಿಯೂ ಸೇರಿದಂತೆ ಪಾಂಡವರೆಲ್ಲರೂ ತಮ್ಮ ಜೀವಿತಾವಧಿಯಲ್ಲಿ ಯಾರಿಗೂ ತಿಳಿಸದ ಗುಟ್ಟನ್ನು ಬಹಿರಂಗ ಮಾಡಿದರೆ ಹಣ್ಣು ಆಳೆತ್ತರ ಆಳೆತ್ತರ ಮೇಲಕ್ಕೆ ಹೋಗಿ ತನ್ನ ಸ್ಥಾನವನ್ನು ಸೇರಿಕೊಳ್ಳುತ್ತದೆ' ಎಂದು ಕೃಷ್ಣ ಉಪಾಯ ಹೇಳಿದ. ಅದರಂತೆ ಧರ್ಮರಾಯನೂ ಸೇರಿ ಪಾಂಡವರೆಲ್ಲರೂ ತಮ್ಮ ತಮ್ಮ ಗುಟ್ಟುಗಳನ್ನು ಹೇಳಿದರು. ಹಣ್ಣು ಮೇಲಕ್ಕೆ ಹೋಗಿ ಇನ್ನೊಂದು ಆಳೆತ್ತರದಲ್ಲಿ ಸ್ವಸ್ಥಾನ ತಲುಪುವ ಹಂತಕ್ಕೆ ಬಂತು. ಆಗ ದ್ರೌಪದಿಯ ಸರದಿ ಬಂತು. ಆಕೆ ಹೇಳಿದ ಗುಟ್ಟು ಹೊರಬರುತ್ತಿದ್ದಂತೆ ಮೇಲಿದ್ದ ಹಣ್ಣು ನೆಲಕ್ಕೆ ಬಿತ್ತು. 'ಯಾಕೆ ಹೀಗೆ?' ಎಂದು ಕೇಳಿದಾಗ, ಕೃಷ್ಣ 'ದ್ರೌಪದಿ ನೀನು ಸುಳ್ಳು ಹೇಳುತ್ತಾ ಇದ್ದೀಯ' ಎಂದಾಗ ದ್ರೌಪದಿ ತಾನು ಕರ್ಣನನ್ನೂ ಬಯಸಿದ ಸತ್ಯವನ್ನು ಬಹಿರಂಗಪಡಿಸಿದಳು. ಹಣ್ಣು ಸ್ವಸ್ಥಾನ ಸೇರಿತು.

ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸ್ಥಿತಿಯೂ ಹೀಗೆಯೇ ಆಗಿದೆ. ಮುಡಾ ಪ್ರಕರಣದ ಬಗ್ಗೆ ಅವರು, ಅವರ ಹಿಂಬಾಲಕರು, ಸಚಿವ ಸಂಪುಟದ ಸಹೋದ್ಯೋಗಿಗಳು ಎಲ್ಲರೂ ಸತ್ಯವನ್ನೇ ಹೇಳುತ್ತಿದ್ದಾರೆ ಎಂದುಕೊಂಡರೂ ಪ್ರಕರಣ ಸುಖಾಂತ್ಯವಾಗುತ್ತಿಲ್ಲ. ಯಾಕೆ? ಯಾಕೆಂದರೆ ಈ ಪ್ರಕರಣದ ಕೇಂದ್ರಬಿಂದುವಾಗಿರುವ ಮುಖ್ಯಮಂತ್ರಿ ಪತ್ನಿ ಇನ್ನೂ ಮಾತನಾಡಿಲ್ಲ. ಮುಖ್ಯಮಂತ್ರಿ ಪತ್ನಿಗೆ ದಾನ ಕೊಟ್ಟ ಭಾಮೈದ ಕೂಡ ಬಾಯಿ ಬಿಟ್ಟಿಲ್ಲ.

ಈ ವಿಷಯದ ಬಗ್ಗೆ ಸಿದ್ದರಾಮಯ್ಯ ಅವರು ಬಹಳಷ್ಟು ಮಾತನಾಡಿದ್ದಾರೆ. ಸದನದ ಒಳಗೆ ಮತ್ತು ಹೊರಗೆ ವೀರಾವೇಶದ ಘೋಷಣೆ ಮಾಡಿದ್ದಾರೆ. ಅವರ ಸಂಪುಟದ ಸಚಿವರೂ ಸಮರ್ಥನೆ ನೀಡಿದ್ದಾರೆ. ಪ್ರಕರಣದ ತನಿಖೆಗೆ ನ್ಯಾಯಾಂಗ ಆಯೋಗವನ್ನೂ ರಚಿಸಲಾಗಿದೆ. ಆದರೂ ಸಿದ್ದರಾಮಯ್ಯ ಅವರ ಪ್ರಾಮಾಣಿಕತೆಯನ್ನು ಒಪ್ಪಿಕೊಳ್ಳಲು ಜನ ಸಿದ್ಧರಿಲ್ಲ. ನ್ಯಾಯಾಂಗದ ವರದಿಯಲ್ಲಿ ಸಿದ್ದರಾಮಯ್ಯ ಮತ್ತು ಅವರ ಕುಟುಂಬ ತಪ್ಪು ಮಾಡಿಲ್ಲ ಎಂಬ ವರದಿ ಬಂದರೂ ಜನ ನಂಬುವುದಿಲ್ಲ. ಈ ಪ್ರಕರಣವನ್ನು ವಿರೋಧ ಪಕ್ಷಗಳು ಒತ್ತಾಯಿಸುತ್ತಿರುವಂತೆ ಸಿಬಿಐ ತನಿಖೆಗೆ ಒಪ್ಪಿಸಿ ಅಲ್ಲಿಂದಲೂ ಕ್ಲೀನ್ ಚಿಟ್ ಬಂದರೂ ಜನರಿಗೆ ಸಮಾಧಾನವಾಗುವುದಿಲ್ಲ. ಯಾಕೆಂದರೆ ಜನರ ಮನಃಸ್ಥಿತಿ ಅಷ್ಟೊಂದು ಹದಗೆಟ್ಟು ಹೋಗಿದೆ. ಯಾರನ್ನೂ ನಂಬುವ ಸ್ಥಿತಿಯಲ್ಲಿ ಅವರಿಲ್ಲ. ಒಮ್ಮೆ ಅವರು ನಾಯಿ ಮಾಂಸ ಎಂದು ನಂಬಿಬಿಟ್ಟ ಮೇಲೆ ಯಾವ ಪ್ರಯೋಗಾಲಯದ ವರದಿ ಬಂದರೂ ಅವರು ನಂಬುವುದಿಲ್ಲ.

ಮುಖ್ಯಮಂತ್ರಿ ಸಿದ್ದರಾಮಯ್ಯ ನಿಜವಾಗಿಯೂ ಈಗ ಸಂಕಷ್ಟಕ್ಕೆ ಸಿಲುಕಿದ್ದಾರೆ. ಏಕಾಂಗಿಯಾಗಿ ಹೋರಾಟವನ್ನೂ ಮುಂದುವರಿಸಿದ್ದಾರೆ. ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿಯಾಗಿ ಒಂದು ವರ್ಷ ಕಳೆಯುವುದರೊಳಗೇ ಇಂತಹ ಸ್ಥಿತಿ ಯಾಕೆ ಬಂತು? ದೇವರಾಜ ಅರಸು ನಂತರ ಮುಖ್ಯಮಂತ್ರಿಯಾಗಿ ಐದು ವರ್ಷದ ಅವಧಿಯನ್ನು ಸಂಪೂರ್ಣವಾಗಿ ಪೂರ್ಣಗೊಳಿಸಿದ್ದು ಸಿದ್ದರಾಮಯ್ಯ ಮಾತ್ರ. ಅರಸು ಅವರಂತೆಯೇ ಸಿದ್ದರಾಮಯ್ಯ ಅವರನ್ನೂ ಪದಚ್ಯುತಗೊಳಿಸುವ ತಂತ್ರ ನಡೆಯುತ್ತಿರಬಹುದೇ? 'ಹಿಂದುಳಿದ ಕುರುಬ ಸಮುದಾಯಕ್ಕೆ ಸೇರಿದ ನಾನು ಎರಡನೇ ಬಾರಿ ಮುಖ್ಯಮಂತ್ರಿಯಾಗಿರುವುದನ್ನು ಕೆಲವರಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲ. ಅರಸು ವಿರುದ್ಧ ಮಾಡಿದ ಪಿತೂರಿಯನ್ನೇ ನನ್ನ ವಿರುದ್ಧವೂ ನಡೆಸುತ್ತಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿಕೊಳ್ಳುತ್ತಿದ್ದಾರೆ. ಅದರಲ್ಲಿ ಸತ್ಯ ಇರಬಹುದೇ?

ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ ಭಾರಿ ಬಹುಮತದೊಂದಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷ, ಒಂದು ವರ್ಷ ಕಳೆಯುವುದರೊಳಗೇ ಭ್ರಷ್ಟಾಚಾರದ ಕೂಪಕ್ಕೆ ಸಿಲುಕಿಕೊಂಡಿದ್ದು ಯಾಕೆ? ಈ ಪ್ರಶ್ನೆಗೆ ಉತ್ತರ ಸಿಕ್ಕರೆ ಸಿದ್ದರಾಮಯ್ಯ ಅನುಭವಿಸುತ್ತಿರುವ ಎಲ್ಲ ಸಂಕಷ್ಟಗಳಿಗೂ ಮುಕ್ತಿ ದೊರೆಯುತ್ತದೆ. ತಮ್ಮ ನಲವತ್ತು ವರ್ಷಗಳ ರಾಜಕೀಯದಲ್ಲಿ ಒಂದೂ ಕಪ್ಪುಚುಕ್ಕೆ ಇಲ್ಲ ಎಂದು ಅವರು ಹೇಳಿಕೊಳ್ಳುತ್ತಾರೆ. ಅದು ನಿಜ ಎಂದೂ ಒಪ್ಪೋಣ. ಆದರೆ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿ ಆದ ನಂತರ ಆಡಳಿತದಲ್ಲಿ ಅವರ ಹಿಡಿತ ಹಿಂದಿನ ಬಾರಿಯ ಹಾಗೆ ಬಿಗಿಯಾಗಿಲ್ಲ ಎಂದು ಅವರ ಹಿಂಬಾಲಕರೇ ಹೇಳುತ್ತಿದ್ದಾರೆ. ಸಂಪುಟದ ಸಚಿವರಿಂದಲೂ ವಿರೋಧ ಪಕ್ಷದಲ್ಲಿ ಇರುವ ಸಿದ್ದರಾಮಯ್ಯ ಅವರ ಅಭಿಮಾನಿಗಳ ಬಾಯಲ್ಲೂ ಇಂತಹ ಮಾತುಗಳು ಬಂದಿವೆ. ಸಂಸದರಾಗಿದ್ದ ಪ್ರತಾಪ ಸಿಂಹ ಅವರಂತೂ 'ಸಿದ್ದರಾಮಯ್ಯ ಭ್ರಷ್ಟ ಎಂದು ಹೇಳಲಾರೆ' ಎಂದಿದ್ದಾರೆ. ಇಷ್ಟೆಲ್ಲಾ ಇದ್ದೂ ಸಿದ್ದರಾಮಯ್ಯ ಪ್ರಕರಣದಲ್ಲಿ ಸಿಲುಕಿಕೊಂಡಿದ್ದು ಹೇಗೆ ಎಂದು ಕೇಳಿದರೆ, ಆಡಳಿತದ ಮೇಲೆ ಹಿಡಿತ ತಪ್ಪಿದ್ದೇ ಕಾರಣ ಎಂಬ ಉತ್ತರ ಬರುತ್ತದೆ. ಗ್ಯಾರಂಟಿಗಳನ್ನು ಜಾರಿಗೊಳಿಸುವ ಭರದಲ್ಲಿ ಆಡಳಿತ ಸಡಿಲವಾಗಿರಬಹುದೇ?

ರಾಜ್ಯದ ರಾಜಕೀಯ ಪರಿಸ್ಥಿತಿಯನ್ನು ಅವಲೋಕಿಸಿದರೆ, ರಾಜ್ಯ ಸರ್ಕಾರಕ್ಕೆ ಇನ್ನೂ ಒಂದೇ ವರ್ಷ ಆಗಿದೆ ಎನ್ನುವುದನ್ನು ನಂಬುವುದು ಕಷ್ಟ. ಮುಡಾ ಪ್ರಕರಣ, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ರಾಜ್ಯದ ಎಲ್ಲ ರಾಜಕಾರಣಿಗಳ ನಿದ್ದೆ ಕೆಡಿಸಿವೆ. ವಿಧಾನಸಭೆ ಅಧಿವೇಶನದ ಬಹುಪಾಲು ಸಮಯವನ್ನು ಈ ವಿಷಯಗಳೇ ತಿಂದುಹಾಕಿವೆ. ಬಿಜೆಪಿ– ಜೆಡಿಎಸ್ ಮೈತ್ರಿಕೂಟದವರು ಬೆಂಗಳೂರಿನಿಂದ ಮೈಸೂರಿಗೆ ಪಾದಯಾತ್ರೆ ನಡೆಸಲು ಮುಂದಾಗಿದ್ದಾರೆ. ಆ ಕಡೆ ರಮೇಶ ಜಾರಕಿಹೊಳಿ, ಬಸನಗೌಡ ಪಾಟೀಲರು ಮತ್ತೊಂದು ಪಾದಯಾತ್ರೆಯ ಮಾತನಾಡುತ್ತಿದ್ದಾರೆ. ಬಿಜೆಪಿ– ಜೆಡಿಎಸ್ ಪಾದಯಾತ್ರೆ ನಡೆಸುವ ಎಲ್ಲ ಕಡೆ ತಾವೂ ಸಂಘರ್ಷ ನಡೆಸುವುದಾಗಿ ಕಾಂಗ್ರೆಸ್ ಮುಖಂಡರು ಹೇಳಿದ್ದಾರೆ.

ಸಾಮಾನ್ಯವಾಗಿ ಸಾರ್ವತ್ರಿಕ ಚುನಾವಣೆಗೆ ಇನ್ನೊಂದು ವರ್ಷವೋ ಆರು ತಿಂಗಳೋ ಇದ್ದಾಗ ಇಂತಹ ಪಾದಯಾತ್ರೆಗಳು ನಡೆಯುವುದು ಮಾಮೂಲು. ಆದರೆ ಸದ್ಯಕ್ಕೆ ಚುನಾವಣೆಯೇನೂ ಇಲ್ಲ. ರಾಜ್ಯ ರಾಜಕೀಯದಲ್ಲಿ ಈಗ ಅಕಾಲಿಕ ಮಳೆ. ಅಕಾಲಿಕ ಮಳೆ ಯಾವ ಬೆಳೆಗೂ ಒಳ್ಳೆಯದಲ್ಲ ಎಂಬುದು ತಜ್ಞರ ಅಂಬೋಣ.

ಪ್ರಜಾಪ್ರಭುತ್ವದಲ್ಲಿ ಚುನಾವಣೆಯೇ ಜಂಬೂಫಲ ವೃಕ್ಷ. ಅಧಿಕಾರವೆಂಬುದೇ ಹಣ್ಣು. ಮಹಾಭಾರತದ ಕಾಲದಲ್ಲಿ ಸತ್ಯ ಹೇಳಿದರೆ ಹಣ್ಣಿನ ಹತ್ತಿರಕ್ಕೆ ಹೋಗಬಹುದಿತ್ತು. ಆದರೆ ಈಗ ಕಲಿಯುಗ. ಸುಳ್ಳು ಹೇಳಿದಷ್ಟೂ ಹಣ್ಣಿನ ಹತ್ತಿರ ಹೋಗಬಹುದು. ಹಣ್ಣಿನ ಮೇಲೆ ಕಣ್ಣು ಎಲ್ಲರಿಗೂ ಇರುತ್ತದೆ. ನಮ್ಮ ಜನ ಸುಳ್ಳಿಗೆ ಮರುಳಾದ ಹಾಗೆ ಸತ್ಯಕ್ಕೆ ವಶವಾಗುವುದಿಲ್ಲ. ಬಹುತೇಕ ಎಲ್ಲ ಚುನಾವಣೆಯಲ್ಲಿಯೂ ಇದು ಸಾಬೀತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಆಡಳಿತ ಬಿಗಿಗೊಳಿಸುವುದೇ ಸಿದ್ದರಾಮಯ್ಯ ಅವರ ಮುಂದಿರುವ ದಾರಿ.

ಚುರುಮುರಿ

ಬೌ ಬೌ ಕೌನ್ಸೆಲಿಂಗ್

• ಡಿ.ಎಸ್.ಲಿಂಗರಾಜು

ರಾತ್ರಿ ಹೋಟೆಲಲ್ಲಿ ತಿಂದ ಮಟನ್ ಬಿರಿಯಾನಿ ಕುರೀದಾ, ನಾಯಿದಾ! ಎಲ್ಲೋ ಯತ್ವಾಸಾಗಿ ಬೌ ಬೌ ಬಿರಿಯಾನಿ ತಿಂದ್ಬುಟ್ನಾ ಅಂದ್ಕತಿದ್ದೆ. ಯಾರನ್ನ ಕಂಡ್ರೂ ಬೊಗಳಂಗಾಯ್ತಿತ್ತು. ಆಗ ಬಂದ ತುರೇಮಣೆ 'ಟ್ರಾನ್ಸ್‌ಫರಿಗೆ ಕೌನ್ಸೆಲಿಂಗ್ ಮಾಡ್ತಾರಂತೆ. ಬಾ' ಅಂತ ಹೆಡ್ರಾಪೀಸುತಕ್ಕೆ ನನ್ನೂ ಕರಕೋದ್ರು.

'ಯರ್ರೀ ನಂಬರ್ 138? ತುರೇಮಣೆ ಬಲ್ರೀ!' ಅಂತ ಕರೆದೇಟಿಗೇ ಒಳಿಕ್ಕೋದ ತುರೇಮಣೆ ಐದೇ ನಿಮಿಷಕ್ಕೆ ವಾಪಾಸ್ ಬಂದು 'ಸಾಯಾಬ್ರು ರಾಂಗಾಗಿದ್ರು ಕಲಾ. ಬೆಂಗಳೂರಿಗೆ ಬಂದು ಇಪ್ಪತ್ತೊರ್ಸಾತು. ಇಲ್ಲೇ ಗೂಟ ಹೊಡಕಂದು ಕೂಕಂದಿದ್ದೀರೇನ್ರಿ ಅಂತ ಗದರಿಸಿದರು' ಅಂದ್ರು.

'ಆಮೇಲೆ ಸಾ?' ಅಂದೆ.

'ಸಯಾಬ್ರು, ಅಲ್ರೀ ಆಪೀಸಿಗೆ 12 ಗಂಟೆಗೆ ಬತ್ತೀರಿ. ಮನ್ನೆ ನೀವು ಮೀಟಿಂಗಿಗೂ ಬರಲಿಲ್ಲ ಅಂತ ಕಮಿಸನರ್ ಭಾಳಾ ಸೀರಿಯಸ್ಸಾಗಿದ್ರು ಗೊತ್ತಾ ಅಂದ್ರು'. ನಾನು ಹಸುಮಗೀನಂಗೆ 'ಹೌದ್ರಾ! ಈಗ ಕಮೀಷನರು ಯಾವ ಆಸ್ಪತ್ರೆಲೌರೆ ಸಾ?' ಅಂದ್ನಾ. ಸಯಾಬ್ರು ಗೊಳ್ ಅಂತ ನಕ್ಕುಬುಟ್ರು'.

'ಟ್ರಾನ್ಸ್‌ಫರ್ ಗ್ಯಾರಂಟಿಯಾತು'.

'ಇಲ್ಲ! ನಾನು ಗೊಳ್ ಅಂತ ಅತ್ತುಬುಟ್ಟೆ ಕಲಾ. 'ಯಾಕ್ರಿ?' ಅಂದ್ರು ಸಯಾಬ್ರು. 'ಸಾ ನಮ್ಮಪ್ಪ-ಅವ್ವನಿಗೆ ಸ್ಯಾನೆ ವಯಸ್ಸಾಗ್ಯದೆ. ಅವರಿಗೆ ಮಕ ತೊಳದು, ಮುದ್ದೆ ಉಣ್ಣೆಸಿ ಮುಕ್ಕುರಿಕ್ಯಂದು ಆಪೀಸಿಗೆ ಬರೋತ್ಗೆ ಲೇಟಾತದೆ ಸಾ' ಅಂತ ಕಣ್ಣೀರಾಕಿದೆ'.

'ಆಮೇಲೆ?'

'ಆಮೇಲಿನ್ನೇನು! 'ಎಲ್ಲಾರೂ ಸೈ ಅನ್ನಂಗಿದ್ದೀರಿ. ನಿಮ್ಮಂತ ನೀಯತ್ತಿರೋ ಮಕ್ಕಳಿರದೇ ಎಮ್ಮೆ ಕನ್ರಿ' ಅಂದ ಸಯಾಬ್ರು ಮೂಡಕ್ಕೋ ಬೂಡಕ್ಕೋ ಹೇಳಿ ನನಗೂ ಪುಸ್ಕಟ್ಟೆ ಸೈಗಾರಿಕಾ ಸೈಟು ಕೊಡಿಸ್ತರಂತೆ ಕಲಾ. ಇದೇ ಖುಷೀಲಿ ಎರಡು ಮಿಳ್ಳೆ ಎಣ್ಣೆ ಹಾಕುಮಾ ಬಾ' ಅಂತ ಕರಕೋದ್ರು.

'ಇಲ್ದಿರೋ ನಿಮ್ಮಪ್ಪ-ಅವ್ವನ್ನೂ ಕಳ್ಳ ಲೆಕ್ಕದಲ್ಲಿ ತೋರಿದ್ದೀರಲ್ಲ, ನಿಮ್ಮ ನಂಬರು 138 ಅಂದಾಗಲೇ ಗೊತ್ತಾತು, ನೀವು ಹಳೇ 420 ಅಂತ' ಅಂದೋನು ಚಾಕ್ಣಬಾಯಿಗೆ ಎಸಕಂದು ಬೌ ಅಂದೆ.

ಸಂಗತ

ಪ್ರೀತಿಯಲ್ಲಿ ಬಂದಿಯಾದ 'ವೀರೂ'

ಹುಟ್ಟಿದ ಕೆಲವೇ ವಾರಗಳಲ್ಲಿ ತಾಯಿಯ ಮಡಿಲಿನಿಂದ ದೂರವಾಗಿರುವ ಈ ಹುಲಿಮರಿ, ಈಗ ಮೃಗಾಲಯದಲ್ಲಿ ಆಸರೆ ಪಡೆದಿದೆ

• ಗುರುರಾಜ್ ಎಸ್. ದಾವಣಗೆರೆ

ಗದಗ ಎಂದಾಕ್ಷಣ ಅಲ್ಲಿನ ವೀರನಾರಾಯಣನ ಗುಡಿ, ಕುಮಾರವ್ಯಾಸನ ಕರ್ನಾಟ ಭಾರತ ಕಥಾಮಂಜರಿ, ಪಂಚಾಕ್ಷರಿ ಗವಾಯಿ, ಪುಟ್ಟರಾಜ ಗವಾಯಿ ಅವರ ಸಂಗೀತ, ಭೀಮಸೇನ ಜೋಶಿಯವರ ಹಿಂದೂಸ್ತಾನಿ ಗಾಯನದ ಝಲಕು ಕಿವಿಗಳನ್ನು ತುಂಬುತ್ತದೆ. ವೀರೇಶ್ವರ ಪುಣ್ಯಾಶ್ರಮ, ತೋಂಟದಾರ್ಯ ಮಠದ ವಿವಿಧ ದಾಸೋಹಗಳು, ಕಪ್ಪತಗುಡ್ಡದ ಗಾಳಿ ಗಿರಣಿಗಳು, ಮಾಗಡಿ ಕೆರೆ, ಪುಸ್ತಕ ಮುದ್ರಣಾಲಯಗಳು, ಆಲೂರು ವೆಂಕಟರಾಯರು, ಚೆನ್ನವೀರ ಕಣವಿಯವರ ಕಾವ್ಯ... ಹೀಗೆ ಹತ್ತು ಹಲವು ವ್ಯಕ್ತಿಗಳು, ಸ್ಥಳವೈವಿಧ್ಯ, ವೈಶಿಷ್ಟ್ಯಗಳು ಅನಾಯಾಸವಾಗಿ ನೆನಪಿಗೆ ಬರುತ್ತವೆ. ಮೌಲಿಕ ಶಿಕ್ಷಣ ನೀಡುವ ಶೈಕ್ಷಣಿಕ ಸಂಸ್ಥೆಗಳ ಘಮ ಮೂಗಿಗೆ ಬಡಿಯುತ್ತದೆ. ಇಷ್ಟೆಲ್ಲ ಹಿರಿಮೆಗಳನ್ನು ತನ್ನದಾಗಿಸಿಕೊಂಡಿರುವ ಗದಗದ ಹಿರಿಮೆಗೆ ಇನ್ನೊಂದು ಗರಿ ಎಂಬಂತೆ ಈಗ 'ವೀರೂ' ಜೊತೆಯಾಗಿದ್ದಾನೆ.

ಇವನೊಬ್ಬ ವನ್ಯಪ್ರಾಣಿ. ಹುಟ್ಟಿದ ಕೆಲವೇ ವಾರಗಳಲ್ಲಿ ತಾಯಿಯ ಮಡಿಲಿನಿಂದ ದೂರವಾದ ಹುಲಿಮರಿ. ಎರಡು ತಿಂಗಳಿನಿಂದ ಗದಗದ ಬಿಂಕದಕಟ್ಟಿ ಮೃಗಾಲಯದಲ್ಲಿ ಇದ್ದಾನೆ. ಅಧಿಕಾರಿಗಳಿಂದ ಹಿಡಿದು ಎಲ್ಲ ಸಿಬ್ಬಂದಿಯ ಬಾಯಲ್ಲೂ ಇವನ ಬಗ್ಗೆಯೇ ಮಾತು, ಚರ್ಚೆ, ಚಿಂತನೆ. ಸದ್ಯಕ್ಕೆ ತಜ್ಞರ ಸಲಹೆಯಂತೆ ಹುಲಿಮರಿಗೆ ಆರೈಕೆ ನಡೆಯುತ್ತಿದೆ. ಅಂತರರಾಷ್ಟ್ರೀಯ ಹುಲಿ ದಿನಾಚರಣೆಯ (ಜುಲೈ 29) ಈ ಹೊತ್ತಿನಲ್ಲಿ, ಅದರ ಮುಂದಿನ ವಾಸ್ತವ್ಯಕ್ಕೆ ಸಂಬಂಧಿಸಿದ ಯೋಜನೆ ಸಿದ್ಧವಾಗುತ್ತಿದೆ.

ಕಾಡಿನಲ್ಲಿ ಸುತ್ತಾಡುವಾಗ ಅಕಸ್ಮಾತ್ ದಾರಿತಪ್ಪಿ ತಾಯಿಯಿಂದ ದೂರವಾಗಿದ್ದ ವೀರೂ, ಅರಣ್ಯದ ಅಂಚಿನ ಮನೆಯೊಂದರ ಹಿತ್ತಲಿನಲ್ಲಿ ಸುಸ್ತಾಗಿ ಮಲಗಿಬಿಟ್ಟಿದ್ದ. ಕಾಳಿ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದ ಹಳಿಯಾಳ ವಿಭಾಗದ ವಿರ್ನೋಲಿ ವಲಯದಲ್ಲಿ ಏಪ್ರಿಲ್ 27ರಂದು ಗ್ರಾಮದ ಜನರ ಕಣ್ಣಿಗೆ ಬಿದ್ದಿದ್ದ. ಮರಿಯೊಂದೇ ಇರಲಾರದು, ಜೊತೆಗೆ ತಾಯಿ ತಂದೆಯೂ ಇರಬಹುದು ಎಂದು ಹುಷಾರಾಗಿ ಸುತ್ತಲೂ ಸರ್ವೇಕ್ಷಣೆ ನಡೆಸಿದ ಗ್ರಾಮಸ್ಥರು, ಸ್ವಲ್ಪ ಸಮಯದ ನಂತರ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸುದ್ದಿ ಮುಟ್ಟಿಸಿದರು. ತಕ್ಷಣವೇ ಕಾರ್ಯಪ್ರವೃತ್ತರಾದ ಅಧಿಕಾರಿಗಳು ವೀರೂನನ್ನು ರಕ್ಷಿಸಿ ಬೋನಿನಲ್ಲಿಟ್ಟು ಆಹಾರ ನೀಡಿದರು.

ನಿತ್ರಾಣಗೊಂಡಿದ್ದ ವೀರೂ ಮೊದಲಿಗೆ ಆಹಾರ ಸೇವಿಸಲಿಲ್ಲ. ಹೇಗಾದರೂ ಮಾಡಿ ಅದನ್ನು ತಾಯಿಯೊಂದಿಗೆ ಸೇರಿಸಬೇಕು ಎಂದು ಇಲಾಖೆಯವರು ಮಾಡಿದ ಪ್ರಯತ್ನ ಫಲ ಕೊಡಲಿಲ್ಲ. ಅಧಿಕಾರಿಗಳು ಹುಲಿಯನ್ನು ಕೂಡಲೇ ಮೃಗಾಲಯಕ್ಕೆ ಹಸ್ತಾಂತರಿಸಿದರು. ಮೃಗಾಲಯಕ್ಕೆ ಬಂದಾಗ ವೀರೂನ ತೂಕ ಬರೀ 13.5 ಕೆ.ಜಿ.ಯಷ್ಟಿತ್ತು. ಸಾಮಾನ್ಯವಾಗಿ ಆ ವಯಸ್ಸಿನ ಹುಲಿಗಳ ತೂಕ 20ರಿಂದ 22 ಕೆ.ಜಿ.ಯಷ್ಟಿರುತ್ತದೆ. ತಾಯಿಯಿಂದ ಬೇರ್ಪಟ್ಟ ಮೇಲೆ ಆಹಾರ, ನೀರು ಸಿಗದೇ ಉಪವಾಸ ಬಿದ್ದಿದ್ದರಿಂದ ಇದರ ತೂಕ ಕಡಿಮೆ ಇತ್ತು. ಈಗ ನಿಧಾನವಾಗಿ ಮೃಗಾಲಯದ ವಾತಾವರಣಕ್ಕೆ ಹೊಂದಿಕೊಳ್ಳುತ್ತಿರುವ ವೀರೂ ಪ್ರತಿದಿನ ಒಂದು ಕೆ.ಜಿ. ಚಿಕನ್ ಮತ್ತು ಒಂದು ಕೆ.ಜಿ. ಮಾಂಸ ತಿನ್ನುವುದನ್ನು ರೂಢಿ ಮಾಡಿಕೊಂಡಿದ್ದಾನೆ. ತೂಕ ಬರೋಬ್ಬರಿ 10 ಕೆ.ಜಿ.ಯಷ್ಟು ಹೆಚ್ಚಾಗಿದೆ. ವೀರೂನನ್ನು ಸರಿಯಾಗಿ ಆರೈಕೆ ಮಾಡಲು ಚಂದ್ರು ಎಂಬ ವಾಚರ್‌ನನ್ನು ನೇಮಿಸಲಾಗಿದೆ. ನೀಡುವ ಆಹಾರವನ್ನು ಹಟ ಮಾಡದೆ ತಿನ್ನುತ್ತಾನೆ. ಬೇರೆ ಯಾರಾದರೂ ಹತ್ತಿರ ಹೋಗಲು ಪ್ರಯತ್ನಿಸಿದರೆ ತೀಕ್ಷ್ಣವಾಗಿ ಗುರಾಯಿಸುವ ವೀರೂ ಆರೋಗ್ಯದಿಂದಿದ್ದಾನೆ.



ಬೇಟೆ ಮತ್ತು ವನ್ಯಜೀವನದ ವಿಧಿವಿಧಾನಗಳನ್ನು ಕಲಿಸಬೇಕಾಗಿದ್ದ ತಾಯಿಯಿಂದ ದೂರವಾಗಿರುವ ವೀರೂನನ್ನು ಹಿಂತಿರುಗಿ ಕಾಡಿಗೆ ಬಿಡುವುದು ಸಾಧ್ಯವೇ ಇಲ್ಲ. 'ಹುಲಿತನ' ಗಳಿಸಲಾರದೆ ಕಾಡಿನ ನೈಸರ್ಗಿಕ ವಾತಾವರಣದಲ್ಲಿ ಬದುಕುವುದು ಸುಲಭವಲ್ಲ. ಆದ್ದರಿಂದ ವೀರೂನ ಮುಂದಿನ ಜೀವನವು ಮೃಗಾಲಯದಲ್ಲಿಯೇ ನಡೆಯಲಿದೆ ಎಂದು ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ. ಆದರೂ ಮನುಷ್ಯರ ಸಂಪರ್ಕ ಆದಷ್ಟು ಕಡಿಮೆ ಇರುವಂತೆ ನೋಡಿಕೊಂಡು ಮೃಗೀಯ ಗುಣ ಕಡಿಮೆಯಾಗದಂತೆ ಮರಿಯನ್ನು ಹುಲಿಯ ರೀತಿಯಲ್ಲಿಯೇ ಬೆಳೆಸಲಾಗುತ್ತಿದೆ.

ವನ್ಯಪ್ರಾಣಿಗಳ ಜೀವನದಲ್ಲಿ ಮರಿಗಳು ತಾಯಿಯಿಂದ ಬೇರ್ಪಡುವುದು ಅಸಹಜವೇನೂ ಅಲ್ಲ. ತಾಯಿ ಹುಲಿಗೆ ಬೇಟೆ ಸಿಗದೆ ಮರಿಗಳಿಗೆ ಆಹಾರ ಒದಗಿಸಲಾಗದಿದ್ದಾಗ, ಸರಹದ್ದಿಗಾಗಿ ನಡೆಯುವ ಹೋರಾಟದಲ್ಲಿ ಸಾವನ್ನಪ್ಪಿದಾಗ, ಇಲ್ಲವೇ ಕಳ್ಳಬೇಟೆಗೆ ಬಲಿಯಾದಾಗ ಮರಿಗಳು ತಾಯಿಯಿಂದ ಬೇರ್ಪಡುತ್ತವೆ. ಅರಣ್ಯದಂಚಿನ ಮನೆಯಲ್ಲಿ ಸಿಗುವುದಕ್ಕೂ ಹದಿನೈದು ದಿನ ಮುಂಚೆ ಮರಿ ಮತ್ತು ತಾಯಿ ಹುಲಿ ಒಟ್ಟಿಗಿದ್ದದ್ದನ್ನು ಕಂಡಿದ್ದಾಗಿ ಬೈಕ್ ಸವಾರನೊಬ್ಬ ಹೇಳಿದ್ದ. ಅಕಸ್ಮಾತ್ ಬೇರ್ಪಟ್ಟಿದ್ದರೆ ತಾಯಿ ಹುಲಿಯು ಮರಿಯನ್ನು ಹುಡುಕುವ ಪ್ರಯತ್ನವನ್ನು ಖಂಡಿತ ಮಾಡುತ್ತಿತ್ತು. ಅಂಥ ಪ್ರಯತ್ನದ ಯಾವ ಕುರುಹೂ ಇಲ್ಲ ಎಂಬುದು ಅಧಿಕಾರಿಗಳು ಮತ್ತು ಅರಣ್ಯದ ಅಂಚಿನ ಜನರ ಮಾತು.

ಸಂಗ್ರಹಾಲಯದಲ್ಲಿ ವೀರೂ ಸದೃಢವಾಗಿ ಬೆಳೆಯುತ್ತಿದ್ದಾನೆ. ಆದರೆ ಬಂದವರನ್ನು ಮುಗ್ಧವಾಗಿ ನೋಡುವ ಅವನ ಕಣ್ಣುಗಳಲ್ಲಿ 'ನನ್ನ ತಾಯಿ ಎಲ್ಲಿ' ಎಂಬ ಪ್ರಶ್ನೆ ಮತ್ತು 'ಹುಡುಕಿಕೊಡಿ' ಎಂಬ ಬೇಡಿಕೆ ಇವೆಯೇನೋ ಎನಿಸುತ್ತದೆ.

ವಾಚಕರ ವಾಣಿ

ಉದ್ಯಮ ವಲಯದ ಅನಪೇಕ್ಷಿತ ನಡೆ

ಖಾಸಗಿ ರಂಗದಲ್ಲಿ ಕನ್ನಡಿಗರಿಗೆ ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸುವ ಉದ್ದೇಶದ ಕರಡು ಮಸೂದೆಗೆ ಉದ್ಯಮ ವಲಯ ವಿರೋಧ ವ್ಯಕ್ತಪಡಿಸಿರುವುದು ಸರಿಯಾದ ನಡೆಯಲ್ಲ. ಕಳ್ಳನಿಗೊಂದು ಪಿಳ್ಳೆ ನೆವ ಎನ್ನುವಂತೆ ಕೌಶಲ, ಪರಿಣತಿ, ಅರ್ಹತೆ ಎಂದು ನೆಪ ಮುಂದಿಡುವುದು ತರವಲ್ಲ.

ಕನ್ನಡ ನಾಡಿನ ಯುವಕರು ತಾಂತ್ರಿಕ ಪರಿಣತಿಯಲ್ಲಿ ಪ್ರಪಂಚದಲ್ಲಿಯೇ ಮುಂದಿದ್ದಾರೆ. ಇನ್ಫೊಸಿಸ್‌ನ ನಾರಾಯಣ ಮೂರ್ತಿ ಮತ್ತು ಅವರ ಪತ್ನಿ, ಲೇಖಕಿ ಸುಧಾಮೂರ್ತಿ ಕನ್ನಡಿಗರಲ್ಲವೇ? ಅವರು ಹುಟ್ಟುವಾಗಲೇ ಇದನ್ನೆಲ್ಲಾ ಕಲಿತು ಬಂದಿದ್ದರೇ? ಪಡೆದ ತರಬೇತಿಯಿಂದ ತಾನೇ ಈ ಮಟ್ಟದ ಸಾಧನೆ ಮಾಡಿರುವುದು? ಕನ್ನಡಿಗರಿಗೆ ಉದ್ಯೋಗ ಕೊಡದ ಈ ಉದ್ದಿಮೆಗಳು ಬೆಂಗಳೂರಿನಲ್ಲಿ ಇದ್ದರೆಷ್ಟು ಬಿಟ್ಟರೆಷ್ಟು? ಇಲ್ಲಿನ ನೆಲ, ಜಲ, ವಿದ್ಯುತ್ ಎಲ್ಲವೂ ರಿಯಾಯಿತಿ ದರದಲ್ಲಿ ಬೇಕು, ಆದರೆ ಕನ್ನಡಿಗರಿಗೆ ಉದ್ಯೋಗ ಕೊಡುವುದಿಲ್ಲ ಅನ್ನುವುದಾದರೆ ಅಂಥವರಿಂದ ಕರ್ನಾಟಕಕ್ಕೆ ಏನು ಉಪಯೋಗ?

ಟಿ.ಶಿವಮೂರ್ತಿ ಉಪ್ಪಾರ, ಕೆಸ್ತೂರು, ಯಳಂದೂರು

ಅರ್ಪಣ!

ನಿರೂಪಕಿ, ನಟಿ
ಅಪರ್ಣಾ ನಿಧನ
ಸಾಂಸ್ಕೃತಿಕ ಲೋಕ ವಿಷಣ್ಣ
'ಅಪರ್ಣಾ' ಎಂದರೆ ಪಾರ್ವತಿ
ಈಗ ನಿರೂಪಕಿ, ಅಭಿನೇತ್ರಿ
ಜಗಜ್ಜನನಿಯ ಪದತಲಕ್ಕೆ
ಅರ್ಪಣ (ನಾಡಿನ ಅಶ್ರುತರ್ಪಣ!)

ಸಿ.ಪಿ.ಕೆ., ಮೈಸೂರು

ಪರ್ಯಾಯ ರಾಜಕಾರಣ ಸವಾಲು ಮೆಟ್ಟಲಿ

'ರಾಜಕೀಯ ಪಕ್ಷಗಳು ಈ ನೆಲದ ನೋವು ಮರೆತಿರುವ ಹಿನ್ನೆಲೆಯಲ್ಲಿ ಹೊಸ ಪಕ್ಷ ಹಾಗೂ ಪರ್ಯಾಯ ರಾಜಕಾರಣದ ಅಗತ್ಯವಿದೆ' ಎಂದಿದ್ದಾರೆ ಕೋಟಿಗಾನಹಳ್ಳಿ ರಾಮಯ್ಯ (ಪ್ರ.ವಾ., ಜುಲೈ 29). ನಿಜ, ನಾನು ಬಲ್ಲಂತೆ ಕಮ್ಯುನಿಸ್ಟ್ ಪಕ್ಷವನ್ನು ಹೊರತುಪಡಿಸಿ ಉಳಿದ ಎಲ್ಲಾ ರಾಜಕೀಯ ಪಕ್ಷಗಳು ನಮ್ಮ ನೆಲದ ನೋವು ಮತ್ತು ಸಂಕಟವನ್ನು ಮರೆತಿವೆ. ಈ ಕಾರಣದಿಂದಲೇ ಬಹಳ ಹಿಂದೆ ಪರ್ಯಾಯ ರಾಜಕಾರಣದ ಕನಸು ಕಂಡ ರೈತ ನಾಯಕ ದಿವಂಗತ ಪ್ರೊ. ನಂಜುಂಡಸ್ವಾಮಿ 'ಕನ್ನಡ ದೇಶ' ಎಂಬ ಪಕ್ಷಕ್ಕೆ ಚಾಲನೆ ನೀಡಿದರು. ನಂತರ ಸಾಹಿತಿ ಮತ್ತು ಪತ್ರಕರ್ತ ಪಿ.ಲಂಕೇಶ್ 'ಪ್ರಗತಿರಂಗ' ಎಂಬ ಪಕ್ಷವನ್ನು ಹುಟ್ಟುಹಾಕಿದರು.

ಈ ಎರಡೂ ಪ್ರಯತ್ನಗಳು ರಾಜಕೀಯ ಶಕ್ತಿಯಾಗಿ ಮುಂದಕ್ಕೆ ಚಲಿಸಲೇ ಇಲ್ಲ! ಈಗಲೂ ಸಾಹಿತಿ ದೇವನೂರ ಮಹಾದೇವ ಅವರು ಪರ್ಯಾಯ ರಾಜಕೀಯಕ್ಕಾಗಿ 'ಸರ್ವೋದಯ ಕರ್ನಾಟಕ' ಎಂಬ ರಾಜಕೀಯ ಪಕ್ಷದ ಮುಖಂಡರಾಗಿದ್ದಾರೆ. ಈ ಪಕ್ಷಕ್ಕೆ ಸಹ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಲಾಗಿಲ್ಲ. ಹೀಗಾಗಿ, ದೇಶದ ಮತದಾರರನ್ನು ಕೋಮುವಾದ, ಹಣ, ಹೆಂಡದಿಂದ ಕಲುಷಿತಗೊಳಿಸಿರುವ ಈ ಸನ್ನಿವೇಶದಲ್ಲಿ, ಪರ್ಯಾಯ ರಾಜಕೀಯದ ಮುಂದೆ ಬಹುದೊಡ್ಡ ಸವಾಲುಗಳಿವೆ.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಮೇಕೆದಾಟು ಅಣೆಕಟ್ಟು: ಅಗತ್ಯ ಮನಗಾಣಿಸಿ

ರಾಜ್ಯದಲ್ಲಿ ಈ ವರ್ಷ ಉತ್ತಮ ಮಳೆಯಾಗಿದೆ. ಬಹುಪಾಲು ಅಣೆಕಟ್ಟುಗಳು ತುಂಬಿವೆ. ಕನ್ನಡ ನಾಡಿನ ಜೀವನದಿ ಕಾವೇರಿ ಮೈದುಂಬಿಕೊಂಡು ಹರಿಯುತ್ತಿದೆ. ಪರಿಣಾಮವಾಗಿ, ತಮಿಳುನಾಡಿನ ಮೆಟ್ಟೂರು ಜಲಾಶಯ ಬಹುಪಾಲು ಭರ್ತಿಯಾಗಿ, ಅಲ್ಲಿನ ನೀರು ಸಮುದ್ರ ಸೇರುತ್ತಿದೆ. ಇದು, ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಿಸಬೇಕಾದ ಅಗತ್ಯವನ್ನು ಎತ್ತಿ ತೋರುತ್ತದೆ. ಇಲ್ಲಿ ಸಂಗ್ರಹವಾಗುವ ನೀರಿನಿಂದ ನಾಡಿಗೆ ಉಪಯೋಗ ಆಗುತ್ತದೆ. ಈ ವಿಷಯವನ್ನು ಕಾವೇರಿ ನೀರು ಪ್ರಾಧಿಕಾರದ ಗಮನಕ್ಕೆ ತಂದು, ಅಣೆಕಟ್ಟು ನಿರ್ಮಾಣದ ಅವಶ್ಯಕತೆಯನ್ನು ಮನಗಾಣಿಸಲಿ. ಇದರಿಂದ ಎರಡೂ ರಾಜ್ಯಗಳಿಗೆ ಪ್ರಯೋಜನ ಆಗುತ್ತದೆ.

ಈ ಹಿಂದೆ ಮೇಕೆದಾಟುವಿನಲ್ಲಿ ಅಣೆಕಟ್ಟು ನಿರ್ಮಾಣ ಮಾಡಲು ಕಾಂಗ್ರೆಸ್ ಮುಖಂಡರು ಪಾದಯಾತ್ರೆ ಮಾಡಿದ್ದು ಎಲ್ಲರಿಗೂ ನೆನಪಿದೆ. ರಾಜ್ಯದ ಕೆಲವೆಡೆ ಉತ್ತಮ ಮಳೆಯಾದರೂ ಬೆಂಗಳೂರು, ತುಮಕೂರು, ಕೋಲಾರ ಭಾಗಗಳಲ್ಲಿ ಭಾಗಶಃ ಮಳೆಯಾಗಿದೆ. ಹೇಮಾವತಿ ನದಿಯಿಂದ ವಿವಿಧ ಕೆರೆಗಳಿಗೆ ನೀರು ಹರಿಸಿ ತುಂಬಿಸಲಿ. ಉದಾಸೀನ ಧೋರಣೆ ಬೇಡ.

ರುದ್ರೇಶ್ ಅದರಂಗಿ, ಬೆಂಗಳೂರು

ಒತ್ತಡ ನಿರ್ವಹಣೆ: ಸಕಾಲಿಕ ಕಾರ್ಯಾಗಾರ

ರಾಷ್ಟ್ರೀಯ ಮಾನಸಿಕ ಕಾರ್ಯಕ್ರಮದಡಿ ಪಿಯುಸಿ ವಿದ್ಯಾರ್ಥಿಗಳಲ್ಲಿನ ಮಾನಸಿಕ ತುಮುಲವನ್ನು ಅರಿತು ಮಾರ್ಗದರ್ಶನ ನೀಡುವ ದಿಸೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಹಾಗೂ ಮಾನಸಿಕ ಆರೋಗ್ಯ ಕಾರ್ಯಕ್ರಮಾಧಿಕಾರಿಗಳು ಜಂಟಿಯಾಗಿ ಆಯೋಜಿಸಿದ್ದ ಕೌಶಲ ಹಾಗೂ ಒತ್ತಡ ನಿರ್ವಹಣೆ ಕುರಿತ ತರಬೇತಿ ಕಾರ್ಯಾಗಾರ ಸಕಾಲಿಕವಾಗಿತ್ತು. ಮಂಡ್ಯ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಇದಕ್ಕಾಗಿ ಎಲ್ಲಾ ಕಾಲೇಜಿನ ಒಬ್ಬರು ಉಪನ್ಯಾಸಕರನ್ನು ನಿಯೋಜಿಸಿದ ಕಾರ್ಯ ಶ್ಲಾಘನೀಯ. ಇಲಾಖೆಗೆ ಸಂಬಂಧಿಸಿದಂತೆ ಈ ರೀತಿಯ ಕಾರ್ಯಕ್ರಮ ರಾಜ್ಯದಲ್ಲಿಯೇ ಮೊದಲು ಎನಿಸುತ್ತದೆ.

ಪಿಯುಸಿ ಹಂತದ ವಿದ್ಯಾರ್ಥಿಗಳು ಹದಿಹರೆಯದವರಾಗಿದ್ದು, ಕೆಲವರು ಬಾಲ್ಯ ಮತ್ತು ಯೌವನದ ನಡುವೆ ಸೂತ್ರವೇ ಇಲ್ಲದ ಗಾಳಿಪಟದಂತೆ ಆಗಿದ್ದಾರೆ. ಬದಲಾದ ಆಹಾರ ಪದ್ಧತಿಯಿಂದ, ಸ್ಮಾರ್ಟ್‌ಫೋನ್ ಗೀಳಿನಿಂದ ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಂಡು ಒತ್ತಡ, ಖಿನ್ನತೆ, ಕೋಪ, ದುಶ್ಚಟಗಳಿಗೆ ದಾಸರಾಗಿದ್ದಾರೆ. ಇದರಿಂದ ಆತ್ಮಹತ್ಯೆ, ಅಪಘಾತದಂತಹ ಪ್ರಕರಣಗಳು ಹೆಚ್ಚುತ್ತಿವೆ. ಹಾಗಾಗಿ, ಉಪನ್ಯಾಸಕರು ಪಠ್ಯಕ್ಕೆ ಅಂಟಿಕೊಂಡು ಅಂಕಗಳಿಗಷ್ಟೇ ಆದ್ಯತೆ ನೀಡದೆ, ಮಕ್ಕಳ ಅಂತರಂಗವನ್ನು ಅರಿತು ಅವರಲ್ಲಿ ಕಲಿಕಾಸಕ್ತಿಯನ್ನು ಮೂಡಿಸಬೇಕು. ಜೊತೆಗೆ ಅವರನ್ನು ಸಮಾಜಮುಖಿಗಳನ್ನಾಗಿಸಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡಬೇಕಿದೆ. ಶಿಕ್ಷಕನಾದವನು ಪೋಷಕನಾಗಿ, ಸ್ನೇಹಿತನಾಗಿ, ಮನೋವೈದ್ಯನಾಗಿ ಮಾರ್ಪಾಟಾದಾಗ ಮಾತ್ರ ಇದು ಸಾಧ್ಯ. ಈ ರೀತಿಯ ತರಬೇತಿ ಕಾರ್ಯಾಗಾರಗಳು ರಾಜ್ಯದ ಎಲ್ಲಾ ಕಾಲೇಜುಗಳ ಪ್ರತಿ ಉಪನ್ಯಾಸಕರನ್ನೂ ಒಳಗೊಳ್ಳುವಂತಾದರೆ ಅನುಕೂಲವಾಗುತ್ತದೆ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕೋಚಿಂಗ್ ಕೇಂದ್ರ ಜೀವಕ್ಕೆ ಕಂಟಕ

ದೆಹಲಿಯ ಕೋಚಿಂಗ್ ಕೇಂದ್ರದಲ್ಲಿ ನಡೆದಿರುವ ಅನಾಹುತವು ವಿದ್ಯಾರ್ಥಿಗಳು ಹಾಗೂ ಅವರ ಪೋಷಕರ ಎದೆಯಲ್ಲಿ ನಡುಕ ಹುಟ್ಟಿಸಿದೆ. ಇದು ಮೊದಲ ಘಟನೆಯೇನಲ್ಲ. ಹಲವು ವರ್ಷಗಳಿಂದ ಇಂಥವು ನಡೆಯುತ್ತಲೇ ಇವೆ. ಉಜ್ವಲ ಭವಿಷ್ಯದ ಕನಸು ಹೊತ್ತ ಯುವಕ ಯುವತಿಯರು, ತರಬೇತಿಗಾಗಿ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿಯೂ ಮೂರನೇ ದರ್ಜೆಯ ಮನುಷ್ಯರಂತೆ ಬದುಕಬೇಕಾಗಿ ಬಂದಿರುವುದು, ಮಹತ್ವಾಕಾಂಕ್ಷೆಯ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳ ಅವ್ಯವಸ್ಥೆಗೆ ಬಲಿಯಾಗುವಂತಾಗಿರುವುದು ವ್ಯವಸ್ಥೆಯ ಲೋಪಗಳಿಗೆ ಕನ್ನಡಿ ಹಿಡಿಯುತ್ತಿದೆ...

ಹೊಣೆ ಯಾರು...? ಮೂವರು ಯುಪಿಎಸ್‌ಸಿ ಆಕಾಂಕ್ಷಿಗಳು ಮೃತಪಟ್ಟ ದೆಹಲಿಯ ಕೋಚಿಂಗ್ ಕೇಂದ್ರದ ಮುಂಭಾಗ ಸೋಮವಾರ ಆಕಾಂಕ್ಷಿಯೊಬ್ಬರು ಘಟನೆಗೆ ಹೊಣೆ ಯಾರು ಎಂದು ಪ್ರಶ್ನಿಸುವ ಫಲಕ ಪ್ರದರ್ಶಿಸಿದರು —ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ರಾಷ್ಟ್ರ ರಾಜಧಾನಿ ದೆಹಲಿಯು ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ನಡೆಸುವ ಪರೀಕ್ಷೆಗಳು ಸೇರಿದಂತೆ ಹಲವು ಸ್ಪರ್ಧಾತ್ಮಕ ಪರೀಕ್ಷೆಗಳ ಕೋಚಿಂಗ್‌ಗೆ ಹೆಸರಾಗಿದೆ. ಹಳೆ ರಾಜಿಂದರ್‌ನಗರ ಮತ್ತು ಮುಖರ್ಜಿ ನಗರದಲ್ಲಿ ಕೋಚಿಂಗ್ ಕೇಂದ್ರಗಳು ಕಿಕ್ಕಿರಿದಿವೆ. ಐಎಎಸ್, ಐಪಿಎಸ್ ಆಗುವ ಕನಸು ಹೊತ್ತ ತರುಣ, ತರುಣಿಯರು ದೇಶದ ಎಲ್ಲ ಭಾಗಗಳಿಂದಲೂ ತರಬೇತಿಗಾಗಿ ಅಲ್ಲಿಗೆ ಹೋಗುತ್ತಾರೆ. ಅದಕ್ಕಾಗಿ ಲಕ್ಷಾಂತರ ರೂಪಾಯಿ ಶುಲ್ಕವನ್ನೂ ಕಟ್ಟುತ್ತಾರೆ. ಆದರೆ, ಅನೇಕ ಕೋಚಿಂಗ್ ಕೇಂದ್ರಗಳಲ್ಲಿ ಮೂಲಸೌಕರ್ಯ ಕೂಡ ಲಭ್ಯವಿಲ್ಲ. ಕಟ್ಟಡದ ನೆಲಮಾಳಿಗೆಗಳನ್ನೂ (ಬೇಸ್‌ಮೆಂಟ್) ಕೋಚಿಂಗ್ ನೀಡುವ ಸ್ಥಳವಾಗಿ ಬಳಸುವ ಮೂಲಕ ಕಟ್ಟಡ ನಿರ್ಮಾಣ ಮತ್ತು ಬಳಕೆಯ ನಿಯಮಗಳನ್ನೂ ಉಲ್ಲಂಘಿಸಲಾಗುತ್ತಿದೆ. ಇದರ ಪರಿಣಾಮವಾಗಿ ಹಲವು ರೀತಿಯ ಅನಾಹುತಗಳು ಘಟಿಸುತ್ತಿವೆ.

2020ರ ಜನವರಿಯಲ್ಲಿ ಈಶಾನ್ಯ ದೆಹಲಿಯ ಭಜನ್‌ಪುರದ ಕೋಚಿಂಗ್ ಕೇಂದ್ರವೊಂದರ ಚಾವಣಿ ಕುಸಿದುಬಿದ್ದು ನಾಲ್ವರು ವಿದ್ಯಾರ್ಥಿಗಳು ಸೇರಿದಂತೆ ಐವರು ಸಾವಿಗೀಡಾಗಿದ್ದರು, 14 ಮಂದಿ ಗಾಯಗೊಂಡಿದ್ದರು. ಕಳೆದ ವರ್ಷದ ಜೂನ್‌ನಲ್ಲಿ, ಮುಖರ್ಜಿ ನಗರದ ಕೋಚಿಂಗ್ ಕೇಂದ್ರ ಇದ್ದ ಬಹುಮಹಡಿ ಕಟ್ಟಡವೊಂದರಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕಟ್ಟಡದಲ್ಲಿ ಸುರಕ್ಷತೆಯ ವ್ಯವಸ್ಥೆ ಇಲ್ಲದಿದ್ದುದರಿಂದ ವಿದ್ಯಾರ್ಥಿಗಳು ಜೀವ ಉಳಿಸಿಕೊಳ್ಳಲು ಕಿಟಕಿಗಳಿಂದ ಧುಮುಕಿದ್ದರು. ಹಗ್ಗ, ವೈರ್ ಹಿಡಿದು ಕಟ್ಟಡದಿಂದ ಕೆಳಕ್ಕೆ ಜಿಗಿದಿದ್ದರು. ಅದರ ವಿಡಿಯೊಗಳು ಎಲ್ಲೆಡೆ ಹರಿದಾಡಿದ್ದವು. ಕಟ್ಟಡದ ಮೂರನೇ ಮಹಡಿಯಲ್ಲಿದ್ದ ವಿದ್ಯುತ್ ಮೀಟರ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದ್ದರಿಂದ ಅನಾಹುತ ನಡೆದಿತ್ತು. ಘಟನೆಯಲ್ಲಿ ಹಲವು ವಿದ್ಯಾರ್ಥಿಗಳು ಗಾಯಗೊಂಡಿದ್ದರು.

ದೆಹಲಿಯ ಇಕ್ಕಟ್ಟಾದ ಗಲ್ಲಿಗಳಲ್ಲಿ, ಜನನಿಬಿಡ ವಾಣಿಜ್ಯ ಕೇಂದ್ರಗಳಲ್ಲಿರುವ ಸೌಲಭ್ಯಗಳಿಲ್ಲದ ಬಹುಮಹಡಿ ಕಟ್ಟಡಗಳಲ್ಲಿ ನಡೆಸಲಾಗುತ್ತಿರುವ ಕೋಚಿಂಗ್ ಕೇಂದ್ರಗಳಲ್ಲಿ ಲಕ್ಷಾಂತರ ವಿದ್ಯಾರ್ಥಿಗಳು ತಮ್ಮ ಜೀವ ಪಣಕ್ಕೊಡ್ಡಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ತರಬೇತಿ ಪಡೆಯುತ್ತಿದ್ದಾರೆ. ಕೆಲವು ಕೋಚಿಂಗ್ ಕೇಂದ್ರಗಳ ಕಟ್ಟಡಗಳಲ್ಲಿ ಒಳಹೋಗಲು ಮತ್ತು ಹೊರಬರಲು ಒಂದೇ ಬಾಗಿಲು ಇದ್ದರೆ, ಮತ್ತೆ ಕೆಲವು ಕಟ್ಟಡಗಳಲ್ಲಿ ಅಗ್ನಿ ಸುರಕ್ಷತಾ ವ್ಯವಸ್ಥೆ ಇಲ್ಲ. ಅಡ್ಡಾದಿಡ್ಡಿಯಾಗಿ ಹರಡಿಕೊಂಡಿರುವ ವೈರ್‌ಗಳು, ಮಿತಿಮೀರಿದ ಎಲೆಕ್ಟ್ರಿಕಲ್ ಸರ್ಕಿಟ್‌ಗಳಂತೂ ಸಾಮಾನ್ಯ ಎನ್ನುವಂತಾಗಿದೆ. ನಗರದ ಹಲವೆಡೆ ಚರಂಡಿಗಳನ್ನು ಒತ್ತುವರಿ ಮಾಡಲಾಗಿದ್ದು, ಮಳೆ ಬಂದಾಗ ರಸ್ತೆಯ ಮೇಲಿನ ನೀರು ಕಟ್ಟಡಗಳ ನೆಲಮಾಳಿಗೆಗೆ ನುಗ್ಗುತ್ತಿದೆ.

ಮುಖರ್ಜಿ ನಗರದ ಘಟನೆಯ ನಂತರ ದೆಹಲಿ ಹೈಕೋರ್ಟ್, ಕೋಚಿಂಗ್ ಕೇಂದ್ರಗಳ ಸುರಕ್ಷತಾ ವ್ಯವಸ್ಥೆಯ ಲೋಪ ಮತ್ತು ನಿಯಮ ಉಲ್ಲಂಘನೆಯ ಬಗ್ಗೆ ಗಮನ ಹರಿಸುವಂತೆ ದೆಹಲಿ ಆಡಳಿತಕ್ಕೆ ಸೂಚಿಸಿತ್ತು.

ಕೋಚಿಂಗ್ ಕೇಂದ್ರಗಳ ಸ್ಥಿತಿಗತಿಯ ಬಗ್ಗೆ ಪರಿಶೀಲನೆ ನಡೆಸಿದ್ದ ದೆಹಲಿ ಪೊಲೀಸರು, ರಾಷ್ಟ್ರ ರಾಜಧಾನಿಯಲ್ಲಿರುವ ಬಹುತೇಕ ಕೋಚಿಂಗ್ ಕೇಂದ್ರಗಳಲ್ಲಿ ಸುರಕ್ಷತಾ ವ್ಯವಸ್ಥೆ ಹಾಗೂ ಮೂಲಸೌಕರ್ಯಗಳ ಕೊರತೆ ಇದೆ ಎಂದು ಹೈಕೋರ್ಟ್‌ಗೆ ವಸ್ತುಸ್ಥಿತಿ ವರದಿ ಸಲ್ಲಿಸಿದ್ದರು.

ದೆಹಲಿ ಅಗ್ನಿಶಾಮಕ ಇಲಾಖೆಯು (ಡಿಎಫ್‌ಎಸ್) 461 ಕೋಚಿಂಗ್ ಕೇಂದ್ರಗಳ ಸಮೀಕ್ಷೆ ನಡೆಸಿತ್ತು. ಕೇಂದ್ರಗಳಲ್ಲಿ ಅಗ್ನಿ ಅವಘಡ ಹಾಗೂ ಅದರ ಪರಿಣಾಮಗಳನ್ನು ತಡೆಗಟ್ಟಲು ಸೂಕ್ತ ವ್ಯವಸ್ಥೆ ಅಳವಡಿಸಿಕೊಳ್ಳುವುದು ಕಡ್ಡಾಯವಾಗಿದ್ದರೂ, ಕೇಂದ್ರಗಳು ಅವನ್ನು ಅಳವಡಿಸಿಕೊಂಡಿಲ್ಲ ಎಂದು ಡಿಎಫ್‌ಎಸ್ ತನ್ನ ವರದಿಯಲ್ಲಿ ತಿಳಿಸಿತ್ತು. ದೆಹಲಿ ಮಾಸ್ಟರ್ ಪ್ಲಾನ್–2021ರ ಅನ್ವಯ ಮೂಲಸೌಕರ್ಯ ಕಲ್ಪಿಸದ ಕೋಚಿಂಗ್ ಕೇಂದ್ರಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಹೈಕೋರ್ಟ್ ಸೂಚಿಸಿತ್ತು.

‘ಹೈಕೋರ್ಟ್ ನಿರ್ದೇಶನದಂತೆ ನಾವು ಕೆಲವು ಕೋಚಿಂಗ್ ಕೇಂದ್ರಗಳಿಗೆ ನೋಟಿಸ್ ಜಾರಿ ಮಾಡಿದ್ದೆವು ಮತ್ತು ಕೆಲವು ಕೋಚಿಂಗ್ ಕೇಂದ್ರಗಳನ್ನು ಮುಚ್ಚಿಸಿದ್ದೆವು’ ಎಂದು ದೆಹಲಿಯ ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಅನೇಕ ಬಾರಿ ವಿದ್ಯಾರ್ಥಿಗಳು ಕೇಂದ್ರಗಳ ಅವ್ಯವಸ್ಥೆ ಬಗ್ಗೆ ಸರ್ಕಾರಕ್ಕೆ ದೂರು ಸಲ್ಲಿಸಿದ್ದಾರೆ.

ಈಗ ದೆಹಲಿಯ ಮತ್ತೊಂದು ಕೋಚಿಂಗ್ ಕೇಂದ್ರದಲ್ಲಿ ನೆಲಮಾಳಿಗೆಗೆ ನೀರು ನುಗ್ಗಿ, ಅವಘಡ ನಡೆದಿದೆ. ಘಟನೆಯ ನಂತರ ಎಚ್ಚೆತ್ತಿರುವ ಅಧಿಕಾರಿಗಳು, ನೆಲಮಾಳಿಗೆಗಳಲ್ಲಿ ಕಾರ್ಯಾಚರಿಸುತ್ತಿದ್ದ 13 ಅನಧಿಕೃತ ಕೋಚಿಂಗ್ ಕೇಂದ್ರಗಳನ್ನು ಮುಚ್ಚಿಸಿದ್ದಾರೆ. ಆದರೆ, ಘಟನೆ ನಡೆದಿರುವ ರೀತಿ ಲಕ್ಷಾಂತರ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರಲ್ಲಿ ಕಳವಳ ಉಂಟುಮಾಡಿದೆ.

ಇಲ್ಲಿ ಗಮನಿಸಬೇಕಾದ ವಿಚಾರ ಏನೆಂದರೆ, ತಿಂಗಳ ಹಿಂದೆಯೂ ಈಗ ಅವಘಡ ನಡೆದಿರುವ ಕೇಂದ್ರ ಸೇರಿದಂತೆ ಹಲವು ಕೇಂದ್ರಗಳ ಬಗ್ಗೆ ಅಭ್ಯರ್ಥಿಯೊಬ್ಬರು ದೆಹಲಿ ಮಹಾನಗರ ಪಾಲಿಕೆಗೆ ದೂರು ನೀಡಿದ್ದರು. ಆಗಲೇ ಅಧಿಕಾರಿಗಳು ಎಚ್ಚೆತ್ತುಕೊಂಡಿದ್ದರೆ, ಅನಾಹುತ ನಡೆಯುತ್ತಿರಲಿಲ್ಲ. ಮೇ ತಿಂಗಳಲ್ಲಿ ಗುಜರಾತ್‌ನ ಸೂರತ್ ನಗರದ ಕೋಚಿಂಗ್ ಕೇಂದ್ರವೊಂದರಲ್ಲಿ ಬೆಂಕಿ ಹತ್ತಿಕೊಂಡು, 22 ವಿದ್ಯಾರ್ಥಿಗಳು ಸುಟ್ಟು ಕರಕಲಾಗಿದ್ದರು. ರಾಜಸ್ಥಾನದ ಕೋಟಾದಲ್ಲಿ ಕೋಚಿಂಗ್ ಕೇಂದ್ರಗಳಲ್ಲಿ ತರಬೇತಿ ಪಡೆಯುವವರು ಒತ್ತಡ, ವೈಫಲ್ಯ ಮುಂತಾದ ಕಾರಣಗಳಿಂದ ಆತ್ಮಹತ್ಯೆ ಮಾಡಿಕೊಳ್ಳುವ ಘಟನೆಗಳು ವರದಿಯಾಗುತ್ತಲೇ ಇವೆ.

ದೆಹಲಿಯ ಘಟನೆಯ ಬಳಿಕ ಯುಪಿಎಸ್‌ಸಿ ಆಕಾಂಕ್ಷಿಯೊಬ್ಬರು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿಗೆ ಪತ್ರ ಬರೆದು, ‘ಕೋಚಿಂಗ್ ಕೇಂದ್ರಗಳು ನರಕ ಆಗಿವೆ’ ಎಂದು ಹೇಳಿದ್ದಾರೆ.

ಆಧಾರ: ಪಿಟಿಐ, ದೆಹಲಿ ಅಗ್ನಿಶಾಮಕ ಸೇವೆಗಳ ಇಲಾಖೆ, ದೆಹಲಿ ಕಟ್ಟಡಗಳ ಉಪನಿಯಮಗಳು, ಕೋಚಿಂಗ್ ಸೆಂಟರ್‌ಗಳ ನಿಯಂತ್ರಣ ಮಾರ್ಗಸೂಚಿಗಳು

583 ದೆಹಲಿಯಲ್ಲಿರುವ ಅಧಿಕೃತ ಕೋಚಿಂಗ್ ಕೇಂದ್ರಗಳು

67 ಅಗ್ನಿಶಾಮಕ ಇಲಾಖೆಯ ನಿರಾಕ್ಷೇಪಣಾ ಪತ್ರ ಹೊಂದಿರುವ ಕೋಚಿಂಗ್ ಕೇಂದ್ರಗಳು

95% ಅಗ್ನಿ ಸುರಕ್ಷತಾ ವ್ಯವಸ್ಥೆ ಇಲ್ಲದ ಕೋಚಿಂಗ್ ಕೇಂದ್ರಗಳು



ಕೇಂದ್ರ ಸರ್ಕಾರದ ಮಾರ್ಗಸೂಚಿ ಹೇಳುವುದೇನು?

- ನೋಂದಣಿ ಮಾಡಿದ ಮಕ್ಕಳಿಗೆ/ಅಭ್ಯರ್ಥಿಗಳಿಗೆ ಅನುಗುಣವಾಗಿ ಕೋಚಿಂಗ್ ಕೇಂದ್ರಗಳು ಮೂಲಸೌಕರ್ಯಗಳನ್ನು ಹೊಂದಿರಬೇಕು. ತರಗತಿಯಲ್ಲಿ ಪ್ರತಿ ವಿದ್ಯಾರ್ಥಿಗೆ ಕನಿಷ್ಠ ಒಂದು ಚದರ ಮೀಟರ್‌ನಷ್ಟು ಸ್ಥಳ ಮೀಸಲಿಡಬೇಕು
- ಕಟ್ಟಡವು ಅಗ್ನಿ ಸುರಕ್ಷತೆ, ಕಟ್ಟಡ ಸುರಕ್ಷತಾ ನಿಯಮಗಳನ್ನು ಪಾಲಿಸಬೇಕು. ಸಂಬಂಧಿಸಿದ ಪ್ರಾಧಿಕಾರದಿಂದ ಅಗ್ನಿ ಮತ್ತು ಕಟ್ಟಡ ಸುರಕ್ಷತೆಗೆ ಸಂಬಂಧಿಸಿದಂತೆ ಪ್ರಮಾಣಪತ್ರಗಳನ್ನು ಪಡೆದಿರಬೇಕು
- ಪ್ರಥಮ ಚಿಕಿತ್ಸಾ ವ್ಯವಸ್ಥೆ ಮತ್ತು ವೈದ್ಯಕೀಯ ನೆರವು/ಚಿಕಿತ್ಸಾ ಸೌಲಭ್ಯ ಹೊಂದಿರಬೇಕು. ತುರ್ತು ಸೇವೆಗಳಿಗಾಗಿ ಆಸ್ಪತ್ರೆಗಳು, ವೈದ್ಯರು, ಪೊಲೀಸ್ ಸಹಾಯವಾಣಿ, ಅಗ್ನಿಶಾಮಕ ಸೇವೆಗಳ ಸಹಾಯವಾಣಿ, ಮಹಿಳಾ ಸಹಾಯವಾಣಿಯಂತಹ ವಿವರಗಳನ್ನು ಪ್ರದರ್ಶಿಸಬೇಕು ಮತ್ತು ವಿದ್ಯಾರ್ಥಿಗಳಿಗೆ ಈ ಬಗ್ಗೆ ಮಾಹಿತಿ ನೀಡಬೇಕು
- ಕಟ್ಟಡವು ಸಂಪೂರ್ಣವಾಗಿ ವಿದ್ಯುತ್ ಸೌಲಭ್ಯ ಹೊಂದಿರಬೇಕು. ಕಟ್ಟಡ ಮತ್ತು ತರಗತಿಗಳಲ್ಲಿ ಉತ್ತಮ ಗಾಳಿ ಬೆಳಕಿನ ವ್ಯವಸ್ಥೆ ಇರಬೇಕು
- ವಿದ್ಯಾರ್ಥಿಗಳು, ಸಿಬ್ಬಂದಿಗೆ ಶುದ್ಧ ಮತ್ತು ಸುರಕ್ಷಿತವಾದ ಕುಡಿಯುವ ನೀರಿನ ವ್ಯವಸ್ಥೆ ಲಭ್ಯ ಇರುವಂತೆ ನೋಡಿಕೊಳ್ಳಬೇಕು
- ಅಗತ್ಯವಿರುವ ಕಡೆಗಳಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು ಮತ್ತು ಭದ್ರತಾ ವ್ಯವಸ್ಥೆ ಇರಬೇಕು
- ದೂರು ಪೆಟ್ಟಿಗೆ ಇರಬೇಕು. ವಿದ್ಯಾರ್ಥಿಗಳು ನೀಡುವ ದೂರು/ಕುಂದುಕೊರತೆಗಳನ್ನು ಪರಿಹರಿಸಲು ಸಮಿತಿಯನ್ನು ಹೊಂದಿರಬೇಕು
- ಕೇಂದ್ರದ ಆವರಣದಲ್ಲಿ ಮಹಿಳೆ ಮತ್ತು ಪುರುಷರಿಗೆ ಪ್ರತ್ಯೇಕ ಶೌಚಾಲಯಗಳಿರಬೇಕು

ನೆಲಮಾಳಿಗೆ ಹೇಗಿರಬೇಕು?

- ನೆಲಮಾಳಿಗೆಯ ಎತ್ತರವು ಮಾಳಿಗೆಯ ನೆಲದಿಂದ ಚಾವಣಿವರೆಗೆ ಕನಿಷ್ಠ 2.5 ಮೀಟರ್ ಇರಬೇಕು
- ಗಾಳಿ ಬೆಳಕಿನ ವ್ಯವಸ್ಥೆ ಉತ್ತಮವಾಗಿರಬೇಕು. ಕಟ್ಟಡ ನಿರ್ಮಾಣಕ್ಕೆ ಸಂಬಂಧಿಸಿದ ಬೈ–ಲಾ (ಉಪ ನಿಯಮಗಳ) ಅನುಸಾರ ಇರಬೇಕು
- ನೆಲಮಟ್ಟದಿಂದ ನೆಲಮಾಳಿಗೆಯ ಚಾವಣಿಯವರೆಗಿನ ಎತ್ತರ ಕನಿಷ್ಠ 0.9 ಮೀಟರ್, ಗರಿಷ್ಠ 1.2 ಮೀಟರ್ ಇರಬೇಕು
- ಚರಂಡಿಯ ನೀರು ನುಗ್ಗದಂತೆ ಎಲ್ಲ ವ್ಯವಸ್ಥೆ ಮಾಡಬೇಕು
- ನೆಲಮಾಳಿಗೆಯ ಗೋಡೆ ಮತ್ತು ನೆಲ ನೀರು ನಿರೋಧಕವಾಗಿರಬೇಕು ಸುತ್ತಲಿನ ಮಣ್ಣು ಮತ್ತು ತೇವಾಂಶವನ್ನು ಆಧರಿಸಿ ನೆಲಮಾಳಿಗೆಯ ವಿನ್ಯಾಸ ಮಾಡಬೇಕು
- ಕಟ್ಟಡದ ಮುಖ್ಯ ಮತ್ತು ಪರ್ಯಾಯ ಮೆಟ್ಟಿಲುಗಳು ನೆಲಮಾಳಿಗೆಯೊಂದಿಗೆ ಸಂಪರ್ಕ ಹೊಂದಿರಬೇಕು
- ನೆಲಮಾಳಿಗೆಯನ್ನು ಕಚೇರಿ ಮತ್ತು ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದರೆ, ಹೊರ ಹೋಗಲು (ಎಕ್ಸಿಟ್ ವೇ) ಮತ್ತು ಒಳ ಹೋಗಲು ಅಗತ್ಯ ಸಂಖ್ಯೆಯ ಬಾಗಿಲುಗಳು ಇರಬೇಕು. ಈ ಬಾಗಿಲುಗಳನ್ನು ಸಂಪರ್ಕಿಸುವ ದೂರ 15 ಮೀಟರ್‌ಗಿಂತ ಹೆಚ್ಚಿರಬಾರದು
- ನೆಲಮಾಳಿಗೆಯನ್ನು ವಿಭಜಿಸುವಂತಿಲ್ಲ. ಒಂದು ವೇಳೆ ಪ್ರಾಧಿಕಾರವು ವಿಭಜನೆಗೆ ಅನುಮತಿ ನೀಡಿದರೆ, ಒಂದು ವಿಭಾಗವು 500 ಚದರ ಅಡಿಗಿಂತ ಕಡಿಮೆ ಇರುವಂತಿಲ್ಲ
- ಅಡುಗೆ ಕೋಣೆ, ಸ್ನಾನಗೃಹ, ಶೌಚಾಲಯಕ್ಕೆ ಅವಕಾಶ ನೀಡುವಂತಿಲ್ಲ. ಅನುಮತಿ ನೀಡಬೇಕಾದರೆ ಕೊಳಚೆ ನೀರು ಹರಿದು ಹೋಗುವಂತಿರಬೇಕು ಮತ್ತು ನೆರೆ ಪರಿಸ್ಥಿತಿ ನಿರ್ಮಾಣವಾಗದಂತೆ ಇರಬೇಕು
- ಬೆಂಕಿ ಆಕಸ್ಮಿಕ ಅಥವಾ ಇತರೆ ತುರ್ತು ಪರಿಸ್ಥಿತಿ ಸಂದರ್ಭಗಳಲ್ಲಿ ನೆಲಮಾಳಿಗೆಯಲ್ಲಿರುವವರು ಸುರಕ್ಷಿತವಾಗಿ ತಪ್ಪಿಸಿಕೊಳ್ಳಲು ಸಾಧ್ಯವಾಗುವ ರೀತಿಯಲ್ಲಿ ಹೊರಹೋಗುವ ಬಾಗಿಲುಗಳು ಇರಬೇಕು. ಅವುಗಳು ತಡೆ ರಹಿತವಾಗಿರಬೇಕು ಮತ್ತು ಸಾರ್ವಜನಿಕರ ಬಳಕೆಗೆ ಸಿಗದಂತಿರಬೇಕು

ನೆಲಮಾಳಿಗೆ ಬಳಕೆಯ ನಿಯಮಗಳು...

ನಿವೇಶನ ಅಥವಾ ಭೂಮಿಯ ಬಳಕೆಗೆ ಸಂಬಂಧಿಸಿದಂತೆ ಸಂಬಂಧಿಸಿದ ಪ್ರಾಧಿಕಾರದ ಅನುಮತಿ ಪಡೆದು, ಮಾಸ್ಟರ್ ಪ್ಲಾನ್‌ನಂತೆ ವಾಣಿಜ್ಯ ಕಟ್ಟಡದ ನೆಲಮಾಳಿಗೆಯನ್ನು ದೆಹಲಿಯಲ್ಲಿ ವಸತಿ ಉದ್ದೇಶಕ್ಕೆ ಬಿಟ್ಟು ಈ ಕೆಳಕಂಡ ಉದ್ದೇಶಕ್ಕೆ ಬಳಸಬಹುದು.

- ಮನೆಬಳಕೆಯ ವಸ್ತುಗಳು ಅಥವಾ ದಹನಶೀಲವಲ್ಲದ ವಸ್ತುಗಳ ಸಂಗ್ರಹ
- ಡಾರ್ಕ್ ಕೊಠಡಿ, ಸ್ಟ್ರಾಂಗ್ ರೂಂ, ಬ್ಯಾಂಕ್ ಸೆಲ್ಲಾರ್‌ಗಳು
- ಹವಾನಿಯಂತ್ರಿತ ವ್ಯವಸ್ಥೆಯ ಸಲಕರಣೆಗಳು ಮತ್ತು ಇತರ ಸೇವೆಗಳು ಹಾಗೂ ಕಟ್ಟಡಗಳಿಗೆ ಬಳಸುವ ಯಂತ್ರಗಳ ಅಳವಡಿಕೆಗೆ
- ವಾಹನ ನಿಲುಗಡೆ ಮತ್ತು ಗ್ಯಾರೇಜ್‌ಗಳು
- ಗ್ರಂಥಾಲಯಗಳ ಪುಸ್ತಕ ಸಂಗ್ರಹ ಕೋಣೆಗಳು
- ಹವಾನಿಯಂತ್ರಿತ ವ್ಯವಸ್ಥೆ ಹೊಂದಿರುವ ಕಚೇರಿ ಅಥವಾ ವಾಣಿಜ್ಯ ಉದ್ದೇಶಗಳಿಗೆ

ಸಿನಿ ಬಿಟ್ಸ್

‘ಪೌಡರ್’ ಬಿಡುಗಡೆ ಮತ್ತೆ ಮುಂದಕ್ಕೆ

ಆಗಸ್ಟ್ 9ರಂದು ‘ಭೀಮ’ ಹಾಗೂ 15ರಂದು ‘ಗೌರಿ’, ‘ಕೃಷ್ಣಂ ಪ್ರಣಯ ಸಖಿ’–ಹೀಗೆ ಕನ್ನಡ ಸೇರಿದಂತೆ ಪರಭಾಷೆಗಳ ಹತ್ತಕ್ಕೂ ಅಧಿಕ ಸಿನಿಮಾಗಳು ತೆರೆಕಾಣುತ್ತಿದೆ. ಈ ಹಿನ್ನೆಲೆಯಲ್ಲಿ ಆ.15ರಂದು ಬಿಡುಗಡೆಯಾಗಬೇಕಿದ್ದ ‘ಪೌಡರ್’ ಸಿನಿಮಾವನ್ನು ಚಿತ್ರತಂಡ ಮುಂದೂಡಿದೆ.

ಆ.15ರ ಬದಲಾಗಿ ಆ.23ರಂದು ‘ಪೌಡರ್’ ಸಿನಿಮಾ ರಿಲೀಸ್ ಆಗಲಿದೆ ಎಂದು ಚಿತ್ರತಂಡ ತಿಳಿಸಿದೆ. ಜನಾರ್ದನ್ ಚಿಕ್ಕಣ್ಣ ನಿರ್ದೇಶಿಸಿರುವ ದಿಗಂತ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ಈ ಸಿನಿಮಾ ಎರಡನೇ ಬಾರಿ ಮುಂದೂಡಲ್ಪಟ್ಟಿದೆ. ಜುಲೈ 12ರಂದೇ ಸಿನಿಮಾ ಬಿಡುಗಡೆಯಾಗಬೇಕಿತ್ತು. ಜೂನ್ ಅಂತ್ಯದಲ್ಲಿ ಆಗಸ್ಟ್ 15ಕ್ಕೆ ಸಿನಿಮಾ ಬಿಡುಗಡೆಯಾಗಲಿದೆ ಎಂದು ಚಿತ್ರತಂಡ ತಿಳಿಸಿತ್ತು. ‘ಒಂದೇ ದಿನ ಹೆಚ್ಚು ಸಿನಿಮಾಗಳು ಬಿಡುಗಡೆಯಾದರೆ ಬಾಕ್ಸ್ ಆಫೀಸ್‌ನಲ್ಲಿ ಕ್ಲ್ಯಾಷ್ ಆಗಲಿದೆ. ಇದರಿಂದ ಸಿನಿಮಾದ ಗಳಿಕೆ ಮೇಲೆಯೂ ಪರಿಣಾಮ ಬೀರಲಿದೆ. ಮೊದಲೇ ಕನ್ನಡ ಚಿತ್ರರಂಗದ ಸ್ಥಿತಿ ಶೋಚನೀಯವಾಗಿದೆ. ಇಂತಹ ಸಂದರ್ಭದಲ್ಲಿ ಬಾಕ್ಸ್ ಆಫೀಸ್ ವಾರ್ ಬೇಡ ಎಂಬುದನ್ನು ಅರಿತು ಚಿತ್ರ ಬಿಡುಗಡೆ ಮುಂದೂಡಿದ್ದೇವೆ’ ಎಂದು ಸಿನಿಮಾ ನಿರ್ಮಾಣ ಸಂಸ್ಥೆಯಾದ ಕೆಆರ್‌ಜಿ ತಿಳಿಸಿದೆ.

‘ಪೌಡರ್’ ಚಿತ್ರದಲ್ಲಿ ದಿಗಂತ್, ಧನ್ಯ ರಾಮ್‌ಕುಮಾರ್, ಅನಿರುದ್ಧ್ ಆಚಾರ್ಯ, ಶರ್ಮಿಳಾ ಮಾಂಡ್ರೆ, ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ ಮುಂತಾದವರು ನಟಿಸಿದ್ದಾರೆ.

‘ಪೆಪೆ’ಗೆ ‘ಎ’ ಪ್ರಮಾಣಪತ್ರ

‘ಒಂದು ಸರಳ ಪ್ರೇಮಕಥೆ’ ಸಿನಿಮಾ ಬಳಿಕ ನಟ ವಿನಯ್ ರಾಜ್‌ಕುಮಾರ್ ನಟನೆಯ ‘ಪೆಪೆ’ ಸಿನಿಮಾ ರಿಲೀಸ್‌ಗೆ ಸಜ್ಜಾಗುತ್ತಿದೆ. ಇತ್ತೀಚೆಗೆ ಚಿತ್ರಕ್ಕೆ ಸೆನ್ಸಾರ್ ಮಂಡಳಿಯು ‘ಎ’ ಪ್ರಮಾಣಪತ್ರ ನೀಡಿದೆ.

ಕ್ಲಾಸ್ ಸಿನಿಮಾಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ವಿನಯ್ ರಾಜ್‌ಕುಮಾರ್ ‘ಪೆಪೆ’ ಸಿನಿಮಾದಲ್ಲಿ ಮಾಸ್ ಅವತಾರ ತಾಳಿದ್ದಾರೆ. ನಿರ್ದೇಶಕ ಶ್ರೀಲೇಶ್ ಎಸ್ ನಾಯರ್ ನಿರ್ದೇಶನದಲ್ಲಿ ವಿನಯ್ ರಗಡ್ ಲುಕ್‌ನಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಹಳ್ಳಿ ಬ್ಯಾಕ್‌ಡ್ರಾಪ್‌ನಲ್ಲಿ ನಡೆಯುವ ಚಿತ್ರ ಇದಾಗಿದ್ದು, ಇದುವರೆಗೂ ಈ ರೀತಿಯ ಪಾತ್ರದಲ್ಲಿ ವಿನಯ್ ಕಾಣಿಸಿಕೊಂಡಿಲ್ಲ ಎಂದಿದೆ ಚಿತ್ರತಂಡ. ಚಿತ್ರದಲ್ಲಿ ನಾಯಕಿಯಾಗಿ ಕಾಜಲ್ ಕುಂದರ್ ನಟಿಸಿದ್ದು, ಮಯೂರ್ ಪಟೇಲ್, ಯಶ್ ಶೆಟ್ಟಿ, ಬಲ ರಾಜವಾಡಿ, ಮೇದಿನಿ ಕೆಳಮನೆ, ಅರುಣಾ ಬಾಲರಾಜ್, ನವೀನ್ ಡಿ. ಪಡೀಲ್ ಮುಂತಾದವರು ತಾರಾಗಣದಲ್ಲಿದ್ದಾರೆ. ‘ಪೆಪೆ’ ಚಿತ್ರಕ್ಕೆ ಅಭಿಷೇಕ್ ಜಿ. ಕಾಸರಗೋಡು ಛಾಯಾಚಿತ್ರಗ್ರಹಣ, ಪೂರ್ಣಚಂದ್ರ ತೇಜಸ್ವಿ ಅವರ ಸಂಗೀತ ನಿರ್ದೇಶನವಿದೆ. ರವಿವರ್ಮ, ಚೇತನ್ ಡಿಸೋಜಾ, ಡಿಫ್ರೆಂಟ್ ಡ್ಯಾನಿ, ನರಸಿಂಹ ಅವರ ತಂಡ ಚಿತ್ರದ ಸಾಹಸ ದೃಶ್ಯಗಳನ್ನು ನಿರ್ದೇಶನ ಮಾಡಿದೆ. ಬೆಂಗಳೂರು, ಮೈಸೂರು, ಕೊಡಗು, ಸಕಲೇಶಪುರದಲ್ಲಿ ‘ಪೆಪೆ’ ಸಿನಿಮಾವನ್ನು ಸೆರೆಹಿಡಿಯಲಾಗಿದೆ.

ವಿನಯ್ ರಾಜ್‌ಕುಮಾರ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಅಮೆರಿಕದ** ಅಧ್ಯಕ್ಷೀಯ ಚುನಾವಣೆಯಲ್ಲಿ ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿರುವ ಕಮಲಾ ಹ್ಯಾರಿಸ್ ಅವರು ಅವರ ಪೋಷಕರ ಜತೆ ಇದ್ದಾರೆ ಎನ್ನಲಾಗುತ್ತಿರುವ ಚಿತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಚಿತ್ರದಲ್ಲಿ ಕಮಲಾ ಅವರ ಜತೆಯಲ್ಲಿ ಇರುವುದು ಅವರ ತಂದೆ ತಾಯಿ, ಅವರು ಕೂಡ ಕಪ್ಪು ವರ್ಣೀಯರು ಎಂದು ಪ್ರತಿಪಾದನೆ ಮಾಡಲಾಗುತ್ತಿದೆ. ಆದರೆ, ಅದು ಸುಳ್ಳು ಸುದ್ದಿ.

✓ **ರಿವರ್ಸ್ ಇಮೇಜ್** ಸರ್ಚ್ ಮಾಡಿದಾಗ, ಈ ಚಿತ್ರವು ಆಗಸ್ಟ್ 2016ರಲ್ಲಿ ಕ್ಯಾಲಿಫೋರ್ನಿಯಾದಲ್ಲಿ ನಡೆದ ಕಾರ್ಯಕ್ರಮವೊಂದರ ವೇಳೆ ತೆಗೆದದ್ದು ಎನ್ನುವುದು ತಿಳಿದುಬಂತು. ಭಾರತದಲ್ಲಿ ಮಕ್ಕಳ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ‘ಪ್ರಥಮ್’ ಎನ್ನುವ ಅಮೆರಿಕದ ಸರ್ಕಾರೇತರ ಸಂಸ್ಥೆ ದೇಣಿಗೆ ಸಂಗ್ರಹಕ್ಕಾಗಿ ಹಮ್ಮಿಕೊಂಡಿದ್ದ ಕಾರ್ಯಕ್ರಮ ಅದು. ಸಂಸ್ಥೆಯು ಆ ಚಿತ್ರವನ್ನು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿತ್ತು. ಚಿತ್ರದಲ್ಲಿ ಅವರ ಜತೆಗೆ ಇರುವವರು ‘ಪ್ರಥಮ್’ ಸಂಸ್ಥೆಯ ರೋಹಿಣಿ ಪರುಲೇಕರ್ ಮತ್ತು ಅವರ ಗಂಡ ಸುನೀಲ್ ಪರುಲೇಕರ್. ಕಮಲಾ ಅವರ ತಾಯಿ 2009ರಲ್ಲಿಯೇ ತೀರಿಕೊಂಡಿದ್ದಾರೆ. ಅವರು ದಕ್ಷಿಣ ಭಾರತ ಮೂಲದವರು. ಅವರ ತಂದೆ ಜಮೈಕಾದವರು. ಅವರು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯದ ನಿವೃತ್ತ ಪ್ರೊಫೆಸರ್. ಬೂಮ್ ಈ ಬಗ್ಗೆ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ನುಡಿ ಬೆಳಗು

ಹೊಂದಾಣಿಕೆ



ಪಿ. ಚಂದ್ರಿಕಾ

ಪೂರ್ವಿಕರಿಂದ ಅವನಿಗೆ ಬಳುವಳಿಯಾಗಿ ಬಂದ ಮನೆ ನಗರದ ಮಧ್ಯಭಾಗದಲ್ಲಿತ್ತು. ಹಳೆ ಮೇಜು, ಕುರ್ಚಿ ಎಲ್ಲವೂ ಮನೆಗೆ ಒಂದು ಶೋಭೆಯನ್ನು ನೀಡಿದ್ದವು. ಇದ್ದಕ್ಕಿದ್ದ ಹಾಗೆ ಒಂದು ದಿನ ಅವನಿಗೆ ಆ ಮನೆಯನ್ನು ಹೊಸದಾಗಿಸಬೇಕು ಎನ್ನುವ ಆಸೆ ಹುಟ್ಟಿಕೊಂಡಿತು. ಸೋಫಾ ಕುರ್ಚಿ ಮೇಜು ಕಡೆಗೆ ಕಿಟಕಿಯ ಪರದೆ ಹೀಗೆ ಮನೆಯಲ್ಲಿರುವ ಎಲ್ಲವನ್ನೂ ಬದಲಿಸುತ್ತಾ ಆಧುನಿಕವಾಗಿಸುತ್ತಾ ಹೋದ. ಅದೊಂದು ರೀತಿಯಲ್ಲಿ ಆಟವಾಗಿಬಿಟ್ಟಿತು. ಮತ್ತು ಅದಕ್ಕೆ ಕೊನೆಯೂ ಇಲ್ಲವಾಗಿಬಿಟ್ಟಿತ್ತು. ಹೊಸದಾಗಿ ತಂದ ವಸ್ತುಗಳೆಲ್ಲವೂ ಹೊಳೆಯುತ್ತಿದ್ದರೆ ಬಣ್ಣ ಕಳೆದ ಗೋಡೆಗಳು ಮಂಕಾಗಿ, ಹೊಸದಾಗಿ ಬಣ್ಣ ಬಳೆಸಿದ. ಆದರೂ ಅವನ ಮನಸ್ಸಿಗೆ ಸಮಾಧಾನವಿಲ್ಲ, ಎಲ್ಲೋ ಏನೋ ಸರಿಯಾಗಲಿಲ್ಲ ಎನ್ನಿಸತೊಡಗಿತು. ಮತ್ತೆ ಮತ್ತೆ ನೋಡಿದ ಇದ್ದಕ್ಕಿದ್ದ ಹಾಗೆ ಹೊಳೆದದ್ದು ತಂದ ವಸ್ತುಗಳಿಗೂ, ಇರುವ ಗೋಡೆಗಳಿಗೂ ಸಂಬಂಧವೇ ಇಲ್ಲ, ಈಗ ಜರೂರಿರುವುದು ಗೋಡೆಗಳನ್ನೇ ಬದಲಿಸುವುದು ಎನ್ನಿಸಿಬಿಟ್ಟಿತ್ತು.

ಒಂದೊಂದೇ ಗೋಡೆಗಳನ್ನು ಬದಲಿಸಿದ. ಅಷ್ಟಕ್ಕೂ ಸಮಾಧಾನ ಆಗಲೇ ಇಲ್ಲ. ಇಡೀ ಮನೆ ಯಾಕೋ ಪ್ರಸ್ತುತ ಅನ್ನಿಸದೆ ಪೂರ್ಣವಾಗಿ ತೆಗೆಯುವುದೇ ಸರಿ ಅನ್ನಿಸಿ ತನ್ನ ಇಚ್ಛೆಗೆ ತಕ್ಕಂತೆ ಹೊಸದಾಗಿ ಕಟ್ಟಿಸಿದ. ಅಷ್ಟು ಹೊತ್ತಿಗೆ ಅವನ ಹತ್ತಿರವಿದ್ದ ಎಲ್ಲ ಹಣವೂ ಖರ್ಚಾಗಿಹೋಗಿತ್ತು. ಆದರೂ ಮನೆ ಈಗ ಆ ರಸ್ತೆಯ ಎಲ್ಲ ಮನೆಗಳಿಗಿಂತಲೂ ಸೊಗಸಾಗಿ ಕಾಣುತ್ತಿತ್ತು. ಸುಖ ಕಾಣಲು ಒಂದಿಷ್ಟು ಕಳೆದುಕೊಳ್ಳಲೇ ಬೇಕಲ್ಲ. ಹಣ ಕಳೆದುಕೊಂಡರೂ, ಹೋಗಿ ಬರುವವರೆಲ್ಲಾ ಮನೆಯನ್ನು ಹೊಗಳುವುದು ಅವನ ಕಿವಿಗೆ ಹಿತವಾಗಿ, ತಾನು ಮನೆ ಕಟ್ಟಿದ್ದಕ್ಕೆ ಸಾರ್ಥಕ ಅನ್ನಿಸತೊಡಗಿತ್ತು.

ಸ್ವಲ್ಪ ದಿನ ಅಷ್ಟೇ ಮತ್ತೆ ಅವನಿಗೆ ಅಸಮಾಧಾನ ತಲೆ ಎತ್ತಿತು. ಅವನ ಅಸಮಾಧಾನ ಈಗ ತನ್ನ ಮನೆಯ ಮೇಲಲ್ಲ. ಇಷ್ಟು ಚಂದದ ತನ್ನ ಮನೆಗೆ ತಕ್ಕುದಾದ ಬೀದಿಯೇ ಇದಲ್ಲ ಒಂದಕ್ಕೊಂದು ಹೊಂದಾಣಿಕೆಯೇ ಆಗುತ್ತಿಲ್ಲ. ಛೇ ಎಂಥಾ ಕೆಟ್ಟ ಬೀದಿಯಲ್ಲಿ ತಾನಿದ್ದೇನಲ್ಲಾ ಎನ್ನಿಸಿ ಬೀದಿಯನ್ನು ಬದಲಿಸಬೇಕು ಅನ್ನಿಸತೊಡಗಿತು. ‘ಪೂರ್ವಿಕರು ಕಟ್ಟಿದ ನನ್ನ ಮನೆಯನ್ನೇನೋ ಒಡೆದೆ, ತನಗೆ ಹೇಗೆ ಬೇಕೋ ಹಾಗೆ ಕಟ್ಟಿ, ಆಧುನಿಕಗೊಳಿಸಿದೆ. ಅದು ನನ್ನದು. ಆದರೆ ಬೀದಿಯನ್ನೇನು ಮಾಡಲಿ? ಅದು ಸಾರ್ವಜನಿಕರದ್ದು. ಅದನ್ನು ಬದಲಿಸಲು ಸಾಧ್ಯವೇ ಇಲ್ಲ. ಆದರೆ ಒಂದಂತೂ ಸತ್ಯ ಇಂಥಾ ಚಂದದ ಮನೆ ಈ ಬೀದಿಯಲ್ಲಿರುವುದೇ ವ್ಯರ್ಥ. ಇಷ್ಟೆಲ್ಲಾ ಪ್ರಯತ್ನಪಟ್ಟು ಅತ್ಯುತ್ತಮ ಮನೆಯನ್ನು ಕಟ್ಟಿದ ನನ್ನ ಕಷ್ಟಕ್ಕೆ ಈ ಬೀದಿಯಿಂದಾಗಿ ಬೆಲೆಯೇ ಇಲ್ಲದಂತಾಗಿಬಿಟ್ಟಿತಲ್ಲ’ ಎನ್ನುವ ಕೊರಗು ಅವನನ್ನು ಬಾಧಿಸತೊಡಗಿತು.

ನಾನು ಬದಲಾದೆ ಎಂದರೆ ನನ್ನ ಸುತ್ತಲಿರುವವರು ಬದಲಾದರು ಎಂದಲ್ಲ. ಅವರನ್ನು ಬದಲಿಸುವುದೂ ಸಾಧ್ಯವಿಲ್ಲ. ಹಾಗೆ ಬದಲಾದರೂ ಎಲ್ಲವೂ ಸರಿಯಾಗುತ್ತದೆ ಅಂತಲೂ ಅಲ್ಲ. ಎಲ್ಲದರ ನಡುವೆ ಇರುವುದು ಅನಿವಾರ್ಯ ಎನ್ನುವುದನ್ನು ತಿಳಿಯಬೇಕು. ಎಲ್ಲದರ ನಡುವೆ ಬದುಕುತ್ತೇನೆನ್ನುವ ಮನಸ್ಸಿನ ಹದವೇ ಬಹಳ ದೊಡ್ಡದು. ಒಮ್ಮೊಮ್ಮೆ ಸಣ್ಣ ಯೋಚನೆ ಎಲ್ಲವನ್ನೂ ಬದಲಿಸಬಹುದು. ಬದಲಿಸಲಾಗದೆಯೂ ಇರಬಹುದು. ಬದಲಿಸಲಾಗದೇ ಇದ್ದುದ್ದಕ್ಕೆ ಕೊರಗುವುದರಲ್ಲಿ ಅರ್ಥವಿಲ್ಲ. ಅದರ ಬಗ್ಗೆಯೇ ಯೋಚಿಸುತ್ತಾ ಉಳಿದರೆ ಮನಸ್ಸಿನ ಕಷ್ಟಕ್ಕೆ ಕೊನೆಯೂ ಇರುವುದಿಲ್ಲ. ಹೊಂದಿಕೊಂಡರೆ ಮಾತ್ರ ಜೀವನ ಸುಗಮ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜುಲೈ 30, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದಶಮಿ ಗಂ. 16-45 ನಕ್ಷತ್ರ: ಕೃತ್ತಿಕಾ ಗಂ. 10-23 ಯೋಗ: ವೃದ್ಧಿ ಗಂ. 15-56 ಕರಣ: ವಿಷ್ಟಿ ಗಂ. 16-45 ನಂತರ ಬವ ಗಂ. 28-18, ಕರ್ಕಾಟಕ ಮಾಸದ 14 ನೇ ದಿನ, ಮಳೆನಕ್ಷತ್ರ: ಪುಷ್ಯ 4.
ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-19 ಸೂರ್ಯಾಸ್ತ : 06-55
ಮುಸ್ಲಿಂ ದಿನಾಂಕ : 20 ಮೊಹರಂ
ಅದೃಷ್ಟ ಸಂಖ್ಯೆ : 11, 3

ಮೇಷ: ಅರಣ್ಯ ಸುತ್ತಾಡುವ ಹವ್ಯಾಸ ಹೊಂದಿರುವವರು ಅಂಥ ಸಮಯದಲ್ಲಿ ಜಾಗ್ರತೆ ವಹಿಸುವುದು ಅವಶ್ಯಕ. ಪರೋಪಕಾರ್ಯಗಳನ್ನು ಮಾಡಿ ಸಮಾಜದಲ್ಲಿಯೂ ಪ್ರತಿಷ್ಠೆ ಹೆಚ್ಚಿಸಿಕೊಳ್ಳುವಿರಿ.

ವೃಷಭ: ಭೂಮಿಗೆ ಸಂಬಂಧಿಸಿದಂತೆ ವ್ಯವಹಾರ ನಡೆಸುವವರಿಗೆ ಶುಭ ದಿನ. ಸದಾಕಾಲ ಪಕ್ಕದಲ್ಲಿಯೇ ಇರುವ ಪರಿಚಿತರಿಂದ ವಂಚನಾ ಪ್ರಸಂಗ ಇರಲಿದೆ. ವಾಹನ ಖರೀದಿಯಂಥ ವಿಚಾರದಲ್ಲಿ ಕೈ ಖಾಲಿ ಮಾಡಿಕೊಳ್ಳಬೇಡಿ.

ಮಿಥುನ: ರಾಜಕೀಯ ರಂಗ ಪ್ರವೇಶಿಸುವ ಇಚ್ಛೆಯನ್ನು ನಿಮ್ಮ ಸ್ನೇಹಿತರಲ್ಲಿ ವ್ಯಕ್ತಪಡಿಸಿ ಸಲಹೆ ಪಡೆದುಕೊಳ್ಳಿ. ಸರ್ಕಾರಿ ನೌಕರರಿಗೆ ತಮ್ಮ ಉದ್ಯೋಗದಲ್ಲಿ ಜುಗುಪ್ಸೆ ಬರುವಂತೆ ಆಗುವುದು. ಗೋ ಸೇವೆಯಿಂದ ಶುಭವಾಗುವುದು.

ಕರ್ಕಾಟಕ: ದೇಹದ ಶ್ರಮಕ್ಕೆ ತಕ್ಕಂಥ ಸಂಪಾದನೆ ಇಲ್ಲವಾದರೂ ನೆಮ್ಮದಿ ಇರಲಿದೆ. ಕೆಲಸದಲ್ಲಿದ್ದ ಸಣ್ಣಪುಟ್ಟ ತೊಡಕುಗಳನ್ನು ಸ್ನೇಹಿತನ ಸಹಾಯದಿಂದ ನಿವಾರಿಸಿಕೊಳ್ಳುವಿರಿ. ಬದುಕಿನಲ್ಲಿ ನೆಲೆ ನಿಂತ ನೆಮ್ಮದಿ ಸಿಗಲಿದೆ.

ಸಿಂಹ: ವಿದ್ಯುತ್ ಕಂಟ್ರಾಕ್ಟ್ ದಾರರಿಗೆ ದೊಡ್ಡದಾದಂಥ ಮತ್ತು ಲಾಭದಾಯಕ-ವಾದಂತಹ ಕಾಮಗಾರಿಗಳು ದೊರೆಯಲಿವೆ. ದಾನ ಧರ್ಮ ಪರೋಪಕಾರಗಳಲ್ಲಿ ಆಸಕ್ತಿ ಮೂಡಿ ಉಪಕಾರ ಮಾಡುವುದರಿಂದ ಪುಣ್ಯ ಸಂಪಾದನೆ.

ಕನ್ಯಾ: ಕುಟುಂಬದಲ್ಲಿ ಅಥವಾ ಅಕ್ಕ ಪಕ್ಕದ ವ್ಯಕ್ತಿಗಳಲ್ಲಿ ಬಾಂಧವ್ಯ ವೃದ್ಧಿ. ಮೇಲಧಿಕಾರಿಗಳಿಗೆ ನಿಮ್ಮ ಮೇಲಿನ ವಿಶ್ವಾಸ ವೃದ್ಧಿ. ರಾಜಕೀಯ ವಿದ್ಯಮಾನಗಳಿಂದ ಓಡಾಟ ಅಧಿಕ.

ತುಲಾ: ಆಸ್ತಿ ಕೊಳ್ಳುವುದರಲ್ಲಾಗಲೀ ಮನೆ ಕಟ್ಟುವ ವಿಚಾರದಲ್ಲಾಗಲೀ ಅದೃಷ್ಟ ಇರುವುದು. ಬಂಧು ವರ್ಗದವರಲ್ಲಿ ಸೌಮ್ಯವಾಗಿ ವರ್ತಿಸುವುದು ಒಳ್ಳೆಯದು. ಪ್ರೇಮಿಗಳ ಪಾಲಿಗೆ ಈ ದಿನ ಅತ್ಯುತ್ತಮ.

ವೃಶ್ಚಿಕ: ಮೀನುಗಾರರು ಉದ್ಯೋಗ ನಿಮಿತ್ತ ಸಮುದ್ರಯಾನ ಮಾಡುವಾಗ ಜಾಗರೂಕತೆ ವಹಿಸಬೇಕಾಗುತ್ತದೆ. ನಿರಾಸೆಯ ಜೀವನ ಶೈಲಿ ಹಂತ ಹಂತವಾಗಿ ಮುಕ್ತಾಯವಾಗುವುದು. ಆರ್ಥಿಕ ಭದ್ರತೆ ಬಗ್ಗೆ ತಯಾರಿ ನಡೆಸಿಕೊಳ್ಳಿ.

ಧನು: ರಾಜಕೀಯಕ್ಕೆ ಸಂಬಂಧಿಸಿದ ವ್ಯಕ್ತಿಗಳು ಕೆಲಸಗಳಲ್ಲಿ ಯಶಸ್ವಿ ಆಗುತ್ತೀರಿ. ಧ್ಯಾನ ಹಾಗೂ ಕ್ರೀಡೆಯಂಥ ಚಟುವಟಿಕೆಗಳಲ್ಲಿ ಆಸಕ್ತಿಯನ್ನು ಹೊಂದುವಿರಿ. ತರಕಾರಿ, ಸೊಪ್ಪು ಬೆಳೆಗಾರರಿಗೆ ಅಧಿಕ ಲಾಭ ಸಿಗುವುದು.

ಮಕರ: ದುಡುಕು ನಿರ್ಧಾರಗಳಿಂದ ನೋವು ಉಂಟಾಗುವ ಲಕ್ಷಣಗಳಿವೆ. ಸಂಶೋಧನಾ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಮುನ್ನಡೆ ಕಂಡುಬರುತ್ತದೆ. ಎಂಥ ದುಸ್ಥಿತಿಯಿಂದಲೂ ಹೊರ ಬರುವ ಸಾಮರ್ಥ್ಯ ನಿಮ್ಮಲ್ಲಿದೆ.

ಕುಂಭ: ಸುತ್ತಮುತ್ತಲಿನವರ ಜೊತೆಯಲ್ಲಿ ಸಂಬಂಧಗಳು ಕೆಡಲು ಆಸ್ಪದ ಕೊಡದಿರಿ. ಉನ್ನತ ವ್ಯಾಸಂಗಕ್ಕೆ ವಿದೇಶಯಾನ ಮಾಡುವ ಅವಕಾಶ ಒದಗಿಬರುವುದು. ಔಷಧಿ ವಸ್ತುಗಳ ಮಾರಾಟದಿಂದ ಹೇರಳ ಲಾಭ.

ಮೀನ: ಅನಿವಾರ್ಯವಾಗಿ ಅಪೇಕ್ಷಿಸುವಂಥ ಜನರಿಗೆ ಸಹಾಯ ಮಾಡುವುದರಿಂದ ಪುಣ್ಯ ಸಂಪಾದಿಸಬಹುದು. ಕೃಷಿಯಲ್ಲಿ ಜೀವನಕ್ಕೆ ಸಾಕಾಗುವಷ್ಟು ಜತೆಗೆ ಸಣ್ಣ ಉಳಿತಾಯ ಮಾಡುವಿರಿ.

ಪದಬಂಧ 5757

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಣ್ಣಿನ ಬಾನಿ (3)
4.ಪಗಡೆಯ ಕಾಯಿ ಉಲ್ಟಾ ಆಗಿದೆ (2)
6.ಅರಸರಿಗೆ ಅರಸನಾದವನು (5)
8.ಈತ ಸೇವಕ (3)
10.ಬಂಗಾರ ಇಲ್ಲಿದೆ (3)
11.ಸಂಖ್ಯಾ ವಿಚಾರವನ್ನು ಅಕ್ಷರಸಂಖ್ಯೆ ಮೂಲಕ ಪ್ರತಿಪಾದಿಸುವ ಗಣಿತಶಾಸ್ತ್ರ (5)
12.ಕೊತ್ತಂಬರಿ ಬೀಜವನ್ನು ಹೀಗೂ ಕರೆವರು (3)
13.ಜಟ್ಟಿಕಾಳಗವನ್ನು ಅಭ್ಯಾಸ ಮಾಡುವ ಸ್ಥಳ (3)
15.ಮಲಗುವ ಮನೆಯಿದು (5)
17.ಹೊಗಳಿಕೆ ಅಥವಾ ಪ್ರಶಂಸೆ (2)
18.ಸೊಂಟದಿಂದ ಅದುರುವಿಕೆ ಪ್ರಾರಂಭವಾಗಿದೆ (3)

ಮೇಲಿಂದ ಕೆಳಕ್ಕೆ
1.ಸಮುದ್ರದ ಮೇಲೆ ಯಾನ ಮಾಡುವ ದೊಡ್ಡನಾವೆ (3)
2.ಬಿಡುವು ಈ ರೀತಿ ಸಿಕ್ಕಿದೆ (3)
3.ಅಕ್ಷರಗಳು ಒಂದುಗೂಡುವುದು (2)
5.ಸರ್ವಶ್ರೇಷ್ಠ ವ್ಯಕ್ತಿ (4)
7.ಮಂದಿಯ ಒಳಿತು (4)
9.ಪ್ರತಿಯೊಳಗಿರುವ ಏಳಿಗೆ (3)
11.ಹೂವಿನಲ್ಲಿ ಬೀಜಗಳಿರುವ ಭಾಗ (4)
12.ತೀಕ್ಷ್ಣದೃಷ್ಟಿಯ ಪಕ್ಷಿ ಮೊದಲಿದ್ದಾಗಿನ ಹತೋಟಿ! (4)
13.ತಿಳಿಯಲು ಕಷ್ಟವಾದುದು (3)
14.ದರ್ಪಣವಿಲ್ಲಿ ತಿರುವು ಮುರುವಾಗಿದೆ (3)
16.ಮೈಮೇಲೆ ಬಟ್ಟೆ ಇಲ್ಲದಿರುವುದು (2)



5756ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ಮುನಿ 3.ಪಿಕಾಸಿ 5.ಮಕರಂದ 7.ತಾತಾ 9.ಮಾತಾಮಹಿ 10.ಅಲೆ 11.ತಡ 12.ಮನೋರಥ 13.ಮೇಕೆ 14.ರಾಮಾಯಣ 16.ವರಾಹ 17.ಹುಂಜ

ಮೇಲಿಂದ ಕೆಳಕ್ಕೆ: 1.ಭೀಮ 2.ಮುದ 3.ಪಿತಾಮಹಿ 4.ಸಿರಿಗನ್ನಡ 6.ಕರೆಯೋಲೆ 8.ವಾತಾವರಣ 10.ಅವಿನಾಭಾವ 11.ತಳಪಾಯ 12.ಮಧುಮೇಹ 14.ರಾಜ 15.ಣಬಾ

ಸುಡೊಕು 6142

	6	4			8			
1		3				8	9	4
			5		9			3
	9			7			5	
		5	9		3	4	7	
7				1				9
	7		8		1		4	
4		9				5		7
	3		4		7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6141 ಸುಡೊಕು

5	2	6	9	4	1	8	3	7
4	7	8	3	2	6	5	9	1
3	9	1	5	7	8	6	2	4
9	5	4	7	1	2	3	6	8
1	6	7	8	9	3	4	5	2
2	8	3	6	5	4	1	7	9
7	3	9	4	8	5	2	1	6
8	1	5	2	6	9	7	4	3
6	4	2	1	3	7	9	8	5

ಷೇರುಪೇಟೆ ವಹಿವಾಟು 23



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,834
ಇಂದಿನ ಅಂತ್ಯ	24,836
▲	1
ದಿನದ ಗರಿಷ್ಠ	24,999

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹270-449
ದ್ವಿತಳಿ (ಬಿ.ವಿ) ₹240-638

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹490
12 ಕ್ಕೆ	₹70
ಮೈಸೂರು	
100ಕ್ಕೆ	₹495

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹952 (955)
ಸೂರ್ಯಕಾಂತಿ (ರಿಫೈನ್ಡ್)	₹960 (960)
ಪಾಮೋಲಿನ್	₹900 (898)

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9000-9600
ಹಿರಿಯೂರು	₹6920-6920
ಕೆ.ಆರ್.ಪೇಟೆ	₹9000-9455
ತಿಪಟೂರು	₹9400-9500
ತುರುವೇಕೆರೆ	₹8200-9500

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು

ಜನನ: 11.01.1981 ನಿಧನ: 30.07.2007
ನಾಗವೇಣಿ ಎನ್ ವಿ
ಕನಸು ಜೀವನಕ್ಕೆ ಸ್ಫೂರ್ತಿಯಾದರೆ ನಂಬಿಕೆ ಕನಸಿಗೆ ಸ್ಫೂರ್ತಿ.
ನಿನ್ನ ಪ್ರೀತಿ, ನಗು ನಮ್ಮ ಈ ಜೀವನಕ್ಕೆ ಸ್ಫೂರ್ತಿ
ಇಂತಿ ನಿನ್ನ ನೆನಪಿನಲ್ಲಿ
ಎನ್.ಪಿ. ವೆಂಕಟಸ್ವಾಮಿ ಮತ್ತು ಕುಟುಂಬದವರು
(ಮಾಜಿ ಅಧ್ಯಕ್ಷರು, ಪಿ.ಎಲ್.ಡಿ. ಬ್ಯಾಂಕ್)
ನಾಗಮಂಗಲ, ದೇವನಹಳ್ಳಿ ತಾಲ್ಲೂಕು.

In Loving Memory of

Philomena Pereira
W/O Late Anthony Pereira
Born on 12th October,1931.
Passed away peacefully on 29 July 2024 in Bangalore.
Viewing at 10:30 am at Our Lady of Lourdes Church, Ulsoor on 30th July, followed by Funeral Mass at 11:00 am. Burial at St. Patrick's Cemetery Gate 6.
Mourned by her children Joseph/ Geralyn, Bernadette/ Stephen, Joan/ Francis, Gerald/ Wilma, Noel/ Melanie, Louis/ Pamela, Grandchildren and Great grand children

ಲೋಕಸಭೆಗೆ ಮಾಹಿತಿ ನೀಡಿದ ಕೇಂದ್ರ ಹಣಕಾಸು ಸಚಿವಾಲಯ

ಸರ್ಕಾರದ ಸಾಲ ₹185 ಲಕ್ಷ ಕೋಟಿ

ನವದೆಹಲಿ (ಪಿಟಿಐ): ಪ್ರಸ್ತುತ ವಿನಿಮಯ ದರದ ಆಧಾರದಲ್ಲಿ ಬಾಹ್ಯ ಸಾಲ ಸೇರಿದಂತೆ ಸರ್ಕಾರದ ಸಾಲದ ಮೊತ್ತವು 2024–25ರ ಹಣಕಾಸು ವರ್ಷದಲ್ಲಿ ₹185 ಲಕ್ಷ ಕೋಟಿಗೆ ಏರಿಕೆಯಾಗಲಿದೆ ಎಂದು ಕೇಂದ್ರ ಸರ್ಕಾರವು ಅಂದಾಜಿಸಿದೆ. ಇದು ಜಿಡಿಪಿಯ ಶೇ 56.8ರಷ್ಟಾಗಿದೆ.

ಹಿಂದಿನ ಹಣಕಾಸು ವರ್ಷದ ಮಾರ್ಚ್ ಅಂತ್ಯದ ವೇಳೆಗೆ ಒಟ್ಟು ಸಾಲವು ₹171 ಲಕ್ಷ ಕೋಟಿ ಆಗಿತ್ತು ಎಂದು ಕೇಂದ್ರ ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ ಸೋಮವಾರ ಲೋಕಸಭೆಗೆ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) 2024ರ ಏಪ್ರಿಲ್‌ನಲ್ಲಿ ಪ್ರಕಟಿಸಿದ ವಿಶ್ವ ಆರ್ಥಿಕ ಮುನ್ನೋಟದ ಪ್ರಕಾರ, ಪ್ರಸ್ತುತ ದರಗಳ ಆಧಾರದಲ್ಲಿ ಭಾರತದ ಒಟ್ಟು ದೇಶೀಯ ಉತ್ಪನ್ನವು 2023-24ರಲ್ಲಿ 3.57 ಟ್ರಿಲಿಯನ್ ಡಾಲರ್ (₹298 ಲಕ್ಷ ಕೋಟಿ) ತಲುಪಿದೆ ಎಂದು ಹೇಳಿದರು.

ಕುಟುಂಬಗಳು ಖರೀದಿ ಮೇಲೆ ಮಾಡುವ ವೆಚ್ಚವು (ಪಿಎಫ್‌ಸಿಇ) 2022–23 ಮತ್ತು 2023–24ರ ಹಣಕಾಸು ವರ್ಷಗಳಲ್ಲಿ ಕ್ರಮವಾಗಿ ಶೇ 6.8 ಮತ್ತು ಶೇ 4ರಷ್ಟು ಏರಿಕೆ ಆಗಿತ್ತು ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ತಾತ್ಕಾಲಿಕ ಜಿಡಿಪಿ ಅಂದಾಜನ್ನು ಉಲ್ಲೇಖಿಸಿ, ಚೌಧರಿ ಹೇಳಿದ್ದಾರೆ.

ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್: 9,190 ಪ್ರಕರಣ ಪತ್ತೆ

ನವದೆಹಲಿ (ಪಿಟಿಐ): ಕೇಂದ್ರ ಜಿಎಸ್‌ಟಿ ಅಧಿಕಾರಿಗಳು 2023–24ರ ಹಣಕಾಸು ವರ್ಷದಲ್ಲಿ ನಕಲಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್‌ನ (ಐಟಿಸಿ) 9,190 ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ ಎಂದು ಹಣಕಾಸು ಖಾತೆಯ ರಾಜ್ಯ ಸಚಿವ ಪಂಕಜ್ ಚೌಧರಿ, ಲೋಕಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ನಕಲಿ ಇನ್‌ವಾಯ್ಸ್ ಸೃಷ್ಟಿಸಿ ₹36,374 ಕೋಟಿ ಮೊತ್ತದ ಜಿಎಸ್‌ಟಿ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ವಂಚಿಸಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ 182 ಜನರನ್ನು ಬಂಧಿಸಲಾಗಿದೆ.

2022-23ರಲ್ಲಿ 7,231 ಪ್ರಕರಣ ದಾಖಲಾಗಿದ್ದು, ₹24,140 ಕೋಟಿ ನಕಲಿ ಐಟಿಸಿ ಪತ್ತೆಯಾಗಿದೆ. ಈ ಅವಧಿಯಲ್ಲಿ 152 ಜನರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ನಕಲಿ ಐಟಿಸಿ ವಂಚಕರನ್ನು ಪತ್ತೆ ಹಚ್ಚುವುದು ಸವಾಲಿನ ಕೆಲಸ. ಕಾನೂನು ಜಾರಿ ಸಂಸ್ಥೆಗಳು ಸೇರಿದಂತೆ ಅನೇಕ ಮಧ್ಯಸ್ಥಗಾರರೊಂದಿಗಿನ ಸಮನ್ವಯದ ಮೂಲಕ ಇಂತಹ ಸವಾಲುಗಳನ್ನು ಎದುರಿಸಲಾಗುತ್ತಿದೆ ಎಂದು ಹೇಳಿದರು.

‘ಜಿಡಿಪಿಯ ಐದನೆಯ ಒಂದರಷ್ಟಾಗಲಿದೆ ಡಿಜಿಟಲ್ ಅರ್ಥವ್ಯವಸ್ಥೆ’

ಮುಂಬೈ (ಪಿಟಿಐ): ದೇಶದ ಡಿಜಿಟಲ್ ಅರ್ಥ ವ್ಯವಸ್ಥೆಯು 2026ರ ವೇಳೆಗೆ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಐದನೆಯ ಒಂದರಷ್ಟು ಆಗಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ವರದಿಯೊಂದು ಹೇಳಿದೆ. ಈಗ ಡಿಜಿಟಲ್ ಅರ್ಥ ವ್ಯವಸ್ಥೆಯ ಪಾಲು ಒಟ್ಟು ಜಿಡಿಪಿಯ ಹತ್ತನೆಯ ಒಂದರಷ್ಟು ಮಾತ್ರ ಇದೆ.

‘2023–24ನೆಯ ಸಾಲಿನ ಕರೆನ್ಸಿ ಮತ್ತು ಹಣಕಾಸಿನ ಕುರಿತ ವರದಿ’ ಹೆಸರಿನ ವರದಿಗೆ ಬರೆದಿರುವ ಮುನ್ನುಡಿಯಲ್ಲಿ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಅವರು, ಹಣಕಾಸಿನ ಡಿಜಿಟಲೀಕರಣವು ಮುಂದಿನ ತಲೆಮಾರಿನ ಬ್ಯಾಂಕಿಂಗ್ ವ್ಯವಸ್ಥೆಗೆ ದಾರಿ ಮಾಡಿಕೊಡುತ್ತಿದೆ, ಹಣಕಾಸು ಸೇವೆಗಳು ಕೈಗೆಟಕುವ ವೆಚ್ಚಕ್ಕೆ ಸಿಗುವಂತೆ ಮಾಡುತ್ತಿದೆ ಎಂದು ಹೇಳಿದ್ದಾರೆ.

ಈ ಪರಿವರ್ತನೆಗೆ ಹಲವು ಅಂಶಗಳು ನೆರವಾಗುತ್ತಿವೆ. ಭಾರತದಲ್ಲಿ ಇಂಟರ್ನೆಟ್ ಬಳಕೆದಾರರ ಪ್ರಮಾಣವು ಈಚಿನ ಮೂರು ವರ್ಷಗಳಲ್ಲಿ 19.9 ಕೋಟಿಯಷ್ಟು ಹೆಚ್ಚಾಗಿದೆ. ಭಾರತದಲ್ಲಿ ಪ್ರತಿ ಗಿಗಾಬೈಟ್ ಡೇಟಾ ಪಡೆಯಲು ಮಾಡಬೇಕಿರುವ ವೆಚ್ಚ ₹13.32 ಮಾತ್ರ, ಇದು ಜಗತ್ತಿನಲ್ಲಿ ಅತ್ಯಂತ ಕಡಿಮೆ ಮೊತ್ತ. ದೇಶದಲ್ಲಿ ಪ್ರತಿ ವ್ಯಕ್ತಿ ತಿಂಗಳಿಗೆ ಬಳಕೆ ಮಾಡುವ ಸರಾಸರಿ ಡೇಟಾ ಪ್ರಮಾಣ 24.1 ಜಿ.ಬಿಯಷ್ಟು ಇದೆ ಎಂದು ವರದಿ ಹೇಳಿದೆ.

ಡಿಜಿಟಲೀಕರಣವು ಸೈಬರ್ ಭದ್ರತೆ, ದತ್ತಾಂಶ ಸುರಕ್ಷತೆ ಸೇರಿದಂತೆ ಹಲವು ಆಯಾಮಗಳಲ್ಲಿ ಸವಾಲುಗಳನ್ನು ಕೂಡ ಒಡ್ಡಿದೆ ಎಂದು ದಾಸ್ ಅವರು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಬೈಜುಸ್ ಅರ್ಜಿ ವಿಚಾರಣೆ ಮುಂದೂಡಿಕೆ

ನವದೆಹಲಿ (ಪಿಟಿಐ): ದಿವಾಳಿತನ ಪ್ರಕ್ರಿಯೆ ಸಂಬಂಧ ಬೈಜುಸ್ ಸ್ಥಾಪಕ ಬೈಜು ರವೀಂದ್ರನ್ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಬೇಕಾದ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಸದಸ್ಯರೊಬ್ಬರು ವಿಚಾರಣೆಯಿಂದ ಹಿಂದೆ ಸರಿದಿದ್ದರಿಂದ ವಿಚಾರಣೆಯನ್ನು ಮುಂದೂಡಲಾಗಿದೆ.

ಎನ್‌ಸಿಎಲ್‌ಎಟಿ ಅಧ್ಯಕ್ಷ ನ್ಯಾಯಮೂರ್ತಿ ಅಶೋಕ್ ಭೂಷಣ್ ನೇತೃತ್ವದ ಪೀಠದ ಮುಂದೆ ಈ ವಿಷಯವನ್ನು ಇರಿಸಲಾಗುವುದು. ಅವರು ಈ ವಿಷಯದ ವಿಚಾರಣೆಗೆ ಬೇರೆ ಪೀಠವನ್ನು ನಿಯೋಜಿಸಲಿದ್ದಾರೆ.

ನ್ಯಾಯಮೂರ್ತಿ ಶರದ್ ಕುಮಾರ್ ಶರ್ಮಾ ಮತ್ತು ಜತೀಂದ್ರನಾಥ್ ಸ್ವೈನ್ ಅವರನ್ನು ಒಳಗೊಂಡ ಎನ್‌ಸಿಎಲ್‌ಎಟಿಯ ಚೆನ್ನೈ ಮೂಲದ ದ್ವಿಸದಸ್ಯ ಪೀಠದ ಮುಂದೆ ಸೋಮವಾರ ಈ ವಿಷಯ ವಿಚಾರಣೆಗೆ ಬಂದಿತು.

ನಾನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಪರವಾಗಿ ಈ ಹಿಂದೆ ವಾದಿಸಿದ್ದೇನೆ. ಬಿಸಿಸಿಐ ಈ ವಿಚಾರಣೆಯ ಫಲಾನುಭವಿಯಾಗಿರುವುದರಿಂದ, ಈ ವಿಚಾರಣೆಯನ್ನು ನಾನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ ಎಂದು ಹೇಳಿದ ನ್ಯಾಯಮೂರ್ತಿ ಶರ್ಮಾ, ವಿಚಾರಣೆಯಿಂದ ಹಿಂದೆ ಸರಿದರು.

ಎನ್‌ಸಿಎಲ್‌ಟಿ ಬೆಂಗಳೂರಿನ ಪೀಠವು ಜುಲೈ 16ರಂದು ಬಿಸಿಸಿಐ ಸಲ್ಲಿಸಿದ ಮನವಿಯನ್ನು ಅಂಗೀಕರಿಸಿ ಕಾರ್ಪೊರೇಟ್ ದಿವಾಳಿತನ ಪರಿಹಾರ ಪ್ರಕ್ರಿಯೆಗಳಿಗೆ (ಸಿಐಆರ್‌ಪಿ) ನಿರ್ದೇಶನ ನೀಡಿದೆ.

ಭಾರತ ಕ್ರಿಕೆಟ್ ತಂಡದ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತೆ ಬೈಜುಸ್ ₹158 ಕೋಟಿಯನ್ನು ಬಾಕಿ ಉಳಿಸಿಕೊಂಡಿದೆ. ಹಾಗಾಗಿ, ಬಿಸಿಸಿಐ ದಿವಾಳಿ ಪ್ರಕ್ರಿಯೆ ಆರಂಭಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮಂಡಳಿಯು ಅಂಗೀಕರಿಸಿತ್ತು.

ಇಂಡಿಯನ್ ಬ್ಯಾಂಕ್ ಲಾಭ ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಇಂಡಿಯನ್ ಬ್ಯಾಂಕ್ 2024–25ರ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹2,403 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ತ್ರೈಮಾಸಿಕದಲ್ಲಿ ₹1,709 ಕೋಟಿ ಲಾಭ ಗಳಿಸಲಾಗಿತ್ತು. ಈ ಲಾಭಕ್ಕೆ ಹೋಲಿಸಿದರೆ ಶೇ 41ರಷ್ಟು ಏರಿಕೆಯಾಗಿದೆ. ವಸೂಲಾಗದ ಸಾಲದ ಪ್ರಮಾಣವು ಇಳಿಕೆಯಾಗಿದ್ದರಿಂದ ಲಾಭದಲ್ಲಿ ಏರಿಕೆಯಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಸೋಮವಾರ ತಿಳಿಸಿದೆ.

ಒಟ್ಟು ವರಮಾನವು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹14,759 ಕೋಟಿ ಆಗಿತ್ತು. ಅದು ಈ ತ್ರೈಮಾಸಿಕದಲ್ಲಿ ₹16,945 ಕೋಟಿಗೆ ಏರಿಕೆಯಾಗಿದೆ. ಬಡ್ಡಿ ವರಮಾನವು ₹15,039 ಕೋಟಿಯಷ್ಟಾಗಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ (ಜಿಎನ್‌ಪಿಎ) ಶೇ 5.47ರಿಂದ ಶೇ 3.77ಕ್ಕೆ ಕುಸಿದಿದೆ. ನಿವ್ವಳ ಎನ್‌ಪಿಎ ಶೇ 0.70ರಿಂದ ಶೇ 0.39ಕ್ಕೆ ಇಳಿದಿದೆ.

ಜೂನ್ ಅಂತ್ಯಕ್ಕೆ ಬ್ಯಾಂಕ್‌ನ ಬಂಡವಾಳ ಅನುಪಾತ (ಸಿಎಆರ್) ಶೇ 16.47ರಷ್ಟಿದೆ ಎಂದು ಬ್ಯಾಂಕ್ ತಿಳಿಸಿದೆ.

ಬೆಳ್ಳಿ ದರ ಕೆ.ಜಿಗೆ ₹4,500 ಕುಸಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಬೆಳ್ಳಿ ಧಾರಣೆಯಲ್ಲಿ ಭಾರಿ ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿ ಗೆ ₹4,500 ಇಳಿಕೆಯಾಗಿ, ₹84,500ರಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ ಧಾರಣೆ ₹71,050ಕ್ಕೆ ಇಳಿದಿದೆ.

ಬಜೆಟ್‌ನಲ್ಲಿ ಚಿನ್ನ ಮತ್ತು ಬೆಳ್ಳಿ ಮೇಲಿನ ಕಸ್ಟಮ್ಸ್ ಸುಂಕ ಕಡಿತಗೊಳಿಸಿದ್ದರಿಂದ ಬೆಲೆಯು ಇಳಿಕೆಯ ಹಾದಿಯಲ್ಲಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,438 ಡಾಲರ್ (ಅಂದಾಜು ₹2.04 ಲಕ್ಷ) ಮತ್ತು 28.28 ಡಾಲರ್‌ನಂತೆ (ಅಂದಾಜು ₹2,367) ಮಾರಾಟವಾಗಿವೆ.

ಉಕ್ರೇನ್ ವಿರುದ್ಧ ಹೋರಾಡುತ್ತಿದ್ದ ಹರಿಯಾಣದ ಯುವಕ ಸಾವು

ಚಂಡೀಗಢ (ಪಿಟಿಐ): ರಷ್ಯಾ ಸೇನೆಯ ಪರವಾಗಿ ಉಕ್ರೇನ್ ವಿರುದ್ಧ ಯುದ್ಧದಲ್ಲಿ ಮುಂಚೂಣಿ ಹೋರಾಟದಲ್ಲಿ ಗುರುತಿಸಿಕೊಂಡಿದ್ದ ಹರಿಯಾಣದ 22 ವರ್ಷದ ಯುವಕ ಮೃತಪಟ್ಟಿದ್ದಾನೆ ಎಂದು ಸೋಮವಾರ ಅವರ ಕುಟುಂಬಸ್ಥರು ತಿಳಿಸಿದ್ದಾರೆ.

‘ಹರಿಯಾಣದ ಕೈತಾಲ್ ಜಿಲ್ಲೆಯ ಮಟೌರ್ ಗ್ರಾಮದ ನಿವಾಸಿ ರವಿ ಮೌಣ ಮೃತಪಟ್ಟಿರುವುದನ್ನು ಮಾಸ್ಕೊದಲ್ಲಿರುವ ಭಾರತದ ರಾಯಭಾರ ಕಚೇರಿ ಖಚಿತಪಡಿಸಿದೆ’ ಎಂದು ಅವರ ಸಹೋದರ ಅಜಯ್ ಮೌಣ ತಿಳಿಸಿದರು.

ಸಾರಿಗೆ ಉದ್ಯೋಗಕ್ಕೆ ನೇಮಕ ಮಾಡಲಾಗಿದೆ ಎಂದು ರವಿ ಮೌಣಗೆ ಏಜೆಂಟ್ ತಿಳಿಸಿದ್ದರಿಂದ ಈ ವರ್ಷ ಜನವರಿ 13ರಂದು ರಷ್ಯಾಕ್ಕೆ ತೆರಳಿದ್ದರು. ಇದಾದ ಬಳಿಕ, ಹೆದರಿಸಿ ಸೇನೆಗೆ ಸೇರಿಸಲಾಗಿತ್ತು. ಆತನ ಸ್ಥಿತಿಗತಿ ಕುರಿತು ಮಾಹಿತಿ ನೀಡುವಂತೆ ಕೋರಿ ಅವರ ಸಹೋದರರು ರಾಯಭಾರ ಕಚೇರಿಗೆ ಪತ್ರ ಬರೆದಿದ್ದರು.



ರವಿ ಮೌಣ

‘ಆತ ಮೃತಪಟ್ಟಿದ್ದಾನೆ ಎಂದು ರಾಯಭಾರ ಕಚೇರಿ ತಿಳಿಸಿದೆ’ ಎಂದು ಸಹೋದರ ಅಜಯ್ ಮೌಣ ತಿಳಿಸಿದರು.

ಮೃತದೇಹವನ್ನು ಗುರುತಿಸಲು ಡಿಎನ್‌ಎ ಪರೀಕ್ಷೆಯ ವರದಿ ಕಳುಹಿಸುವಂತೆ ರಾಯಭಾರ ಕಚೇರಿ ತಿಳಿಸಿದೆ ಎಂದು ಕುಟುಂಬಸ್ಥರು ತಿಳಿಸಿದರು. ಸೇನೆಯಲ್ಲಿ ಸೇರ್ಪಡೆಗೊಂಡಿರುವ ಭಾರತದ ಪ್ರಜೆಗಳನ್ನು ಹಿಂದಕ್ಕೆ ಕಳುಹಿಸಲು ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಒಪ್ಪಿಗೆ ಸೂಚಿಸಿದ ಕೆಲವೇ ದಿನಗಳಲ್ಲಿ ಈ ಘಟನೆ ನಡೆದಿದೆ.

‘ಉಕ್ರೇನ್ ವಿರುದ್ಧ ಮುಂಚೂಣಿಯಲ್ಲಿ ಹೋರಾಟದಲ್ಲಿ ಭಾಗವಹಿಸುವಂತೆ ರಷ್ಯಾ ಸೇನೆಯು ರವಿ ಮೌಣ ಅವರಿಗೆ ಸೂಚಿಸಿತ್ತು. ಇಲ್ಲವಾದರೆ, 10 ವರ್ಷ ಜೈಲು ಶಿಕ್ಷೆ ವಿಧಿಸಲಾಗುವುದು ಎಂದು ಎಚ್ಚರಿಸಿತ್ತು.

ದಕ್ಷಿಣ ಲೆಬನಾನ್ ಇಸ್ರೇಲ್ ದಾಳಿ ಇಬ್ಬರು ಸಾವು

ಜೆರುಸಲೇಂ (ಎ.ಪಿ): ಲೆಬನಾನ್‌ನ ದಕ್ಷಿಣ ಭಾಗದಲ್ಲಿ ಇಸ್ರೇಲ್ ಸೋಮವಾರ ವಾಯುದಾಳಿ ನಡೆಸಿದ್ದು, ಇಬ್ಬರು ಮೃತಪಟ್ಟಿದ್ದಾರೆ ಎಂದು ಲೆಬನಾನ್‌ನ ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಲೆಬನಾನ್ ಕಳೆದ ವಾರವಷ್ಟೇ ಇಸ್ರೇಲ್ ಅನ್ನು ಗುರಿಯಾಗಿಸಿ ರಾಕೆಟ್ ದಾಳಿ ನಡೆಸಿತ್ತು. ಆಗ 12 ಮಕ್ಕಳು ಸತ್ತಿದ್ದರು. ಇಂದಿನದು ಅದಕ್ಕೆ ಪ್ರತಿಯಾಗಿ ನಡೆದ ದಾಳಿಯಲ್ಲ ಎನ್ನಲಾಗಿದೆ.

ಇಸ್ರೇಲ್ ಸೋಮವಾರ ಬೆಳಿಗ್ಗೆ ನಡೆಸಿದ ದಾಳಿಯಿಂದಾಗಿ ಬೈಕ್‌ನಲ್ಲಿ ತೆರಳುತ್ತಿದ್ದ ಇಬ್ಬರು ಮೃತಪಟ್ಟಿದ್ದಾರೆ. ಹೆಚ್ಚಿನ ಪ್ರಾಣಹಾನಿಯ ವಿವರ ಸದ್ಯಕ್ಕೆ ತಿಳಿದುಬಂದಿಲ್ಲ.

ಇಸ್ರೇಲ್ ಸೇನೆಯ ಅಧಿಕಾರಿಗಳು, ಸೇನೆಯು ಹಿಜ್ಬುಲ್ಲಾ ನೆಲೆ ಗುರಿಯಾಗಿಸಿ ನಿರಂತರ ದಾಳಿ ನಡೆಸುತ್ತಿದ್ದು, ಇಂದು ಅದರಂತೆ ದಾಳಿ ನಡೆದಿದೆ ಎಂದು ಸ್ಪಷ್ಟಪಡಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ)
29-07-2024

ಜಾವಾ 70/80(ಹೊಸ)	11800-11900
ಜಾವಾ 80/90(ಹೊಸ)	11200-11300
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	890 (893)
ಪಾಮ್ ವಾರದ ಡೆಲಿವರಿ	898 (896)
ಸೂರ್ಯಕಾಂತಿ ಎಣ್ಣೆ ಕಚ್ಚಾ	915 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹68,600 (68,350)
ಬೆಳ್ಳಿ ಕೆ.ಜಿ ₹82,150 (81,500)
ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹216
ಆರ್‌ಎಸ್‌ಎಸ್-5	₹208
ಗುಡ್ ಲಾಟ್	₹196

(ಪ್ರತಿ ಕೆ.ಜಿಗೆ)

‘ಅಮೆರಿಕದ ಹೊಸ ಭರವಸೆ ಕಮಲಾ’

ವಾಷಿಂಗ್ಟನ್ (ಪಿಟಿಐ): ‘ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ದೇಶದ ಹೊಸ ಭರವಸೆ ಹಾಗೂ 44 ಲಕ್ಷಕ್ಕೂ ಅಧಿಕ ಭಾರತ–ಅಮೆರಿಕನ್ನರ ಪ್ರತಿನಿಧಿ’ ಎಂದು ಕಮಲಾ ಪರ ನಿಧಿ ಸಂಗ್ರಹಣೆ ಸಮಿತಿಯ ಮುಖಂಡರೊಬ್ಬರು ಪ್ರತಿಪಾದಿಸಿದ್ದಾರೆ.

ಕಮಲಾ ಹ್ಯಾರಿಸ್

ಡೆಮಾಕ್ರಾಟಿಕ್ ಪಕ್ಷದ ಅಧ್ಯಕ್ಷ ಸ್ಥಾನದ ಸಂಭವನೀಯ ಅಭ್ಯರ್ಥಿಯಾಗಿ ಕಮಲಾ ಅವರು ನಡೆಸುತ್ತಿರುವ ವ್ಯವಸ್ಥಿತ ಪ್ರಚಾರವು ಫಲ ನೀಡಲಿದೆ ಎಂದೂ ಪ್ರತಿಪಾದಿಸಿದ್ದಾರೆ. ಕಮಲಾ ಅಧ್ಯಕ್ಷೀಯ ಸ್ಥಾನದ ಅಭ್ಯರ್ಥಿ ಎಂಬುದನ್ನು ಡೆಮಾಕ್ರಾಟಿಕ್ ಪಕ್ಷ ಅಧಿಕೃತವಾಗಿ ಇನ್ನೂ ಘೋಷಿಸಿಲ್ಲ.

> ಅಮೆರಿಕದಲ್ಲಿ ಪ್ರಜಾಪ್ರಭುತ್ವ ಬಲಪಡಿಸುವುದು, ಅಮೆರಿಕನ್ನರಿಗೆ ಅವಕಾಶಗಳನ್ನು ಸೃಷ್ಟಿಸುವುದು ಸೇರಿ ಅನೇಕ ಸವಾಲು ಗಳಿವೆ. ಅಧ್ಯಕ್ಷ ಸ್ಥಾನದ ಸ್ಪರ್ಧೆಗೆ ಕಮಲಾ ಹೆಸರನ್ನು ಅನುಮೋದಿಸುವೆ
> **ಅಲ್ ಗೋರ್** ಮಾಜಿ ಉಪಾಧ್ಯಕ್ಷ

> ಕಮಲಾ ಹ್ಯಾರಿಸ್ ಗೆಲ್ಲಬಾರದು ಎಂಬುದಕ್ಕೆ ಯಾವುದೇ ಕಾರಣವಿಲ್ಲ. ಇದು ಗಂಭೀರ ಸಂದರ್ಭ. ಟ್ರಂಪ್ ಅವರು ದೇಶವನ್ನು ನಿರಂಕುಶವಾದದತ್ತ ಒಯ್ಯುವುದನ್ನು ತಡೆಯುವ ವ್ಯಕ್ತಿ ಆಗಿದ್ದಾರೆ
> **ಸಲ್ಮಾನ್ ರಷ್ದಿ** ಭಾರತ ಮೂಲದ ಲೇಖಕ

ಭಾರತ ಮೂಲದ ಕಮಲಾ ಇಲ್ಲಿ ನೆಲೆಸಿರುವ ಭಾರತ–ಅಮೆರಿಕ ಸಮುದಾಯದಲ್ಲಿ ಹೊಸ ಉತ್ಸಾಹಕ್ಕೆ ಕಾರಣರಾಗಿದ್ದಾರೆ ಎಂದು ಸಮಿತಿಯ ಪ್ರಮುಖರಾದ ಅಜಯ್ ಭುಟೋರಿಯಾ ಹೇಳಿದರು.

ಅಮೆರಿಕ ಕವಲುದಾರಿಯಲ್ಲಿರುವ ಈ ಹೊತ್ತಿನಲ್ಲಿ ಕಮಲಾ ಅವರ ನಾಯಕತ್ವ ಹೊಸ ಭರವಸೆ ಮೂಡಿಸಿದೆ. ಪ್ರಜಾಪ್ರಭುತ್ವ ಬಲಪಡಿಸುವ, ಸ್ಥಳೀಯರಿಗೆ ಅವಕಾಶಗಳನ್ನು ಸೃಷ್ಟಿಸುವ ವಿಶ್ವಾಸ ಮೂಡಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕಮಲಾ ಪರವಾಗಿ ನಡೆದಿರುವ ಪ್ರಚಾರ ಅಭಿಯಾನದಲ್ಲಿ ಮೊದಲ ವಾರದಲ್ಲಿಯೇ ಸುಮಾರು 1.7 ಲಕ್ಷ ಸ್ವಯಂ ಸೇವಕರು ಸಹಿ ಹಾಕಿದ್ದಾರೆ ಎಂದು ಅವರು ಹೇಳಿದರು.

ಕಮಲಾ ಅವರ ಅಭ್ಯರ್ಥಿಯಾಗುವುದು ನಿಶ್ಚಿತವಾದ ಒಂದು ವಾರದಲ್ಲಿಯೇ ಡೆಮಾಕ್ರಟಿಕ್ ಪಕ್ಷದ ಬಹುತೇಕ ಬೆಂಬಲ ಪಡೆದುಕೊಂಡಿದ್ದಾರೆ ಎಂದು ಭುಟೋರಿಯಾ ಅಭಿಪ್ರಾಯಪಟ್ಟರು.

‘ದಾರಿ ತಪ್ಪಿಸುವ’ ಪೋಸ್ಟ್ ತೆಗೆಯಲು ಬಾಬಾ ರಾಮ್‌ದೇವ್‌ಗೆ ಸೂಚನೆ

ನವದೆಹಲಿ (ಪಿಟಿಐ): ಕೋವಿಡ್–19 ವಿರುದ್ಧ ‘ಕೊರೊನಿಲ್’ ಮಾತ್ರೆ ಬಳಕೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಹಾಕಿರುವ ‘ದಾರಿ ತಪ್ಪಿಸುವ’ ಪೋಸ್ಟ್‌ಗಳನ್ನು ತೆಗೆದುಹಾಕುವಂತೆ ಯೋಗ ಗುರು ಬಾಬಾ ರಾಮ್‌ದೇವ್ ಅವರಿಗೆ ದೆಹಲಿ ಹೈಕೋರ್ಟ್ ಸೋಮವಾರ ಸೂಚಿಸಿದೆ.

ಬಾಬಾ ರಾಮ್‌ದೇವ್

ನ್ಯಾಯಮೂರ್ತಿ ಅನೂಪ್ ಜೈರಾಮ್ ಭಂಭಾನಿ ಅವರು, ‘ರಾಮ್‌ದೇವ್ ವಿರುದ್ಧ ಹಲವು ವೈದ್ಯರು ಸಲ್ಲಿಸಿದ್ದ ಅರ್ಜಿಯನ್ನು ಸ್ವೀಕರಿಸಲಾಗಿದೆ’ ಎಂದು ಹೇಳಿದರು.

‘ಕೆಲವು ಆಕ್ಷೇಪಾರ್ಹ ಟ್ವೀಟ್, ಪೋಸ್ಟ್ ಮತ್ತು ವಿಷಯಗಳನ್ನು ಮೂರು ದಿನಗಳ ಒಳಗಾಗಿ ತೆಗೆದುಹಾಕಲು ನಿರ್ದೇಶನ ನೀಡಲಾಗಿದೆ. ಈ ಸೂಚನೆಯನ್ನು ಪಾಲಿಸದೇ ಇದ್ದಲ್ಲಿ, ‘ಎಕ್ಸ್’ ಜಾಲತಾಣವೇ ಅವುಗಳನ್ನು ತೆಗೆದುಹಾಕಲಿದೆ’ ಎಂದು ಹೇಳಿದರು.

ಪತಂಜಲಿಗೆ ₹4 ಕೋಟಿ ದಂಡ

ಮುಂಬೈ (ಪಿಟಿಐ): ಕರ್ಪೂರ ಉತ್ಪನ್ನವನ್ನು ಮಾರಾಟ ಮಾಡದಂತೆ ಹೈಕೋರ್ಟ್ ನೀಡಿದ್ದ ಮಧ್ಯಂತರ ಆದೇಶವನ್ನು ಉಲ್ಲಂಘಿಸಿದ ಪತಂಜಲಿ ಆಯುರ್ವೇದ ಲಿಮಿಟೆಡ್ ಕಂಪನಿಗೆ ಬಾಂಬೆ ಹೈಕೋರ್ಟ್ ಸೋಮವಾರ ಕಂಪನಿಗೆ ₹4 ಕೋಟಿ ದಂಡ ವಿಧಿಸಿದೆ.

ಪತಂಜಲಿ ಕಂಪನಿಯು ಕರ್ಪೂರ ಉತ್ಪನ್ನಗಳ ಮಾರಾಟಕ್ಕೆ ನಮ್ಮ ಕಂಪನಿಯ ಟ್ರೇಡ್‌ಮಾರ್ಕ್ ಅನ್ನು ದುರ್ಬಳಕೆ ಮಾಡಿಕೊಂಡಿದೆ ಎಂದು ಆರೋಪಿಸಿ ಮಂಗಳಂ ಆರ್ಗಾನಿಕ್ಸ್ ಕಂಪನಿಯು ಹೈಕೋರ್ಟ್‌ನ ಮೆಟ್ಟಿಲೇರಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ಹೈಕೋರ್ಟ್, ಕರ್ಪೂರ ಉತ್ಪನ್ನ ಮಾರಾಟ ಮಾಡದಂತೆ 2023ರಲ್ಲಿ ಪತಂಜಲಿಗೆ ನಿರ್ಬಂಧ ವಿಧಿಸಿತ್ತು.

ನ್ಯಾಯಮೂರ್ತಿ ಆರ್.ಐ ಛಾಗಲಾ ಅವರು, ‘ಪತಂಜಲಿಯು ಉದ್ದೇಶಪೂರ್ವಕವಾಗಿ ಹೈಕೋರ್ಟ್ ಆದೇಶವನ್ನು ಉಲ್ಲಂಘಿಸಿದೆ’ ಎಂದು ಹೇಳಿದರು.

‘ಕಂಪನಿಗೆ ಕೋರ್ಟ್ ಆದೇಶವನ್ನು ಗಾಳಿಗೆ ತೂರುವ ಉದ್ದೇಶ ಇತ್ತು ಎಂಬುದರಲ್ಲಿ ಸಂದೇಹವೇ ಇಲ್ಲ’ ಎಂದು ಹೇಳಿದರು. ನಂತರ ಎರಡು ವಾರಗಳ ಒಳಗಾಗಿ ₹4 ಕೋಟಿ ಠೇವಣಿ ಇಡುವಂತೆ ಸೂಚಿಸಿದರು.

ಇದಕ್ಕೂ ಮುನ್ನ, ಟ್ರೇಡ್‌ಮಾರ್ಕ್ ನಿಯಮ ಉಲ್ಲಂಘನೆ ಪ್ರಕರಣದಲ್ಲಿ ₹50 ಲಕ್ಷ ಮೊತ್ತವನ್ನು ಠೇವಣಿ ಇಡುವಂತೆ ನ್ಯಾಯಾಲಯವು ಸೂಚಿಸಿತ್ತು.

ಕೊರೊನಿಲ್ ಮಾತ್ರೆಯು ಕೊರೊನಾವನ್ನು ಗುಣಪಡಿಸಲಿದೆ ಎಂದು ತಪ್ಪು ಮಾಹಿತಿ ನೀಡುತ್ತಿದ್ದಾರೆ ಎಂದು ಆರೋಪಿಸಿ ಹಲವು ವೈದ್ಯರು 2021ರಲ್ಲಿ ಬಾಬಾ ರಾಮ್‌ದೇವ್, ಆಚಾರ್ಯ ಬಾಲಕೃಷ್ಣ ಮತ್ತು ಪತಂಜಲಿ ಆಯುರ್ವೇದ್ ವಿರುದ್ಧ ಅರ್ಜಿ ಸಲ್ಲಿಸಿದ್ದರು.

ಕಾಶ್ಮೀರ: ಗುಜರಿ ಅಂಗಡಿಯಲ್ಲಿ ಸ್ಫೋಟ, 4 ಸಾವು

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರ ಉತ್ತರ ಭಾಗದ ಸೋಪೋರ್ ನಗರದಲ್ಲಿನ ಗುಜರಿ ಅಂಗಡಿಯೊಂದರಲ್ಲಿ ಸೋಮವಾರ ಸ್ಫೋಟ ಸಂಭವಿಸಿದ್ದು, ನಾಲ್ವರು ಮೃತಪಟ್ಟಿದ್ದಾರೆ.

ಲಡಾಖ್‌ನಿಂದ ಬಂದಿದ್ದ ಟ್ರಕ್‌ನಿಂದ ಗುಜರಿ ವಸ್ತುಗಳನ್ನು ಇಳಿಸುತ್ತಿದ್ದ ವೇಳೆ ದುರಂತ ಸಂಭವಿಸಿದೆ. ಮೂವರು ಸ್ಥಳದಲ್ಲೇ ಸಾವಿಗೀಡಾಗಿದ್ದು, ಮತ್ತೊಬ್ಬ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೃತಪಟ್ಟವರನ್ನು ನಜೀರ್ ಅಹಮದ್ ನಡ್ರೊ(40), ಅಝೀಮ್ ಆಶ್ರಫ್ ಮಿರ್ (20), ಆದಿಲ್ ರಶೀದ್ ಭಟ್ (23) ಮತ್ತು ಮಹಮದ್ ಅಝ್ಹಾರ್ (25) ಎಂದು ಗುರುತಿಸಲಾಗಿದೆ.

ಘಟನೆಯ ಸ್ವರೂಪ ಮತ್ತು ಸ್ಫೋಟಕ್ಕೆ ಕಾರಣವಾದ ಅಂಶಗಳ ಬಗ್ಗೆ ಮಾಹಿತಿ ಲಭ್ಯವಾಗಿಲ್ಲ. ಈ ಬಗ್ಗೆ ಪೊಲೀಸರು ತನಿಖೆ ನಡೆಸುತ್ತಿದ್ದು, ಸ್ಥಳೀಯರಿಗೆ ಸುರಕ್ಷಿತವಾಗಿರುವಂತೆ ಸೂಚಿಸಿದ್ದಾರೆ.

ದೇಶದ ಗಡಿ, ಸಾರ್ವಭೌಮತೆ ಗೌರವಿಸಬೇಕು ● ಚೀನಾಗೆ ಕ್ವಾಡ್ ಸದಸ್ಯ ರಾಷ್ಟ್ರಗಳ ಕಟು ಸಂದೇಶ

ಪ್ರಾಬಲ್ಯ ಸಾಧಿಸುವ ಯತ್ನ ಬೇಡ: ಕ್ವಾಡ್

ಟೋಕಿಯೊ (ಪಿಟಿಐ): ಇಂಡೊ–ಪೆಸಿಫಿಕ್ ಪ್ರದೇಶವನ್ನು ಮುಕ್ತ ವಲಯವಾಗಿಸುವ ಬದ್ಧತೆಯನ್ನು ಪುನರುಚ್ಚರಿಸಿರುವ ಕ್ವಾಡ್ ಸದಸ್ಯ ರಾಷ್ಟ್ರಗಳು, ‘ಯಾವುದೇ ದೇಶ ಮತ್ತೊಂದರ ಮೇಲೆ ಪ್ರಾಬಲ್ಯ ಸಾಧಿಸಲು ಯತ್ನಿಸಬಾರದು’ ಎಂದು ಚೀನಾಕ್ಕೆ ಸ್ಪಷ್ಟ ಸಂದೇಶ ರವಾನಿಸಿವೆ.

‘ದೇಶಗಳ ಗಡಿ, ಸಾರ್ವಭೌಮತೆ, ಪ್ರಜಾಪ್ರಭುತ್ವದ ಮೌಲ್ಯ, ಮಾನವ ಹಕ್ಕುಗಳನ್ನು ಗೌರವಿಸುತ್ತಲೇ ಮುಕ್ತ ನಿಯಮ ಆಧರಿಸಿದ ಅಂತರರಾಷ್ಟ್ರೀಯ ಮಾನದಂಡವನ್ನು ಪಾಲಿಸುವ ವಾತಾವರಣದ ನಿರ್ಮಾಣ ಅಗತ್ಯ’ ಎಂದು ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರು ಪ್ರತಿಪಾದಿಸಿದ್ದಾರೆ.

ಇಲ್ಲಿ ನಡೆದ ಕ್ವಾಡ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಶೃಂಗಸಭೆಯಲ್ಲಿ ಭಾರತದ ಎಸ್. ಜೈಶಂಕರ್, ಜಪಾನ್‌ನ ಯೊಕೊ ಕಮಿಕಾವಾ, ಆಸ್ಟ್ರೇಲಿಯಾದ ಪೆನ್ನಿ ವೊಂಗ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಭಾಗವಹಿಸಿದ್ದರು.

ಚೀನಾದ ಹೆಸರು ನೇರವಾಗಿ ಉಲ್ಲೇಖಿಸದೇ ನಾಲ್ಕೂ ದೇಶಗಳ ವಿದೇಶಾಂಗ ಸಚಿವರು, ಚೀನಾದ ಪೂರ್ವ ಮತ್ತು ದಕ್ಷಿಣ ಸಮುದ್ರ ವಲಯದಲ್ಲಿನ ಪರಿಸ್ಥಿತಿ ಕುರಿತಂತೆ ಕಳವಳ ವ್ಯಕ್ತಪಡಿಸಿದ್ದು, ಜಂಟಿ ಹೇಳಿಕೆಯನ್ನು ನೀಡಿದ್ದಾರೆ.

ಟೋಕಿಯೊದಲ್ಲಿ ಸೋಮವಾರ ನಡೆದ ಸಭೆಯಲ್ಲಿ ಕ್ವಾಡ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರನ್ನು ಜಪಾನ್ ಪ್ರಧಾನಿ ಫುಮಿಯೊ ಕಿಷಿಡಾ ಸ್ವಾಗತಿಸಿದರು. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್‌.ಜೈಶಂಕರ್, ಜಪಾನ್‌ನ ಯೊಕೊ ಕಮಿಕಾವಾ, ಆಸ್ಟ್ರೇಲಿಯಾದ ಪೆನ್ನಿವೊಂಗ್ ಮತ್ತು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಇದ್ದರು —ಎಪಿ/ಪಿಟಿಐ ಚಿತ್ರ

ದಕ್ಷಿಣ ಸಮುದ್ರ ವ್ಯಾಪ್ತಿಯಲ್ಲಿ ಚೀನಾ ಕರಾವಳಿ ಕಾವಲು ಪಡೆ, ಹಡಗುಗಳ ನಿಯೋಜನೆ ಹೆಚ್ಚಿಸುತ್ತಿದೆ. ಇದು ಅಪಾಯಕಾರಿ ಬೆಳವಣಿಗೆ. ಒತ್ತಾಯ ಅಥವಾ ದಬ್ಬಾಳಿಕೆಯಿಂದ ಈ ವಲಯದಲ್ಲಿ ಈಗಿನ ಸ್ಥಿತಿ ಬದಲಿಸುವ ಯಾವುದೇ ಕಾರ್ಯ ಸಲ್ಲದು’ ಎಂದು ಸ್ಪಷ್ಟ ವಿರೋಧವನ್ನು ದಾಖಲಿಸಿದರು.

ಚೀನಾದ ದಕ್ಷಿಣ ಮತ್ತು ಪೂರ್ವ ಸಮುದ್ರ ವಲಯವು ಒಳಗೊಂಡಂತೆ ಹಡಗು ನಿಯೋಜನೆ ಕುರಿತ ಸವಾಲುಗಳನ್ನು ಎದುರಿಸಲು ಅಂತರರಾಷ್ಟ್ರೀಯ ಕಾನೂನು ಮುಖ್ಯವಾಗಿ ಸಮುದ್ರ ನ್ಯಾಯ ಕುರಿತ ವಿಶ್ವಸಂಸ್ಥೆ ಸಮ್ಮೇಳನ ನಿರ್ಣಯದ ಪಾಲನೆ ಅಗತ್ಯ ಎಂದು ಹೇಳಿದರು.

ಮಾನವರಹಿತ ವೈಮಾನಿಕ ವಾಹಕಗಳು (ಯುಎವಿ), ಡ್ರೋಣ್ ಹಾಗೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನಗಳನ್ನು ಭಯೋತ್ಪಾದಕರ ಸಂಘಟನೆಗಳು ಬಳಸುವುದನ್ನು ಖಂಡಿಸುತ್ತೇವೆ ಎಂದರು.

ಉಗ್ರ ಸಂಘಟನೆಗಳು ಇಂತಹ ಪರಿಕರಗಳ ಬಳಸದಂತೆ ತಡೆಗೆ ಎಲ್ಲ ರಾಷ್ಟ್ರಗಳು ಸುಸ್ಥಿರಾಭಿವೃದ್ಧಿ ಕ್ರಮ ಕೈಗೊಳ್ಳಬೇಕು. ಐಎಸ್, ಲಷ್ಕರ್ ಇ ತೊಯಬಾ ಸೇರಿದಂತೆ ವಿಶ್ವಸಂಸ್ಥೆಯು ಪಟ್ಟಿ ಮಾಡಿರುವ ಎಲ್ಲ ಉಗ್ರ ಸಂಘಟನೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು ಎಂದು ಕ್ವಾಡ್ ಸಭೆಯು ಒತ್ತಾಯಿಸಿತು.

‘ಭಾರತ–ಚೀನಾ ಗಡಿ ವಿವಾದ ಮೂರನೆಯವರ ಮಧ್ಯಪ್ರವೇಶ ಅನಗತ್ಯ’

ಟೋಕಿಯೊ (ಪಿಟಿಐ): ‘ಭಾರತ– ಚೀನಾ ಗಡಿವಿವಾದದ ಸಂಬಂಧ ಮೂರನೆಯವರ ಮಧ್ಯಪ್ರವೇಶ ಅನಗತ್ಯ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಹೇಳಿದ್ದಾರೆ.

‘ಗಡಿ ವಿವಾದವನ್ನು ನಾವೇ ಬಗೆಹರಿಸಿಕೊಳ್ಳಬೇಕು. ನಾವು ಇತರೆ ರಾಷ್ಟ್ರಗಳ ನೆರವು ನಿರೀಕ್ಷಿಸುತ್ತಿಲ್ಲ’ ಎಂದು ಇಲ್ಲಿ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಸಮಸ್ಯೆ ಇದೆ ಅಥವಾ ಭಾರತ–ಚೀನಾ ನಡುವೆ ವಿವಾದವಿದೆ ಎನ್ನಬಹುದು. ನಾವೇ ಪರಿಹಾರ ಕಂಡುಕೊಳ್ಳಬೇಕು. ಈ ಎರಡೂ ಬೃಹತ್ ರಾಷ್ಟ್ರಗಳಾದ ಕಾರಣ ಸಹಜವಾಗಿ ಇತರೆ ರಾಷ್ಟ್ರಗಳಿಗೂ ಈ ಕುರಿತು ಆಸಕ್ತಿ ಇರಬಹುದು’ ಎಂದು ಹೇಳಿದರು.

ಚೀನಾದ ವಿದೇಶಾಂಗ ಸಚಿವ ವಾಂಗ್ ಯಿ ಅವರ ಜೊತೆ ಇದೇ ತಿಂಗಳು ಎರಡು ಬಾರಿ ಭೇಟಿ ಮಾಡಿ ಚರ್ಚಿಸಲಾಗಿದೆ ಎಂದು ಅವರು ಇದೇ ವೇಳೆ ಇಲ್ಲಿ ಉಲ್ಲೇಖಿಸಿದರು.

ಕಾಳ್ಗಿಚ್ಚು ನಂದಿಸಲು ಹರಸಾಹಸ

ಫಾರೆಸ್ಟ್ ರಾಂಚ್ (ಎಪಿ): ಕ್ಯಾಲಿಫೋರ್ನಿಯಾದಲ್ಲಿ ಈ ವರ್ಷದ ಅತೀ ದೊಡ್ಡ ಕಾಳ್ಗಿಚ್ಚು ಸಂಭವಿಸಿದ್ದು, ಅಗ್ನಿಶಾಮಕ ಪಡೆ ಬೆಂಕಿ ನಂದಿಸಲು ಹರಸಾಹಸ ಪಡುತ್ತಿದೆ.

ಇದರ ಬೆನ್ನಲ್ಲೇ, ಅಮೆರಿಕ ಹಾಗೂ ಕೆನಡಾದ ನಾಗರಿಕರಿಗೆ ಗಾಳಿಯ ಗುಣಮಟ್ಟದ ಕುರಿತಂತೆ ಎಚ್ಚರಿಕೆಯನ್ನು ರವಾನಿಸಲಾಗಿದೆ.

ಉತ್ತರ ಕ್ಯಾಲಿಫೋರ್ನಿಯಾದ ಒಳನಾಡಿನಲ್ಲಿ ಬೆಂಕಿಗೆ 1,430 ಕಿ.ಮೀ ವ್ಯಾಪ್ತಿಯಲ್ಲಿ ಕಾಡು ನಾಶಗೊಂಡಿದೆ. ದಟ್ಟ ಹೊಗೆ ವಾತಾವರಣವನ್ನು ಆವರಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಮೂರು ದಿನಗಳಲ್ಲಿ ಕಾಳ್ಗಿಚ್ಚು ನಿಯಂತ್ರಣಕ್ಕೆ ಬರುವ ವಿಶ್ವಾಸವಿದೆ. ಚಿಕೊ ಜನವಸತಿ ಪ್ರದೇಶಕ್ಕೆ ಬೆಂಕಿ ವ್ಯಾಪಿಸುವ ಸಾಧ್ಯತೆಗಳಿಲ್ಲ’ ಎಂದು ಅಧಿಕಾರಿ ಜೆರಮಿ ಫಿಯರ್ಸ್ ತಿಳಿಸಿದರು. ‘ಜನರ ರಕ್ಷಣೆಗೆ ಆದ್ಯತೆ ನೀಡಿದ್ದು, 3,400ಕ್ಕೂ ಅಧಿಕ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ನಿರತರಾಗಿದ್ದಾರೆ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

General

✓ ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ,ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC,PUC,Degree, ITI ನವರು.18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035277967

Marketing & Sales

REQ, EXPERIENCED Telecaller & Field executive For BankLoan collection Salary+ Incentive, 9916276701, 7899040499, 9108267410

ಪ್ರವಾಸ

Travel

13.09.2024 21.10.2024 06.11.2024 ಸಿಂಗಾಪುರ್, ಮಲೇಶಿಯಾ ಥೈಲ್ಯಾಂಡ್ 7/ 11 ದಿನಗಳು. 23.09.2024 17.10.2024 ಭೂತಾನ್ 8 ದಿನಗಳು. 23.09.2024 07.10.2024 30.10.2024 ಅಸ್ಸಾಂ,ಮೇಘಾಲಯ 9 ದಿನಗಳು. 26.09.2024 17.10.2024 ಮಧ್ಯಪ್ರದೇಶ 10 ದಿನಗಳು. 17.10.2024 24.11.2024 ಶ್ರೀಲಂಕಾ 6 ದಿನಗಳು. ಜೈನ್ ಟ್ರಾವಲ್ಸ್ ಬೆಂಗಳೂರು03. 9448402248 7022547922

13 ದಿನಗಳ ಚಾರ್‌ಧಾಮ್. 8 ದಿನಗಳ ನೇಪಾಳ,ಮುಕ್ತಿನಾಥ. 13/7 ದಿನಗಳು ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 6 ದಿನಗಳ ಇಂಡೋನೇಷ್ಯಾ ಬಾಲಿ. 6 ದಿನಗಳ ದುಬೈ. 18 ದಿನಗಳ ಯುಕೆ,ಯುರೋಪ್ (10ದೇಶಗಳು). 6 ದಿನಗಳ ಶ್ರೀಲಂಕಾ ಪ್ರವಾಸ. ಸಂಪರ್ಕಿಸಿ: 9900080793 9880079588. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು-04

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಶಿಕ್ಷಣ
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9886213331
+91 9845114560 | +91 9900428036

ಗೊಡ್ಡು ಬೆದರಿಕೆಗೆ ಹೆದರಲ್ಲ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿಕೆ

‘ಮೈಸೂರು ಚಲೋ ಹತ್ತಿಕ್ಕಲು ಅಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರದ ಗೊಡ್ಡು ಬೆದರಿಕೆಗಳಿಗೆ ಹೆದರುವುದಿಲ್ಲ. ಅವರು ನಮ್ಮ ಹೋರಾಟ ಮತ್ತು ಪಾದಯಾತ್ರೆಯನ್ನು ಹತ್ತಿಕ್ಕಲು ಸಾಧ್ಯವಿಲ್ಲ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದರು.

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಮತ್ತು ಮುಡಾ ಹಗರಣವನ್ನು ಖಂಡಿಸಿ ಆ.3 ರಿಂದ ಮೈಸೂರಿಗೆ ಪಾದಯಾತ್ರೆ ನಡೆಸುವ ಕುರಿತು ಸೋಮವಾರ ಅರಮನೆ ಆವರಣದಲ್ಲಿ ಹಮ್ಮಿಕೊಂಡಿದ್ದ ಪಕ್ಷದ ನಾಯಕರ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

‘ಪಾದಯಾತ್ರೆಗೆ ಅನುಮತಿ ನೀಡುವುದಿಲ್ಲ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಹೇಳಿಕೆ ನೀಡಿರುವ ಬೆನ್ನಲ್ಲೇ, ವಿಜಯೇಂದ್ರ ಅವರು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡರು. ‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ, ಉಪಮುಖ್ಯಮಂತ್ರಿ ಶಿವಕುಮಾರ್ ಅವರೇ ನಿಮ್ಮ ಗೊಡ್ಡು ಬೆದರಿಕೆಗಳಿಗೆ ನಮ್ಮ ನಾವು ಅಂಜುವುದಿಲ್ಲ’ ಎಂದು ಹೇಳಿದರು.

‘ಇಡೀ ರಾಜ್ಯದ ಪರಿಶಿಷ್ಟ ಜಾತಿ, ಪಂಗಡಗಳ ಪರವಾಗಿ ನಮ್ಮ ಹೋರಾಟ ನಿರಂತರವಾಗಿ ನಡೆಯಲಿದೆ. ಪರಿಶಿಷ್ಟ ಸಮುದಾಯದ ಹಣವನ್ನು ಲೂಟಿ ಮಾಡಿದ್ದಾರೆ. ಸಾವಿರಾರು ಕೋಟಿಯ ಭ್ರಷ್ಟಾಚಾರ ನಡೆದಿದ್ದಾರೆ. ಇವುಗಳ ವಿರುದ್ಧ ನಾವು ಹೋರಾಟ ನಡೆಸದೇ ಇದ್ದರೆ ಭಗವಂತನೂ ಕ್ಷಮಿಸುವುದಿಲ್ಲ’ ಎಂದರು.

‘ಕೋವಿಡ್ ಸಂದರ್ಭದಲ್ಲಿ ಕಾಂಗ್ರೆಸ್‌ನವರು ಮೇಕೆದಾಟು ಪಾದಯಾತ್ರೆ ಮಾಡಿದ್ದರಲ್ಲವೇ? ಸದನದಲ್ಲಿ ಮುಡಾ ಬಗ್ಗೆ ಯಾಕೆ ಚರ್ಚೆ ಮಾಡಿಲ್ಲ? ಮುಖ್ಯಮಂತ್ರಿ 2 ಗಂಟೆ ಸುದ್ದಿಗೋಷ್ಠಿ ನಡೆಸಿ ಉತ್ತರ ಕೊಡುತ್ತಾರೆ. ಸದನದಲ್ಲಿ ವಿಪಕ್ಷಗಳು ಎತ್ತಿದ ಪ್ರಶ್ನೆಗಳಿಗೆ ಸದನದಲ್ಲಿ ಉತ್ತರ ಕೊಟ್ಟಿಲ್ಲ’ ಎಂದು ಟೀಕಿಸಿದರು. ‘ನಮ್ಮ ಕಾರ್ಯಕರ್ತರಲ್ಲಿ ರಣೋತ್ಸಾಹ ಮೂಡಿದೆ. ಇದನ್ನು ಯಾರೂ ತಡೆಯಲು ಸಾಧ್ಯವಿಲ್ಲ’ ಎಂದು ಹೇಳಿದರು.

ಜನರಿಗೆ ಸತ್ಯ ಹೇಳಲು ಪಾದಯಾತ್ರೆ: ಈ ಹಗರಣಗಳ ವಾಸ್ತವಾಂಶವನ್ನು ಜನರಿಗೆ ತಿಳಿಸುವುದೇ ಪಾದಯಾತ್ರೆಯ ಉದ್ದೇಶ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಅವರಿಗೆ ಸತ್ಯದ ಮನವರಿಕೆ ಮಾಡಿಕೊಡಲು ಎನ್‌ಡಿಎ ವತಿಯಿಂದ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಹೇಳಿದರು. ವಿರೋಧಪಕ್ಷದ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಮೈಸೂರು ಚಲೋ’ ಪಾದಯಾತ್ರೆಯ ಸಿದ್ಧತಾ ಸಭೆಯಲ್ಲಿ ವಿ. ಸುನಿಲ್ ಕುಮಾರ್, ರಾಜೂ ಗೌಡ, ಡಿ.ವಿ. ಸದಾನಂದ ಗೌಡ, ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಬೈರತಿ ಬಸವರಾಜ್ ಛಲವಾದಿ ನಾರಾಯಣ ಸ್ವಾಮಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

224 ಕ್ಷೇತ್ರಗಳ ಕಾರ್ಯಕರ್ತರು ಭಾಗಿ

ಆ.3 ರಿಂದ ನಡೆಯುವ ಪಾದಯಾತ್ರೆಯಲ್ಲಿ 224 ವಿಧಾನಸಭಾ ಕ್ಷೇತ್ರಗಳ ಬಿಜೆಪಿ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ. ಪ್ರತಿದಿನ ಪ್ರತಿ ಜಿಲ್ಲೆಯಿಂದ ತಲಾ 200 ಕಾರ್ಯಕರ್ತರು ಪಾದಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ ಎಂದು ವಿಜಯೇಂದ್ರ ತಿಳಿಸಿದರು.

ಮೊದಲ ದಿನ ಯಶವಂತಪುರ, ದಾಸರಹಳ್ಳಿ, ಆರ್.ಆರ್.ನಗರ, ವಿಜಯನಗರ, ಶಿವಾಜಿನಗರ, ದೊಡ್ಡಬಳ್ಳಾಪುರ, ಮಾಗಡಿ, ಪದ್ಮನಾಭನಗರ, ರಾಜಾಜಿನಗರ ವಿಧಾನಸಭಾ ಕ್ಷೇತ್ರಗಳ ಜನಪ್ರತಿನಿಧಿಗಳು, ಕೋಲಾರ- ಕಲಬುರಗಿಯ ಕಾರ್ಯಕರ್ತರು ಭಾಗವಹಿಸಲಿದ್ದಾರೆ. ಪಾದಯಾತ್ರೆ ಯಶಸ್ವಿಗೆ ತಂಡಗಳನ್ನು ರಚಿಸಲಾಗಿದೆ. ಮೊದಲ ದಿನ ಶಾಸಕ ಮುನಿರಾಜು ನೇತೃತ್ವ ವಹಿಸುತ್ತಾರೆ. ಪಾದಯಾತ್ರೆ ಯಶಸ್ವಿಗಾಗಿ ಬಿಜೆಪಿ-ಜೆಡಿಎಸ್ ಸಮನ್ವಯ ಸಮಿತಿ ರಚಿಸುತ್ತೇವೆ ಎಂದು ವಿವರ ನೀಡಿದರು.

‘ಆ. 3ರಂದು ಬೆಳಿಗ್ಗೆ 8.30ಕ್ಕೆ ಪಾದಯಾತ್ರೆ ಉದ್ಘಾಟನೆ ನಡೆಯಲಿದೆ. ಬಿ.ಎಸ್.ಯಡಿಯೂರಪ್ಪ ಅವರು, ಎಚ್.ಡಿ.ಕುಮಾರಸ್ವಾಮಿ, ಪ್ರಲ್ಹಾದ ಜೋಶಿ ಭಾಗವಹಿಸುತ್ತಾರೆ. ಕೆಂಗೇರಿಯ ಕೆಂಪಮ್ಮ ದೇವಸ್ಥಾನ, ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಪ್ರತಿ ದಿನ 20 ಕಿ.ಮೀನಷ್ಟು ಪಾದಯಾತ್ರೆ ನಡೆಸಲಿದ್ದೇವೆ’ ಎಂದು ವಿವರಿಸಿದರು.

‘ಪಾದಯಾತ್ರೆಗೆ ಅನುಮತಿ ನೀಡಲ್ಲ’

ಒಂದನೇ ಪುಟದಿಂದ...

‘ಜನರಿಗೆ ತೊಂದರೆ ಕೊಡದೇ ಪಾದಯಾತ್ರೆ ಮಾಡಿದರೆ, ಅವರಿಗೆ ಏನು ವ್ಯವಸ್ಥೆ ಬೇಕೊ ಅದನ್ನು ಮಾಡಿಕೊಡುತ್ತೇವೆ. ವಿರೋಧ ಪಕ್ಷಗಳ ಪಾದಯಾತ್ರೆಗೆ ಪ್ರತಿಯಾಗಿ ನಾವು ಕೂಡಾ ಪಕ್ಷದ ಮೂಲಕ ಜಾಗೃತಿ ರೂಪಿಸುತ್ತೇವೆ’ ಎಂದೂ ಹೇಳಿದರು.

ತಾರತಮ್ಯ ಧೋರಣೆ ತೋರಿಸಿದರೆ ಹೇಗೆ?: ‘ಬಜೆಟ್‌ನಲ್ಲಿ ಕರ್ನಾಟಕಕ್ಕೆ ಅನ್ಯಾಯವಾಗಿಲ್ಲ’ ಎಂಬ ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿಕೆಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಯುಪಿಎ, ಎನ್‌ಡಿಎ ಅವಧಿಯ ಅನುದಾನವನ್ನು ಹೋಲಿಕೆ ಮಾಡುವುದು ಸರಿಯಲ್ಲ. ಹಿಂದೆ ಬಜೆಟ್ ಗಾತ್ರ ಎಷ್ಟಿತ್ತು, ಈಗ ಎಷ್ಟಾಗಿದೆ ಎನ್ನುವುದನ್ನು ನೋಡಬೇಕು. ಆಂಧ್ರಪ್ರದೇಶಕ್ಕೆ ₹15 ಸಾವಿರ ಕೋಟಿ ಕೊಟ್ಟಿದ್ದಾರೆ. ಕೊಡುವುದು ಬೇಡ ಎಂದಿಲ್ಲ, ಸರಿ ಸಮನಾಗಿ ಕೊಡಬೇಕು. ರಾಜ್ಯಗಳ ಮಧ್ಯೆ ತಾರತಮ್ಯ ಧೋರಣೆ ತೋರಿಸಿದರೆ ಹೇಗೆ’ ಎಂದು ಪ್ರಶ್ನಿಸಿದರು.

‘ಅಲ್ಪಸಂಖ್ಯಾತರ ಕಲ್ಯಾಣಕ್ಕೆ ₹3,200 ಕೋಟಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಬಜೆಟ್‌ನಲ್ಲಿ ಒಟ್ಟಾರೆ ₹3,200 ಕೋಟಿ ಅನುದಾನ ನೀಡಲಾಗಿದ್ದು, ಅದರಲ್ಲಿ ₹1,488 ಕೋಟಿ ಶಿಕ್ಷಣಕ್ಕೆ ಮೀಸಲಿಟ್ಟಿದ್ದೇವೆ’ ಎಂದು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದರು.

ಅಲ್ಪಸಂಖ್ಯಾತರ ನಿರ್ದೇಶನಾಲಯ ವತಿಯಿಂದ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ‘ಶಿಕ್ಷಣ ಜೀವನದ ಬಹುದೊಡ್ಡ ಅಸ್ತ್ರ. ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಣದ ಪಾತ್ರ ದೊಡ್ಡದು. ನಾನು ಸಚಿವನಾದ ನಂತರ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿದ್ದೇನೆ’ ಎಂದರು.

‘ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ವ್ಯಾಪ್ತಿಯ ಶಾಲೆ ಮತ್ತು ಕಾಲೇಜುಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡಬೇಕು. ಈ ದಿಸೆಯಲ್ಲಿ ಬೋಧಕ ವರ್ಗ ಗಮನಹರಿಸಬೇಕು. ಹಾಸ್ಟೆಲ್‌ಗಳಲ್ಲಿ ಮಕ್ಕಳನ್ನು ನಿಮ್ಮ ಮಕ್ಕಳಂತೆ ನೋಡಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ತೊಂದರೆ ಕೊಡುವವರನ್ನು ಸಹಿಸುವುದಿಲ್ಲ’ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ (ಕೆಎಂಡಿಸಿ) 2024-25ನೇ ಸಾಲಿನ ಎಂಟು ಹೊಸ ಯೋಜನೆಗಳಿಗೆ ಸಚಿವರು ಚಾಲನೆ ನೀಡಿದರು. ಅರಿವು ಶಿಕ್ಷಣ ಯೋಜನೆಯಡಿಯಲ್ಲಿ ಪರೀಕ್ಷಾ ಪ್ರಾಧಿಕಾರದ ಜತೆ ಒಪ್ಪಂದಕ್ಕೆ ಸಹಿ ಹಾಕಿ ₹12 ಕೋಟಿ ಚೆಕ್ ಹಸ್ತಾಂತರಿಸಿದರು.

ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ನಿಸಾರ್ ಅಹಮದ್, ವಕ್ಫ್ ಬೋರ್ಡ್ ಅಧ್ಯಕ್ಷ ಅನ್ವರ್ ಬಾಷಾ, ಉರ್ದು ಅಕಾಡೆಮಿ ಅಧ್ಯಕ್ಷ ಮೊಹಮದ್ ಅಲಿ ಖಾಜಿ, ಕೆಎಂಡಿಸಿ ಅಧ್ಯಕ್ಷ ಬಿ.ಕೆ. ಅಲ್ತಾಫ್ ಖಾನ್, ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್, ನಿರ್ದೇಶಕ ಜಿಲಾನಿ ಮೊಕಾಶಿ ಉಪಸ್ಥಿತರಿದ್ದರು.

ಅಲ್ಪಸಂಖ್ಯಾತರ ನಿರ್ದೇಶನಾಲಯ ವತಿಯಿಂದ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಖಾನ್ ಅವರು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಿಸಿದರು.

‘36 ವಿದ್ಯಾರ್ಥಿಗಳಿಗೆ ದ್ವಿಚಕ್ರ ವಾಹನ’

ಪ್ರತಿಭಾ ಪುರಸ್ಕಾರ ಪಡೆದ 54 ವಿದ್ಯಾರ್ಥಿಗಳಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ 96ಕ್ಕಿಂತ ಹೆಚ್ಚು ಅಂಕ ಪಡೆದ 36 ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ದ್ವಿಚಕ್ರ ವಾಹನ ನೀಡುವುದಾಗಿ ಸಚಿವ ಜಮೀರ್ ಅಹಮದ್ ಖಾನ್ ಘೋಷಿಸಿದರು.

ಅಲ್ಪಸಂಖ್ಯಾತ ನಿರ್ದೇಶನಾಲಯದ ಕಾಲೇಜುಗಳಲ್ಲಿ ದ್ವಿತೀಯ ಪಿಯುಸಿಯಲ್ಲಿ ಶೇ 98ಕ್ಕಿಂತ ಹೆಚ್ಚು ಅಂಕ ಪಡೆಯುವ ವಿದ್ಯಾರ್ಥಿಗಳನ್ನು ದತ್ತು ಪಡೆದು, ಉನ್ನತ ವ್ಯಾಸಂಗದ ಸಂಪೂರ್ಣ ವೆಚ್ಚ ಭರಿಸುವುದಾಗಿಯೂ ಅವರು ಹೇಳಿದರು.

‘ಇ-ಸ್ವತ್ತು ಇಂದೂ ಇಲ್ಲ’

ಬೆಂಗಳೂರು: ‘ಇ-ಸ್ವತ್ತು ತಂತ್ರಾಂಶ ಹೊಸ ಅವತರಣಿಕೆಯನ್ನು ಪರಿಚಯಿಸುತ್ತಿರುವ ಪ್ರಕ್ರಿಯೆ ಮುಂದುವರಿದಿದ್ದು, ಮಂಗಳವಾರವೂ ಇ-ಸ್ವತ್ತು ತಂತ್ರಾಂಶ ಕಾರ್ಯ ನಿರ್ವಹಿಸುವುದಿಲ್ಲ’ ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಅಲ್ಲದೇ, ಇ-ಸ್ವತ್ತು ಕಾರ್ಯಾವಧಿಯನ್ನು ಆಗಸ್ಟ್ 2 ರವರೆಗೆ ಪ್ರತಿನಿತ್ಯ ರಾತ್ರಿ 8 ಗಂಟೆಯವರೆಗೆ ವಿಸ್ತರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಸಾಫ್ಟ್‌ವೇರ್ ಕೋರ್ಸ್: ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ಪ್ರಮಾಣೀಕರಿಸಿದ ಅತ್ಯಾಧುನಿಕ ಕಂಪ್ಯೂಟರ್ ಸಾಫ್ಟ್‌ವೇರ್ ಕೋರ್ಸ್‌ಗಳ ತರಬೇತಿಗಾಗಿ ರಾಷ್ಟ್ರೀಯ ಕೌಶಲ ಅಕಾಡೆಮಿ ಅರ್ಜಿ ಆಹ್ವಾನಿಸಿದೆ.

12ನೇ ತರಗತಿ ಉತ್ತೀರ್ಣರಾದವರು, ಎಂಜಿನಿಯರಿಂಗ್, ಪದವಿ, ಸ್ನಾತಕೋತ್ತರ, ಎಂಬಿಎ, ಪಾಲಿಟೆಕ್ನಿಕ್ ಡಿಪ್ಲೊಮಾ ಮಾಡಿರುವವರಿಗೆ ಮಾಹಿತಿ ತಂತ್ರಜ್ಞಾನ ಮತ್ತು ಕಂಪ್ಯೂಟರ್ ಸಾಫ್ಟ್‌ವೇರ್ ತಂತ್ರಜ್ಞಾನದ ಕುರಿತಾದ ಕೌಶಲಗಳನ್ನು ವೃದ್ಧಿಸಿಕೊಳ್ಳಲು ಇದೊಂದು ಉತ್ತಮ ಅವಕಾಶ ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಇ-ಲರ್ನಿಂಗ್ ಮೂಲಕ ತರಬೇತಿ ನೀಡಲಾಗುತ್ತದೆ. ತರಬೇತಿ ಮುಗಿದ ಬಳಿಕ ಪರೀಕ್ಷೆ ನಡೆಸಲಾಗುತ್ತದೆ. ಸರ್ಕಾರದಿಂದ ಪ್ರಮಾಣ ಪತ್ರವನ್ನೂ ನೀಡಲಾಗುತ್ತದೆ. ಈ ಕೋರ್ಸ್ 2ರಿಂದ 6 ತಿಂಗಳದ್ದಾಗಿದ್ದು, ವಿದ್ಯಾರ್ಥಿಗಳು ತಮ್ಮ ನೆಚ್ಚಿನ ವಿಷಯವನ್ನು ಆಳವಾಗಿ ಕಲಿಯುವುದಕ್ಕೆ ಅನುಕೂಲವಾಗುತ್ತದೆ. ಸ್ವರ್ಣ ಭಾರತ್ ರಾಷ್ಟ್ರೀಯ ಮಟ್ಟದ ಕೌಶಲ ಅಭಿವೃದ್ಧಿ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗ, ಆರ್ಥಿಕವಾಗಿ ಹಿಂದುಳಿದ ವರ್ಗ, ಅಲ್ಪಸಂಖ್ಯಾತರು, ಅಂಗವಿಕಲರು, ಮಹಿಳೆಯರು, ಸೇನೆಯಿಂದ ನಿವೃತ್ತರಾದವರು ಮತ್ತು ಅವರ ಮಕ್ಕಳಿಗೆ ಶುಲ್ಕದಲ್ಲಿ ಶೇ80ರಷ್ಟು ಸಹಾಯಧನವೂ ಸಿಗಲಿದೆ.

ಕೋರ್ಸ್‌ಗಳು: ಸಾಫ್ಟ್‌ವೇರ್ ಎಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಮತ್ತು ಪಿಜಿ ಡಿಪ್ಲೊಮಾ, ಸಾಫ್ಟ್‌ವೇರ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ. ಅಲ್ಲದೇ 100ಕ್ಕೂ ಹೆಚ್ಚು ಕಂಪ್ಯೂಟರ್ ಸಾಫ್ಟ್‌ವೇರ್ ಸರ್ಟಿಫಿಕೇಟ್ ಕೋರ್ಸ್‌ಗಳಿವೆ. ಅವುಗಳಲ್ಲಿ ಆರ್ಟಿಫೀಷಿಯಲ್ ಇಂಟಲಿಜೆನ್ಸ್, ಡೇಟಾ ಸೈನ್ಸ್, ಬಿಗ್ ಡೇಟಾ, ಕ್ಲೌಡ್ ಕಂಪ್ಯೂಟಿಂಗ್, ಸೈಬರ್ ಸೆಕ್ಯುರಿಟಿ, ಎಥಿಕಲ್ ಹ್ಯಾಕಿಂಗ್, ಕಂಪ್ಯೂಟರ್ ಫೊರೆನ್ಸಿಕ್ ಪ್ರಮುಖವಾದವು. ಅರ್ಜಿ ಸಲ್ಲಿಸಲು www.nationalskillacademy.in. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆಗಳು 9505800050 ಮತ್ತು 9505800047.

ಪೋಕ್ಸೊ: ಶಿಕ್ಷಕಿ ವರ್ತನೆಗೆ ಹೈಕೋರ್ಟ್ ಅತೃಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಲಾ ಶೈಕ್ಷಣಿಕ ಪ್ರವಾಸದ ವೇಳೆ ವಿದ್ಯಾರ್ಥಿ (ಬಾಲಕ) ಜೊತೆಗೆ ಮುಜುಗುರ ಉಂಟು ಮಾಡುವ ರೀತಿಯಲ್ಲಿ ಪೋಟೊ ಕ್ಲಿಕ್ಕಿಸಿಕೊಂಡಿದ್ದಾರೆ ಹಾಗೂ ವಿಡಿಯೊ ಮಾಡಿಸಿಕೊಂಡಿದ್ದಾರೆ’ ಎಂದು ಆರೋಪಿಸಲಾದ ಪ್ರೌಢಶಾಲೆ ಮುಖ್ಯ ಶಿಕ್ಷಕಿಯೊಬ್ಬರ ನಡೆಗೆ ಸಂಬಂಧಿಸಿದ ಪ್ರಕರಣದಲ್ಲಿ; ಮುಖ್ಯ ಶಿಕ್ಷಕಿ ವರ್ತನೆಗೆ ಹೈಕೋರ್ಟ್ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

‘ನನ್ನ ವಿರುದ್ಧ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ 43 ವರ್ಷದ ಮುಖ್ಯ ಶಿಕ್ಷಕಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠವು, ಈ ಕುರಿತಂತೆ ಅತೃಪ್ತಿ ಹೊರಹಾಕಿದೆ.

ವಿಚಾರಣೆ ವೇಳೆ ಮುಖ್ಯ ಶಿಕ್ಷಕಿ ಪರ ವಕೀಲರು, ‘ಶಿಕ್ಷಕಿ ಮತ್ತು ವಿದ್ಯಾರ್ಥಿ ನಡುವೆ ಯಾವುದೇ ಲೈಂಗಿಕ ಉದ್ದೇಶವಿರಲಿಲ್ಲ. ಇಬ್ಬರ ನಡುವೆ ತಾಯಿ-ಮಗನ ಸಂಬಂಧವಿದೆ. ವಿದ್ಯಾರ್ಥಿಗೆ ಅರ್ಜಿದಾರರು ಕೇರ್ ಟೇಕಿಂಗ್ ಶಿಕ್ಷಕಿಯಾಗಿದ್ದಾರೆ’ ಎಂದು ಸಮಜಾಯಿಷಿ ನೀಡಿದರು.

ಇದಕ್ಕೆ ಅತೃಪ್ತಿ ವ್ಯಕ್ತಪಡಿಸಿದ ನ್ಯಾಯಮೂರ್ತಿಯು, ‘ವಿದ್ಯಾರ್ಥಿ ಜೊತೆಗೆ ಎಂತಹ ವಿಪರೀತ ಉತ್ಸಾಹವಿದು? ಇಂಥವರನ್ನು ಶಿಕ್ಷಕಿ ಹಾಗೂ ವಿದ್ಯಾರ್ಥಿ ಎನ್ನಬಹುದೇ’ ಎಂದು ಖಾರವಾಗಿ ಹೇಳಿದರು.

‘ವಿಚಾರಣಾ ನ್ಯಾಯಾಲಯದ ವಿಚಾರಣೆ ರದ್ದುಪಡಿಸಲಾಗದು. ಆರೋಪಗಳನ್ನು ಕೈ ಬಿಡಲು ವಿಚಾರಣಾ ನ್ಯಾಯಾಲಯದಲ್ಲೇ ಅರ್ಜಿ ಸಲ್ಲಿಸಿ’ ಎಂದು ಮೌಖಿಕವಾಗಿ ಸೂಚಿಸಿದ ನ್ಯಾಯಮೂರ್ತಿಗಳು ವಿಚಾರಣೆಯನ್ನು ಆಗಸ್ಟ್ 2ಕ್ಕೆ ಮುಂದೂಡಿದರು. ಮುಖ್ಯ ಶಿಕ್ಷಕಿ ವಿರುದ್ಧ ಪೋಕ್ಸೊ ಕಾಯ್ದೆಯ ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ.

ಲಂಕೇಶ್ ಅಧ್ಯಯನ ಶಿಬಿರ: ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿಯು ‘ಪಿ. ಲಂಕೇಶ್ ಕೃತಿಗಳ ಅಧ್ಯಯನ’ ಕುರಿತ ರಾಜ್ಯಮಟ್ಟದ ಶಿಬಿರಕ್ಕೆ ಅರ್ಜಿ ಆಹ್ವಾನಿಸಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕನ್ನಡ ಜಾಣ-ಜಾಣೆಯರ ವೇದಿಕೆ ಸಹಯೋಗದಲ್ಲಿ ಸೆಪ್ಟೆಂಬರ್ ಕೊನೆ ವಾರದಲ್ಲಿ ಹಾಸನದಲ್ಲಿ 3 ದಿನಗಳ ‘ಪಿ. ಲಂಕೇಶ್ ಕೃತಿಗಳ ಅಧ್ಯಯನ ಶಿಬಿರ’ ಆಯೋಜಿಸಲಾಗುತ್ತಿದೆ. 20 ವರ್ಷದಿಂದ 40 ವರ್ಷದೊಳಗಿನ ಆಸಕ್ತರು ಶಿಬಿರದಲ್ಲಿ ಪಾಲ್ಗೊಳ್ಳಲು ಆಗಸ್ಟ್ 17ರೊಳಗೆ ಅರ್ಜಿ ಸಲ್ಲಿಸಬೇಕು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ‘https://karnatakasahithyaacademyorg’ ವೆಬ್‌ಸೈಟ್‌ನಲ್ಲಿ ಅರ್ಜಿ ಪಡೆದು ಕೊಳ್ಳಬಹುದು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003.
ಸಂಖ್ಯೆ: **A8/KTBS/ADM/OTH/20/2023 E-16676** ದಿನಾಂಕ: 29.07.2024
(ಟೆಂಡರ್ ಸಂಖ್ಯೆ: **KTBS/2024-25/SE0004**)
ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು ಕಛೇರಿ ಕೆಲಸಗಳಿಗೆ ಹೊರಗುತ್ತಿಗೆ ಆಧಾರದಲ್ಲಿ ಎರಡು ವಾಹನಗಳ ಸೇವೆಯನ್ನು (ಎ.ಸಿ. ಮತ್ತು ನಾನ್ ಎ.ಸಿ) ಎರಡು ವರ್ಷಗಳ ಅವಧಿಗೆ ಪಡೆಯಲು ಇ–ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದೆ. ವಿವರಗಳನ್ನು ಇ–ಪೋರ್ಟಲ್‌ನಲ್ಲಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ವಿವರವಾಗಿ ಒದಗಿಸಿದೆ. ಅರ್ಹ ಸಂಸ್ಥೆಗಳು **ದಿನಾಂಕ: 05.08.2024 ರಂದು ಸಂಜೆ 5.30 ವರೆಗೆ** ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುತ್ತದೆ. ವಿವರವಾದ ಟೆಂಡರ್ ದಸ್ತಾವೇಜನ್ನು **https://textbooks.karnataka.gov.in & www.kppp.karnataka.gov.in** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಇ–ಪೋರ್ಟಲ್ ಸಹಾಯವಾಣಿ::080-46010000 & 080-68948777
ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಮಹಿಳಾ ವೈದ್ಯರೇ ಅತ್ಯಾಚಾರ ಸಂತ್ರಸ್ತೆಯನ್ನು ಪರೀಕ್ಷಿಸಲಿ: ಹೈಕೋರ್ಟ್

ಒಂದನೇ ಪುಟದಿಂದ...

‘ಹೊಸ ಕಾಯ್ದೆಯಾದ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ (ಬಿಎನ್‌ಎಸ್‌ಎಸ್) ಕಲಂ 184ಕ್ಕೆ ಸೂಕ್ತ ತಿದ್ದುಪಡಿ ಮಾಡುವವರೆಗೆ ಅತ್ಯಾಚಾರ ಸಂತ್ರಸ್ತೆಯರ ವೈದ್ಯಕೀಯ ಪರೀಕ್ಷೆ ಯನ್ನು ನೋಂದಾಯಿತ ಮಹಿಳಾ ವೈದ್ಯಾಧಿ ಕಾರಿಯೇ ಮಾಡುತ್ತಾರೆ ಎಂಬುದನ್ನು ಖಾತರಿಪಡಿಬೇಕು’ ಎಂದು ನ್ಯಾಯಪೀಠ ಕೇಂದ್ರ, ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಿದೆ.

‘ಬಿಎನ್‌ಎಸ್‌ಎಸ್ ಕಲಂ 184, ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ವಯಸ್ಕ ಮಹಿಳೆಯರ ವೈದ್ಯಕೀಯ ಪರೀಕ್ಷೆಗೆ ಸಂಬಂಧಿಸಿದೆ. ಇದು ಈಗ ಹಿಂಪಡೆಯಲಾಗಿರುವ ಅಪರಾಧ ಪ್ರಕ್ರಿಯಾ ಸಂಹಿತೆ-1973ರ 164-ಎ ಕಲಂನ ಯಥಾವತ್ ನಕಲಾಗಿದೆ. ಇದು ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಸಂತ್ರಸ್ತೆಯರಿಗೆ ಭಾರಿ ಅನ್ಯಾಯ ಉಂಟು ಮಾಡಲಿದೆ ಅಥವಾ ಅವರ ಮುಜುಗರಕ್ಕೆ ಕಾರಣವಾಗಲಿದೆ’ ಎಂದು ಕಳವಳ ವ್ಯಕ್ತಪಡಿಸಿದೆ.

‘ಬಿಎನ್‌ಎಸ್‌ಎಸ್ ಮತ್ತು ಸಿಆರ್‌ಪಿಸಿ ಎರಡರ ಕಲಂಗಳೂ ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ) ಕಾಯ್ದೆಯ ನಿಬಂಧನೆಗಳಿಗೆ ವಿರುದ್ಧವಾಗಿವೆ. ಪೋಕ್ಸೊ ಕಾಯ್ದೆಯಲ್ಲಿ ಸಂತ್ರಸ್ತ ಬಾಲಕಿಯರ ವೈದ್ಯಕೀಯ ಪರೀಕ್ಷೆಯನ್ನು ಮಹಿಳಾ ವೈದ್ಯಾಧಿಕಾರಿ ಮಾತ್ರವೇ ಮಾಡಬೇಕು ಎಂದು ಹೇಳಲಾಗಿದೆ. ಅಂತೆಯೇ, ಸಂತ್ರಸ್ತೆಯರ ಕುರಿತಂತೆ ಪ್ರಕರಣದ ಪರಿಶೀಲನೆ ನಡೆಸುವ ಮತ್ತು ಅವರನ್ನು ವಿಚಾರಣೆಗೆ ಒಳಪಡಿಸುವ ಪೊಲೀಸ್ ಅಧಿಕಾರಿಗಳು, ಪ್ರಾಸಿಕ್ಯೂಟರ್‌ಗಳು, ವೈದ್ಯರು ಹಾಗೂ ಇತರೆ ವೈದ್ಯಕೀಯ ಸಿಬ್ಬಂದಿಗೆ ಈ ಕುರಿತ ಸೂಕ್ಷ್ಮದ ಬಗ್ಗೆ ಅರಿವು ಮೂಡಿಸಬೇಕು’ ಎಂದು ನ್ಯಾಯಪೀಠ ತಿಳಿಸಿದೆ.

‘ಈ ಪ್ರಕರಣದಲ್ಲಿ ದೋಷಾರೋಪ ಪಟ್ಟಿಯನ್ನು ಗಮನಿಸಿದರೆ, ಸಂತ್ರಸ್ತೆಯ ಮೇಲೆ ಅತ್ಯಾಚಾರ ನಡೆದಿದೆಯೇ ಅಥವಾ ಇಲ್ಲವೇ ಎಂಬುದನ್ನು 6 ಗಂಟೆ ವೈದ್ಯಕೀಯ ಪರೀಕ್ಷೆ ನಡೆಸಿ ಶ್ರುತಪಡಿಸಲಾಗಿದೆ. ಆದಾಗ್ಯೂ, ವೈದ್ಯಾಧಿ ಕಾರಿಗಳು ಪ್ರಾಥಮಿಕ ವೈದ್ಯಕೀಯ ಪರಿಶೀಲನಾ ವರದಿ ನೀಡುವಲ್ಲಿ ವಿಫಲ ವಾಗಿದ್ದಾರೆ. ಇವುಗಳಲ್ಲಿ ಒಂದು ಖಾಸಗಿ ಮತ್ತು ಎರಡು ಸರ್ಕಾರದ ಪ್ರತಿಷ್ಠಿತ ಆಸ್ಪತ್ರೆಗಳು ಸೇರಿವೆ. ಈ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು ನೀಡಿರುವ ವರದಿ ಅಸ್ಪಷ್ಟವಾಗಿದೆ. ಅದರಲ್ಲೂ ವಿಕ್ಟೋರಿಯಾ ಮತ್ತು ವಾಣಿ ವಿಲಾಸ ಆಸ್ಪತ್ರೆ ದಯನೀಯ ಸ್ಥಿತಿಯಲ್ಲಿ ಇವೆ ಎಂಬುದನ್ನು ಈ ವರದಿಗಳು ಹೇಳುತ್ತಿವೆ.

ಬೆಂಗಳೂರಿನಂತಹ ಮಹಾನಗರದಲ್ಲಿ ಇವುಗಳ ಅವಸ್ಥೆ ಗಮನಿಸಿದರೆ ಅತ್ಯಾಚಾರಕ್ಕೆ ಒಳಗಾದ ತಲ್ಲಣದ ಮನಃಸ್ಥಿತಿಯಲ್ಲಿನ ಸಂತ್ರಸ್ತೆಯರು ಈ ಪರಿಯ ವೈದ್ಯಕೀಯ ಪರೀಕ್ಷೆಯಿಂದ ಇನ್ನಷ್ಟು ದಿಗಿಲಿಗೆ ಒಳಗಾಗುವುದರಲ್ಲಿ ಸಂದೇಹವೇ ಇಲ್ಲ’ ಎಂದು ನ್ಯಾಯಪೀಠ ಆಘಾತ ವ್ಯಕ್ತಪಡಿಸಿದೆ. ಸರ್ಕಾರದ ಪರ ರಾಜ್ಯ ಪ್ರಾಸಿಕ್ಯೂಟರ್–1 ಬಿ.ಎ. ಬೆಳ್ಳಿಯಪ್ಪ ಹಾಗೂ ಅರ್ಜಿದಾರರ ಪರ ವಕೀಲ ಎನ್.ಎನ್. ಅಭಿಷೇಕ್ ವಾದ ಮಂಡಿಸಿದರು.

ಗಾಂಧಿ ಪ್ರತಿಮೆ ಎದುರು ಕೋಟ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ವಿರುದ್ಧ ಮಾಡಿರುವ ಆರೋಪವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಿಂಪಡೆಯಬೇಕು ಎಂದು ಆಗ್ರಹಿಸಿ ಬಿಜೆಪಿ ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರು ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಸೋಮವಾರ ಸಾಂಕೇತಿಕವಾಗಿ ಧರಣಿ ನಡೆಸಿದರು.

ಕೋಟ ಅವರು ಸಚಿವರಾಗಿದ್ದಾಗ ಭೋವಿ ಅಭಿವೃದ್ಧಿ ನಿಗಮ ಮತ್ತು ಗಂಗಾ ಕಲ್ಯಾಣ ಯೋಜನೆಯಲ್ಲಿ ಹಗರಣ ನಡೆದಿತ್ತು ಎಂದು ಸಿದ್ದರಾಮಯ್ಯ ಅವರು ಇತ್ತೀಚೆಗೆ ಆರೋಪಿಸಿದ್ದರು.

‘ನನ್ನ ಮೇಲೆ ಮಾಡಿರುವ ಸತ್ಯಕ್ಕೆ ದೂರವಾದ ಆರೋಪವನ್ನು ಹಿಂಪಡೆಯಬೇಕು. ಇಲ್ಲವಾದರೆ ಈ ಆರೋಪದ ತನಿಖೆಯನ್ನು ಸಿಬಿಐಗೆ ಶಿಫಾರಸು ಮಾಡಬೇಕು ಎಂದು ಮುಖ್ಯಮಂತ್ರಿಗೆ ಪತ್ರ ಬರೆದು ಮನವಿ ಮಾಡಿದ್ದೆ. ಆದರೆ, ಈ ಬಗ್ಗೆ ಮುಖ್ಯಮಂತ್ರಿಯ ಮೌನ ನನಗೆ ನೋವು ತಂದಿದೆ. ಆ ಕಾರಣಕ್ಕೆ ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಸಾಂಕೇತಿಕ ವಾಗಿ ಧರಣಿ ಮಾಡಿದ್ದೇನೆ’ ಎಂದರು.

ವಿಧಾನಸೌಧದ ಗಾಂಧಿ ಪ್ರತಿಮೆ ಎದುರು ಸಂಸದ ಕೋಟ ಶ್ರೀನಿವಾಸ ಪೂಜಾರಿ(ಎಡದಿಂದ ನಾಲ್ಕನೆಯವರು) ಅವರು ಸೋಮವಾರ ಧರಣಿ ನಡೆಸಿದರು – ಪ್ರಜಾವಾಣಿ ಚಿತ್ರ

ಲೋಕಸಭೆ: ಕೋಟ ಸಚೇತಕ

ನವದೆಹಲಿ: ಲೋಕಸಭೆಯಲ್ಲಿ ಬಿಜೆಪಿಯ ಸಚೇತಕರನ್ನಾಗಿ ಉಡುಪಿ–ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ನೇಮಕ ಮಾಡಲಾಗಿದೆ. ಡಾ.ಸಂಜಯ್ ಜೈಸ್ವಾಲ್ ಮುಖ್ಯ ಸಚೇತಕರಾಗಿರುತ್ತಾರೆ. ಕೋಟ ಸೇರಿದಂತೆ 16 ಸಂಸದರು ಸಚೇತಕರಾಗಿರುವರು.

ಶಾಸಕ ಎಸ್. ಸುರೇಶ್ ಕುಮಾರ್, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸದಸ್ಯರಾದ ಪ್ರತಾಪ್‌ಸಿಂಹ ನಾಯಕ್, ಎನ್. ರವಿಕುಮಾರ್, ಭಾರತಿ ಶೆಟ್ಟಿ, ಶಾಂತಾರಾಮ ಸಿದ್ದಿ ಕೂಡಾ ಪ್ರತಿಭಟನೆಯಲ್ಲಿ ಜತೆಗೂಡಿದ್ದರು.

ಕರ್ನಾಟಕ ಗೃಹ ಮಂಡಳಿ
Karnataka Housing Board — Building Communities
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು–560009
ಅಲ್ಪಾವಧಿ ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)
ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಹಾಗೂ ಪಡೆಯಲು ಇಚ್ಚಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ
ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ : 06.08.2024 ಸಂಜೆ 4.00 ಗಂಟೆಗೆ

ಕ್ರಮ ಸಂ.	ಕಾಮಗಾರಿಯ ಹೆಸರು	Work Indent & IFT No.	ಟೆಂಡರಿಗಿಟ್ಟ ಮೊತ್ತ ರೂ. ಗಳಲ್ಲಿ
1	ರಾಯಚೂರು ಜಿಲ್ಲೆಯಲ್ಲಿ ನಿರ್ಮಿಸುತ್ತಿರುವ ಜಿಲ್ಲಾ ಆಡಳಿತ ಕಛೇರಿ ಸಂಕೀರ್ಣ ಕಟ್ಟಡದ ಒಳಾಂಗಣ, ಪೀಠೋಪಕರಣ ಮತ್ತು ಅಭಿವೃದ್ಧಿ ಕಾಮಗಾರಿ	Tender Reference Number: KHB/2024-25/BD/Work_Indent 256 & IFT No.28/2024-25 Date: 29.07.2024.	3,04,41,304.00

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರೆ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. **ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು, ದೂರವಾಣಿ:** 080-22273511 / 080-22100077, Website: https://kppp.karnataka.gov.in
ಸಹಿ/– ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/1134/ಆಕಾರ್/2024–25

ನಗರಸಭೆ ಕಾರ್ಯಾಲಯ, ಸಿಂಧನೂರು
ಸಂಖ್ಯೆ:ನಕಾಸಿಂ:ತಾಂತ್ರಿಕ:ಇ–ಟೆಂಡರ್:04:2024–25 ದಿನಾಂಕ: 26–07–2024
–:: ಟೆಂಡರ್ ಪ್ರಕಟಣೆ ::–
(ಕೆಪಿಪಿಪಿ ಪೋರ್ಟಲ್ ಮುಖಾಂತರ)
ಸಿಂಧನೂರು ನಗರಸಭೆಯ ಸನ್ 2024–25ನೇ ಸಾಲಿನ 15ನೇ ಹಣಕಾಸು ಅನುದಾನ, ಎಸ್.ಎಫ್.ಸಿ. ಕ್ಯಾಪಿಟಲ್ ಅಸೆಟ್ಸ್ ಅನುದಾನ, ಎಸ್.ಎಫ್.ಸಿ ಮತ್ತು ನಗರಸಭೆ ನಿಧಿ ಎಸ್.ಸಿ.ಎಸ್.ಪಿ–ಟಿಎಸ್.ಎಸ್, ಮತ್ತು ಶೇ. 7.25% ಹಾಗೂ 5% ಯೋಜನೆಯ ಹಾಗೂ 2021–22ನೇ ಸಾಲಿನ 15ನೇ ಹಣಕಾಸು (ಎನ್.ಎಂ.ಪಿ.ಸಿ) ಮತ್ತು 2023–24ನೇ ಸಾಲಿನ ಎಸ್.ಎಫ್.ಸಿ. ಅನುದಾನದಲ್ಲಿ ಕೈಗೊಳ್ಳುವ ಸಿವಿಲ್ ಮತ್ತು ಎಲೇಕ್ಟ್ರೀಕಲ್ ಕಾಮಗಾರಿಗಳಿಗೆ ಪರಿಶಿಷ್ಟ ಜಾತಿಯವರಿಗೆ (ಎಸ್.ಸಿ) (ಇಂಡೆಂಟ ನಂ: 23021, 23042, 23151) ಪರಿಶಿಷ್ಟ ಪಂಗಡದವರಿಗೆ (ಎಸ್.ಟಿ) (ಇಂಡೆಂಟ ನಂ: 23037, 23047, 19093 ಕಾಲ್–2) ಮತ್ತು ಇತರೆ ಸಾಮಾನ್ಯ ವರ್ಗದವರಿಗೆ (ಇಂಡೆಂಟ ನಂ: 23006, 23009, 23014, 23017, 23027, 23029, 23057, 23098, 23210, 23132, 23179, 19078 ಕಾಲ್–2) ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿದ ಅರ್ಹ ಸಿವಿಲ್ ಗುತ್ತಿಗೆದಾರರಿಂದ ಕೆ.ಡಬ್ಲ್ಯೂ–1 & 2 ರ ಷರತ್ತಿಗೊಳಪಟ್ಟು ಐಟಂವಾರು ಬಿಡ್ ದರಗಳನ್ನು ಅಹ್ವಾನಿಸಲಾಗಿದ್ದು ಇಚ್ಛೆಯುಳ್ಳ ಸಿವಿಲ್ ಮತ್ತು ವಿದ್ಯುತ್ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಿ ತಮ್ಮ ದರಗಳನ್ನು http://kppp.karnataka.gov.in ವೆಬ್‌ಸೈಟ್‌ನಿಂದ ಡೌನಲೋಡ ಮಾಡಿಕೊಂಡು ದಿನಾಂಕ: 12–08–2024 @ 4.30 ಗಂಟೆಯೊಳಗಾಗಿ ಸಲ್ಲಿಸಬಹುದಾಗಿದೆ. ಸದರಿ ಭರ್ತಿ ಮಾಡಿ ಸಲ್ಲಿಸಲಾದ ಟೆಂಡರ್‌ಗಳ ತಾಂತ್ರಿಕ ಬಿಡ್‌ನ್ನು ದಿನಾಂಕ: 13–08–2024 @ 4.45 ರ ನಂತರ ತೆರೆಯಲಾಗುವುದು. ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ: 16–08–2024 ರಂದು ತೆರೆಯಲಾಗುವುದು ಹೆಚ್ಚಿನ ವಿವರಗಳಿಗೆ ನಗರಸಭೆಯ ವೆಬ್‌ಸೈಟ್ www.sindhanurcity.mrc.gov.in ಮುಖಾಂತರ ಪಡೆದು ಸಲ್ಲಿಸಬಹುದು.
ಸಹಿ/–ಪೌರಾಯುಕ್ತರು
ನಗರಸಭೆ ಸಿಂಧನೂರು
DIP/RCR/154/KSMCA/153/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–242293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2024–25/705 ದಿ:26.07.2024
ಅಲ್ಪಾವಧಿ ಟೆಂಡರ್ ಪ್ರಕಟಣೆ
(“KPPP” ಪೋರ್ಟಲ್ ಕೆ.ಡಬ್ಲೂ–3 & 4 ಮುಖಾಂತರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ನಬಾರ್ಡ್–29 ರಡಿ ಬಳ್ಳಾರಿ ಜಿಲ್ಲೆಯ 2 ಕಾಮಗಾರಿಗಳು ಹಾಗೂ 4702 ಪ್ಲಾನ್–ಆಣೆಕಟ್ಟು, ಪಿಕಪ್ ಯೋಜನೆಯಡಿ ವಿಜಯನಗರ ಜಿಲ್ಲೆಯ 1 ಕಾಮಗಾರಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ **ರೂ. 99.98** ಲಕ್ಷ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ **ರೂ. 108.94** ಲಕ್ಷಗಳಿರುತ್ತದೆ. ಟೆಂಡರ್‌ನ್ನು **ದಿನಾಂಕ: 29.07.2024 ರಿಂದ ದಿನಾಂಕ: 05.08.2024** ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು **ದಿನಾಂಕ: 07.08.2024** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು **ದಿನಾಂಕ: 09.08.2024** ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು “KPPP” ವೆಬ್‌ಸೈಟ್ **http:// kppp.karnataka.gov.in** ನಲ್ಲಿ ಪಡೆಯಬಹುದು.
ಸಹಿ/ ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/293/ಕೆಎಸ್‌ಎಂಸಿಎ/2024–25

ನಗರಸಭೆ ಕಾರ್ಯಾಲಯ ಗೋಕಾಕ
NO:CMC/PWD/SFC-15thF-SBM/2024-25/348 Date: 29-07-2024
ಟೆಂಡರ ಪ್ರಕಟಣೆ (e-Procurement)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಅದ್ಯಾದೇಶ 1999–2000 ರ ಪ್ರಕಾರ ಆಕ್ಟ 2000 ದ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1, 2 & 4 ರ ನಿಯಮದನ್ವಯ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವಿಲ್/ವಿದ್ಯುತ್ ಗುತ್ತಿಗೆದಾರರಿಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ 2024–25 ನೇ ಸಾಲಿನ ಎಸ್.ಎಫ್.ಸಿ. ಮುಕ್ತ, 15 ನೇ ಹಣಕಾಸು ಹಾಗೂ ಎಸ್.ಬಿ.ಎಂ. ನಿಧಿಯಡಿಯ ಕಾಮಗಾರಿಗಳಿಗಾಗಿ ಟೆಂಡರಗಳನ್ನು ಅಹ್ವಾನಿಸಲಾಗಿದೆ. ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 13/08/2024 ರಂದು ಸಂಜೆ 5–00 ಗಂಟೆ ಹೆಚ್ಚಿನ ಮಾಹಿತಿಗಾಗಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.gokakcity.mrc.gov.in & https://kppp.karnataka.gov.in ರಲ್ಲಿ ಪಡೆಯಬಹುದು.
ಸಹಿ/–(ಆರ್.ಪಿ.ಜಾಧವ)
ಪೌರಾಯುಕ್ತರು,
ನಗರಸಭೆ,ಗೋಕಾಕ.
DIPR/BGM/RO-NO-483/MCA/2024-25

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆಹೆಚ್‌ಬಿ ಕಾಲೋನಿ, ಮಾಗಡಿ ರಸ್ತೆ,
ಬೆಂಗಳೂರು–560 079, ದೂರವಾಣಿ ಸಂಖ್ಯೆ: +91-80-29619801
ಮಿಂಚ್ ಅಂಚೆ : md.ksmscl@gmail.com
No.KSMSCL/DRUGS/RETND/SBC/HEMOPHILIA/19/2024-25 Dated: 29-07-2024
ಟೆಂಡರ್ ಪ್ರಕಟಣೆ
ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: **KSMSCL/DRUGS/RETND/SBC/HEMOPHILIA/19/2024-25, Dated: 29.07.2024 (IND-0146).**
2. ಟೆಂಡರ್ ಅಧಿಸೂಚನೆ ಸಂಖ್ಯೆ: **KSMSCL/DRUGS/RETND/MH/FOLIC ACID/20/2024-25, Dated: 29.07.2024 (IND-0147).**
ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರ ವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.
1. 2023–24 ನೇ ಸಾಲಿಗೆ **SBC** ಕಾರ್ಯಕ್ರಮದಡಿಯಲ್ಲಿ ANTI HEMOPHILIA FACTORS ಔಷಧಗಳನ್ನು ಖರೀದಿಸಿ ಪೂರೈಸುವ ಕುರಿತು. **(IND-0146).**
2. 2023–24ನೇ ಸಾಲಿಗೆ ಮಹ ಕಾರ್ಯಕ್ರಮದಡಿಯಲ್ಲಿ FOLIC ACID ಮಾತ್ರೆಗಳನ್ನು ಖರೀದಿಸಿ ಪೂರೈಸುವ ಕುರಿತು **(IND-0147).**
ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್ ಸೈಟ್ ಮುಖಾಂತರ: **https://kppp.karnataka.gov.in** ನಲ್ಲಿ **ದಿನಾಂಕ: 29.07.2024** ರಿಂದ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.
ಸಹಿ/– ವ್ಯವಸ್ಥಾಪಕ ನಿರ್ದೇಶಕರು
ಕೆ.ಎಸ್.ಎಮ್.ಎಸ್.ಸಿ.ಎಲ್., ಬೆಂಗಳೂರು.
DIPR/CP/RO1139/AAPL/2024-25

ಕಾರ್ಯಪಾಲಕ ಇಂಜಿನಿಯರ್, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ (ನಿ), ತುರುವೇಕೆರೆ. ತುಮಕೂರು ಜಿಲ್ಲೆ, ಪಿನ್–572227
ಸಂ:04/2024–25 ದಿನಾಂಕ: 24.07.2024
ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ರವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.04 ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿನಿ, ತುರುವೇಕೆರೆ ವ್ಯಾಪ್ತಿಯ ಈ ಕೆಳಗೆ ನಮೂದಿಸಿರುವ ಇಂಡೆಂಟ್ ನಂಬರ್‌ನ ಕಾಮಗಾರಿಗಳಿಗೆ KW–2 “ ಐಟಂವಾರು ಎರಡು ಲಕೋಟೆ “ಪದ್ಧತಿಯಲ್ಲಿ & ನಿಬಂಧನೆಗಳೊಂದಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ.
General Works:-
1. Indent No : 1922 ಕಾಮಗಾರಿ ಟೆಂಡರ್‌ಗಿಟ್ಟ ಮೊತ್ತ ರೂ.49.81 ಲಕ್ಷ, ಇ.ಎಂ.ಡಿ. ಮೊತ್ತ ರೂ.99,700/– KPWD Class III ಮತ್ತು ಮೇಲ್ಪಟ್ಟ ಗುತ್ತಿಗೆದಾರರು (ಎರಡು ಲಕೋಟೆ ಪದ್ಧತಿ)
* ಇ–ಪೋರ್ಟಲ್‌ನಲ್ಲಿ ಆಕ್ಷೇಪಣೆಗಳಿಗೆ ಕೊನೆಯ ದಿನಾಂಕ: 31–07–2024 ಸಂಜೆ 17.00ಗಂಟೆವರೆಗೆ. * ಇ–ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ:–26–07–2024 ರಿಂದ 05–08–2024 ಸಂಜೆ 17.00ಗಂಟೆ ರವರೆಗೆ * ತಾಂತ್ರಿಕ / ಟೆಂಡರ್ ತೆರೆಯುವ ದಿನಾಂಕ:– 06–08–2024 ಸಂಜೆ 17:30 ಗಂಟೆ ವರೆಗೆ * ಆರ್ಥಿಕ ಬಿಡ್ ತೆರೆಯುವ ದಿನಾಂಕ:– 07–08–2024 ಅಥವಾ (ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ) ಕಾಮಗಾರಿ ವಿವರ, ಷರತ್ತುಗಳು, ಕಾಲಾವಧಿ ಹಾಗೂ ಇನ್ನಿತರ ವಿವರಗಳನ್ನು ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಮ್ https://kppp.karnataka.gov.in/ ಮೂಲಕ ಪಡೆಯಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ನಂ.4, ಹೇಮಾವತಿ ಎಡದಂಡೆ ನಾಲಾ ವಿಭಾಗ, ಕಾನೀನಿ(ನಿ), ತುರುವೇಕೆರೆ.
DIPR/TUM/186/KSMCA/2024-25

ದೇಶದಲ್ಲಿ ಭಯದ ವಾತಾವರಣ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಾಗ್ದಾಳಿ

‘ಬಿಜೆಪಿಯ ಚಕ್ರವ್ಯೂಹ ಭೇದಿಸುತ್ತೇವೆ’

ನವದೆಹಲಿ (ಪಿಟಿಐ): ಕುರುಕ್ಷೇತ್ರದಲ್ಲಿ ಅಭಿಮನ್ಯುವನ್ನು ಮಣಿಸಲು ಕೌರವರು ‘ಚಕ್ರವ್ಯೂಹ’ ನಿರ್ಮಿಸಿದ ಹಾಗೆ ಬಿಜೆಪಿಯು ದೇಶದಲ್ಲಿ ರೈತರು ಮತ್ತು ಯುವಕರ ಸುತ್ತ ‘ಚಕ್ರವ್ಯೂಹ’ ಹೆಣೆದು, ಭಯದ ವಾತಾವರಣ ನಿರ್ಮಿಸಿದೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಟೀಕಿಸಿದರು.

ಲೋಕಸಭೆಯಲ್ಲಿ ಸೋಮವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ರೈತರು, ಕಾರ್ಮಿಕರು ಮಾತ್ರವಲ್ಲದೆ ಬಿಜೆಪಿಯ ಸಂಸದರು ಕೂಡಾ ಈ ಚಕ್ರವ್ಯೂಹದಲ್ಲಿ ಸಿಲುಕಿದ್ದಾರೆ’ ಎಂದರು.

ಮಹಾಭಾರತದ ಸಂದರ್ಭವನ್ನು ಉಲ್ಲೇಖಿಸುತ್ತಾ ರಾಹುಲ್ ಅವರು, ‘ಸಾವಿರಾರು ವರ್ಷಗಳ ಹಿಂದೆ ಹರಿಯಾಣದ ಕುರುಕ್ಷೇತ್ರದಲ್ಲಿ ಕೌರವರು ‘ಚಕ್ರವ್ಯೂಹ’ ನಿರ್ಮಿಸಿ ಅಭಿಮನ್ಯುವನ್ನು ಕೊಂದರು. ‘ಚಕ್ರವ್ಯೂಹ’ವನ್ನು ‘ಪದ್ಮವ್ಯೂಹ’ ಎಂದೂ ಕರೆಯುತ್ತಾರೆ. ಅದು ಕಮಲದಂತೆ (ಬಿಜೆಪಿಯ ಚಿಹ್ನೆ) ಬಹು-ಹಂತದ ರಚನೆಯಾಗಿದೆ’ ಎಂದು ಹೇಳಿದರು.

‘21ನೇ ಶತಮಾನದಲ್ಲಿ ಮತ್ತೊಂದು ‘ಚಕ್ರವ್ಯೂಹ’ ಸಿದ್ಧಗೊಂಡಿದೆ. ಅದು ಕಮಲದ ರೂಪದಲ್ಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರು ಆ ಚಿಹ್ನೆಯನ್ನು ತಮ್ಮ ಎದೆಯ ಮೇಲೆ ಧರಿಸುತ್ತಾರೆ. ಅಂದು ಅಭಿಮನ್ಯುವಿಗೆ ಮಾಡಿದ್ದನ್ನು ಇಂದು ಯುವಕರು, ಮಹಿಳೆಯರು, ರೈತರ ಮೇಲೆ ಮಾಡಲಾಗುತ್ತಿದೆ’ ಎಂದು ದೂರಿದರು.

‘ನೀವು ನಿರ್ಮಿಸಿರುವ ‘ಚಕ್ರವ್ಯೂಹ’ವನ್ನು ನಾವು ಭೇದಿಸುತ್ತೇವೆ’ ಎಂದ ರಾಹುಲ್, ಜಾತಿ ಗಣತಿಯನ್ನು ನಡೆಸುವ ಮೂಲಕ ಇದನ್ನು ಮುರಿಯುತ್ತೇವೆ’ ಎಂದು ಪ್ರತಿಪಾದಿಸಿದರು.

ಬಿಜೆಪಿಯ ‘ಚಕ್ರವ್ಯೂಹ’ವು ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಮೇಲೆ ದಾಳಿ ನಡೆಸಿ ಅವುಗಳನ್ನು ನಾಶ ಮಾಡಿದೆ. ‘ತೆರಿಗೆ ಭಯೋತ್ಪಾದನೆ’ಯನ್ನು ಕೊನೆಗಾಣಿಸಲು ಈ ಬಜೆಟ್‌ನಲ್ಲಿ ಕ್ರಮ ತೆಗೆದುಕೊಂಡಿಲ್ಲ ಎಂದರು.

ಸೋಮವಾರದ ಕಲಾಪದಲ್ಲಿ ‘ಬಜೆಟ್ ಹಲ್ವಾ ಹಂಚಿಕೆ’ಯ ಚಿತ್ರ ಪ್ರದರ್ಶಿಸಿದ ರಾಹುಲ್ ಗಾಂಧಿ, ಈ ಚಿತ್ರದಲ್ಲಿ ಒಬಿಸಿ, ಬುಡಕಟ್ಟು, ಪರಿಶಿಷ್ಟ ಸಮುದಾಯಕ್ಕೆ ಸೇರಿದ ಒಬ್ಬ ಅಧಿಕಾರಿಯೂ ಇಲ್ಲ ಎಂದು ಆಕ್ಷೇಪಿಸಿದರು —ಪಿಟಿಐ ಚಿತ್ರ

‘ಪತ್ರಕರ್ತರ ಮೇಲಿನ ನಿರ್ಬಂಧ ತೆರವುಗೊಳಿಸಿ’

ನವದೆಹಲಿ (ಪಿಟಿಐ): ಸಂಸತ್ತಿನ ಆವರಣದಲ್ಲಿ ಮಾಧ್ಯಮಗಳ ಮೇಲೆ ಹೇರಲಾಗಿರುವ ನಿರ್ಬಂಧಗಳನ್ನು ತೆರವುಗೊಳಿಸುವಂತೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸೋಮವಾರ ಮನವಿ ಮಾಡಿದರು.

ಸಂಸತ್ ಭವನದ ಪ್ರವೇಶ ಮತ್ತು ನಿರ್ಗಮನ ದ್ವಾರದ ಬಳಿ ಸಂಸತ್ ಸದಸ್ಯರನ್ನು ಮಾತನಾಡಿಸುವ ಅವಕಾಶ ಮಾಧ್ಯಮದವರಿಗೆ ಇತ್ತು. ಈಗ ಅದಕ್ಕೆ ನಿರ್ಬಂಧ ಹೇರಲಾಗಿದೆ.

ಈ ವೇಳೆ ಸಂಸತ್ ಕಲಾಪದ ನಿಯಮಗಳನ್ನು ರಾಹುಲ್ ಅವರಿಗೆ ನೆನಪಿಸಿದ ಬಿರ್ಲಾ, ‘ಇಂತಹ ವಿಷ ಯಗಳನ್ನು ನನ್ನೊಂದಿಗೆ ವೈಯಕ್ತಿಕವಾಗಿ ಚರ್ಚಿಸಬೇಕೇ ಹೊರತು ಸದನದಲ್ಲಿ ಪ್ರಸ್ತಾಪಿಸಬಾರದು’ ಎಂದರು.

ರಾಹುಲ್ ಒಳಗೊಂಡಂತೆ ವಿಪಕ್ಷಗಳ ಮುಖಂಡರು ಪತ್ರಕರ್ತರ ಬಳಿ ತೆರಳಿ, ‘ಈ ನಿರ್ಬಂಧವನ್ನು ಒಪ್ಪಲು ಸಾಧ್ಯವಿಲ್ಲ. ನಾವು ನಿಮ್ಮೊಂದಿಗಿದ್ದೇವೆ’ ಎಂದರು. ಬಳಿಕ ಸ್ಪೀಕರ್ ಅವರು ಪತ್ರಕರ್ತರನ್ನು ಭೇಟಿಯಾಗಿ, ‘ನಿಮ್ಮ ಎಲ್ಲಾ ಕುಂದುಕೊರತೆಗಳನ್ನು ಬಗೆಹರಿಸಲಾಗುವುದು’ ಎಂದರು.

ರಾಹುಲ್ ದಾರಿ ತಪ್ಪಿಸುತ್ತಿದ್ದಾರೆ: ರಾಜನಾಥ್ ಟೀಕೆ

‘ಅಗ್ನಿಪಥ’ ಯೋಜನೆ ಮತ್ತು ರಾಷ್ಟ್ರೀಯ ಭದ್ರತೆಯಂತಹ ಸೂಕ್ಷ್ಮ ವಿಚಾರದಲ್ಲಿ ರಾಹುಲ್ ಗಾಂಧಿ ಅವರು ದೇಶದ ದಾರಿ ತಪ್ಪಿಸುತ್ತಿದ್ದಾರೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಟೀಕಿಸಿದ್ದು, ಈ ವಿಚಾರದಲ್ಲಿ ಸಂಸತ್ತಿನಲ್ಲಿ ಹೇಳಿಕೆ ನೀಡಲು ಸಿದ್ಧ ಎಂದರು.

ಲೋಕಸಭೆಯಲ್ಲಿ ರಾಹುಲ್ ಗಾಂಧಿ ಅವರು ಬಜೆಟ್ ಬಗ್ಗೆ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಬಳಿಕ ಮಾತನಾಡಿದ ಅವರು, ‘ನಮ್ಮ ಯೋಧರು ದೇಶದ ಗಡಿ ರಕ್ಷಿಸುತ್ತಾರೆ. ಇದು ನಮ್ಮ ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಸೂಕ್ಷ್ಮ ವಿಷಯವಾಗಿದೆ. ಅಗ್ನಿವೀರರ ವಿಷಯದಲ್ಲಿ ದೇಶವನ್ನು ದಾರಿ ತಪ್ಪಿಸುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ದೂರಿದರು. ‘ವಿರೋಧ ಪಕ್ಷದ ನಾಯಕರು ಬಜೆಟ್ ಬಗ್ಗೆ ಸಾಕಷ್ಟು ತಪ್ಪು ಅಭಿಪ್ರಾಯಗಳನ್ನು ಹರಡಲು ಪ್ರಯತ್ನಿಸಿದ್ದಾರೆ. ಎಲ್ಲದಕ್ಕೂ ಹಣಕಾಸು ಸಚಿವರು ಸ್ಪಷ್ಟೀಕರಣ ನೀಡಲಿದ್ದಾರೆ’ ಎಂದರು.

ಸುದ್ದಿ 2 ನಿಮಿಷ

ಬಿಜೆಪಿ ಸಚಿವನ ಸ್ವಾಗತಿಸಿದ ‘ಕೈ’ ಮುಖಂಡರ ಅಮಾನತು

ಭೋಪಾಲ್ (ಪಿಟಿಐ): ಮಧ್ಯಪ್ರದೇಶ ಸಚಿವ ಹಾಗೂ ಹಿರಿಯ ಬಿಜೆಪಿ ನಾಯಕ ಕೈಲಾಸ್ ವಿಜಯ್‌ವರ್ಗೀಯ ಅವರು ಕಾಂಗ್ರೆಸ್ ಕಚೇರಿಗೆ ತೆರಳಿದ್ದ ವೇಳೆ ಅವರನ್ನು ಸ್ವಾಗತಿಸಿದ ಆರೋಪದ ಮೇಲೆ ಪಕ್ಷದ ಇಬ್ಬರು ಮುಖಂಡರನ್ನು ಕಾಂಗ್ರೆಸ್ ಅಮಾನತುಗೊಳಿಸಿದೆ.

‘ತಾಯಿಯ ಹೆಸರಿನಲ್ಲಿ ಒಂದು ಮರ’ ನೆಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಅಭಿಯಾನದಲ್ಲಿ ಭಾಗವಹಿಸುವಂತೆ ಕೋರಲು ಜುಲೈ 12ರಂದು ಸಚಿವ ವಿಜಯ್‌ವರ್ಗೀಯ ಅವರು ಇಂದೋರ್‌ನ ಸ್ಥಳೀಯ ಕಾಂಗ್ರೆಸ್ ಕಚೇರಿಗೆ ತೆರಳಿದ್ದರು. ಈ ವೇಳೆ ಇಬ್ಬರು ಮುಖಂಡರು ಸಚಿವರ ಜೊತೆ ಹರಟೆ ಹೊಡೆದು, ಒಟ್ಟಿಗೆ ಚಹಾ, ತಿಂಡಿ ಸೇವಿಸಿದ್ದರು. ಇದರ ಬೆನ್ನಲ್ಲೇ, ಇಬ್ಬರ ವಿರುದ್ಧ ಕಾಂಗ್ರೆಸ್ ಶಿಸ್ತುಕ್ರಮ ಕೈಗೊಂಡಿದೆ.

‘ತಾಯಿ ಅಹಲ್ಯಾ ನಗರದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳನ್ನು ಕೊಂದು, ದೇಶ– ವಿದೇಶದಲ್ಲಿ ನಾಚುವಂತೆ ಮಾಡಿ, ಇಂದೋರ್‌ನಲ್ಲಿ ಜನರ ಮತದಾನದ ಹಕ್ಕು ಕಸಿಯುವಂತೆ ಮಾಡಿದವರನ್ನೇ ಸ್ವಾಗತಿಸಿರುವುದು ಪಕ್ಷದ ತತ್ವ–ಸಿದ್ಧಾಂತಕ್ಕೆ ವಿರುದ್ಧವಾಗಿದೆ’ ಎಂದು ಪಕ್ಷದ ನಗರ ಘಟಕದ ಅಧ್ಯಕ್ಷ ಸುರ್ಜಿತ್ ಸಿಂಗ್ ಛಡ್ಡಾ, ಜಿಲ್ಲಾ ಘಟಕದ ಅಧ್ಯಕ್ಷ ಸದಾಶಿವ್ ಯಾದವ್‌ಗೆ ನೀಡಿದ ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಮೇಧಾ ಪಾಟ್ಕರ್‌ಗೆ ವಿಧಿಸಿದ್ದ ಶಿಕ್ಷೆ ಅಮಾನತು

ನವದೆಹಲಿ (ಪಿಟಿಐ): 23 ವರ್ಷ ಹಳೆಯದಾದ ಮಾನಹಾನಿ ಪ್ರಕರಣದಲ್ಲಿ ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರಿಗೆ ವಿಧಿಸಿದ್ದ ಐದು ತಿಂಗಳ ಸೆರೆವಾಸ ಶಿಕ್ಷೆಯನ್ನು ಇಲ್ಲಿನ ನ್ಯಾಯಾಲಯವು ಸೋಮವಾರ ಅಮಾನತುಗೊಳಿಸಿದೆ.

‘ಪಾಟ್ಕರ್ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ರಾಘವ್ ಶರ್ಮಾ ಅವರು ಶಿಕ್ಷೆಯನ್ನು ಅಮಾನತುಗೊಳಿಸಿದರು. ನಂತರ ಪಾಟ್ಕರ್ ಅವರಿಗೆ ಜಾಮೀನು ಮಂಜೂರು ಮಾಡಿದರು. ಇದೇ ಸಂದರ್ಭದಲ್ಲಿ ಪ್ರತಿವಾದಿಗಳಾದ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರಿಗೆ ನೋಟಿಸ್ ಕಳುಹಿಸಿದರು’ ಎಂದು ವಕೀಲ ಗಜೇಂದರ್ ಕುಮಾರ್ ತಿಳಿಸಿದರು. ‘ಸೆಪ್ಟೆಂಬರ್ 4ರಂದು ಮುಂದಿನ ವಿಚಾರಣೆ ನಡೆಯಲಿದ್ದು, ಅಷ್ಟರೊಳಗೆ ಪ್ರತಿಕ್ರಿಯೆ ನೀಡುವಂತೆ ನೋಟಿಸ್‌ನಲ್ಲಿ ತಿಳಿಸಲಾಗಿದೆ’ ಎಂದು ಕುಮಾರ್ ಹೇಳಿದರು.

ಪ್ರಕರಣ ಏನು?: ಪಾಟ್ಕರ್ ತಮ್ಮ ವಿರುದ್ಧ ಹೊರಡಿಸಿದ ಪತ್ರಿಕಾ ಹೇಳಿಕೆಯೊಂದು ಮಾನಹಾನಿಕರವಾಗಿದೆ ಎಂದು ದೂರಿ ವಿ.ಕೆ. ಸಕ್ಸೇನಾ ಅವರು 2001ರಲ್ಲಿ ಮಾನಹಾನಿ ಪ್ರಕರಣ ದಾಖಲಿಸಿದ್ದರು. ಆಗ ಸಕ್ಸೇನಾ ಅವರು ನ್ಯಾಷನಲ್ ಕೌನ್ಸಿಲ್ ಆಫ್ ಸಿವಿಲ್ ಲಿಬರ್ಟೀಸ್‌ನ ಅಧ್ಯಕ್ಷರಾಗಿದ್ದರು.

ಅನ್ಸಾರಿ ಶಿಕ್ಷೆ ರದ್ದುಪಡಿಸಿದ ಹೈಕೋರ್ಟ್

ಪ್ರಯಾಗರಾಜ್ (ಪಿಟಿಐ): 2005ರಲ್ಲಿ ನಡೆದ ಬಿಜೆಪಿ ಶಾಸಕ ಕೃಷ್ಣಾನಂದ ರಾಯ್ ಅವರ ಹತ್ಯೆ ಪ್ರಕರಣದಲ್ಲಿ ಸಮಾಜವಾದಿ ಪಕ್ಷದ ಸಂಸದ ಅಫ್ಜಲ್ ಅನ್ಸಾರಿ ಅವರನ್ನು ನಾಲ್ಕು ವರ್ಷಗಳ ಜೈಲುಶಿಕ್ಷೆಗೆ ಗುರಿಪಡಿಸಿದ ಗಾಜೀಪುರ ನ್ಯಾಯಾಲಯದ ಆದೇಶವನ್ನು ಅಲಹಾಬಾದ್ ಹೈಕೋರ್ಟ್ ಸೋಮವಾರ ಅಸಿಂಧುಗೊಳಿಸಿದೆ.

ತಮ್ಮನ್ನು ತಪ್ಪಿತಸ್ಥ ಎಂದು ಘೋಷಿಸಿದ ನ್ಯಾಯಾಲಯದ ಕ್ರಮವನ್ನು ಅನ್ಸಾರಿ ಅವರು ಪ್ರಶ್ನಿಸಿದ್ದರು.ಮೇಲ್ಮನವಿಯನ್ನುನ್ಯಾಯಮೂರ್ತಿ ಎಸ್.ಕೆ. ಸಿಂಗ್ ಅವರು ಮಾನ್ಯ ಮಾಡಿರುವ ಕಾರಣ, ಅನ್ಸಾರಿ ಅವರು ಸಂಸದರಾಗಿ ಮುಂದುವರಿಯಲು ಇದ್ದ ಅಡ್ಡಿಯು ನಿವಾರಣೆಯಾಗಿದೆ.

ಅನ್ಸಾರಿ ಅವರಿಗೆ ವಿಧಿಸಿರುವ ಶಿಕ್ಷೆಯನ್ನು ಹೆಚ್ಚು ಮಾಡಬೇಕು ಎಂಬ ಕೋರಿಕೆಯೊಂದಿಗೆ ಉತ್ತರ ಪ್ರದೇಶ ಸರ್ಕಾರ ಹಾಗೂ ಕೃಷ್ಣಾನಂದ ರಾಯ್ ಅವರ ಮಗ ಪೀಯೂಷ್ ಕುಮಾರ್ ರಾಯ್ ಸಲ್ಲಿಸಿದ್ದ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಗಾಜಿಪುರ ನ್ಯಾಯಾಲಯವು 2023ರ ಏಪ್ರಿಲ್‌ನಲ್ಲಿ ಅನ್ಸಾರಿ ಅವರಿಗೆ ನಾಲ್ಕು ವರ್ಷಗಳ ಜೈಲುಶಿಕ್ಷೆ ವಿಧಿಸಿತ್ತು. ಇದರ ಪರಿಣಾಮವಾಗಿ ಅನ್ಸಾರಿ ಅವರು ಸಂಸತ್ ಸದಸ್ಯ ಸ್ಥಾನ ಕಳೆದುಕೊಂಡಿದ್ದರು. ಅನ್ಸಾರಿ ಅವರಿಗೆ ಹೈಕೋರ್ಟ್ 2023ರಲ್ಲಿ ಜಾಮೀನು ನೀಡಿತ್ತು.

ಅಬಕಾರಿ ನೀತಿ: ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ವಿರುದ್ಧದ ಪ್ರಕರಣ

ಅಂತಿಮ ದೋಷಾರೋಪ ಪಟ್ಟಿ ಸಲ್ಲಿಕೆ

ಅರವಿಂದ ಕೇಜ್ರಿವಾಲ್

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ತನಿಖೆಯನ್ನು ಪೂರ್ಣಗೊಳಿಸಿರುವ ಸಿಬಿಐ ಅಧಿಕಾರಿಗಳು, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಎಎಪಿ ಶಾಸಕ ದುರ್ಗೇಶ್ ಪಾಠಕ್ ಸೇರಿದಂತೆ ಐವರ ವಿರುದ್ಧ ಅಂತಿಮ ದೋಷಾರೋಪ ಪಟ್ಟಿಯನ್ನು ಸೋಮವಾರ ಸಲ್ಲಿಸಿದ್ದಾರೆ.

ದೆಹಲಿಯ ಮಾಜಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ, ತೆಲಂಗಾಣದ ವಿಧಾನ ಪರಿಷತ್ ಸದಸ್ಯೆ ಕೆ. ಕವಿತಾ ಹಾಗೂ 15 ಮಂದಿ ಇತರರ ವಿರುದ್ಧ ಸಿಬಿಐ ಅಧಿಕಾರಿಗಳು ಈ ಹಿಂದೆ ಒಂದು ಮುಖ್ಯ ದೋಷಾರೋಪ ಪಟ್ಟಿ ಹಾಗೂ ನಾಲ್ಕು ಪೂರಕ ದೋಷಾರೋಪ ಪಟ್ಟಿಗಳನ್ನು ಸಲ್ಲಿಸಿದ್ದರು.

ಸೋಮವಾರ ಸಲ್ಲಿಕೆಯಾಗಿರುವುದು ಅಂತಿಮ ದೋಷಾರೋಪ ಪಟ್ಟಿ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಕೇಜ್ರಿವಾಲ್, ಪಾಠಕ್, ಅರಬಿಂದೊ ಫಾರ್ಮಾ ಕಂಪನಿಯ ಕಾರ್ಯನಿರ್ವಾಹಕೇತರ ನಿರ್ದೇಶಕ ಪಿ. ಶರತ್ ಚಂದ್ರ ರೆಡ್ಡಿ, ಬಡಿ ರಿಟೇಲ್ ಪ್ರೈ.ಲಿ. ಕಂಪನಿಯ ನಿರ್ದೇಶಕ ಅಮಿತ್ ಅರೋರಾ, ಹಣದ ಅಕ್ರಮ ವರ್ಗಾವಣೆಯಲ್ಲಿ ತೊಡಗಿರುವ ವ್ಯಕ್ತಿ ಎನ್ನಲಾದ ವಿನೋದ್ ಚೌಹಾಣ್, ಉದ್ಯಮಿ ಆಶಿಷ್ ಮಾಥುರ್ ಅವರನ್ನು ಆರೋಪಿಗಳು ಎಂದು ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಗಿದೆ.

ಆರೋಪ ಏನು?: ಮದ್ಯ ಉದ್ಯಮಿ ಮಗುಂಟ ಶ್ರೀನಿವಾಸಲು ರೆಡ್ಡಿ (ಈಗ ಟಿಡಿಪಿ ಸಂಸದ) ಅವರು ಕೇಜ್ರಿವಾಲ್ ಅವರನ್ನು 2021ರ ಮಾರ್ಚ್ 16ರಂದು ದೆಹಲಿ ಸಚಿವಾಲಯದಲ್ಲಿನ ಕಾರ್ಯಾಲಯದಲ್ಲಿ ಭೇಟಿ ಮಾಡಿದರು ಎಂದು ಸಿಬಿಐ ಆರೋಪಿಸಿದೆ.

ಆಗ ಸಿದ್ಧವಾಗುತ್ತಿದ್ದ ‘ಅಬಕಾರಿ ನೀತಿ 2021–22’ರಲ್ಲಿ ಅಗತ್ಯ ಬದಲಾವಣೆಗಳನ್ನು ತಂದು ತಮ್ಮ ಮದ್ಯದ ಉದ್ಯಮಕ್ಕೆ ನೆರವು ಒದಗಿಸುವಂತೆ ರೆಡ್ಡಿ ಅವರು ಕೇಜ್ರಿವಾಲ್ ಅವರನ್ನು ಕೋರಿದರು ಎಂದು ಕೆ. ಕವಿತಾ ಅವರ ವಿರುದ್ಧದ ದೋಷಾರೋಪ ಪಟ್ಟಿಯಲ್ಲಿ ಸಿಬಿಐ ಆರೋಪಿಸಿದೆ.

ನೆರವು ಒದಗಿಸುವ ಭರವಸೆ ನೀಡಿದ ಕೇಜ್ರಿವಾಲ್ ಅವರು, ನೀತಿಯ ವಿಚಾರವಾಗಿ ತಮ್ಮ ತಂಡದ ಜೊತೆ ಕೆಲಸ ಮಾಡುತ್ತಿರುವ ಕವಿತಾ ಅವರನ್ನು ಭೇಟಿ ಮಾಡುವಂತೆ ತಿಳಿಸಿದರು. ಅಲ್ಲದೆ, ಕೇಜ್ರಿವಾಲ್ ಅವರು ಸಹಾಯಕ್ಕೆ ಪ್ರತಿಯಾಗಿ ತಮ್ಮ ಎಎಪಿ ಪಕ್ಷಕ್ಕೆ ಹಣಕಾಸಿನ ನೆರವು ನೀಡುವಂತೆ ರೆಡ್ಡಿ ಅವರಿಗೆ ಹೇಳಿದರು ಎಂದು ಆರೋಪ ಹೊರಿಸಲಾಗಿದೆ.

ಎಎಪಿಗೆ ಸೇರಿದ ಕೆಲವು ರಾಜಕಾರಣಿಗಳಿಗೆ, ಕೆಲವು ಸರ್ಕಾರಿ ಅಧಿಕಾರಿಗಳಿಗೆ ದಕ್ಷಿಣ ಭಾರತದ ಮದ್ಯದ ಉದ್ಯಮದ ಕೆಲವರು ಸಹ ಆರೋಪಿಗಳಾದ ವಿಜಯ್ ನಾಯರ್, ಅಭಿಷೇಕ್ ಬೊಯಿನಪಲ್ಲಿ ಮತ್ತು ದಿನೇಶ್ ಅರೋರಾ ಅವರ ಮೂಲಕ ₹90 ಕೋಟಿಯಿಂದ ₹100 ಕೋಟಿವರೆಗೆ ಹಣವನ್ನು ಮುಂಗಡವಾಗಿ ಪಾವತಿಸಿದರು. ಅಬಕಾರಿ ನೀತಿಯಲ್ಲಿ ಬದಲಾವಣೆ ತರಲು ಈ ಹಣ ಪಾವತಿಸಲಾಯಿತು ಎಂದು ಸಿಬಿಐ ಹೇಳಿದೆ.

ಸಿಸೋಡಿಯಾ ಅರ್ಜಿ ಆಗಸ್ಟ್ 5ಕ್ಕೆ ವಿಚಾರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಗೆ ಸಂಬಂಧಿಸಿದ ಭ್ರಷ್ಟಾಚಾರ ಮತ್ತು ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ಕೋರಿ ಎಎಪಿ ನಾಯಕ ಮನೀಶ್ ಸಿಸೋಡಿಯಾ ಅವರು ಸಲ್ಲಿಸಿರುವ ಅರ್ಜಿಗಳನ್ನು ಆಗಸ್ಟ್ 5ರಂದು ವಿಚಾರಣೆ ನಡೆಸುವುದಾಗಿ ಸುಪ್ರೀಂಕೋರ್ಟ್ ಸೋಮವಾರ ತಿಳಿಸಿದೆ.

ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರನ್ನು ಒಳಗೊಂಡ ನ್ಯಾಯಪೀಠದ ಎದುರು ಅರ್ಜಿಗಳನ್ನು ವಿಚಾರಣೆ ನಡೆಸಲು ಪಟ್ಟಿ ಮಾಡಲಾಗಿದೆ.

ಸೊರೇನ್‌ಗೆ ಜಾಮೀನು ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಜಾಮೀನು ನೀಡಿದ ಜಾರ್ಖಂಡ್ ಹೈಕೋರ್ಟ್‌ನ ನಿರ್ಧಾರ ಪ್ರಶ್ನಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಸೋಮವಾರ ವಜಾಗೊಳಿಸಿದೆ.

ಹೈಕೋರ್ಟ್ ಜೂನ್ 28ರಂದು ನೀಡಿದ ಆದೇಶವು ‘ಸಕಾರಣಗಳಿಂದ ಕೂಡಿದೆ’ ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ವಿಭಾಗೀಯ ಪೀಠವು ಹೇಳಿದೆ. ‘ಈ ಆದೇಶದಲ್ಲಿ ನಾವು ಮಧ್ಯಪ್ರವೇಶ ಮಾಡಬೇಕಾಗಿಲ್ಲ’ ಎಂದು ಪೀಠವು ಸ್ಪಷ್ಟಪಡಿಸಿದೆ.

ತೀರ್ಪು ಕಾಯ್ದಿರಿಸಿದ ಹೈಕೋರ್ಟ್

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಅಬಕಾರಿ ನೀತಿ ಹಗರಣದ ಪ್ರಮುಖ ಸೂತ್ರದಾರಾಗಿದ್ದಾರೆ ಎಂದು ದೆಹಲಿ ಹೈಕೋರ್ಟ್‌ನಲ್ಲಿ ಸೋಮವಾರ ಪ್ರತಿಪಾದಿಸಿದ ಸಿಬಿಐ, ಕೇಜ್ರಿವಾಲ್ ಅವರ ಜಾಮೀನು ಅರ್ಜಿಗೆ ತೀವ್ರ ವಿರೋಧ ದಾಖಲಿಸಿತು.

ಕೇಜ್ರಿವಾಲ್ ಅವರ ಜಾಮೀನು ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ನೀನಾ ಬನ್ಸಾಲ್ ಕೃಷ್ಣ ಅವರು ತೀರ್ಪನ್ನು ಕಾಯ್ದಿರಿಸಿದರು.

ಸುಪ್ರೀಂ ಕೋರ್ಟ್‌ನಲ್ಲಿ ಲೋಕ ಅದಾಲತ್

ನವದೆಹಲಿ (ಪಿಟಿಐ): ಇದೇ ಮೊದಲ ಬಾರಿಗೆ ಸುಪ್ರೀಂ ಕೋರ್ಟ್‌ನ ಮೊದಲ ಏಳು ನ್ಯಾಯಪೀಠಗಳು ಸೋಮವಾರ ಮಧ್ಯಾಹ್ನ 2 ಗಂಟೆಯಿಂದ ಲೋಕ ಅದಾಲತ್ ಆರಂಭಿಸಿವೆ, ಈ ಪೀಠಗಳ ಎದುರು ನಡೆಯುವ ಕಲಾಪಗಳ ವರದಿಗಾರಿಕೆಗೆ ಮಾಧ್ಯಮಗಳ ಕ್ಯಾಮೆರಾ ಪ್ರತಿನಿಧಿಗಳಿಗೂ ಅವಕಾಶ ಕಲ್ಪಿಸಲಾಗಿದೆ.

ವಿಚಾರಣೆಗೆ ಬಾಕಿ ಇರುವ ಪ್ರಕರಣಗಳ ಸಂಖ್ಯೆಯನ್ನು ಕಡಿಮೆ ಮಾಡುವ ಉದ್ದೇಶದ ವಿಶೇಷ ಲೋಕ ಅದಾಲತ್ ಒಂದು ವಾರ (ಆಗಸ್ಟ್ 3ರವರೆಗೆ) ನಡೆಯಲಿದೆ. ಸುಪ್ರೀಂ ಕೋರ್ಟ್ ರಚನೆಯಾಗಿ 75 ವರ್ಷಗಳು ಸಂದಿರುವ ಸಂದರ್ಭದಲ್ಲಿ ಲೋಕ ಅದಾಲತ್ ನಡೆಸಲಾಗುತ್ತಿದೆ.

ದೆಹಲಿಯಲ್ಲಿ ಮಳೆನೀರು ಕಾಲುವೆ ಮೇಲೆ ನಿರ್ಮಿಸಲಾಗಿದ್ದ ಕೋಚಿಂಗ್ ಸೆಂಟರ್‌ಗಳನ್ನು ದೆಹಲಿ ಮಹಾನಗರ ಪಾಲಿಕೆ ಅಧಿಕಾರಿಗಳು ಬುಲ್ಡೋಜರ್ ಮೂಲಕ ನೆಲಸಮಗೊಳಿಸಿದರು —ಪಿಟಿಐ ಚಿತ್ರ

‘ಅಕ್ರಮ’ ಕೋಚಿಂಗ್ ಸೆಂಟರ್ ಪಾಲಿಕೆ ನಿರ್ಲಕ್ಷ್ಯದ ಚರ್ಚೆ

ನವದೆಹಲಿ (ಪಿಟಿಐ): ಐಎಎಸ್ ಆಗುವ ಕನಸು ಹೊತ್ತು ದೆಹಲಿಗೆ ತೆರಳುವ ವಿದ್ಯಾರ್ಥಿಗಳ ಸುರಕ್ಷತೆಯ ಕುರಿತು ಪೋಷಕರಲ್ಲಿ ಆತಂಕ ಸೃಷ್ಟಿಯಾಗಿದೆ. ದೆಹಲಿ ಮಹಾನಗರ ಪಾಲಿಕೆಯ (ಎಂಸಿಡಿ) ನಿರ್ಲಕ್ಷ್ಯ ಧೋರಣೆ ಕುರಿತೂ ಚರ್ಚೆ ನಡೆಯುತ್ತಿದೆ. ಮೂವರು ಐಎಎಸ್ ಆಕಾಂಕ್ಷಿಗಳ ಸಾವು, ದೆಹಲಿಯ ಕೋಚಿಂಗ್ ಸೆಂಟರ್‌ಗಳ ‘ಅಕ್ರಮ’ಗಳನ್ನು ತೆರೆದಿಟ್ಟಿದೆ.

ಎರಡು ದಿನಗಳ ಹಿಂದೆ ನಡೆದ ಘಟನೆಯ ಕುರಿತು ಎಂಸಿಡಿ, ದೆಹಲಿ ಸರ್ಕಾರ ಹಾಗೂ ದೆಹಲಿ ಪೊಲೀಸರು ಹಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಸಾವಿಗೆ ಕಾರಣಗಳನ್ನು ಅವಲೋಕಿಸಲಾಗುತ್ತಿದೆ.

ಮೂವರು ಆಕಾಂಕ್ಷಿಗಳ ಸಾವಿಗೆ ಎರಡು ಮುಖ್ಯ ಕಾರಣಗಳನ್ನು ಪೊಲೀಸರು ಹಾಗೂ ಎಂಸಿಡಿ ಗುರುತಿಸಿದೆ. ‘ಕಟ್ಟಡದ ಬಾಗಿಲು ಮುರಿಯುವಂತೆ ವ್ಯಕ್ತಿಯೊಬ್ಬರು ಕಾರು ಚಲಾಯಿಸಿದ್ದಾರೆ. ಇದರಿಂದಾಗಿ ನೆಲಮಾಳಿಗೆಗೆ ನೀರು ನುಗ್ಗುವಂತಾಯಿತು. ಕಾರು ಚಲಾಯಿಸಿದ ವ್ಯಕ್ತಿಯನ್ನು ಬಂಧಿಸಲಾಗಿದೆ’ ಎಂದು ಡಿಸಿಪಿ ಎಂ. ಹರ್ಷವರ್ಧನ್ ಹೇಳಿದ್ದಾರೆ. ‘ಬಂಧಿತರ ಮೇಲೆ ‘ಕೊಲೆಯಲ್ಲದ, ಅಜಾಗರೂಕತೆಯಿಂದ ಸಂಭವಿಸಿದ ಸಾವು’ ಎಂಬ ಸೆಕ್ಷನ್ ಅಡಿಯಲ್ಲಿ ಪ್ರಕರಣವನ್ನೂ ದಾಖಲಿಸಲಾಗಿದೆ’ ಎಂದರು.

‘ಕಟ್ಟಡ ಸುರಕ್ಷತೆಯ ಕುರಿತು ಸಂಸ್ಥೆಯ ಮಾಲೀಕ ಸಾಕಷ್ಟು ನಿರ್ಲಕ್ಷ್ಯ ತೋರಿದ್ದಾರೆ. ತರಬೇತಿ ನೀಡುತ್ತಿದ್ದ ಕೊಠಡಿಯ ಪ್ರವೇಶ ಹಾಗೂ ನಿರ್ಗಮನಕ್ಕೆ ಒಂದೇ ಬಾಗಿಲಿದೆ ಮತ್ತು ಇದಕ್ಕೆ ಬಯೊಮೆಟ್ರಿಕ್ ವ್ಯವಸ್ಥೆಯನ್ನು ಅಳವಡಿಸಲಾಗಿದೆ. ದಿಢೀರ್ ಎಂಬಂತೆ ನೀರು ನುಗ್ಗಿದ್ದರಿಂದ, ಈ ಯಂತ್ರವು ಕೆಟ್ಟು ನಿಂತಿತು. ಇದರಿಂದ ಮೂವರು ಅಲ್ಲಿಯೇ ಉಳಿಯುವಂತಾಯಿತು’ ಎಂದು ಎಂಸಿಡಿ ಅಧಿಕಾರಿಗಳು ಹೇಳಿದ್ದಾರೆ.

ಹಳೆಯ ರಾಜಿಂದರ್ ನಗರದಲ್ಲಿ ಅಕ್ರಮವಾಗಿ ಕಾರ್ಯನಿರ್ವಹಿಸುತ್ತಿದ್ದ ಸುಮಾರು 13 ಕೋಚಿಂಗ್ ಸೆಂಟರ್‌ಗಳನ್ನು ಎಂಸಿಡಿ ಅಧಿಕಾರಿಗಳು ಮುಚ್ಚಿಸಿದ್ದಾರೆ. ‘ಅಧಿಕಾರಿಗಳ ತಂಡವೊಂದು ಕೇಂದ್ರ ದೆಹಲಿಯಲ್ಲಿರುವ ಕೋಚಿಂಗ್ ಸೆಂಟರ್‌ಗಳಿಗೆ ಭೇಟಿ ನೀಡಲಿದೆ’ ಎಂದು ದೆಹಲಿ ಸರ್ಕಾರವು ಭಾನುವಾರ ಹೇಳಿತ್ತು. ಈ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ.

ಘೋಷಣೆ: ಸ್ಥಳದಿಂದ ತೆರಳಿದ ಎಲ್‌ಜಿ

ಐಎಎಸ್ ಆಕಾಂಕ್ಷಿಗಳು ತಮ್ಮ ಪ್ರತಿಭಟನೆಯನ್ನು ಸೋಮವಾರವೂ ಮುಂದುವರಿಸಿದ್ದಾರೆ. ಈ ಕಾರಣದಿಂದಾಗಿ ಹಳೆಯ ರಾಜಿಂದರ್ ನಗರದಾದ್ಯಂತ ಭದ್ರತೆಯನ್ನು ಹೆಚ್ಚಿಸಲಾಗಿದೆ.

ದೆಹಲಿಯ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಪ್ರತಿಭಟನೆ ನಿರತ ವಿದ್ಯಾರ್ಥಿಗಳನ್ನು ಸೋಮವಾರ ಭೇಟಿ ಮಾಡಿದರು. ಸಕ್ಸೇನಾ ಅವರು ಸ್ಥಳಕ್ಕೆ ಧಾವಿಸುತ್ತಿದ್ದಂತೆಯೇ, ‘ನಮಗೆ ನ್ಯಾಯ ಬೇಕು’ ಎಂದು ಆಕಾಂಕ್ಷಿಗಳು ಘೋಷಣೆಗಳನ್ನು ಕೂಗಿದರು. ‘ಪೊಲೀಸ್ ಬ್ಯಾರಿಕೇಡ್‌ಗಳ ಹಿಂದೆ ನಿಲ್ಲಬೇಡಿ. ನಮ್ಮ ಬಳಿ ಬಂದು, ಪ್ರತಿಭಟನೆಯಲ್ಲಿ ಪಾಲ್ಗೊಳ್ಳಿ’ ಎಂದೂ ಆಕಾಂಕ್ಷಿಗಳು ಒತ್ತಾಯಿಸಿದರು. ಘೋಷಣೆಗಳ ಧ್ವನಿ ಹೆಚ್ಚಾಗತೊಡಗಿದಂತೆ ಸಕ್ಸೇನಾ ಅವರು ಆಕಾಂಕ್ಷಿಗಳೊಂದಿಗೆ ಸರಿಯಾಗಿ ಮಾತನಾಡದೆಯೇ ಅಲ್ಲಿಂದ ತೆರಳಿದರು.

‘ಪ್ರಾಣಿಗಳಂತೆ ಬದುಕು’: ಸಿಜೆಐಗೆ ಪತ್ರ

‘ನಮ್ಮ ಆರೋಗ್ಯಕ್ಕೆ, ಸುರಕ್ಷತೆಗೆ ಖಾತರಿ ಇಲ್ಲದಂತಾಗಿದೆ. ದೆಹಲಿ ಸರ್ಕಾರ ಹಾಗೂ ಇಲ್ಲಿನ ಪಾಲಿಕೆಯು ವಿದ್ಯಾರ್ಥಿಗಳನ್ನು ಪ್ರಾಣಿಗಳ ರೀತಿಯಲ್ಲಿ ಬದುಕುವಂತೆ ಮಾಡಿವೆ. ಮೂವರು ವಿದ್ಯಾರ್ಥಿಗಳ ಸಾವಿಗೆ ಕಾರಣರಾದವರ ವಿರುದ್ಧ ಕ್ರಮಕೈಗೊಳ್ಳಿ ಹಾಗೂ ನಮ್ಮ ಮೂಲಭೂತ ಹಕ್ಕುಗಳನ್ನು ರಕ್ಷಿಸಿ’ ಎಂದು ಆಗ್ರಹಿಸಿ ಐಎಎಸ್ ಆಕಾಂಕ್ಷಿ, ಅವಿನಾಶ್ ದುಬೆ ಎಂಬವರು ಸುಪ್ರೀಂ ಕೋರ್ಟ್ ಸಿಜೆಐ ಡಿ.ವೈ.ಚಂದ್ರಚೂಡ್ ಅವರಿಗೆ ಪತ್ರ ಬರೆದಿದ್ದಾರೆ.

ಕೋಚಿಂಗ್ ಸೆಂಟರ್ ನಡೆಸುವ ಸಂಬಂಧ ಸ್ಪಷ್ಟ ಮಾರ್ಗಸೂಚಿಗಳಿವೆ: ಕೇಂದ್ರ ಶಿಕ್ಷಣ ಸಚಿವ

ಮೇಲ್ವಿಚಾರಣೆ ರಾಜ್ಯಗಳ ಕರ್ತವ್ಯ: ಪ್ರಧಾನ್

ಧರ್ಮೇಂದ್ರ ಪ್ರಧಾನ್

ನವದೆಹಲಿ (ಪಿಟಿಐ): ಕೋಚಿಂಗ್ ಸೆಂಟರ್‌ಗಳನ್ನು ನಡೆಸುವ ಸಂಬಂಧ ಸ್ಪಷ್ಟ ಮಾರ್ಗಸೂಚಿಗಳಿದ್ದು, ಅವುಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ಮಾಡುವುದು ರಾಜ್ಯ ಸರ್ಕಾರಗಳ ಕರ್ತವ್ಯ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೋಮವಾರ ಹೇಳಿದ್ದಾರೆ.

ನವದೆಹಲಿಯ ಕೋಚಿಂಗ್ ಸೆಂಟರ್‌ನ ತಳಮಹಡಿಗೆ ನೀರು ನುಗ್ಗಿ ಮೂವರು ವಿದ್ಯಾರ್ಥಿಗಳು ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ರಾಜ್ಯ ಸಭೆಯಲ್ಲಿ ನಡೆದ ಕಿರು ಅವಧಿಯ ಚರ್ಚೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಘಟನೆ ದುರದೃಷ್ಟಕರ ಎಂದ ಸಚಿವರು, ಈ ವಿಷಯದಲ್ಲಿ ರಾಜಕೀಯ ಸಲ್ಲ ಎಂದರು.

‘ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸಬೇಕು. ಈ ವಿಷಯದಲ್ಲಿ ರಾಜಕೀಯ ಕೆಸರೆರಚಾಟ ನಡೆಸುವುದು ಸರಿಯಲ್ಲ. ನಿರ್ಲಕ್ಷ್ಯದಿಂದ ಈ ದುರಂತ ಸಂಭವಿಸಿದ್ದು, ಯಾರಾದರೂ ಜವಾಬ್ದಾರಿ ವಹಿಸಿಕೊಂಡು ಪರಿಹಾರ ಕಂಡುಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಶಿಕ್ಷಣವು ಸಮವರ್ತಿ ಪಟ್ಟಿಯಲ್ಲಿದ್ದು, ಕೇಂದ್ರ ಮತ್ತು ರಾಜ್ಯಗಳು ಸಮಾನ ರೀತಿಯಲ್ಲಿ ಜವಾಬ್ದಾರಿ ವಹಿಸಿಕೊಳ್ಳಬೇಕು. ಕೋಚಿಂಗ್ ಸೆಂಟರ್‌ಗಳಿಗೂ ಜವಾಬ್ದಾರಿಗಳಿವೆ’ ಎಂಬುದನ್ನು ಒತ್ತಿ ಹೇಳಿದರು.

‘ಕೇಂದ್ರ ಸರ್ಕಾರವು 2017, 2019, 2020 ಮತ್ತು 2024 ರಲ್ಲಿ ಕೋಚಿಂಗ್ ಸೆಂಟರ್‌ಗಳಿಗೆ ಸಂಬಂಧಿಸಿದ ಸಲಹೆಗಳನ್ನು ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕಳುಹಿಸಿದೆ. ಕೋಚಿಂಗ್ ಸೆಂಟರ್‌ಗಳ ನೋಂದಣಿ ಮತ್ತು ಅದಕ್ಕೆ ಇರಬೇಕಾದ ಕನಿಷ್ಠ ಮಾನದಂಡಗಳು, ವಿದ್ಯಾರ್ಥಿಗಳ ಸುರಕ್ಷತೆಗೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು, ನಿರಂತರ ಮೇಲ್ವಿಚಾರಣೆ ಮತ್ತು ನಿಯಮ ಉಲ್ಲಂಘಿಸಿದರೆ ದಂಡ ವಿಧಿಸುವುದು ಸೇರಿದಂತೆ ಹಲವು ಸಲಹೆಗಳನ್ನು ಅದು ಒಳಗೊಂಡಿದೆ’ ಎಂದರು.

ಗೋವಾ, ಉತ್ತರ ಪ್ರದೇಶ, ಕರ್ನಾಟಕ ಮತ್ತು ಮಣಿಪುರ ಒಳಗೊಂಡಂತೆ ಕೆಲವು ರಾಜ್ಯಗಳು ಕೋಚಿಂಗ್ ಸೆಂಟರ್‌ಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ನಿಯಮಗಳನ್ನು ರೂಪಿಸಿವೆ.

‘ಕೇಂದ್ರ ಸರ್ಕಾರವು ಈ ವರ್ಷದ ಜನವರಿಯಲ್ಲಿ ರಾಜ್ಯಗಳಿಗೆ ಮಾರ್ಗಸೂಚಿ ಕಳುಹಿಸಿದೆ. ರಾಜ್ಯ ಸರ್ಕಾರಗಳು ಮಾರ್ಗಸೂಚಿಗಳನ್ನು ಪಾಲಿಸಿದ್ದರೆ, ಈ ದುರದೃಷ್ಟಕರ ಘಟನೆ ಸಂಭವಿಸುತ್ತಿರಲಿಲ್ಲ’ ಎಂದ ಪ್ರಧಾನ್, ‘ನಿಯಮಗಳನ್ನು ಜಾರಿಗೊಳಿಸುವುದು ರಾಜ್ಯಗಳ ಕರ್ತವ್ಯ’ ಎಂದು ಪ್ರತಿಪಾದಿಸಿದರು.

‘ಜಾಹೀರಾತು ಖರ್ಚು: ತನಿಖೆಯಾಗಲಿ’

ಕೋಚಿಂಗ್ ಸೆಂಟರ್ ಸಂಸ್ಕೃತಿಯನ್ನು ‘ಗ್ಯಾಸ್ ಚೇಂಬರ್’ ಎಂದು ಕರೆದಿರುವ ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್, ತರಬೇತಿ ಕೇಂದ್ರಗಳು ಜಾಹೀರಾತುಗಳಿಗೆ ಖರ್ಚು ಮಾಡುವ ಅಪಾರ ಹಣದ ಬಗ್ಗೆ ತನಿಖೆಯಾಗಲಿ ಎಂದು ಆಗ್ರಹಿಸಿದರು.

‘ಕೋಚಿಂಗ್ ಸೆಂಟರ್ ಎಂಬುದು ಹೆಚ್ಚಿನ ಆದಾಯ ತಂದುಕೊಡುತ್ತಿದ್ದು, ಪ್ರವರ್ಧಮಾನಕ್ಕೆ ಬರುತ್ತಿರುವ ಉದ್ಯಮವಾಗಿ ಮಾರ್ಪಟ್ಟಿದೆ. ನಾವು ದಿನಪತ್ರಿಕೆ ಓದುವಾಗ ಅವುಗಳ ಮುಖಪುಟ ಸೇರಿದಂತೆ ಒಂದೆರಡು ಪುಟಗಳಲ್ಲಿ ಕೋಚಿಂಗ್ ಸೆಂಟರ್‌ಗಳ ಜಾಹೀರಾತು ನೋಡುತ್ತೇವೆ. ಜಾಹೀರಾತಿಗೆ ಖರ್ಚು ಮಾಡುವ ಪ್ರತಿ ಪೈಸೆಯೂ ವಿದ್ಯಾರ್ಥಿಗಳಿಂದ ಬರುತ್ತದೆ’ ಎಂದರು.

> **ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆ ಯಾವುದೇ ಚರ್ಚೆಗೆ ಸರ್ಕಾರ ಸಿದ್ಧವಿದೆ. ಇದರಲ್ಲಿ ನಮಗೆ ಮುಚ್ಚಿಡುವಂತಹದ್ದು ಏನೂ ಇಲ್ಲ**
> **ಧರ್ಮೇಂದ್ರ ಪ್ರಧಾನ್,** ಕೇಂದ್ರ ಶಿಕ್ಷಣ ಸಚಿವ

ತನಿಖೆಗೆ ಸಂಸದರ ಆಗ್ರಹ

ನವದೆಹಲಿ (ಪಿಟಿಐ): ಕೋಚಿಂಗ್ ಸೆಂಟರ್ ದುರಂತ ಘಟನೆ ಕುರಿತು ಸಮಗ್ರ ತನಿಖೆ ನಡೆಸಬೇಕೆಂದು ಲೋಕಸಭಾ ಸದಸ್ಯರು ಸೋಮವಾರ ಪಕ್ಷಭೇದ ಮರೆತು ಒತ್ತಾಯಿಸಿದರು.

ಆಮ್ ಆದ್ಮಿ ಪಾರ್ಟಿ (ಎಎಪಿ) ಸರ್ಕಾರದ ನಿರ್ಲಕ್ಷ್ಯವೇ ಈ ದುರಂತಕ್ಕೆ ಕಾರಣ ಎಂದು ಬಿಜೆಪಿ ನಾಯಕಿ, ನವದೆಹಲಿ ಲೋಕಸಭಾ ಕ್ಷೇತ್ರದ ಸಂಸದೆ ಬಾನ್ಸುರಿ ಸ್ವರಾಜ್ ಆರೋಪಿಸಿದರು.

‘ಎಎಪಿಯ ಕ್ರಿಮಿನಲ್ ನಿರ್ಲಕ್ಷ್ಯದಿಂದ ಮೂವರು ವಿದ್ಯಾರ್ಥಿಗಳು ಪ್ರಾಣ ಕಳೆದುಕೊಳ್ಳಬೇಕಾಯಿತು. ಘಟನೆಯ ಕುರಿತು ತನಿಖೆಗೆ ಗೃಹ ಸಚಿವಾಲಯದಡಿ ತನಿಖಾ ಸಮಿತಿ ರಚಿಸಬೇಕು’ ಎಂದು ಒತ್ತಾಯಿಸಿದರು. ‘ದೆಹಲಿ ಸರ್ಕಾರದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ತನಿಖೆಗೂ ಸಮಿತಿ ರಚನೆಯಾಗಲಿ. ದೆಹಲಿಯಲ್ಲಿ ಚರಂಡಿಗಳನ್ನು ಸ್ವಚ್ಛಗೊಳಿಸಿಲ್ಲ ಏಕೆ’ ಎಂದು ಶೂನ್ಯ ವೇಳೆಯಲ್ಲಿ ಪ್ರಶ್ನಿಸಿದರು.

ಸುರಕ್ಷತಾ ನಿಯಮಗಳ ಉಲ್ಲಂಘನೆಯಾಗಿದೆ ಎಂದು ಹೇಳಿರುವ ಕಾಂಗ್ರೆಸ್ ಸಂಸದ ಶಶಿ ತರೂರ್, ಘಟನೆ ಬಗ್ಗೆ ಸಮಗ್ರ ತನಿಖೆಯಾಗಬೇಕು ಹಾಗೂ ಮೃತಪಟ್ಟವರ ಕುಟುಂಬಗಳಿಗೆ ಪರಿಹಾರ ನೀಡಬೇಕು ಎಂದರು.

6ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳ ಒತ್ತಡ ತಗ್ಗಿಸಲು ಕ್ರಮ

ಬ್ಯಾಗ್‌ರಹಿತ 10 ದಿನ: ಕೇಂದ್ರದಿಂದ ಮಾರ್ಗಸೂಚಿ

ನವದೆಹಲಿ (ಪಿಟಿಐ): ದೇಶದ 6ರಿಂದ 8ನೇ ತರಗತಿ ವರೆಗಿನ ಮಕ್ಕಳಿಗೆ ಪ್ರತಿ ಶೈಕ್ಷಣಿಕ ವರ್ಷದಲ್ಲಿ 10 ದಿನಗಳವರೆಗೆ ಬ್ಯಾಗ್‌ರಹಿತ ದಿನಗಳನ್ನು ಜಾರಿಗೊಳಿಸುವ ಸಂಬಂಧ ಕೇಂದ್ರ ಶಿಕ್ಷಣ ಸಚಿವಾಲಯ ಸೋಮವಾರ ಮಾರ್ಗಸೂಚಿ ಬಿಡುಗಡೆ ಮಾಡಿದೆ.

ಮಕ್ಕಳಲ್ಲಿ ಉತ್ಸಾಹ, ಉಲ್ಲಾಸ ಹೆಚ್ಚಿಸುವುದು, ಒತ್ತಡ ತಗ್ಗಿಸುವುದು ಹಾಗೂ ಪ್ರಾಯೋಗಿಕ ಚಟುವಟಿಕೆಗಳಲ್ಲಿ ಭಾಗಿಯಾಗುವಂತೆ ಮಾಡುವ ಉದ್ದೇಶವನ್ನು ಇದು ಹೊಂದಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತಿನ (ಎನ್‌ಸಿಇಆರ್‌ಟಿ) ಅಂಗಸಂಸ್ಥೆಯಾದ ಪಂಡಿತ್ ಸುಂದರಲಾಲ್ ಶರ್ಮಾ (ಪಿಎಸ್‌ಎಸ್) ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಫಾರ್ ವೊಕೇಷನಲ್ ಎಜುಕೇಷನ್ ಈ ಕುರಿತು ಮಾರ್ಗಸೂಚಿಯನ್ನು ಅಭಿವೃದ್ಧಿಪಡಿಸಿದೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ (2020) ನಾಲ್ಕನೇ ವರ್ಷಾಚರಣೆ ಸಂದರ್ಭದಲ್ಲಿ ಅದನ್ನು ಬಿಡುಗಡೆ ಮಾಡಲಾಗಿದೆ.



6ರಿಂದ 8ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ 10 ದಿನಗಳ ಬ್ಯಾಗ್‌ರಹಿತ ದಿನಗಳನ್ನು ಪರಿಚಯಿಸಬೇಕು ಎಂದು ಎನ್‌ಇಪಿ–2020 ಶಿಫಾರಸು ಮಾಡಿತ್ತು. ಅದಕ್ಕೆ ಪೂರಕವಾಗಿ ಮಾರ್ಗಸೂಚಿ ಹೊರಡಿಸಲಾಗಿದೆ.

ಮಾರ್ಗಸೂಚಿಯಲ್ಲಿ ಏನಿದೆ?:

- ಶಿಕ್ಷಣದ ಜತೆಗೆ ಮಕ್ಕಳಲ್ಲಿ ಕೌಶಲ ವೃದ್ಧಿಸುವುದು ಹಾಗೂ ಆ ಮೂಲಕ ಅವರ ಭವಿಷ್ಯದ ವೃತ್ತಿ ಮಾರ್ಗಕ್ಕೆ ನೆರವಾಗುವ ಉದ್ದೇಶವನ್ನು ಇದು ಒಳಗೊಂಡಿದೆ
- ಮರಗೆಲಸ, ವಿದ್ಯುತ್ ಕೆಲಸ, ಲೋಹದ ಕೆಲಸ, ತೋಟಗಾರಿಕೆ, ಕುಂಬಾರಿಕೆ ಸೇರಿದಂತೆ ವಿವಿಧ ವೃತ್ತಿಪರ ಕೌಶಲಗಳನ್ನು ವಿದ್ಯಾರ್ಥಿಗಳು ಈ ಅವಧಿಯಲ್ಲಿ ಕಲಿಯುವ ಅವಕಾಶ ಪಡೆಯಲಿದ್ದಾರೆ. ರಾಜ್ಯಗಳು ಮತ್ತು ಸ್ಥಳೀಯ ಸಮುದಾಯದವರು ಸ್ಥಳೀಯ ಕೌಶಲ ಅಗತ್ಯಗಳಿಗೆ ತಕ್ಕಂತೆ ಇವುಗಳನ್ನು ನಿರ್ಧರಿಸಬಹುದು. 6ರಿಂದ 8ನೇ ತರಗತಿ ಓದುವ ಪ್ರತಿ ವಿದ್ಯಾರ್ಥಿಯೂ ಒಂದು ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬೇಕು
- ಬ್ಯಾಗ್‌ರಹಿತ 10 ದಿನಗಳ ಅವಧಿಯಲ್ಲಿ ಈ ವಿದ್ಯಾರ್ಥಿಗಳು ಬಡಗಿಗಳು, ತೋಟಗಾರಿಕೆಯಲ್ಲಿ ತೊಡಗಿರುವವರು, ಕುಂಬಾರರು ಮತ್ತು ಇತರ ಸ್ಥಳೀಯ ವೃತ್ತಿಪರ ತಜ್ಞರ ಬಳಿ ‘ಇಂಟರ್ನ್’ ಆಗಿ ಕಾರ್ಯ ನಿರ್ವಹಿಸಬೇಕು
- ಶೈಕ್ಷಣಿಕ ವರ್ಷದಲ್ಲಿ ಎರಡು ಅಥವಾ ಮೂರು ಹಂತಗಳಲ್ಲಿ 10 ದಿನಗಳ ಬ್ಯಾಗ್‌ರಹಿತ ದಿನಗಳ ಚಟುವಟಿಕೆ ಗಳಿಗೆ ಅವಕಾಶ ಕಲ್ಪಿಸುವುದು ಸೂಕ್ತ. ಈ ಸಂಬಂಧ ವಾರ್ಷಿಕ ಯೋಜನೆ ಅಭಿವೃದ್ಧಿಪಡಿಸುವ ಸಂದರ್ಭದಲ್ಲಿ ಎಲ್ಲ ವಿಷಯಗಳ ಶಿಕ್ಷಕರನ್ನು ತೊಡಗಿಸಿಕೊಳ್ಳಬಹುದು. ಅಗತ್ಯವಿದ್ದರೆ ಒಳಾಂಗಣ ಮತ್ತು ಹೊರಾಂಗಣ ಚಟುವಟಿಕೆಗಳನ್ನು ಇದರ ಭಾಗವಾಗಿಸಬಹುದು
- ತರಕಾರಿ ಮಾರುಕಟ್ಟೆಗೆ ಭೇಟಿ, ಸಾಕು ಪ್ರಾಣಿಗಳ ಆರೈಕೆ ಕುರಿತು ಸಮೀಕ್ಷೆ ಮತ್ತು ವರದಿ, ಚಿತ್ರ ಬರಹ, ಗಾಳಿಪಟ ತಯಾರಿಸುವುದು ಮತ್ತು ಹಾರಿಸುವುದು, ಪುಸ್ತಕ ಮೇಳ ಆಯೋಜನೆ, ಆಲದ ಮರದ ಕೆಳಗೆ ಕುಳಿತು ಚರ್ಚಿಸುವುದು, ಜೈವಿಕ ಅನಿಲ ಘಟಕ ಮತ್ತು ಸೌರ ಶಕ್ತಿ ಪಾರ್ಕ್‌ಗೆ ಭೇಟಿ ಸೇರಿದಂತೆ ಇತರ ಚಟುವಟಿಕೆಗಳನ್ನು ಈ ಅವಧಿಯಲ್ಲಿ ನಡೆಸಬಹುದು
- **ಇನ್ನಷ್ಟು ಯೋಜನೆಗಳು:** ಎನ್‌ಇಪಿ ನಾಲ್ಕನೇ ವರ್ಷಾಚರಣೆ ಸಂದರ್ಭದಲ್ಲಿ ಇನ್ನೂ ಕೆಲ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ವಿವಿಧ ಭಾರತೀಯ ಭಾಷೆಗಳಲ್ಲಿ ಕಲಿಕಾ ಟಿ.ವಿ ಚಾನೆಲ್‌ಗಳು ಮತ್ತು ವೃತ್ತಿಪರ ತರಬೇತಿ ಕೋರ್ಸ್‌ಗಳಿಗೆ ಚಾಲನೆ ನೀಡಲಾಗಿದೆ. ಬ್ರೈಲ್ ಮತ್ತು ಆಡಿಯೊ ಬುಕ್‌ಗಳು ಮತ್ತು ಭಾರತೀಯ ಜ್ಞಾನ ವ್ಯವಸ್ಥೆಯ ನಾಲ್ಕು ಪುಸ್ತಕಗಳ ಬಿಡುಗಡೆ ಮಾಡಲಾಗಿದೆ.

ಕೊನೆಗಳಿಗೆಯ ಗೋಲು– ತಪ್ಪಿದ ಭಾರತದ ಸೋಲು • ಅರ್ಜೆಂಟೀನಾ ವಿರುದ್ಧ 1–1 ಸಮಬಲ

ಮತ್ತೆ ಆಪತ್ಬಾಂಧವನಾದ ಹರ್ಮನ್

ಪ್ಯಾರಿಸ್ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಅವರು ಕೊನೆಯ ಕ್ಷಣದಲ್ಲಿ ಪೆನಾಲ್ಟಿ ಕಾರ್ನರ್‌ಅನ್ನು ಗೋಲಾಗಿ ಪರಿವರ್ತಿಸಿ ಭಾರತ ತಂಡದ ಪಾಲಿಗೆ ಮತ್ತೊಮ್ಮೆ ಆಪತ್ಬಾಂಧವರಾದರು. ಈ ಗೋಲಿನಿಂದ ಅರ್ಜೆಂಟೀನಾ ವಿರುದ್ಧ ಸೋಮವಾರ ಒಲಿಂಪಿಕ್ಸ್ ಹಾಕಿ 'ಬಿ' ಗುಂಪಿನ ಪಂದ್ಯವನ್ನು ಭಾರತ 1–1 'ಡ್ರಾ' ಮಾಡಿಕೊಳ್ಳುವಲ್ಲಿ ಸಫಲವಾಯಿತು.

ಪಂದ್ಯದಲ್ಲಿ ಭಾರತ ಒಂಬತ್ತು ಪೆನಾಲ್ಟಿ ಕಾರ್ನರ್‌ಗಳನ್ನು ಪಡೆದರೂ ಗೋಲಾಗಿ ಪರಿವರ್ತಿಸಲು ವಿಫಲವಾಯಿತು. ಆದರೆ ಹರ್ಮನ್‌ಪ್ರೀತ್ ಕೊನೆಯದಾಗಿ ದೊರೆತ ಅವಕಾಶದಲ್ಲಿ ಚೆಂಡನ್ನು ಗೋಲುಪೆಟ್ಟಿಗೆಗೆ ಸೇರಿಸಿದರು.

36ನೇ ನಿಮಿಷ ದೊರೆತ ಪೆನಾಲ್ಟಿ ಸ್ಟ್ರೋಕ್ ವ್ಯರ್ಥಗೊಳಿಸಿದ್ದಕ್ಕೆ ಅರ್ಜೆಂಟೀನಾ ಕೈಕೈ ಹಿಸುಕಿಕೊಳ್ಳುವಂತಾಯಿತು.

ಪಂದ್ಯದ 22ನೇ ನಿಮಿಷ ಲುಕಾಸ್ ಮಾರ್ಟಿನೆಝ್ ಫೀಲ್ಡ್ ಗೋಲಿನ ಮೂಲಕ ಅರ್ಜೆಂಟೀನಾಕ್ಕೆ ಮುನ್ನಡೆ ಒದಗಿಸಿದ್ದರು. ಆದರೆ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಕೊನೆಯ ಕ್ಷಣದಲ್ಲಿ 'ಪೆನಾಲ್ಟಿ ಸ್ಟ್ರೋಕ್'ನಲ್ಲಿ ಗೋಲು ಗಳಿಸಿದ್ದ ಹರ್ಮನ್‌ಪ್ರೀತ್ ಈ ಬಾರಿ, ಅಂಪೈರ್ ಮುಕ್ತಾಯದ ಸೀಟಿ ಊದಲು ಅಣಿಯಾಗುತ್ತಿದ್ದಂತೆ ಗೋಲು ಗಳಿಸಿದ್ದರಿಂದ ತಂಡ ನಿಟ್ಟುಸಿರುಬಿಟ್ಟಿತು.

ಆದರೆ ಹರ್ಮನ್‌ಪ್ರೀತ್ ಪ್ರಕಾರ ತಂಡದ ಪ್ರದರ್ಶನ ಅಷ್ಟೇನೂ ಕೆಟ್ಟದ್ದಾಗಿರಲಿಲ್ಲ. 'ಪ್ರಾಮಾಣಿಕವಾಗಿ ಹೇಳಬೇಕೆಂದರೆ, ನಾವು ಸಾಕಷ್ಟು ಅವಕಾಶಗಳನ್ನು ಸೃಷ್ಟಿಸಿಕೊಂಡೆವು. ಪ್ರತಿದಾಳಿಗೂ ಅವಕಾಶಗಳಿದ್ದವು. ಫಿನಿಶಿಂಗ್ ಕಡೆ ನಾವು ಹೆಚ್ಚಿನ ಶ್ರಮ ಹಾಕಬೇಕಿದೆ. ಮುಂದೆ ನಾವು ಇದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ' ಎಂದು ಅವರು 'ಪಿಟಿಐ'ಗೆ ತಿಳಿಸಿದರು.

ಅರ್ಜೆಂಟೀನಾ ವಿರುದ್ಧದ ಪಂದ್ಯದ ಕೊನೆಯ ಕ್ಷಣದಲ್ಲಿ ಪೆನಾಲ್ಟಿ ಕಾರ್ನರ್‌ನಲ್ಲಿ ಗೋಲು ಗಳಿಸಿದ ಭಾರತದ ಹರ್ಮನ್‌ಪ್ರೀತ್ ಸಿಂಗ್ ತಂಡದ ಇತರ ಆಟಗಾರರ ಜೊತೆ ಸಂಭ್ರಮಿಸಿದರು –ಪಿಟಿಐ ಚಿತ್ರ

ಅರ್ಜೆಂಟೀನಾ ರಕ್ಷಣಾ ವಿಭಾಗವನ್ನು ಅವರು ಶ್ಲಾಘಿಸಿದರು. 'ಇದು ನಾವು ಕಲಿಯಬೇಕಾದ ವಿಷಯ. ಈ ಪಂದ್ಯ ನಮಗೆ ಒಳ್ಳೆಯ ಪಾಠವಾಯಿತು' ಎಂದೂ ಹೇಳಿದರು.

ಆಸ್ಟ್ರೇಲಿಯಾ ವಿರುದ್ಧ ಮೊದಲ ಪಂದ್ಯದಲ್ಲಿ ಸೋತಿದ್ದ ಅರ್ಜೆಂಟೀನಾ, ಈ ಪಂದ್ಯ ಗೆಲ್ಲಲು ಇನ್ನಿಲ್ಲದ ಶ್ರಮ ಹಾಕಿತು. ಆದರೆ ಪಂದ್ಯದ ಬಹುಭಾಗ ಮೇಲುಗೈ ಸಾಧಿಸಿದರೂ ಅಂತಿಮವಾಗಿ 'ಡ್ರಾ'ಕ್ಕೆ ತೃಪ್ತಿಪಡಬೇಕಾಯಿತು.

ಮೊದಲ ಕ್ವಾರ್ಟರ್ ಗೋಲುರಹಿತರವಾಗಿತ್ತು. ಎರಡೂ ತಂಡಗಳು ದೊರೆತ ಶಾರ್ಟ್ ಕಾರ್ನರ್‌ಗಳನ್ನು ಬಂಡವಾಳ ಮಾಡಿಕೊಳ್ಳಲು ಆಗಲಿಲ್ಲ. ಎರಡನೇ ಕ್ವಾರ್ಟರ್‌ನಲ್ಲೂ ಭಾರತಕ್ಕೆ ಕೆಲವು ಪೆನಾಲ್ಟಿ ಕಾರ್ನರ್ ಅವಕಾಶಗಳು ದೊರೆತವು. ಆದರೆ ಅರ್ಜೆಂಟೀನಾದ ಗೋಲ್ ಕೀಪರ್ ಥಾಮಸ್ ಸಾಂಟಿಯಾಗೊ ಭಾರತದ ಯತ್ನಗಳಿಗೆ ಗೋಡೆಯಾದರು. ಒಮ್ಮೆ ಹರ್ಮನ್‌ಪ್ರೀತ್ ಅವರು ಶಕ್ತಿಶಾಲಿಯಾಗಿ ಗೋಲಿನತ್ತ ಹೊಡೆದ ಚೆಂಡನ್ನು ಅವರು ಬಲಗಾಲಿನಿಂದ ಆಚೆ ತಳ್ಳಿ ಅಪಾಯ ದೂರಮಾಡಿದರು.

ಈ ಅವಧಿಯಲ್ಲೇ ಅರ್ಜೆಂಟೀನಾ ಕೊನೆಗೂ ಗೋಲು ಖಾತೆ ತೆರೆಯಿತು. ಬಾಟಿಸ್ಟಾ ಜುಬೇಲ್ಡಿಯಾ ಕಪುರೊ ಅವರು ಬಲಗಡೆಯಿಂದ ಕಳುಹಿಸಿದ ಪಾಸ್‌ನಲ್ಲಿ ಮಾರ್ಟಿನೆಜ್ 'ಡಿ' ಒಳಗಿಂದ ಒಂದೇ ಹೊಡೆತಕ್ಕೆ ಚೆಂಡನ್ನು ಗೋಲಿನೊಳಗೆ ಕಳುಹಿಸಿದರು. ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಡೈವ್ ಮಾಡುವಷ್ಟರಲ್ಲಿ ಗೋಲಾಗಿತ್ತು. ನಂತರದ ಆಟ ಭಾರತದ ಗೋಲು ಕಡೆಯೇ ಸಾಗಿತು. ರಿಯೊ ಕ್ರೀಡೆಗಳ(2016) ಚಾಂಪಿಯನ್ನರು ವಿರಾಮದ ವೇಳೆ 1–0 ಮುನ್ನಡೆ ಉಳಿಸಿಕೊಂಡರು.

36ನೇ ನಿಮಿಷ ಅರ್ಜೆಂಟೀನಾ ತಂಡದ ಕಾಸೆಲ್ಲಾ ಶುತ್ ಅವರು 'ಪೆನಾಲ್ಟಿ' ಅವಕಾಶದಲ್ಲಿ ಚೆಂಡನ್ನು ಗೋಲುಪೆಟ್ಟಿಗೆಯ ಆಚೆ ಹೊಡೆದಿದ್ದು ದುಬಾರಿಯಾಯಿತು.

'ಇದು ನಮಗೆ ಪುನರಾಗಮನ ಎಂದು ಹೇಳಬಹುದು. ನಾವು ಅಲ್ಲಿಂದ ವಿಶ್ವಾಸ ಗಳಿಸಿ ಗೋಲಿಗೆ ಪ್ರಯತ್ನಿಸುತ್ತ ಹೋದೆವು. ಒಂದೊಮ್ಮೆ 0–2 ಹಿನ್ನಡೆಯಾಗಿದ್ದಲ್ಲಿ ಕಥೆ ಬೇರೆಯಾಗುತಿತ್ತೇನೋ?' ಎಂದು ಹರ್ಮನ್‌ಪ್ರೀತ್ ಪ್ರತಿಕ್ರಿಯಿಸಿದರು.

ಕೊನೆಯ ಕ್ವಾರ್ಟರ್‌ನಲ್ಲಂತೂ ಭಾರತ ಹೆಚ್ಚಿನ ದಾಳಿ ನಡೆಸಿ ಒತ್ತಡ ಹೇರಿತು. ಭಾರತ ಈ ಬಾರಿ ಮೊದಲ ಸೋಲು ಕಾಣಬಹುದು ಎನ್ನುವಾಗಲೇ ಹರ್ಮನ್ ಗಳಿಸಿದ ಗೋಲು ಅರ್ಜೆಂಟೀನಾ ಲೆಕ್ಕಾಚಾರ ತಲೆಕೆಳಗು ಮಾಡಿತು.

ಚೀನಾದ ಲಿಯಾನ್ ಜುನ್‌ಜೀ ಮತ್ತು ಯಾಂಗ್ ಹಾವೊ –ಎಎಫ್‌ಪಿ ಚಿತ್ರ

ಡೈವಿಂಗ್: ಚೀನಾ ಜೋಡಿಗೆ ಚಿನ್ನ

ಪ್ಯಾರಿಸ್: ಬ್ರಿಟನ್‌ನ ಟಾಮ್ ಡೇಲಿ ಅವರು ದೀರ್ಘಕಾಲದ ಒಲಿಂಪಿಕ್ ಚಾಂಪಿಯನ್ ಪಟ್ಟ ಕಳೆದುಕೊಂಡರು. ಆದರೆ ಅವರು ಒಲಿಂಪಿಕ್ ಕ್ರೀಡೆಗಳ ಪುರುಷರ 10 ಮೀ. ಸಿಂಕ್ರನೈಸ್ಡ್ (ಲಯಬದ್ಧ) ಪ್ಲಾಟ್‌ಫಾರ್ಮ್ ಡೈವಿಂಗ್‌ನಲ್ಲಿ ತಮ್ಮ ಐದನೇ ಪದಕವನ್ನು ಬೆಳ್ಳಿ ರೂಪದಲ್ಲಿ ಜೊತೆಗಾರ ನೋವಾ ವಿಲಿಯಮ್ಸ್ ಜೊತೆ ಗೆದ್ದುಕೊಂಡರು.

ಸೋಮವಾರ ನಡೆದ ಈ ಸ್ಪರ್ಧೆಯಲ್ಲಿ ಚೀನಾದ ಲಿಯಾನ್ ಜುನ್‌ಜೀ ಮತ್ತು ಯಾಂಗ್ ಹಾವೊ ಅವರು ಚಿನ್ನ ಗೆದ್ದುಕೊಂಡರು. 30 ವರ್ಷ ವಯಸ್ಸಿನ ಡೇಲಿ ಅವರಿಗೆ ಐದು ಒಲಿಂಪಿಕ್ಸ್‌ಗಳಲ್ಲಿ ಇದು ಐದನೇ ಪದಕ. ಮೂರು ವರ್ಷಗಳ ಹಿಂದೆ ಟೋಕಿಯೊ ಕ್ರೀಡೆಗಳಲ್ಲಿ ಅವರು ಮ್ಯಾಟಿ ಲೀ ಜೊತೆಗೂಡಿ ಇದೇ ಸ್ಪರ್ಧೆಯಲ್ಲಿ ಚಿನ್ನ ಗೆದ್ದಿದ್ದರು.

ಕೊನೆಯ ಮೂರು ವಿಶ್ವ ಚಾಪಿಯನ್‌ಷಿಪ್‌ಗಳನ್ನು ಗೆದ್ದುಕೊಂಡಿರುವ ಲಿಯಾನ್ ಮತ್ತು ಯಾಂಗ್ ಜೋಡಿ ಮೊದಲ ಡೈವ್‌ನಿಂದಲೇ ಮೇಲುಗೈ ಸಂಪಾದಿಸಿದರು. ಅವರು ನಂತರ ಮುನ್ನಡೆ ಬಿಟ್ಟುಕೊಡಲೇ ಇಲ್ಲ. ಚೀನಾದ ಜೋಡಿ 490.35 ಸ್ಕೋರ್ ಗಳಿಸಿ ಚಿನ್ನ ಗೆದ್ದರೆ, ಡೇಲಿ– ವಿಲಿಯಮ್ಸ್ ಅವರು 463.44 ಸ್ಕೋರ್‌ನೊಡನೆ ಬೆಳ್ಳಿ ಹಾಗೂ ಕೆನಡಾದ ರೈಲಾನ್ ವೀನ್ಸ್– ನಥಾನ್ ಝೋಂಬರ್ ಮರ್ರೆ ಕಂಚು ಗೆದ್ದರು.

ಟಿಟಿ: 61 ವರ್ಷ ವಯಸ್ಸಿನ ಮಹಿಳೆಗೆ ಜಯ

ಪ್ಯಾರಿಸ್: ಲಕ್ಸೆಂಬರ್ಗ್‌ನ 61 ವರ್ಷ ವಯಸ್ಸಿನ ನಿ ಕ್ಸಿಯಾಲಿಯನ್ ಅವರು ಒಲಿಂಪಿಕ್ಸ್ ಟೇಬಲ್ ಟೆನಿಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಚೀನಾ ಮೂಲದ ಕ್ಸಿಯಾಲಿಯನ್ ಅವರು ಆರನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ. 64ರ ಘಟ್ಟದ ಪಂದ್ಯದಲ್ಲಿ ಟರ್ಕಿಯ ಸಿಬೆಲ್ ಅಲ್ಟಿಂಕಾಯಾ ಅವರನ್ನು 4–2ರ ಗೇಮ್‌ಗಳಲ್ಲಿ ಸೋಲಿಸಿದರು. ಈ ಮೂಲಕ ಅವರು ಒಲಿಂಪಿಕ್ಸ್‌ನಲ್ಲಿ ಗೆಲುವು ಸಾಧಿಸಿದ ಅತಿ ಹಿರಿಯ ವಯಸ್ಸಿನ ಟಿಟಿ ಆಟಗಾರ್ತಿ ಎಂಬ ಹಿರಿಮೆಗೆ ಪಾತ್ರವಾದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಜಪಾನ್	6	2	4	12
ಚೀನಾ	5	3	2	10
ದ.ಕೊರಿಯಾ	5	3	1	9
ಫ್ರಾನ್ಸ್	4	7	3	14
ಆಸ್ಟ್ರೇಲಿಯಾ	4	3	0	7
ಅಮೆರಿಕ	3	8	7	18
ಬ್ರಿಟನ್	2	4	3	9
ಕೆನಡಾ	2	1	2	5
ಜರ್ಮನಿ	2	0	0	2
ಭಾರತ	0	0	1	1

ಪಟ್ಟಿಯಲ್ಲಿ ಭಾರತ 26ನೇ ಸ್ಥಾನದಲ್ಲಿದೆ

ಒಲಿಂಪಿಕ್ಸ್‌ನಲ್ಲಿ ಇಂದು (ಭಾರತದ ಸ್ಪರ್ಧೆ)

ಶೂಟಿಂಗ್

ಪುರುಷರ ಟ್ರ್ಯಾಪ್, ಅರ್ಹತಾ ಸುತ್ತು: ಪೃಥ್ವಿರಾಜ್ ತೊಂಡೈಮಾನ್, ಮಧ್ಯಾಹ್ನ **12.30**

ಮಹಿಳೆಯರ ಟ್ರ್ಯಾಪ್, ಅರ್ಹತಾ ಸುತ್ತು: ಶ್ರೇಯಸಿ ಸಿಂಗ್ ಮತ್ತು ರಾಜೇಶ್ವರಿ ಕುಮಾರಿ, ಮಧ್ಯಾಹ್ನ **12.30**

ಮಿಶ್ರ ತಂಡ 10 ಮೀ. ಏರ್ ಪಿಸ್ತೂಲ್, ಕಂಚಿನ ಪದಕ ಪಂದ್ಯ: ಭಾರತ ಮತ್ತು ಕೊರಿಯಾ (ಮನು ಭಾಕರ್, ಸರಬ್ಜೋತ್ ಸಿಂಗ್), ಮಧ್ಯಾಹ್ನ **1**

ಪುರುಷರ ಹಾಕಿ

ಭಾರತ–ಐರ್ಲೆಂಡ್, ಸಂಜೆ **4.45**

ಆರ್ಚರಿ (ಎಲಿಮಿನೇಷನ್ ಸುತ್ತು)

ಮಹಿಳೆಯರ ವೈಯಕ್ತಿಕ 32ರ ಸುತ್ತು ಅಂಕಿತಾ ಭಕತ್, ಸಂಜೆ **5.15**. ಭಜನ್ ಕೌರ್, ಸಂಜೆ **5.30**

ಪುರುಷರ ವೈಯಕ್ತಿಕ 32ರ ಸುತ್ತು ಧೀರಜ್ ಬೊಮ್ಮದೇವರ, ರಾತ್ರಿ **10.45**

ಬ್ಯಾಡ್ಮಿಂಟನ್ (ಗುಂಪು ಹಂತ)

ಪುರುಷರ ಡಬಲ್ಸ್: ಸಾತ್ವಿಕ್ ಸಾಯಿರಾಜ್– ಚಿರಾಗ್ ಶೆಟ್ಟಿ ವಿರುದ್ಧ ಅಲ್ಫಿಯಾನ್ ಫಜರ್– ಮುಹಮ್ಮದ್ ರಿಯಾನ್ ಅರ್ಡಿಯಾಂಟೊ (ಇಂಡೊನೇಷ್ಯಾ), ಸಂಜೆ **5.30**

ಮಹಿಳೆಯರ ಡಬಲ್ಸ್: ಅಶ್ವಿನಿ ಪೊನ್ನಪ್ಪ–ತನಿಶಾ ಕ್ರಾಸ್ಟೊ ವಿರುದ್ಧ ಸೆಟ್ಯಾನಾ ಮಾಪಸಾ– ಆ್ಯಂಜೆಲ್ ಯು (ಆಸ್ಟ್ರೇಲಿಯಾ), ಸಂಜೆ **6.20**

ಬಾಕ್ಸಿಂಗ್

ಪುರುಷರ 51 ಕೆ.ಜಿ. 16ರ ಸುತ್ತು: ಅಮಿತ್ ಪಂಘಲ್ ಮತ್ತು ಪ್ಯಾಟ್ರಿಕ್ ಚಿನ್ಯೆಂಬಾ (ಜಾಂಬಿಯಾ), ಸಂಜೆ **7.15**

ಮಹಿಳೆಯರ 57 ಕೆ.ಜಿ. 32ರ ಸುತ್ತು: ಜೈಸ್ಮಿನ್ ಲಂಬೊರಿಯಾ ಮತ್ತು ನೆಸ್ತಿ ಪೆಟೆಸಿಯೊ (ಫಿಲಿಪ್ಪೀನ್ಸ್), ರಾತ್ರಿ **9.25**

ಮಹಿಳೆಯರ 54 ಕೆ.ಜಿ. 16ರ ಸುತ್ತು: ಪ್ರೀತಿ ಪವಾರ್ ಮತ್ತು ಯೆನಿ ಮಾರ್ಸೆಲಾ ಅರಿಯಾಸ್ (ಕೊಲಂಬಿಯಾ) ರಾತ್ರಿ **1.20** (ಜುಲೈ **31**)

ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ ಆ್ಯಪ್

ಟಿ20 ಕ್ರಿಕೆಟ್ ಸರಣಿ: ಶ್ರೀಲಂಕಾ ವಿರುದ್ಧ ಅಂತಿಮ ಪಂದ್ಯ ಇಂದು

ಸರಣಿ ಕ್ಲೀನ್‌ಸ್ವೀಪ್ ಗುರಿಯಲ್ಲಿ ಭಾರತ

ಪೆಲ್ಲೆಕೆಲೆ (ಪಿಟಿಐ): ನೂತನ ಕೋಚ್ ಗೌತಮ್ ಗಂಭೀರ್ ಮತ್ತು ಹೊಸ ನಾಯಕ ಸೂರ್ಯಕುಮಾರ್ ಯಾದವ್ ಅವರ ಸಂಯೋಜನೆಯಲ್ಲಿ ಭಾರತ ತಂಡ ಟಿ20 ಸರಣಿಯಲ್ಲಿ ಶ್ರೀಲಂಕಾ ವಿರುದ್ಧ ಅಜೇಯ 2–0 ಮುನ್ನಡೆ ಪಡೆದಿದ್ದು ಉತ್ತಮ ಆರಂಭ ಮಾಡಿದೆ. ಮಂಗಳವಾರ ನಡೆಯುವ ಮೂರನೇ ಹಾಗೂ ಅಂತಿಮ ಪಂದ್ಯದಲ್ಲೂ ಇದೇ ಪ್ರಾಬಲ್ಯ ಮುಂದುವರಿಸಿ ಸರಣಿಯನ್ನು 'ವೈಟ್ ವಾಷ್' ಮಾಡುವ ಗುರಿಯಲ್ಲಿದೆ.

ಆತಿಥೇಯ ತಂಡವು ಕ್ಲೀನ್‌ಸ್ವೀಪ್ ಮುಖಭಂಗ ತಪ್ಪಿಸಿಕೊಳ್ಳಬೇಕಾದ ಒತ್ತಡದಲ್ಲಿದೆ. ಮೊದಲ ಪಂದ್ಯದಲ್ಲಿ 43 ರನ್‌ಗಳಿಂದ ಗೆದ್ದ ಭಾರತ, ಭಾನುವಾರ ಮಳೆಯಿಂದ ಅಡಚಣೆಗೊಳಗಾದ ಎರಡನೇ ಪಂದ್ಯವನ್ನು ಏಳು ವಿಕೆಟ್‌ಗಳಿಂದ ಜಯಿಸಿತ್ತು.

ಎರಡೂ ಪಂದ್ಯಗಳಲ್ಲಿ ಶ್ರೀಲಂಕಾ ತಂಡ ಬಿರುಸಿನ ಆರಂಭ ಪಡೆದರೂ ನಂತರ ಅದೇ ವೇಗದಲ್ಲಿ ಸಾಗದೇ ಮಧ್ಯಮ ಹಂತದ ಓವರುಗಳಲ್ಲಿ ಕುಸಿದಿತ್ತು. ಭಾನುವಾರ ಪುರುಷರ ತಂಡ ಸೋತರೆ, ದ್ವೀಪರಾಷ್ಟ್ರದ ಮಹಿಳೆಯರ ತಂಡ ಏಷ್ಯಾ ಕಪ್ ಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿ ಮೊದಲ ಬಾರಿ ಟ್ರೋಫಿ ಎತ್ತಿ ಹಿಡಿದಿತ್ತು.

ಸೂರ್ಯಕುಮಾರ್ –ಪಿಟಿಐ ಚಿತ್ರ

ಸೂರ್ಯಕುಮಾರ್ ಭಾರತ ತಂಡವನ್ನು ಸಮರ್ಥವಾಗಿ ಮುನ್ನಡೆಸಿದ್ದಾರೆ. ಬೌಲಿಂಗ್ ಬದಲಾವಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದ್ದಾರೆ. ಬ್ಯಾಟಿಂಗ್‌ನಲ್ಲೂ ಬಿರುಸಿನ 58 ಮತ್ತು 26 ರನ್ ಗಳಿಸಿದ್ದಾರೆ.

ಉಪನಾಯಕ ಶುಭಮನ್ ಗಿಲ್ ಕತ್ತು ನೋವಿನಿಂದಾಗಿ ಎರಡನೇ ಪಂದ್ಯದಲ್ಲಿ ಆಡಿರಲಿಲ್ಲ. ಅವರು ಮೂರನೇ ಪಂದ್ಯಕ್ಕೆ ಫಿಟ್ ಆಗಿದ್ದಾರೆಯೇ ಎಂಬುದು ಖಚಿತವಾಗಿಲ್ಲ.

ಅಭ್ಯಾಸ ಆರಂಭಿಸಿದ ರೋಹಿತ್, ಕೊಹ್ಲಿ

ಕೊಲಂಬೊ (ಪಿಟಿಐ): ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ, ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಮತ್ತು ತಂಡದ ಇತರ ಆಟಗಾರರು ಆಗಸ್ಟ್ 2ರಂದು ಆರಂಭವಾಗುವ ಏಕದಿನ ಸರಣಿಗಾಗಿ ಸೋಮವಾರ ಅಭ್ಯಾಸ ಆರಂಭಿಸಿದರು.

ಸೂರ್ಯಕುಮಾರ್ ಯಾದವ್ ನಾಯಕತ್ವದ ಟಿ20 ತಂಡವು ಮಂಗಳವಾರ ಪೆಲೆಕೆಲೆಯಲ್ಲಿ ಕೊನೆಯ ಪಂದ್ಯವನ್ನು ಆಡಲಿದೆ. ಈ ಮಧ್ಯೆ ರೋಹಿತ್, ಕೊಹ್ಲಿ ಮತ್ತು ಹರ್ಷಿತ್ ರಾಣಾ ಮೊದಲಾದವರು ಶ್ರೀಲಂಕಾ ತಲುಪಿದ್ದಾರೆ.

ರೋಹಿತ್, ಕೊಹ್ಲಿ ಮತ್ತು ಕುಲದೀಪ್ ಯಾದವ್ ಅವರು ವೆಸ್ಟ್‌ಇಂಡೀಸ್‌ನಲ್ಲಿ ಟಿ20 ವಿಶ್ವಕಪ್ ಗೆದ್ದ ಒಂದು ತಿಂಗಳ ನಂತರ ಮೈದಾನಕ್ಕೆ ಇಳಿದಿದ್ದಾರೆ. ಹಲವು ತಿಂಗಳ ಬಳಿಕ ಶ್ರೇಯಸ್ ಅಯ್ಯರ್ ಕೂಡ ತಂಡವನ್ನು ಸೇರಿಕೊಂಡಿದ್ದಾರೆ. ಅವರು ಡಿಸೆಂಬರ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಭಾರತ ತಂಡದಲ್ಲಿ ಆಡಿದ್ದರು.

ತಂಡದ ಆಟಗಾರರು ಕೊಲಂಬೊದಲ್ಲಿ ಸಹಾಯಕ ಕೋಚ್ ಅಭಿಷೇಕ್ ನಾಯರ್ ಮಾರ್ಗದರ್ಶನದಲ್ಲಿ ತಾಲೀಮು ನಡೆಸಿದರು. ಆಗಸ್ಟ್ 2, 4 ಮತ್ತು 7ರಂದು ಶ್ರೀಲಂಕಾ ವಿರುದ್ಧ ಏಕದಿನ ಪಂದ್ಯ ನಡೆಯಲಿದೆ.

ಲಂಕಾ ಕಡೆ ಪಥುಮ್ ನಿಸಾಂಕ (111 ರನ್) ಮತ್ತು ಕುಶಾಲ್ ಪೆರೆರಾ (73) ಬಿರುಸಿನ ಆಟವಾಡಿದ್ದಾರೆ. ಆದರೆ ಉತ್ತಮ ಆರಂಭದ ಲಾಭವನ್ನು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಪಡೆದಿಲ್ಲ. ಸ್ಪಿನ್ನರ್‌ಗಳೆದುರು ತಂಡ ಪರದಾಡಿದೆ. ಎರಡನೇ ಪಂದ್ಯದಲ್ಲಿ ಸ್ಪಿನ್ನರ್ ರವಿ ಬಿಷ್ಣೋಯಿ ಮೂರು ವಿಕೆಟ್‌ಗಳನ್ನು ಪಡೆದಿದ್ದರು. ಲಂಕಾ ತಂಡವು ಬೌಲರ್‌ಗಳಿಂದ ಉತ್ತಮ ಪ್ರದರ್ಶನವನ್ನು ಎದುರುನೋಡುತ್ತಿದೆ.

ಪಂದ್ಯ ಆರಂಭ: ರಾತ್ರಿ 7.00
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಹಾಟ್‌ಸ್ಟಾರ್

ಒಲಿಂಪಿಕ್ಸ್ ಕ್ರಿಕೆಟ್: ಭಾರತ ಚಿನ್ನ ಗೆಲ್ಲಲಿ

ಪ್ಯಾರಿಸ್‌ನಲ್ಲಿ ಕ್ರಿಕೆಟ್ ದಿಗ್ಗಜ ರಾಹುಲ್ ದ್ರಾವಿಡ್ ಆಶಯ

ಪ್ಯಾರಿಸ್ (ಪಿಟಿಐ): ಲಾಸ್ ಏಂಜಲೀಸ್‌ನಲ್ಲಿ 2028ರಲ್ಲಿ ನಡೆಯಲಿರುವ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಸೇರ್ಪಡೆಯಾಗಲಿರುವುದು ಸಂತಸದ ವಿಷಯ. ಅದರಲ್ಲಿ ಭಾರತದ ಪುರುಷ ಮತ್ತು ಮಹಿಳಾ ತಂಡಗಳೆರಡೂ ಚಿನ್ನ ಗೆಲ್ಲಬೇಕು ಎಂದು ಭಾರತ ಕ್ರಿಕೆಟ್ ತಂಡದ ಮಾಜಿ ಕೋಚ್ ರಾಹುಲ್ ದ್ರಾವಿಡ್ ಆಶಯ ವ್ಯಕ್ತಪಡಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿರುವ ಇಂಡಿಯಾ ಹೌಸ್‌ನಲ್ಲಿ ಸೋಮವಾರ 'ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್; ಹೊಸ ಯುಗದ ಉದಯ' ವಿಷಯದ ಕುರಿತು ಏರ್ಪಡಿಸಲಾಗಿದ್ದ ಮಾಧ್ಯಮ ಸಂವಾದದಲ್ಲಿ ಅವರು ಮಾತನಾಡಿದರು.

'ಒಲಿಂಪಿಕ್ಸ್ ಕ್ರೀಡಾ ಗ್ರಾಮದಲ್ಲಿ ವಾಸ್ತವ್ಯ ಮಾಡುವ ಅನುಭವಕ್ಕಾಗಿ ಮತ್ತು ಒಲಿಂಪಿಕ್ ಕೂಟದಲ್ಲಿ ಪದಕ ಜಯಿಸುವುದಕ್ಕಾಗಿ ಬಹಳಷ್ಟು ಯುವ ಆಟಗಾರರು ಈಗಾಗಲೇ ಕಾತುರರಾಗಿದ್ದಾರೆ. ನಾನು ಈಚೆಗೆ ತಂಡದಲ್ಲಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿಯೇ ಈ ವಿಷಯಗಳ ಬಗ್ಗೆ ಚರ್ಚಿಸುವ ಹುಡುಗರನ್ನು ನೋಡಿದ್ದೇನೆ. ಅವರೆಲ್ಲರೂ ಒಲಿಂಪಿಕ್ ಕೂಟದಲ್ಲಿ ಆಡಲು ಅವಕಾಶ ಗಿಟ್ಟಿಸಲು ಈಗಿನಿಂದಲೇ ಸಿದ್ಧತೆ ಆರಂಭಿಸಿದ್ದಾರೆ. ಅದರಿಂದಾಗಿ ಬಹಳ ಪೈಪೋಟಿ ಏರ್ಪಟ್ಟಿದೆ' ಎಂದು ದ್ರಾವಿಡ್ ಹೇಳಿದರು.

'ಮುಂದಿನ ಒಲಿಂಪಿಕ್ಸ್‌ನಲ್ಲಿ ಕ್ರಿಕೆಟ್ ಅದ್ಭುತವಾಗಿ ನಡೆಯಬೇಕು. ಅದರಲ್ಲಿ ಭಾರತದ ಪುರುಷ ಮತ್ತು ಮಹಿಳೆಯರ ತಂಡಗಳು ಚಿನ್ನ ಗೆಲ್ಲಬೇಕೆಂಬುದು ನನ್ನ ಕನಸು. ಆದರೆ ಆಗ ನನಗೆ ಆಡಲು ಅವಕಾಶವಿಲ್ಲ ಎನ್ನುವ ಬೇಸರವಿದೆ. ಆದರೆ ನಾವು ಯಾವುದಾದರೊಂದು ಸ್ಥಾನದ ಮೂಲಕ ಒಲಿಂಪಿಕ್ಸ್‌ನಲ್ಲಿ ಹಾಜರಿರುತ್ತೇನೆ. ಕೊನೆಗೆ ಮಾಧ್ಯಮ ಪ್ರತಿನಿಧಿಯಾಗಿಯಾದರೂ ಬರುತ್ತೇನೆ' ಎಂದು ದ್ರಾವಿಡ್ ನಕ್ಕರು.

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸೋಮವಾರ ನಡೆದ ಭಾರತ ಮತ್ತು ಅರ್ಜೆಂಟೀನಾ ಹಾಕಿ ಪಂದ್ಯವನ್ನು ಕ್ರಿಕೆಟಿಗ ರಾಹುಲ್ ದ್ರಾವಿಡ್ ವೀಕ್ಷಿಸಿದರು –ಎಪಿ/ಪಿಟಿಐ ಚಿತ್ರ

'ಒಲಿಂಪಿಕ್ಸ್‌ನಲ್ಲಿ ಕಾರ್ಲ್ ಲೂಯಿಸ್ ಚಿನ್ನದ ಪದಕ ಜಯಿಸುವುದನ್ನು ನೋಡುತ್ತ ಬೆಳೆದವರು. ಮಹಾನ್ ಅಥ್ಲೀಟ್‌ಗಳ ಸಾಧನೆಗಳನ್ನು ವೀಕ್ಷಿಸುತ್ತ ಅವರಂತಾಗಲು ತುಡಿದವರು ನಾವು. ಒಲಿಂಪಿಕ್ ಕೂಟದ ಕ್ರೀಡಾಗ್ರಾಮದ ವಾತಾವರಣ ಮತ್ತು ಚೈತನ್ಯವು ಅಗಾಧವಾದದ್ದು. ಇದೊಂದು ಅದ್ಭುತ ಅನುಭವ ನೀಡಿದೆ' ಎಂದರು.

ದ್ರಾವಿಡ್ ಅವರು ಭಾರತ ಮತ್ತು ಅರ್ಜೆಂಟೀನಾ ನಡುವಣ ಹಾಕಿ ಪಂದ್ಯ ಹಾಗೂ ಟೆನಿಸ್ ಪಂದ್ಯಗಳನ್ನು ವೀಕ್ಷಿಸಿದರು.

ಐಪಿಸಿಎ ವಿಶ್ವ ಚೆಸ್: ಸಮರ್ಥ್‌ಗೆ ಪ್ರಶಸ್ತಿ

ಬೆಂಗಳೂರು: ಕರ್ನಾಟಕದ ಸಮರ್ಥ್ ಜಗದೀಶ ರಾವ್ ಅವರು, ಅರ್ಮೇನಿಯಾದ ಗ್ಯುಮ್ರಿಯಲ್ಲಿ ಶನಿವಾರ ಮುಕ್ತಾಯಗೊಂಡ 23ನೇ ಐಪಿಸಿಎ ವಿಶ್ವ ವೈಯಕ್ತಿಕ ಚೆಸ್ ಚಾಂಪಿಯನ್‌ಷಿಪ್‌ನ ವೀಲ್ ಚೇರ್ ವಿಭಾಗದಲ್ಲಿ ಬೆಳ್ಳಿ ಪದಕ ಪಡೆದಿದ್ದಾರೆ.

ಹೊನ್ನಾವರದ ಸಮರ್ಥ್ 9 ಸುತ್ತುಗಳಿಂದ ಆರು ಪಾಯಿಂಟ್ಸ್ ಸಂಗ್ರಹಿಸಿದ್ದರು. ಎಂಟು ದಿನಗಳ (ಜುಲೈ 20 ರಿಂದ 27) ಟೂರ್ನಿಯಲ್ಲಿ ಸಮರ್ಥ್ ತನಗಿಂತ ಹೆಚ್ಚು ರೇಟಿಂಗ್ ಹೊಂದಿರುವ ಮೂವರು ಆಟಗಾರರನ್ನು ಮಣಿಸಿದ್ದಾರೆ. ಈ ಟೂರ್ನಿಯಿಂದ 38 ರೇಟಿಂಗ್ ಪಾಯಿಂಟ್ ಪಡೆಯುವ ಮೂಲಕ ಒಟ್ಟು ರೇಟಿಂಗ್ ಅನ್ನು 1835ಕ್ಕೆ ಹೆಚ್ಚಿಸಿದ್ದಾರೆ.

ಸಮರ್ಥ್, ಕೆನರಾ ಬ್ಯಾಂಕ್ ನಿವೃತ್ತ ಉದ್ಯೋಗಿ ಜಗದೀಶ್ ರಾವ್ ಮತ್ತು ವಿನುತಾ ಭಟ್ ದಂಪತಿ ಪುತ್ರ.

ಸಮರ್ಥ್ ರಾವ್

ಅರ್ಮೇನಿಯಾದ ಟೂರ್ನಿಯಲ್ಲಿ ಭಾರತದಿಂದ ಐವರು ಭಾಗವಹಿಸಿದ್ದರು. ತಮಿಳುನಾಡಿನ ಶೆರೋನ್ ರಾಕೇಲ್ ಜೂನಿಯರ್ ಬಾಲಕಿಯರ ವಿಭಾಗದಲ್ಲಿ ಕಂಚಿನ ಪದಕ ಪಡೆದಿದ್ದಾರೆ.

ವಾಲಿಬಾಲ್: ಭಾರತಕ್ಕೆ ಮಣಿದ ಚೀನಾ

ಸುರಬಯ (ಇಂಡೊನೇಷ್ಯಾ): 'ಬ್ಲಾಕರ್' ಆದಿತ್ಯ ರಾಣಾ ಮತ್ತು ನಾಯಕ ಹಾಗೂ 'ಸೆಟ್ಟರ್' ಕಬಿಲನ್ ಅವರ ಉತ್ತಮ ಪ್ರದರ್ಶನದ ನೆರವಿನಿಂದ ಭಾರತ ತಂಡ, 20 ವರ್ಷದೊಳಗಿನವರ ಏಷ್ಯನ್ ವಾಲಿಬಾಲ್ ಚಾಂಪಿಯನ್‌ಷಿಪ್ ಪಂದ್ಯದಲ್ಲಿ ಸೋಮವಾರ 3–1 ಸೆಟ್‌ಗಳಿಂದ ಚೀನಾ ತಂಡವನ್ನು ಸೋಲಿಸಿತು.

ಭಾರತ 25–22, 19–25, 25–20, 25–22 ರಲ್ಲಿ ಜಯಗಳಿಸಿತು. ಚಾಂಪಿಯನ್‌ಷಿಪ್‌ನಲ್ಲಿ ಐದು ಮತ್ತು ಆರನೇ ಸ್ಥಾನಕ್ಕಾಗಿ ಮಂಗಳವಾರ ನಡೆಯುವ ಪಂದ್ಯದಲ್ಲಿ ಭಾರತ ತಂಡವು, ಕಜಕಸ್ತಾನ ಎದುರು ಆಡಲಿದೆ. ಈ ಪಂದ್ಯ ಗೆದ್ದಲ್ಲಿ ಭಾರತ 21 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ನಲ್ಲಿ ಆಡುವ ಅರ್ಹತೆ ಗಳಿಸಲಿದೆ.

ಭಾನುವಾರ ನಡೆದ ಪಂದ್ಯದಲ್ಲಿ ಭಾರತ ಸೌದಿ ಅರೇಬಿಯಾ ತಂಡವನ್ನು ಮಣಿಸಿತ್ತು.

'ಹಾವು ಕಡಿತದಿಂದ ಪ್ರತಿ ವರ್ಷ 50 ಸಾವಿರ ಸಾವು'

'ಹಾವು ಕಡಿತದಿಂದ ಪ್ರತಿ ವರ್ಷ 50 ಸಾವಿರ ಮಂದಿ ಸಾಯುತ್ತಿದ್ದು, ಇದು ಜಗತ್ತಿನಲ್ಲಿಯೇ ಅಧಿಕ ಸಂಖ್ಯೆಯಾಗಿದೆ. ಹವಾಮಾನ ವೈಪರೀತ್ಯವು ಹಾವು ಕಡಿತ ಪ್ರಕರಣಗಳು ಅಧಿಕಗೊಳ್ಳಲು ಕಾರಣವಾಗಿದೆ. 28 ಡಿಗ್ರಿ ಸೆಲ್ಸಿಯಸ್‌ಗಿಂತಲೂ ಅಧಿಕ ತಾಪಮಾನವಿದ್ದಲ್ಲಿ ಇಂಥ ಪ್ರಕರಣಗಳು ಹೆಚ್ಚಾಗುತ್ತವೆ' ಎಂದು ಬಿಜೆಪಿ ಸಂಸದ ರಾಜೀವ್ ಪ್ರತಾಪ್ ರೂಢಿ ಲೋಕಸಭೆಯಲ್ಲಿ ತಿಳಿಸಿದರು.



30-40 ಲಕ್ಷ ಪ್ರತಿ ವರ್ಷ ಹಾವು ಕಡಿತ ಪ್ರಕರಣಗಳ ಸಂಖ್ಯೆ

50,000 ಪ್ರತಿ ವರ್ಷವೂ ಹಾವು ಕಡಿತದಿಂದ ಮೃತಪಡುತ್ತಿರುವವರ ಸಂಖ್ಯೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ
(ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
1	ಪಶ್ಚಿಮ–2	ಬೆಂಜಮಂ/ಕಾನಿಅ(ಪಶ್ಚಿಮ–2)/ಪಿಬಿ/1904/ 2024–25, ದಿನಾಂಕ: 29.07.2024	1	ರೂ.76,08,013/– / ರೂ.1,79,600/–	05.08.2024ರ ಮಧ್ಯಾಹ್ನ 3:00 ಗಂಟೆಯವರೆಗೆ	07.08.2024ರ ಮಧ್ಯಾಹ್ನ 3.00 ಗಂಟೆಯ ನಂತರ
2			2	ರೂ.61,95,505/– / ರೂ.1,46,300/–		
3			3	ರೂ.32,86,881/– / ರೂ.77,600/–		
4			4	ರೂ.81,99,090/– / ರೂ.1,93,500/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪಶ್ಚಿಮ–2)

ಮುಖ್ಯ ಅಭಿಯಂತರರ ಕಚೇರಿ, (ತ್ಯಾನೀನಿ–ಪಶ್ಚಿಮ) 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ		ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
5	(ತ್ಯಾನೀನಿ–ಎನ್) ವಿ.ವಿ.	ಬೆಂಜಮಂ/ಕಾನಿಅ(ತ್ಯಾನೀನಿ–ಎನ್–ವಿ.ವಿ)/ಪಿಬಿ/ 356/2024–25 ದಿನಾಂಕ: 29.07.2024	1	ರೂ.82.25 ಲಕ್ಷಗಳು / ರೂ.1,64,500/–	13.08.2024ರ ಮಧ್ಯಾಹ್ನ 12:00 ಗಂಟೆಯವರೆಗೆ	14.08.2024ರ ಸಂಜೆ 4:00 ಗಂಟೆಗೆ
6			2	ರೂ.92.13 ಲಕ್ಷಗಳು / ರೂ.1,84,500/–		
7			3	ರೂ.93.88 ಲಕ್ಷಗಳು / ರೂ.1,88,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾನೀನಿ–ಎನ್)ವಿ.ವಿ.

ಮುಖ್ಯ ಅಭಿಯಂತರರ ಕಚೇರಿ (ತ್ಯಾ.ನೀ.ನಿ–ಪೂರ್ವ), 5ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
8	(ತ್ಯಾ.ನೀ.ನಿ. –ಎನ್) ಕೆ&ಟಿ ವ್ಯಾಲಿ	ಬೆಂಜಮಂ/ಇಡಬ್ಲ್ಯೂ(ಎನ್)ಕೆಟಿ/ಪಿಬಿ/251/ 2024–25, ದಿನಾಂಕ: 29.07.2024	ರೂ.95.54 ಲಕ್ಷಗಳು / ರೂ.1.92 ಲಕ್ಷಗಳು	13.08.2024ರ ಸಂಜೆ 4:00 ಗಂಟೆಯವರೆಗೆ	14.08.2024ರ ಸಂಜೆ 4:30 ಗಂಟೆಗೆ
9		ಬೆಂಜಮಂ/ಇಡಬ್ಲ್ಯೂ(ಎನ್)ಕೆಟಿ/ಪಿಬಿ/252/ 2024–25, ದಿನಾಂಕ: 29.07.2024	ರೂ.88.48 ಲಕ್ಷಗಳು / ರೂ.1.77 ಲಕ್ಷಗಳು		
10		ಬೆಂಜಮಂ/ಇಡಬ್ಲ್ಯೂ(ಎನ್)ಕೆಟಿ/ಪಿಬಿ/254/ 2024–25, ದಿನಾಂಕ: 29.07.2024	ರೂ.59.02 ಲಕ್ಷಗಳು / ರೂ.1.19 ಲಕ್ಷಗಳು		
11		ಬೆಂಜಮಂ/ಇಡಬ್ಲ್ಯೂ(ಎನ್)ಕೆಟಿ/ಪಿಬಿ/255/ 2024–25, ದಿನಾಂಕ: 29.07.2024	ರೂ.93.45 ಲಕ್ಷಗಳು / ರೂ.1.87 ಲಕ್ಷಗಳು		
12		ಬೆಂಜಮಂ/ಇಡಬ್ಲ್ಯೂ(ಎನ್)ಕೆಟಿ/ಪಿಬಿ/253/ 2024–25, ದಿನಾಂಕ: 29.07.2024	ರೂ.93.70 ಲಕ್ಷಗಳು / ರೂ.1.88 ಲಕ್ಷಗಳು		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ತ್ಯಾ.ನೀ.ನಿ.–ಎನ್) ಕೆ&ಟಿ ವ್ಯಾಲಿ

ಮುಖ್ಯ ಅಭಿಯಂತರರ ಕಚೇರಿ (ಪೂರ್ವ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560009

ಕ್ರ. ಸಂ.	ವಿಭಾಗ	ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ (ರೂ.)	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
13	ಪೂರ್ವ–2	ಬೆಂಜಮಂ/2024–25/ಡಬ್ಲ್ಯೂಎಸ್/ ವರ್ಕ್_ಇಂಡೆಂಟ್ 568	ರೂ.43,76,000/– / ರೂ.1,03,300/–	06.08.2024ರ ಸಂಜೆ 4:00 ಗಂಟೆಯವರೆಗೆ	08.08.2024ರ ಸಂಜೆ 4:00 ಗಂಟೆಯ ನಂತರ
14		ಬೆಂಜಮಂ/2024–25/ಡಬ್ಲ್ಯೂಎಸ್/ ವರ್ಕ್_ಇಂಡೆಂಟ್ 577	ರೂ.63,55,000/– / ರೂ.1,50,000/–		

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು (ಪೂರ್ವ)–2

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತ ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಮೇಲಿನಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
DIPR/CP/BCPL/1128/2024-25

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್‌ಗಾಗಿ ಆಹ್ವಾನ (ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಜಲಮಂಡಳಿಯು ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಏಜೆನ್ಸಿಯಿಂದ ದ್ವಿ–ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಮುಖ್ಯ ಅಭಿಯಂತರರ ಕಚೇರಿ (ಉತ್ತರ), 2ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560 009.

ಕ್ರ ಸಂ.	ಕಾಮಗಾರಿಗಳ ಹೆಸರು	ಟೆಂಡರ್‌ಗಿಟ್ಟ ಮೊತ್ತ / ಇಎಂಡಿ ಮೊತ್ತ
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)– I /ಉಮುಅ(ನಿ) -II/ತಾಂಸ(ನಿ)/1827/2024–25 ದಿನಾಂಕ: 29.07.2024	
1.	(ಸಕಾನಿಅ ಕೇಂದ್ರ–1–2) ಉಪ–ವಿಭಾಗದ ಫ್ರೇಜರ್‌ಟೌನ್ ಸೇವಾಠಾಣೆಯಡಿ ಬರುವ ನೇತಾಜಿ ರಸ್ತೆಯಲ್ಲಿ ಕೆಂಪ್ ರಸ್ತೆಯಿಂದ ಎಂಎಂ ರಸ್ತೆ ಜಂಕ್ಷನ್‌ವರೆಗೆ 100ಮಿಮೀ ವ್ಯಾಸದ (ಎರಡು ಬದಿ) 200ಮಿಮೀ ವ್ಯಾಸದ (ಒಂದು ಬದಿ) ಡಿಐ ಕೊಳವೆಮಾರ್ಗ ಮತ್ತು 300ಮಿಮೀ ವ್ಯಾಸದ (ಕ್ರಾಸಿಂಗ್ ಮಾತ್ರ) ಎಂಎಸ್ ನೀರು ಸರಬರಾಜು ಮಾರ್ಗ ಒದಗಿಸುವುದು ಮತ್ತು ಅಳವಡಿಸವುದು ಹಾಗೂ ನೇತಾಜಿ ರಸ್ತೆಯಲ್ಲಿ ಕೆಂಪ್ ರಸ್ತೆಯಿಂದ ದೊಡ್ಡಿ ವೃತ್ತದವರೆಗೆ 450ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.	₹ 269.36 ಲಕ್ಷಗಳು / ₹ 4.76 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)– I /ಉಮುಅ(ನಿ) -II/ತಾಂಸ(ನಿ)/1828/2024–25 ದಿನಾಂಕ: 29.07.2024	
2.	(ಸಕಾನಿಅ ಕೇಂದ್ರ–1–2) ಉಪ–ವಿಭಾಗದ ಪಿಳ್ಳಣ್ಣ ಗಾರ್ಡನ್–2 ಸೇವಾಠಾಣೆಯಡಿ ಬರುವ ಲೇಜರ್ ರಸ್ತೆಯಲ್ಲಿ ಹೆಣ್ಣೂರು ಮುಖ್ಯರಸ್ತೆಯಿಂದ ಪಾಟರಿ ರಸ್ತೆಯವರೆಗೆ (ಎರಡು ಬದಿ) 100ಮಿಮೀ, 200ಮಿಮೀ ಡಿಐ ಕೊಳವೆಮಾರ್ಗ ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.	₹ 96.02 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)– I /ಉಮುಅ(ನಿ) -II/ತಾಂಸ(ನಿ)/1829/2024–25 ದಿನಾಂಕ: 29.07.2024	
3.	(ಸಕಾನಿಅ ಕೇಂದ್ರ–1–2) ಉಪ–ವಿಭಾಗದ ಫ್ರೇಜರ್‌ಟೌನ್ ಸೇವಾಠಾಣೆಯಡಿ ಬರುವ ಎಂಎಂ ರಸ್ತೆಯಲ್ಲಿ ಪುಲಿಕೇಶಿನಗರ ಪೊಲೀಸ್ ಠಾಣೆಯಿಂದ ಗಣಪತಿ ದೇವಸ್ಥಾನ ಎಂಎಂ ರಸ್ತೆಯವರೆಗೆ 100ಮಿಮೀ (ಎರಡು ಬದಿ), 150ಮಿಮೀ ವ್ಯಾಸದ (ಒಂದು ಬದಿ) ಡಿಐ ಕೊಳವೆಮಾರ್ಗ ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.	₹ 104.4 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)– I /ಉಮುಅ(ನಿ) -II/ತಾಂಸ(ನಿ)/18307/2024–25 ದಿನಾಂಕ: 29.07.2024	
4.	(ಸಕಾನಿಅ ಕೇಂದ್ರ–1–2) ಉಪ–ವಿಭಾಗದ ಫ್ರೇಜರ್‌ಟೌನ್ ಸೇವಾಠಾಣೆಯಡಿ ಬರುವ ಮಾಸ್ಕ್ ರಸ್ತೆಯಲ್ಲಿ ಕೋಲ್ಸ್ ರಸ್ತೆಯಿಂದ ಎಂಎಂ ರಸ್ತೆಯವರೆಗೆ 100ಮಿಮೀ, 150ಮಿಮೀ ವ್ಯಾಸದ ಡಿಐ ಕೊಳವೆಮಾರ್ಗ ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.	₹ 105.55 ಲಕ್ಷಗಳು / ₹ 2.00 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)– I /ಉಮುಅ(ನಿ) -II/ತಾಂಸ(ನಿ)/1831/2024–25 ದಿನಾಂಕ: 29.07.2024	
5.	(ಸಕಾನಿಅ ಕೇಂದ್ರ–1–2) ಉಪ–ವಿಭಾಗದ ಪಿಳ್ಳಣ್ಣ ಗಾರ್ಡನ್–2 ಸೇವಾಠಾಣೆಯಡಿ ಬರುವ ನಾಗವಾರ ಮುಖ್ಯರಸ್ತೆಯಲ್ಲಿ ಬೆಂಜಮಂ ವಾಟರ್ ಟ್ಯಾಂಕರ್‌ನಿಂದ ಎಎಂಸಿ ರಸ್ತೆಯಲ್ಲಿ ನಾಗವಾರ ಮುಖ್ಯರಸ್ತೆ, ರೈಲು ಹಳಿಯವರೆಗೆ 100ಮಿಮೀ, 150ಮಿಮೀ ಡಿಐ ಕೊಳವೆಮಾರ್ಗ ಮತ್ತು 300ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.	₹ 252.73 ಲಕ್ಷಗಳು / ₹ 4.47 ಲಕ್ಷಗಳು
	ಐಎಫ್‌ಟಿ ಸಂ: ಬೆಂಜಮಂ/ಪ್ರಮುಅ/ಮುಅ(ಉ)/ಅಮುಅ/(ಉ)– I /ಉಮುಅ(ನಿ) -II/ತಾಂಸ(ನಿ)/1832/2024–25 ದಿನಾಂಕ: 29.07.2024	
6.	(ಸಕಾನಿಅ ಕೇಂದ್ರ–1–2) ಉಪ–ವಿಭಾಗದ ಪಿಳ್ಳಣ್ಣ ಗಾರ್ಡನ್–1 ಸೇವಾಠಾಣೆಯಡಿ ಬರುವ ಎನ್‌ಪಿ ಕಾರ್ಖಾನೆ ರಸ್ತೆಯಲ್ಲಿ ದೊಡ್ಡಣ್ಣನಗರ ಅಂಬೇಡ್ಕರ್ ಉದ್ಯಾನವನ ಬಳಿಯಿಂದ ಕಾವಲ್‌ಭೈರಸಂದ್ರ ಬಸ್ ನಿಲ್ದಾಣದವರೆಗೆ 100ಮಿಮೀ, 150ಮಿಮೀ, 200ಮಿಮೀ ವ್ಯಾಸದ ಡಿಐ ಕೊಳವೆಮಾರ್ಗ ಮತ್ತು 300ಮಿಮೀ ವ್ಯಾಸದ ಎಂಎಸ್ ನೀರು ಸರಬರಾಜು ಮಾರ್ಗವನ್ನು ಒದಗಿಸುವುದು ಮತ್ತು ಅಳವಡಿಸುವ ಕಾಮಗಾರಿ.	₹ 291.33 ಲಕ್ಷಗಳು / ₹ 5.16 ಲಕ್ಷಗಳು

ಈ ಮೇಲ್ಕಂಡ ಕಾಮಗಾರಿಗಳಿಗೆ ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಸಲ್ಲಿಸುವ ದಿನಾಂಕ **14.08.2024**ರ ಸಂಜೆ **4:00** ಗಂಟೆಯವರೆಗೆ. ಬಿಡ್‌ಗಳನ್ನು ದಿನಾಂಕ **16.08.2024**ರ ಸಂಜೆ **4:00** ಗಂಟಯ ನಂತರ ತೆರೆಯಲಾಗುವುದು.

ಸಹಿ/–
ಮುಖ್ಯ ಅಭಿಯಂತರರು (ಉತ್ತರ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಗಳನ್ನು https://kppp.karnataka.gov.in ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಡಿ.ಐ.ಪಿ.ಆರ್/ಸ್ಪೆಕ್ಟ್ರಮ್/1133/2024–25

ಭಾರತದ ರಮಿತಾ ಜಿಂದಾಲ್

ಭಾರತದ ಅರ್ಜುನ್ ಬಬುತಾ –ಪಿಟಿಐ ಚಿತ್ರಗಳು

10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡವೂ ಕಂಚಿನ ಪದಕ ಸುತ್ತಿಗೆ

ಎರಡನೇ ಪದಕಕ್ಕೆ ಮನು ಗುರಿ

ಪ್ರಜಾವಾಣಿ ವಾರ್ತೆ

ಪ್ಯಾರಿಸ್: ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಪದಕ ಜಯಿಸಿದ ಭಾರತದ ಮೊದಲ ಮಹಿಳೆಯೆಂಬ ಹೆಗ್ಗಳಿಕೆ ಗಳಿಸಿರುವ ಮನು ಭಾಕರ್ ಅವರ ಸಾಧನೆಯ ಹಸಿವು ಇನ್ನೂ ತಣಿದಿಲ್ಲ.

ಭಾನುವಾರ ಮಹಿಳೆಯರ 10 ಮೀ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ತಾವು ಕಂಚು ಜಯಿಸಿದ್ದ ಶತೋಹು ಶೂಟಿಂಗ್ ರೇಂಜ್‌ನಲ್ಲಿ ಮತ್ತೊಂದು ಪದಕವನ್ನು ಕೊರಳಿಗೇರಿಸಿಕೊಳ್ಳುವ ಛಲ ಅವರದ್ದು. ಈ ಹಾದಿಯಲ್ಲಿ 22 ವರ್ಷದ ಮನು ಅವರು ಸರಬ್ಜೋತ್ ಸಿಂಗ್ ಜೊತೆಗೂಡಿ 10 ಮೀ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಕಂಚಿನ ಪದಕ ಪ್ಲೇ ಆಫ್‌ಗೆ ಪ್ರವೇಶಿಸಿದ್ದಾರೆ.

ಮಂಗಳವಾರ ನಡೆಯಲಿರುವ ಪೈಪೋಟಿಯಲ್ಲಿ ಭಾರತದ ಜೋಡಿಯು ದಕ್ಷಿಣ ಕೊರಿಯಾದ ಯೆ ಜಿನ್ ಒಹ್ ಮತ್ತು ವೊನೊಹೊ ಲೀ ಅವರನ್ನು ಎದುರಿಸಲಿದೆ. ಇದರಲ್ಲಿ ಜಯಿಸಿದರೆ ಮನು ಭಾಕರ್ ಅವರು ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿದ ಭಾರತದ ಮೊದಲ ಕ್ರೀಡಾಪಟುವಾಗಲಿದ್ದಾರೆ.

ಸೋಮವಾರ ನಡೆದ ಅರ್ಹತಾ ಸುತ್ತಿನಲ್ಲಿ ಮನು ಅಮೋಘ ಸಾಮರ್ಥ್ಯ ಮೆರೆದರು. ತಮ್ಮ ಆರಂಭಿಕ 10 ಶಾಟ್‌ಗಳಲ್ಲಿ ಅವರು ಎಂಟು ಬಾರಿ 10 ಮತ್ತು ಎರಡು 9ರ ಸ್ಕೋರ್ ಮಾಡಿದರು. ಎರಡನೇಯ ಸುತ್ತಿನಲ್ಲಿಯೂ ಇದನ್ನೂ ಪುನರಾವರ್ತಿಸಿದರು. ಆದರೆ ಅಂತಿಮ ಸುತ್ತಿನಲ್ಲಿ ತುಸು ಏಕಾಗ್ರತೆ ಕಳೆದುಕೊಂಡರು. ಅದರಿಂದಾಗಿ ಐದು ಸಲ 10 ಮತ್ತು 9ರ ಅಂಕಗಳನ್ನು ಗಳಿಸಿದರು.

ಉತ್ತಮ ಆರಂಭ ಕಾಣದ ಸರಬ್ಜೋತ್ ಸಿಂಗ್ ಅವರಿಗೆ ಮನು ಉತ್ತಮ ಬೆಂಬಲ ನೀಡಿದರು. ಆರಂಭಿಕ ಸುತ್ತಿನಲ್ಲಿ ಐದು ಬಾರಿ 9 ಮತ್ತು 10 ಸ್ಕೋರ್ ಮಾಡಿದರು. ಎರಡನೇ ಸುತ್ತಿನಲ್ಲಿ ಸತತ ಏಳು ಬಾರಿ 10 ಸ್ಕೋರ್ ಗಳಿಸಿದರು. ಉಳಿದಂತೆ 9 ಮತ್ತು 8 ಅಂಕ ಪಡೆದರು. ಆದರೆ ಅಂತಿಮ ಸುತ್ತಿನಲ್ಲಿ ಅವರು ಮಿಂಚಿದರು. ಏಳು ಬಾರಿ 10 ಮತ್ತು ಮೂರು ಸಲ 9 ಅಂಕಗಳನ್ನು ಕಲೆಹಾಕಿದರು. ಇದರಿಂದಾಗಿ ಪದಕ ಜಯದ ಕನಸು ಜೀವಂತವಾಗುಳಿಯಿತು.

ಭಾರತದ ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್ –ಎಪಿ/ಪಿಟಿಐ ಚಿತ್ರ

ಮುಖ್ಯಾಂಶಗಳು

- ಮಿಶ್ರ ತಂಡದಲ್ಲಿ ಸರಬ್ಜೋತ್ ಸಿಂಗ್ ಅವರೊಂದಿಗೆ ಕಣಕ್ಕಿಳಿದ ಮನು
- ಮಂಗಳವಾರ ಕೊರಿಯಾ ತಂಡವನ್ನು ಎದುರಿಸಲಿರುವ ಭಾರತ

ಅರ್ಜುನ್‌ಗೆ 4ನೇ ಸ್ಥಾನ; ರಮಿತಾಗೆ ನಿರಾಸೆ

ಪದಕ ಜಯದ ನಿರೀಕ್ಷೆ ಮೂಡಿಸಿದ್ದ ಭಾರತದ ಇನ್ನಿಬ್ಬರು ಶೂಟರ್‌ಗಳಾದ ಅರ್ಜುನ್ ಬಬುತಾ ಮತ್ತು ರಮಿತಾ ಜಿಂದಾಲ್ ಅವರು ನಿರಾಸೆ ಅನುಭವಿಸಿದರು.

ಪುರುಷರ 10 ಮೀ ಏರ್ ರೈಫಲ್ ಫೈನಲ್‌ನಲ್ಲಿ ಅರ್ಜುನ್ ಅವರಿಗೆ ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ. ಅಲ್ಪ ಅಂತರದಲ್ಲಿ ಪದಕ ಕೈತಪ್ಪಿತು. ನಾಲ್ಕನೇ ಸ್ಥಾನ ಪಡೆದರು. ಇದೇ ಸ್ಪರ್ಧೆಯ ಮಹಿಳೆಯರ ವಿಭಾಗದಲ್ಲಿ ರಮಿತಾ ಅವರು ಏಳನೇ ಸ್ಥಾನ ಪಡೆದರು.

ಪುರುಷರ ವಿಭಾಗದ ಶ್ರೇಷ್ಠ ದರ್ಜೆಯ ಫೈನಲ್ ಸುತ್ತಿನಲ್ಲಿ ಬಹಳ ಹೊತ್ತಿನವರೆಗೆ ಅರ್ಜುನ್ ಅವರು ಅಗ್ರ ಮೂರರಲ್ಲಿದ್ದರು. ಆರಂಭದಿಂದಲೂ ಉತ್ತಮವಾಗಿ ಗುರಿ ಹಿಡಿದ ಅರ್ಜುನ್ ಅಪಾರ ನಿರೀಕ್ಷೆ ಮೂಡಿಸಿದ್ದರು. ಚಿನ್ನದ ಪದಕ ವಿಜೇತ ಲಿಹಾವೊ ಶೆಂಗ್ ಅವರಿಗೆ ನಿಕಟ ಪೈಪೋಟಿಯೊಡ್ಡಿದ್ದರು. 25 ವರ್ಷದ ಅರ್ಜುನ್ 208.4 ಅಂಕ ಗಳಿಸಿದರು.

ಚೀನಾದ ಲಿಹಾವೊ ಶೆಂಗ್ (252.2), ಸ್ವೀಡನ್‌ನ ವಿಕ್ಟರ್ ಲಿಂಡ್‌ಗ್ರೇನ್ (251.4) ಮತ್ತು ಕ್ರೊವೇಷಿಯಾದ ಮಿರಾನ್ ಮೆರಿಸಿಚ್ (230.0) ಕ್ರಮವಾಗಿ ಚಿನ್ನ, ಬೆಳ್ಳಿ ಮತ್ತು ಕಂಚಿನ ಪದಕ ಜಯಿಸಿದರು.

ನಿರಾಸೆ ಮೂಡಿಸಿದ ಭಾರತದ ಬಿಲ್ಗಾರರು

ಪ್ಯಾರಿಸ್ (ಪಿಟಿಐ): ಭಾರತದ ಪುರುಷರ ಆರ್ಚರಿ ರಿಕರ್ವ್ ತಂಡವೂ ಒಲಿಂಪಿಕ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಹಂತವನ್ನು ದಾಟಲು ವಿಫಲವಾಯಿತು. ಸೋಮವಾರ ತರುಣದೀಪ್ ರಾಯ್, ಧೀರಜ್ ಬೊಮ್ಮದೇವರ ಮತ್ತು ಪ್ರವೀಣ್ ಜಾಧವ್ ಅವರನ್ನು ಒಳಗೊಂಡ ಪುರುಷರ ತಂಡ 2–6 ಅಂತರದಲ್ಲಿ ಟರ್ಕಿಯ ವಿರುದ್ಧ ಸೋತು ಹೊರಬಿತ್ತು.

ಭಾರತದ ಮಹಿಳೆಯರ ತಂಡವು ಭಾನುವಾರ ಕ್ವಾರ್ಟರ್ ಫೈನಲ್‌ನಲ್ಲಿ ನೆದರ್ಲೆಂಡ್ಸ್ ತಂಡದೆದುರು ನಿರಾಸೆ ಅನುಭವಿಸಿತ್ತು.

ನಾಲ್ಕನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ಅನುಭವಿ ತರುಣದೀಪ್ ಮತ್ತು ಯುವ ತಾರೆಗಳಾದ ಧೀರಜ್ ಮತ್ತು ಪ್ರವೀಣ್ ಅವರು ಪದಕದ ಭರವಸೆಯನ್ನು ಮೂಡಿಸಿದ್ದರು. ರ‍್ಯಾಂಕಿಂಗ್ ಸುತ್ತಿನಲ್ಲಿ ಮೂರನೇ ಸ್ಥಾನದೊಂದಿಗೆ ಕ್ವಾರ್ಟರ್ ಫೈನಲ್ ನೇರ ಅರ್ಹತೆ ಪಡೆದಿತ್ತು. ಆದರೆ, ಟರ್ಕಿ ವಿರುದ್ಧ ಬಾಣ ಪ್ರಯೋಗದಲ್ಲಿ ನಿರೀಕ್ಷೆಯ ಮಟ್ಟ ತಲುಪಲಿಲ್ಲ. ಭಾರತ 53-57, 52-55, 55-54, 54-58ರಿಂದ ಪರಾಭವಗೊಂಡಿತು.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಭಾರತ ಮೊದಲ ಎರಡು ಸೆಟ್‌ಗಳನ್ನು ಸೋತ ನಂತರ ಮೂರನೇ ಸೆಟ್‌ನಲ್ಲಿ ಮೇಲುಗೈ ಸಾಧಿಸಿತು. ಆದರೆ, ಕೊನೆಯ ಸೆಟ್‌ನಲ್ಲಿ ಟರ್ಕಿಯ ಯುವ ಬಿಲ್ಗಾರರು ನಿಖರ ಗುರಿಯೊಂದಿಗೆ ಪ್ರಾಬಲ್ಯ ಮೆರೆದರು.

ದೌರ್ಭಾಗ್ಯ: ಈ ಸೋಲು ಭಾರತದ ಆರ್ಚರಿಗೆ ದೌರ್ಭಾಗ್ಯದಾಯಕ ಎಂದು ಒಲಿಂಪಿಯನ್ ಹಾಗೂ ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತ ರಾಹುಲ್ ಬ್ಯಾನರ್ಜಿ ಹೇಳಿದ್ದಾರೆ.

ಬಾಣ ಪ್ರಯೋಗ ಮಾಡುತ್ತಿರುವ ಧೀರಜ್ ಬೊಮ್ಮದೇವರ (ಬಲ). ತರುಣದೀಪ್ (ಮಧ್ಯ), ಪ್ರವೀಣ್ ಜಾಧವ್ ಚಿತ್ರದಲ್ಲಿದ್ದಾರೆ –ಎಎಫ್‌ಪಿ ಚಿತ್ರ

ದಕ್ಷಿಣ ಕೊರಿಯಾಕ್ಕೆ ಮತ್ತೊಂದು ಸ್ವರ್ಣ

ದಕ್ಷಿಣ ಕೊರಿಯಾ ಪುರುಷರ ತಂಡ ಆರ್ಚರಿ ಫೈನಲ್‌ನಲ್ಲಿ 5–1 ರಿಂದ ಆತಿಥೇಯ ಫ್ರಾನ್ಸ್ ತಂಡವನ್ನು ಸೋಲಿಸಿ ಸ್ವರ್ಣ ಗೆದ್ದುಕೊಂಡಿತು. ಇದು ಕೊರಿಯಾ ತಂಡ ಹಾಲಿ ಒಲಿಂಪಿಕ್ಸ್‌ನಲ್ಲಿ ಗೆದ್ದ ಐದನೇ ಚಿನ್ನ. ಫ್ರಾನ್ಸ್ ಬೆಳ್ಳಿ ಹಾಗೂ ಟರ್ಕಿ ಕಂಚಿನ ಪದಕ ಗೆದ್ದುಕೊಂಡವು.

ಟ್ರಯಥ್ಲಾನ್: ಈಜು ಅಭ್ಯಾಸ ಮತ್ತೆ ರದ್ದು

ಪ್ಯಾರಿಸ್ (ಎಪಿ): ಸೆನ್ ನದಿಯ ನೀರಿನ ಗುಣಮಟ್ಟ ಕಳವಳಕ್ಕೆ ಕಾರಣವಾಗಿದ್ದು, ನದಿಯಲ್ಲಿ ಸೋಮವಾರ ಬೆಳಿಗ್ಗೆ ನಡೆಯಬೇಕಾಗಿದ್ದ ಟ್ರಯಥ್ಲಾನ್‌ನ ಈಜು ಅಭ್ಯಾಸ ಅಧಿಕಾರಿಗಳು ರದ್ದುಗೊಳಿಸಿದರು. ಭಾನುವಾರವೂ ಈಜು ಅಭ್ಯಾಸ ರದ್ದುಗೊಳಿಸಲಾಗಿತ್ತು.

ಸ್ಪರ್ಧಿಗಳಿಗೆ ಇಲ್ಲಿನ ವಾತಾವರಣಕ್ಕೆ ಒಗ್ಗಿಕೊಳ್ಳಲು ಅನುಕೂಲವಾಗುವಂತೆ ಈಜು ಅಭ್ಯಾಸಕ್ಕೆ ಅವಕಾಶ ಕಲ್ಪಿಸಲು ಅಧಿಕಾರಿಗಳು ಮುಂದಾಗಿದ್ದರು.

ಮಂಗಳವಾರ ಸ್ಪರ್ಧೆಗಳು ಆರಂಭ ವಾಗುವ ಸಮಯಕ್ಕೆ ನದಿಯ ನೀರಿನ ಗುಣಮಟ್ಟ ಸಹಜ ಸ್ಥಿತಿಗೆ ಮರಳಲಿದೆ ಎಂಬ ವಿಶ್ವಾಸ ಆಯೋಜಕರದ್ದು. ತಾಪಮಾನ ಏರಿಕೆಯಾಗಿ ನೀರು ತಿಳಿಗೊಳ್ಳಬಹುದು ಎಂಬ ವಿಶ್ವಾಸದಲ್ಲಿ ವಿಶ್ವ ಟ್ರಯಥ್ಲಾನ್ ಮತ್ತು ಅಧಿಕಾರಿಗಳು ಇದ್ದಾರೆ. ನೀರಿನ ಗುಣಮಟ್ಟ ಯೋಗ್ಯವಾಗಿಲ್ಲದ ಕಾರಣ ಶತಮಾನಕ್ಕೂ ಹೆಚ್ಚಿನ ಸಮಯದಿಂದ ಈ ನದಿಯಲ್ಲಿ ಈಜುವುದನ್ನು ನಿಷೇಧಿಸಲಾಗಿತ್ತು. ಆದರೆ ಒಲಿಂಪಿಕ್ಸ್ ಉದ್ಘಾಟನೆ, ಈಜು ಸ್ಪರ್ಧೆ ನಡೆಸುವ ಉದ್ದೇಶದಿಂದ ನದಿಯನ್ನು ಸ್ವಚ್ಛಗೊಳಿಸಲು ಆಯೋಜಕರು ನೂರಾರು ಕೋಟಿ ಹಣ ವೆಚ್ಚ ಮಾಡಿದ್ದಾರೆ.

ಕೇರಳದಿಂದ ಸೈಕಲ್‌ನಲ್ಲಿ 22 ಸಾವಿರ ಕಿ.ಮೀ ದೂರ ಕ್ರಮಿಸಿದ ಅಭಿಮಾನಿ

ಚೋಪ್ರಾಗಾಗಿ ಪ್ಯಾರಿಸ್‌ಗೆ ಪಯಣ

ಪ್ಯಾರಿಸ್ (ಪಿಟಿಐ): ಭಾರತದ ‘ಚಾಂಪಿಯನ್ ಅಥ್ಲೀಟ್’ ನೀರಜ್ ಚೋಪ್ರಾ ಅವರನ್ನು ಒಲಿಂಪಿಕ್ ಕೂಟದಲ್ಲಿ ವಿಶೇಷ ಅಭಿಮಾನಿಯೊಬ್ಬರು ಬೆಂಬಲಿಸಲಿದ್ದಾರೆ.

ಫಾಯಿಸ್ ಅಶ್ರಫ್ ಅಲಿ ಎಂಬ ಅಭಿಮಾನಿಯು ಕೇರಳದ ಕಲ್ಲಿಕೋಟೆಯಿಂದ ಪ್ಯಾರಿಸ್‌ಗೆ ಸೈಕಲ್‌ನಲ್ಲಿ ತೆರಳಿದ್ದಾರೆ. ಅವರು ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸುಮಾರು 22 ಸಾವಿರ ಕಿ.ಮೀ ಸೈಕ್ಲಿಂಗ್ ಮಾಡಿದ್ದಾರೆ. 2022ರ ಆಗಸ್ಟ್ 15ರಂದು ಅವರು ಪ್ರಯಾಣ ಆರಂಭಿಸಿದ್ದರು. ಒಟ್ಟು 30 ದೇಶಗಳ ಮೂಲಕ ಪ್ರಯಾಣಿಸಿ ಫ್ರಾನ್ಸ್ ರಾಜಧಾನಿಯನ್ನು ತಲುಪಿದ್ದಾರೆ.

‘ಭಾರತದಿಂದ ಲಂಡನ್ ಶಾಂತಿ ಮತ್ತು ಏಕತೆ’ ಎಂಬ ಸಂದೇಶದೊಂದಿಗೆ ಅವರು ಸೈಕ್ಲಿಂಗ್ ಮಾಡಿದ್ದಾರೆ. ಹೋದ ವರ್ಷ ಅವರು 17 ದೇಶಗಳಿಗೆ ಭೇಟಿ ನೀಡಿದ್ದರು. ಅದರ ನಡುವೆ ಆಗಸ್ಟ್‌ನಲ್ಲಿ ಬುಡಾಪೆಸ್ಟ್‌ನಲ್ಲಿ ವಿಶ್ರಾಂತಿಗಾಗಿ ತಂಗಿದ್ದರು. ಆ ಸಂದರ್ಭದಲ್ಲಿ ತಮ್ಮ ನೆಚ್ಚಿನ ಅಥ್ಲೀಟ್, ಟೋಕಿಯೊ ಒಲಿಂಪಿಕ್ಸ್‌ನ ಜಾವೆಲಿನ್ ಥ್ರೋ ಚಿನ್ನದ ಪದಕವಿಜೇತ ನೀರಜ್ ಚೋಪ್ರಾ ಅವರೂ ಅದೇ ಊರಿನಲ್ಲಿದ್ದರು. ಆಗ ಅಲ್ಲಿ ನಡೆದ ವಿಶ್ವ ಅಥ್ಲೆಟಿಕ್ಸ್‌ನಲ್ಲಿ ನೀರಜ್ ಚಿನ್ನ ಜಯಿಸಿದ್ದರು.

‘ಬುಡಾಪೆಸ್ಟ್‌ನಲ್ಲಿ ನೀರಜ್ ಅವರಿದ್ದ ವಿಷಯವನ್ನು ಕೇರಳದ ಕೋಚ್ ಒಬ್ಬರು ನನಗೆ ಕರೆ ಮಾಡಿ ತಿಳಿಸಿದರು. ಅವರನ್ನು ಭೇಟಿ ಮಾಡಲು ಪ್ರಯತ್ನಿಸಿದೆ. ಸಫಲವೂ ಆದೆ. ಕೆಲವು ನಿಮಿಷ ಮಾತನಾಡುವ ಅವಕಾಶ ಸಿಕ್ಕಿತ್ತು. ನೀವು ಹೇಗಿದ್ದರೂ ಲಂಡನ್‌ಗೆ ತೆರಳುತ್ತಿದ್ದೀರಿ. ಪ್ಯಾರಿಸ್ ಒಲಿಂಪಿಕ್ಸ್‌ಗೂ ಬರಬಹುದಲ್ಲವೇ ಎಂದು ನೀರಜ್ ಕೇಳಿದ್ದರು. ನಾನು ಕೂಡಲೇ ಒಪ್ಪಿದ್ದೆ ಮತ್ತು ನನ್ನ ಪ್ರಯಾಣದ ಯೋಜನೆಯನ್ನು ಪ್ಯಾರಿಸ್‌ಗೆ ವಿಸ್ತರಿಸಿದೆ. ವೀಸಾ ಗಳಿಸುವಲ್ಲಿಯೂ ಸಫಲನಾದೆ’ ಎಂದು ಸಂತಸ ವ್ಯಕ್ತಪಡಿಸಿದರು.

‘ನಾನು ಇಲ್ಲಿ ನೀರಜ್ ಅವರನ್ನು ಭೇಟಿಯಾಗಲು ಬಹಳ ಉತ್ಸುಕನಾಗಿರುವೆ. ಪಿ.ಟಿ. ಉಷಾ (ಐಒಎ ಮುಖ್ಯಸ್ಥೆ) ಅವರಲ್ಲಿ ಮನವಿಯನ್ನೂ ಸಲ್ಲಿಸಿರುವೆ. ನೀರಜ್ ಮತ್ತೊಮ್ಮೆ ಐತಿಹಾಸಿಕ ಸಾಧನೆ ಮಾಡುವುದನ್ನು ನೋಡಲು ನಾನಿಲ್ಲಿದ್ದೇನೆ. ಅವರನ್ನು ಸ್ಪರ್ಧೆಯ ಸಂದರ್ಭದಲ್ಲಿ (ಆ. 8) ಹುರಿದುಂಬಿಸುತ್ತೇನೆ’ ಎಂದು ಅಶ್ರಫ್ ಅಲಿ ಹೇಳಿದರು.

ಅವರು ತಮ್ಮೊಂದಿಗೆ ಸ್ಲೀಪಿಂಗ್ ಬ್ಯಾಗ್ ಮತ್ತು ಮ್ಯಾಟ್ ಇಟ್ಟುಕೊಂಡಿದ್ದಾರೆ. ಅವುಗಳೂ ಸೇರಿದಂತೆ ಕೆಲವು ಸರಂಜಾಮುಗಳ ಚೀಲವಿದೆ. ಒಟ್ಟು 50 ಕೆ.ಜಿ.ಯಷ್ಟು ತೂಕವನ್ನು ಸೈಕಲ್ ಮೇಲೆ ಹೇರಿಕೊಂಡು ಪ್ರಯಾಣಿಸಿದ್ದಾರೆ.

‘ನಾನು ಯಾವುದೇ ದೇಶದಲ್ಲಿಯೂ ಹೋಟೆಲ್‌ನಲ್ಲಿ ತಂಗಿಲ್ಲ. ಮಾರ್ಗಮಧ್ಯೆದಲ್ಲಿ ಕೆಲವು ಪ್ರಾಯೋಜಕರು ನೀಡಿದ ಸ್ಥಳಗಳಲ್ಲಿ ಇಳಿದುಕೊಳ್ಳುತ್ತೇನೆ. ಎರಡು ದೇಶಗಳ ಗಡಿ ದಾಟಲು ಮಾತ್ರ ನನಗೆ ವೀಸಾ ಬೇಕು. ಸೈಕ್ಲಿಸ್ಟ್ ಗಳಿಗೆ ಬೇರೆ ದಾಖಲೆಪತ್ರಗಳ ಅಗತ್ಯವಿಲ್ಲ’ ಎಂದು ಹೇಳಿದರು.

‘ದಾರಿಯುದ್ದಕ್ಕೂ ಜನರು ತೋರಿಸಿದ ಪ್ರೀತಿ ಮತ್ತು ನೀಡಿದ ಸತ್ಕಾರಗಳು ಅವಿಸ್ಮರಣೀಯ. ಆದ್ದರಿಂದ ನನಗೆ ಯಾವುದೇ ರೀತಿಯ ಅನಾರೋಗ್ಯ ಕಾಡಲಿಲ್ಲ’ ಎಂದೂ ಹೇಳಿದರು. ಹೋದ ತಿಂಗಳು ಅಮೆರಿಕ ತಲುಪಿದಾಗ ಕ್ರಿಕೆಟಿಗರಾದ ಕ್ರಿಸ್ ಗೇಲ್, ಹರಭಜನ್ ಸಿಂಗ್ ಮತ್ತು ಸುರೇಶ್ ರೈನಾ ಅವರನ್ನೂ ಭೇಟಿಯಾಗಿದ್ದರು.

ಅಶ್ರಫ್ ಅಲಿ ಅವರು ವೃತ್ತಿಯಿಂದ ಎಂಜಿನಿಯರ್ ಆಗಿದ್ದಾರೆ. ನಾಲ್ಕು ವರ್ಷಗಳ ಕಾಲ ಸೌದಿ ಅರೇಬಿಯಾದಲ್ಲಿ ಕಾರ್ಯನಿರ್ವಹಿಸಿದ್ದರು. ಹೃದ್ರೋಗಿಯಾಗಿರುವ ತಂದೆಯ ಆರೈಕೆಗಾಗಿ 2015ರಲ್ಲಿ ಕೇರಳಕ್ಕೆ ಮರಳಿದ್ದರು. ಅವರ ತಂದೆ 2018ರಲ್ಲಿ ನಿಧನರಾದರು. ಕೋಯಿಕ್ಕೋಡ್‌ನಲ್ಲಿ ಅಶ್ರಫ್ ಅವರು ತಮ್ಮ ಪತ್ನಿ (ವೈದ್ಯಕೀಯ ವೃತ್ತಿಯಲ್ಲಿದ್ದಾರೆ) ಮತ್ತು ಇಬ್ಬರು ಪುತ್ರರೊಂದಿಗೆ ನೆಲೆಸಿದ್ದಾರೆ.

ಪ್ಯಾರಿಸ್‌ನಲ್ಲಿ ಫಯಿಸ್ ಅಶ್ರಫ್ ಅಲಿ –ಫೇಸ್‌ಬುಕ್ ಖಾತೆಯ ಚಿತ್ರ

ಜೊಕೊವಿಚ್‌ಗೆ ಮಣಿದ ನಡಾಲ್

ಮೂರನೇ ಸುತ್ತಿಗೆ ಸರ್ಬಿಯಾದ ಆಟಗಾರ • ಶ್ವಾಂಟೆಕ್, ಕೊಕೊ ಮುನ್ನಡೆ

ಪ್ಯಾರಿಸ್ (ಎಎಫ್‌ಪಿ): ಸರ್ಬಿಯಾದ ನೊವಾಕ್ ಜೊಕೊವಿಚ್ ಸೋಮವಾರ ನಡೆದ ಒಲಿಂಪಿಕ್ಸ್‌ನ ಪುರುಷರ ಸಿಂಗಲ್ಸ್ ಎರಡನೇ ಸುತ್ತಿನ ಪಂದ್ಯದಲ್ಲಿ ಸ್ಪೇನ್‌ನ ರಫೆಲ್ ನಡಾಲ್ ಅವರನ್ನು ಮಣಿಸಿದರು.

ದಾಖಲೆಯ 24 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ವಿಜೇತ ಜೊಕೊವಿಚ್ ಅವರು 6–1, 6–4ರಿಂದ ನಡಾಲ್ ಅವರನ್ನು ಹಿಮ್ಮೆಟ್ಟಿಸಿದರು. 14 ಬಾರಿ ಫ್ರೆಂಚ್ ಓಪನ್ ಚಾಂಪಿಯನ್ ಆಗಿರುವ ನಡಾಲ್ 22 ಗ್ರ್ಯಾನ್‌ಸ್ಲಾಮ್ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ.

ಈ ಟೆನಿಸ್ ತಾರೆಯರ ನಡುವೆ ಇದು 60ನೇ ಮತ್ತು ಬಹುತೇಕ ಕೊನೆಯ ಮುಖಾಮುಖಿಯಾಗಿದೆ. ಅದರಲ್ಲಿ ಜೊಕೊವಿಚ್ 31 ಪಂದ್ಯಗಳನ್ನು ಗೆದ್ದಂತಾಗಿದೆ. ರೋಲ್ಯಾಂಡ್ ಗ್ಯಾರೋಸ್ ಕ್ಲೇ ಕೋರ್ಟ್‌ನಲ್ಲೇ 2006ರಲ್ಲಿ ಅವರಿಬ್ಬರು ಮೊದಲ ಬಾರಿ ಎದುರಾಗಿದ್ದರು.

‘20 ವರ್ಷಗಳ ನಂತರ ನಾವು ಮತ್ತೆ ಮುಖಾಮುಖಿಯಾಗುತ್ತೇವೆ ಎಂದು ಕನಸಿನಲ್ಲೂ ಯೋಚಿಸಿರಲಿಲ್ಲ’ ಎಂದು ಪಂದ್ಯದ ಬಳಿಕ ಜೊಕೊವಿಚ್ ಪ್ರತಿಕ್ರಿಯಿಸಿದರು.

ಸಿಂಗಲ್ಸ್‌ನಲ್ಲಿ ಸೋಲಿನ ಹೊರತಾಗಿಯೂ, ಕಾರ್ಲೋಸ್ ಅಲ್ಕರಾಜ್ ಅವರೊಂದಿಗೆ ಪುರುಷರ ಡಬಲ್ಸ್‌ನಲ್ಲಿ ಸ್ಪರ್ಧಿಸುತ್ತಿರುವ ನಡಾಲ್ ಇನ್ನೂ ಚಿನ್ನದ ಪದಕದ ಭರವಸೆಯನ್ನು ಉಳಿಸಿಕೊಂಡಿದ್ದಾರೆ.

ಇಗಾ ಶ್ವಾಂಟೆಕ್‌ಗೆ ಗೆಲುವು: ವಿಶ್ವದ ಅಗ್ರಮಾನ್ಯ ಆಟಗಾರ್ತಿ ಇಗಾ ಶ್ವಾಂಟೆಕ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಮೂರನೇ ಸುತ್ತು ಪ್ರವೇಶಿಸಿದರು.

ಪೋಲೆಂಡ್‌ನ 23 ವರ್ಷ ವಯಸ್ಸಿನ ಆಟಗಾರ್ತಿ 6–1, 6–1ರಿಂದ ಆತಿಥೇಯ ಫ್ರಾನ್ಸ್‌ನ ಡಯೇನ್ ಪೆರ್ರಿ ಅವರನ್ನು ಸುಲಭವಾಗಿ ಮಣಿಸಿದರು. ನಾಲ್ಕು ಬಾರಿಯ ಫ್ರೆಂಚ್ ಓಪನ್ ಚಾಂಪಿಯನ್ ಶ್ವಾಂಟೆಕ್ ಅವರು, ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಎರಡನೇ ಸುತ್ತಿನಲ್ಲೇ ಹೊರಬಿದ್ದಿದ್ದರು. ಅಂದು ಚೀನಾದ ವಾಂಗ್ ಕ್ಸಿಯು ವಿರುದ್ಧ ಸೋತಿದ್ದರು. ಅಮೆರಿಕದ ಕೊಕೊ ಗಾಫ್ 6-1, 6-1ರಿಂದ ಅರ್ಜೆಂಟೀನಾದ ಮರಿಯಾ ಲೌರ್ಡೆಸ್ ಕಾರ್ಲೆ ಅವರನ್ನು ಸೋಲಿಸಿ ಮೂರನೇ ಸುತ್ತು ಪ್ರವೇಶಿಸಿದರು.

ಗೆಲುವಿನ ಸಂಭ್ರಮದಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಟೆನಿಸ್‌ನಲ್ಲಿ ಭಾರತದ ಸವಾಲು ಅಂತ್ಯ

ಪ್ಯಾರಿಸ್ (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಟೆನಿಸ್ ಅಭಿಯಾನ ಒಂದೇ ದಿನದಲ್ಲಿ ಮುಕ್ತಾಯಗೊಂಡಿದೆ. ಸುಮಿತ್ ನಗಾಲ್ ಪುರುಷರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಸೋತ ಬೆನ್ನಲ್ಲೇ, ರೋಹನ್ ಬೋಪಣ್ಣ– ಎನ್. ಶ್ರೀರಾಮ್ ಬಾಲಾಜಿ ಅವರು ಡಬಲ್ಸ್‌ನಲ್ಲೂ ಹೊರಬಿದ್ದಿದ್ದಾರೆ.

ಭಾನುವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬೋಪಣ್ಣ– ಬಾಲಾಜಿ ಜೋಡಿಯು 5-7, 2-6ರ ನೇರ ಸೆಟ್‌ಗಳಿಂದ ಫ್ರಾನ್ಸ್‌ನ ಎಡ್ವರ್ಡ್ ರೋಜರ್ ವ್ಯಾಸೆಲಿನ್ ಮತ್ತು ಗೇಲ್ ಮೊನ್ಫಿಲ್ಸ್ ಅವರಿಗೆ ಶರಣಾಯಿತು. ಫ್ರೆಂಚ್ ಆಟಗಾರ ಫ್ಯಾಬಿಯನ್ ರೆಬೌಲ್ ಕೊನೆಯ ಕ್ಷಣದಲ್ಲಿ ಗಾಯಾಳಾದ ಕಾರಣ ಅವರ ಸ್ಥಾನವನ್ನು ಮೊನ್ಫಿಲ್ಸ್ ತುಂಬಿದರು.

ಟೆನಿಸ್‌ನಲ್ಲಿ ಭಾರತವು ಈತನಕ ಒಂದು ಒಲಿಂಪಿಕ್ ಪದಕ ಮಾತ್ರ ಗೆದ್ದಿದೆ. 1996ರ ಅಟ್ಲಾಂಟಾ ಕ್ರೀಡಾಕೂಟದಲ್ಲಿ ಲಿಯಾಂಡರ್ ಪೇಸ್ ಪುರುಷರ ಸಿಂಗಲ್ಸ್‌ನಲ್ಲಿ ಕಂಚನ್ನು ಕೊರಳಿಗೇರಿಸಿಕೊಂಡಿದ್ದರು. ಮೂರನೇ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ 44 ವರ್ಷದ ಬೋಪಣ್ಣ ಅವರಿಗೆ ಒಲಿಂಪಿಕ್ ಪದಕ ಗೆಲ್ಲಲು ಇದ್ದ ಕೊನೆ ಅವಕಾಶ ಮುಚ್ಚಿಹೋಯಿತು. ಬೋಪಣ್ಣ ಈಗಾಗಲೇ ಡೇವಿಸ್ ಕಪ್‌ಗೆ ವಿದಾಯ ಹೇಳಿದ್ದಾರೆ.

ರಾಷ್ಟ್ರೀಯ ಜೆರ್ಸಿಯಲ್ಲಿ ಕೊನೆಯ ಪಂದ್ಯ: ‘ಭಾರತದ ಜೆರ್ಸಿಯಲ್ಲಿ ಇದು ನನ್ನ ಕೊನೆಯ ಪಂದ್ಯವಾಗಿದೆ’ ಎಂದು ಪಂದ್ಯದ ನಂತರ ಕರ್ನಾಟಕದ ರೋಹನ್ ಬೋಪಣ್ಣ ಪ್ರತಿಕ್ರಿಯಿಸಿದರು.

22 ವರ್ಷಗಳ ದೀರ್ಘ ಕಾಲ ರಾಷ್ಟ್ರೀಯ ಜೆರ್ಸಿ ಧರಿಸಲು ಅವಕಾಶ ಸಿಕ್ಕಿದ್ದಕ್ಕೆ ಕೃತಜ್ಞತೆ ಸಲ್ಲಿಸಿರುವ ಅವರು, 2026ರಲ್ಲಿ ಜಪಾನ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳಿದ್ದಾರೆ.

ಪೋಲೆಂಡ್‌ನ ಇಗಾ ಶ್ವಾಂಟೆಕ್ ಹೊಡೆತದ ವೈಖರಿ –ಪ್ರಜಾವಾಣಿ ಚಿತ್ರ/ ಕೆ.ಎನ್. ಶಾಂತಕುಮಾರ್

ಸಾತ್ವಿಕ್–ಚಿರಾಗ್ ಪಂದ್ಯ ರದ್ದು

ಪ್ಯಾರಿಸ್ (ಪಿಟಿಐ): ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಸೋಮವಾರ ಆಡಬೇಕಿದ್ದ ಪುರುಷರ ಡಬಲ್ಸ್ ‘ಸಿ’ ಗುಂಪಿನ ಪಂದ್ಯವನ್ನು ಅವರ ಎದುರಾಳಿ ಜೋಡಿಯಲ್ಲಿ ಒಬ್ಬರಾದ ಮಾರ್ಕ್ ಲ್ಯಾಮ್ಸ್‌ಫಸ್‌ಗೆ ಗಾಯವಾದ ಕಾರಣ ರದ್ದುಗೊಳಿಸಲಾಯಿತು.

ಭಾರತೀಯ ಜೋಡಿ ಸೋಮವಾರ ಜರ್ಮನಿಯ ಲ್ಯಾಮ್ಸ್‌ಫಸ್ ಮತ್ತು ಮರ್ವಿನ್ ಸಿಡೆಲ್ ಜೋಡಿಯನ್ನು ಎದುರಿಸಬೇಕಿತ್ತು.

‘ಮಾರ್ಕ್ ಲ್ಯಾಮ್ಸ್‌ಫಸ್ ಗಾಯದ ಸಮಸ್ಯೆಯಿಂದಾಗಿ ಪ್ಯಾರಿಸ್ ಒಲಿಂಪಿಕ್ಸ್ ಬ್ಯಾಡ್ಮಿಂಟನ್ ಸ್ಪರ್ಧೆಯಿಂದ ಹಿಂದೆಸರಿದಿದ್ದಾರೆ’ ಎಂದು ಬಿಡಬ್ಲ್ಯುಎಫ್ ತಿಳಿಸಿದೆ.

ಸಾತ್ವಿಕ್–ಚಿರಾಗ್ ಜೋಡಿಯು 21-17 21-14ರಿಂದ ಫ್ರಾನ್ಸ್‌ನ ಲುಕಾಸ್ ಕಾರ್ವಿ ಮತ್ತು ರೊನನ್ ಲ್ಯಾಬರ್ ವಿರುದ್ಧ ಗೆಲ್ಲುವ ಮೂಲಕ ಅಭಿಯಾನ ಆರಂಭಿಸಿದ್ದರು.

ಭಾರತದ ಜೋಡಿ ಗುಂಪು ಹಂತದ ಕೊನೆಯ ಪಂದ್ಯವನ್ನು ಇಂಡೊನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ರಿಯಾನ್ ಆರ್ಡಿಯಾಂಟೊ ವಿರುದ್ಧ ಆಡಲಿದೆ.

ಬೆಲ್ಜಿಯಂನ ಜೂಲಿಯನ್ ಕರಾಗಿ ವಿರುದ್ಧ ಜಯ

ಪುರುಷರ ಸಿಂಗಲ್ಸ್: ಸೇನ್‌ಗೆ ಗೆಲುವು

ಪ್ಯಾರಿಸ್ (ಪಿಟಿಐ): ಲಕ್ಷ್ಯ ಸೇನ್ ಅವರು ಒಲಿಂಪಿಕ್ ಬ್ಯಾಡ್ಮಿಂಟನ್ ಸ್ಪರ್ಧೆಯ ಪುರುಷರ ಸಿಂಗಲ್ಸ್ ಗುಂಪಿನ ಪಂದ್ಯದಲ್ಲಿ ಬೆಲ್ಜಿಯಂನ ಜೂಲಿಯನ್ ಕರಾಗಿ ಅವರನ್ನು ಸೋಮವಾರ ನೇರ ಗೇಮ್‌ಗಳಿಂದ ಸೋಲಿಸಿ ಶುಭಾರಂಭ ಮಾಡಿದರು.

ಅವರು ಮೊದಲ ಪಂದ್ಯದಲ್ಲಿ ಕೆವಿನ್ ಕಾರ್ಡನ್ ವಿರುದ್ಧ ಜಯಗಳಿಸಿದ್ದರೂ, ಮೂಲಕ ತನ್ನ ಆರಂಭಿಕ ಗೆಲುವು ಅಳಿಸಿಹೋದ ನಂತರ ಹೊಸ ಆರಂಭವನ್ನು ಪಡೆದರು.

22 ವರ್ಷದ ಸೇನ್ ಅವರು 43 ನಿಮಿಷ ನಡೆದ ‘ಎಲ್’ ಗುಂಪಿನ ಪಂದ್ಯದಲ್ಲಿ 21-19, 21-14 ರಿಂದ ಕರಾಗಿ ಅವರನ್ನು ಸೋಲಿಸಿದರು.

ವಿಶ್ವ ಕ್ರಮಾಂಕದಲ್ಲಿ 18ನೇ ಸ್ಥಾನದಲ್ಲಿರುವ ಲಕ್ಷ್ಯ, ಭಾನುವಾರ ತಮ್ಮ ಮೊದಲ ಪಂದ್ಯದಲ್ಲಿ ಗ್ವಾಟೆಮಾಲದ ಕೆವಿನ್ ಕಾರ್ಡನ್ ವಿರುದ್ಧ ಗೆಲುವು ಸಾಧಿಸಿದ್ದರು. ಆದರೆ ಎಡ ಮೊಣಕೈ ಗಾಯದಿಂದಾಗಿ ಕಾರ್ಡನ್ ಒಲಿಂಪಿಕ್ಸ್‌ನಿಂದ ಹಿಂದೆ ಸರಿದರು. ಹೀಗಾಗಿ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ನಿಯಮದಂತೆ ಅವರು ಆಡಿದ ಪಂದ್ಯವನ್ನು ದಾಖಲೆಯಿಂದ ತೆಗೆದುಹಾಕಲಾಯಿತು.

2021ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ವಿಜೇತ ಸೇನ್, ಬುಧವಾರ ನಡೆಯುವ ಗುಂಪಿನ ಅಂತಿಮ ಪಂದ್ಯದಲ್ಲಿ ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಜೊನಾಥನ್ ಕ್ರಿಸ್ಟಿ (ಇಂಡೊನೇಷ್ಯಾ) ಅವರನ್ನು ಎದುರಿಸಲಿದ್ದಾರೆ. ಕ್ರಿಸ್ಟಿ ಹಾಲಿ ಏಷ್ಯನ್ ಚಾಂಪಿಯನ್ ಆಗಿದ್ದಾರೆ.

16 ಗುಂಪುಗಳಿಂದ ತಲಾ ಒಬ್ಬರು ಮಾತ್ರ ಪ್ರಿಕ್ವಾರ್ಟರ್‌ಗೆ ಅರ್ಹತೆ ಪಡೆಯಲಿದ್ದಾರೆ. ಹೀಗಾಗಿ ಗುಂಪಿನಿಂದ ಅರ್ಹತೆ ಪಡೆಯುವ ಆಟಗಾರರನ್ನು ಬುಧವಾರ ನಡೆಯುವ ಪಂದ್ಯ ನಿರ್ಧರಿಸಲಿದೆ.

ಲಕ್ಷ್ಯ ಸೇನ್ ಎಪಿ/ಪಿಟಿಐ ಚಿತ್ರ

ಅಶ್ವಿನಿ–ತನಿಶಾ ಜೋಡಿಗೆ ಮತ್ತೆ ಸೋಲು

ಪ್ಯಾರಿಸ್ (ಪಿಟಿಐ): ಭಾರತದ ಅಶ್ವಿನಿ ಪೊನ್ನಪ್ಪ ಮತ್ತು ತನಿಶಾ ಕ್ರಾಸ್ಟೊ ಜೋಡಿ ಪ್ಯಾರಿಸ್ ಒಲಿಂಪಿಕ್ಸ್ ಬ್ಯಾಡ್ಮಿಂಟನ್ ಗುಂಪು ಹಂತದಲ್ಲಿ ಸೋಮವಾರ ಸತತ ಎರಡನೇ ಸೋಲು ಅನುಭವಿಸುವ ಮೂಲಕ ನಿರ್ಗಮನದತ್ತ ಸಾಗಿದೆ.

ಭಾರತದ ಆಟಗಾರ್ತಿಯರು, ವಿಶ್ವ ಕ್ರಮಾಂಕದಲ್ಲಿ ನಾಲ್ಕನೆ ಸ್ಥಾನದಲ್ಲಿರುವ ಜಪಾನ್‌ನ ನಮಿ ಮಾತ್ಸುಯಮಾ ಮತ್ತು ಚಿಹಾರು ಶಿಡಾ ಜೋಡಿ ಎದುರು 11-21 12-21 ರಲ್ಲಿ ಸೋಲನುಭವಿಸಿತು. ನಮಿ– ಚಿಹಾರು ಗೆಲುವಿಗೆ 48 ನಿಮಿಷ ತೆಗೆದುಕೊಂಡರು. ಆರಂಭಿಕ ಪಂದ್ಯದಲ್ಲಿ ದಕ್ಷಿಣ ಕೊರಿಯಾದ ಕಿಮ್ ಸೊ ಯಿಂಗ್ ಮತ್ತು ಕಾಂಗ್ ಹಿ ಯಾಂಗ್ ಜೋಡಿ ವಿರುದ್ಧ ಭಾರತೀಯ ಜೋಡಿ ಸೋಲನುಭವಿಸಿತ್ತು.

ವಿಶ್ವ 19ನ ಏಶ್ರೇಯಾಂಕದ ಅಶ್ವಿನಿ–ತನಿಶಾ ಜೋಡಿಯು ಗುಂಪಿನಲ್ಲಿ ಸದ್ಯ ಜಪಾನ್, ದಕ್ಷಿಣ ಕೊರಿಯಾ ಜೋಡಿಯ ನಂತರ ಮೂರನೇ ಸ್ಥಾನದಲ್ಲಿದೆ.

ಪ್ರತಿ ಗುಂಪಿನಲ್ಲಿ ಮೊದಲ ಎರಡು ಸ್ಥಾನ ಪಡೆದ ಜೋಡಿ ಕ್ವಾರ್ಟರ್ ಫೈನಲ್‌ಗೆ ಅರ್ಹತೆ ಪಡೆಯುತ್ತದೆ. ಅಶ್ವಿನಿ–ತನಿಶಾ ಜೋಡಿ, ಆಸ್ಟ್ರೇಲಿಯಾದ ಸೆಟ್ಯಾನಾ ಮಾಪಸಾ– ಆ್ಯಂಜೆಲಾ ಯು ವಿರುದ್ಧ ಗುಂಪು ಹಂತದ ಅಂತಿಮ ಪಂದ್ಯವಾಡಲಿದೆ.

ಜಿಮ್ನಾಸ್ಟಿಕ್ಸ್

ಪ್ಯಾರಿಸ್‌ನಲ್ಲಿ ನಡೆಯುತ್ತಿರುವ ಒಲಿಂಪಿಕ್ಸ್‌ನ ಮಹಿಳೆಯರ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಅರ್ಹತಾ ಸುತ್ತಿನಲ್ಲಿ ಅಮೆರಿಕದ ಸಿಮೊನ್ ಬೈಲ್ಸ್ ಅವರ ಕಸರತ್ತು –ಎಎಫ್‌ಪಿ ಚಿತ್ರ